
ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ - ೨೧

ಪ್ರಧಾನ ಸಂಪಾದಕ : ಕಾ ತ ಚಿಕ್ಕಣ್ಣ

# ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು

(ಸಂಶೋಧನಾ ಕೃತಿ)



ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು

JNANA001998

ಸಂಶೋಧಕರು

ಡಾ. ಕಿರಣ್ ಎಂ. ಗಾಜನೂರು

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ

ಬೆಂಗಳೂರು

# ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು

ಲೇಖಕರು

**ಡಾ. ಕಿರಣ್ ಎಂ. ಗಾಜನೂರು**

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ

ಬೆಂಗಳೂರು

**KANNADADA ANUBHAVIKA NELE MATTU KANAKADASARU**
Written by **Dr. Kiran M. Gajanuru**, Bangalore, Published by National Saint Poet Kanakadasa Study and Research Centre, 2nd Floor, Kannada Bhavana, J.C. Road, Bangalore - 560 002.

| | | |
|---|---|---|
| Chief Editor | : | Ka Ta Chikkanna |
| Publisher : | | Balawantrao Patil<br>Member Secretary, National Saint Poet<br>Kanakadasa Study and Research Centre<br>2nd Floor, Kannada Bhavana, J.C. Road<br>Bangalore - 560 002. |
| First Editon | : | 2019 |
| Pages | : | x + 106 |
| Price | : | Rs. 60/- |
| Copies | : | 500 |
| Paper Size | : | 1/8 Demy |
| Used paper | : | 70 GSM Book Print |

**ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು**

| | | |
|---|---|---|
| ಲೇಖಕರು | : | ಡಾ. ಕಿರಣ್ ಎಂ. ಗಾಜನೂರು<br>ಅಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು<br>ಕೇಂದ್ರೀಯ ವಿಶ್ವವಿದ್ಯಾನಿಲಯ, ಡಾ. ಅಂಬೇಡ್ಕರ್ ವೀದಿ,<br>ಬೆಂಗಳೂರು-01, ದೂ: 9741737344 |
| ಪ್ರಧಾನ ಸಂಪಾದಕರು | : | ಕಾ ತ ಚಿಕ್ಕಣ್ಣ |
| ಪ್ರಕಾಶಕರು | : | ಬಲವಂತರಾವ್ ಪಾಟೀಲ<br>ಸದಸ್ಯ-ಕಾರ್ಯದರ್ಶಿ, ರಾಷ್ಟ್ರೀಯ ಸಂತಕವಿ ಕನಕದಾಸ<br>ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, 2ನೆಯ ಮಹಡಿ,<br>ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ. ರಸ್ತೆ,<br>ಬೆಂಗಳೂರು-02, ದೂ: 080-22113147<br>E-mail: Kanakaresearchcentre@gmail.com<br>www.saintpoetkanaka.in |
| ಮೊದಲ ಮುದ್ರಣ | : | 2019 |
| ಹಕ್ಕುಗಳು | : | ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ<br>ಮತ್ತು ಸಂಶೋಧನಾ ಕೇಂದ್ರ |
| ಪುಟಗಳು | : | x + 106 |
| ಪ್ರತಿಗಳು | : | 500 |
| ಆಕಾರ | : | 1/8 ಡೆಮಿ |
| ಒಳಪುಟ ಕಾಗದ | : | 70 ಜಿಎಸ್ಎಂ, ಎನ್.ಎಸ್. ಮ್ಯಾಪ್‌ಲಿಥೋ |
| ಬೆಲೆ | : | ರೂ. 60/- |
| ಮುಖಪುಟ ಚಿತ್ರ | : | ಅರ್.ಎಸ್. ಯುವರಾಜ |
| ಮುದ್ರಣ | : | ರಶ್ಮಿ ಪ್ರಿಂಟರ್ಸ್, ಬೆಂಗಳೂರು |

# ಅಧ್ಯಕ್ಷರ ನುಡಿ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಜೀವನ ದರ್ಶನ ಮತ್ತು ಅವರ ಕಾವ್ಯ-ಕೀರ್ತನೆಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಈ ಬಗೆಯ ಕಾರ್ಯಾಧ್ಯಯನಗಳಿಗೆ ಯುವ ಸಮುದಾಯವನ್ನು ತೊಡಗಿಸಿಕೊಳ್ಳುವುದು ಇದರ ಆಶಯವಾಗಿದೆ. ಈ ನೆಲೆಯಲ್ಲಿ ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟ್ರಮಟ್ಟದಲ್ಲಿ ವಿಚಾರ ಸಂಕಿರಣ-ಸಂವಾದಗೋಷ್ಠಿಗಳ ಏರ್ಪಾಟು, ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ವಾದರ್ಶಗಳ ಪ್ರದರ್ಶನ-ಪ್ರಸಾರ ಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು, ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವಜನ-ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ-ರಸಗ್ರಹಣ ಶಿಬಿರಗಳ ಸಂಘಟನೆ, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ.

'ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು' ಎಂಬ ಕೃತಿಯು ಕನ್ನಡ ಸಾಹಿತ್ಯವನ್ನು ಗ್ರಹಿಸುವ ಹೊಸ ಮಾದರಿಯನ್ನು ದೊರಕಿಸಿಕೊಟ್ಟಂತಿದೆ. ಅಲ್ಲದೆ ಕನಕದಾಸರನ್ನು ಅನುಭಾವದ ಹಿನ್ನೆಲೆಯಲ್ಲಿ ವಿವೇಚಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಈ ಕೃತಿಯನ್ನು ಫೆಲೋಶಿಪ್ ಅಧ್ಯಯನ ಯೋಜನೆಯಡಿ ಸಂಪಾದಿಸಿ ಸಿದ್ಧಪಡಿಸಿಕೊಟ್ಟ ಡಾ. ಕಿರಣ್ ಎಂ. ಗಾಜನೂರು ಅವರಿಗೆ, ಅಧ್ಯಯನ ಕೇಂದ್ರದ ಯೋಜನೆಗಳನ್ನು ಅತ್ಯಂತ ಕ್ರಿಯಾಶೀಲವಾಗಿ ಅನುಷ್ಠಾನಗೊಳಿಸಲು ಕಾರಣಕರ್ತರಾದ ಸ್ವತಃ ಸಾಹಿತಿಗಳೂ ಆದ ಕೇಂದ್ರದ ಸಮನ್ವಯಾಧಿಕಾರಿಗಳು ಶ್ರೀ ಕಾ ತ ಚಿಕ್ಕಣ್ಣ ಅವರಿಗೆ, ಸದಸ್ಯ ಕಾರ್ಯದರ್ಶಿಗಳಿಗೆ ಹಾಗೂ ಅಧ್ಯಯನ ಕೇಂದ್ರದ ಕಾರ್ಯಾನುಷ್ಠಾನ ಮಂಡಳಿಯ ಸದಸ್ಯರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಕೆ.ಎಂ. ಜಾನಕಿ,** ಭಾ.ಆ.ಸೇ.

ಅಧ್ಯಕ್ಷರು

# ಮುಮ್ಮಾತು

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಆಂಶಿಕ ಮಜಲುಗಳು ಮೂರು. (1) ಮರು ಓದು ಅಥವಾ ಹೊಸ ಓದು (2) ಓದಿನ ಪರಿಣಾಮದ ಮಾನವಿಕ ವಿಸ್ತರಣೆ. ಈ ಮಾನವಿಕ ವಿಸ್ತರಣೆ ಎಂದರೆ ಅನ್ಯಜ್ಞಾನ ಶಿಸ್ತುಗಳು ಮತ್ತು ತೌಲನಿಕ ಅಧ್ಯಯನಗಳು ಒಳಪಟ್ಟಂತೆ (3) ಅಧ್ಯಯನ ಫಲಿತದ ವಿಸ್ತರಣೆಯನ್ನು ಸಾಮಾಜಿಕ ಸಂವೇದನೆಗೆ ಸಂಯೋಜಿಸಿ ಚಿಂತನೆಯ ಆಯಾಮವನ್ನು ಸಂಸ್ಥಾಪಿಸಿಕೊಳ್ಳುವುದು. ಈ ಸಂಸ್ಥಾಪಿಸಿಕೊಳ್ಳುವುದೆಂದರೆ – Static ಅಲ್ಲ. ಹರಿಯುವ ಚಿಂತನೆಗಳಿಗೆ ದಂಡೆಯಾಗಿ ಒದಗುವುದು!

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ರೂಪಿಸಿಕೊಂಡಿರುವ ಯೋಜನೆಗಳ ಹಿಂದೆ ಮೇಲೆ ತಿಳಿಸಿದ ಆಶಯಗಳು ಸೇರಿವೆ. ಬಹುತ್ವದ ನೆಲೆಯಲ್ಲಿ ಕನಕದಾಸರನ್ನು ಅಧ್ಯಯನ ಮಾಡತೊಡಗಿದರೆ ಇವತ್ತಿನ ದಿನಮಾನಕ್ಕೆ ಹಲವಾರು ತಿಳಿವುಗಳು ಒಳಗೊಳ್ಳತೊಡಗುತ್ತವೆ. ಕನಕರನ್ನು ಜಾನಪದೀಯ ನೆಲೆಯಲ್ಲಿ, ಪಾರಮಾರ್ಥಿಕ ನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಓದತೊಡಗಿದರೆ ಇದುವರೆಗೆ ಇಟ್ಟು ನೋಡಿದ್ದ ಭಕ್ತದಾಸ ಕನಕದಾಸರನ್ನು ಮುರಿದು ಕಟ್ಟಿ ನೋಡಿದರೆ ದಾರ್ಶನಿಕ ಕವಿಯನ್ನು ಭಿನ್ನ ಭಿನ್ನ ಬಗೆಯಲ್ಲಿ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಈ ವಿಚಾರವನ್ನು ಗ್ರಹಿಸಿ ಭಾರತೀಯ ಅನುಭಾವಿಕ ಪರಂಪರೆಯಲ್ಲಿ ಕನಕದಾಸರನ್ನು ಹೇಗೆ ಕಂಡುಕೊಳ್ಳುವುದು? ಹೀಗೆ ಕಂಡುಕೊಳ್ಳುವಲ್ಲಿ ಮೊದಲು ಕನ್ನಡದ ಅನುಭಾವಿಕ ನೆಲೆಯನ್ನು ನಿರ್ದಿಷ್ಟಗೊಳಿಸಿಕೊಂಡು ಅದರ ಮೌಲ್ಯ ಮತ್ತು ಕನಕದಾಸರ ಕೊಳ್–ಕೊಡುಗೆಯನ್ನು ವಿವೇಚಿಸುವುದು ಅಗತ್ಯವೆಂದು ಭಾವಿಸಲಾಯಿತು.

ಈ ಹಿನ್ನೆಲೆಯಲ್ಲಿ ಅಧ್ಯಯನ ಕೇಂದ್ರದ ಫೆಲೋಶಿಪ್ ಯೋಜನೆಯಡಿ "ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು" ಎಂಬ ಶೀರ್ಷಿಕೆಯಡಿ ಅಧ್ಯಯನವನ್ನು ಕೈಗೆತ್ತಿಕೊಂಡು ಈ ಕಾರ್ಯವನ್ನು ಆಗು ಮಾಡಲಾಯಿತು. ಇದೀಗ ಹಸ್ತಪ್ರತಿ ಸಿದ್ಧವಾಗಿ ಮುದ್ರಣಗೊಂಡಿದೆ. ಕನ್ನಡದ ಅನುಭಾವಿಕ ನೆಲೆಯ

ವಿಸ್ತಾರವನ್ನು ಇದು ಪರಿಪೂರ್ಣವಾಗಿ ಕಟ್ಟಿಕೊಟ್ಟಿದೆ ಎಂದಾಗಲಿ, ಈ ನೆಲೆಯಲ್ಲಿ ಕನಕದಾಸರ ಪರಿಪೂರ್ಣ ವ್ಯಕ್ತಿತ್ವ– ಒಂದು, ಜೀವನ ನೆಲೆಯಲ್ಲಿ ಎರಡು, ಕಾವ್ಯದ ನೆಲೆಯಲ್ಲಿ–ಪೂರ್ಣವಾಗಿ ಕಂಡರಿಸಲಾಗಿದೆ ಎಂದಾಗಲಿ ಭಾವಿಸಬೇಕಾಗಿಲ್ಲ. ಆದರೆ ಕನಕದಾಸರನ್ನು ಅನುಭಾವದ ಹಿನ್ನೆಲೆಯಲ್ಲಿ ವಿವೇಚಿಸುವ ಒಂದು ಪ್ರಯತ್ನವಂತೂ ಆಗಿದೆ ಎಂದು ಹೇಳಬಹುದು. ಈ ಕೃತಿ ಮುಂದಿನ ಆಸಕ್ತ ಅಧ್ಯಯನಶೀಲರಿಗೆ ನೆರವಾಗುವುದೆಂದು ಆಶಿಸಲಾಗಿದೆ.

ಅಧ್ಯಯನ ಕೇಂದ್ರದ ಫೆಲೋಶಿಪ್ ಅಡಿ ಈ ಅಧ್ಯಯನವನ್ನು ಕೈಗೆತ್ತಿಕೊಂಡು ನಿರ್ವಹಿಸಿಕೊಟ್ಟ ಡಾ. ಕಿರಣ್ ಎಂ. ಗಾಜನೂರು ಅವರಿಗೆ ಮತ್ತು ಮಾರ್ಗದರ್ಶನ ನೀಡಿದ ಡಾ. ಮೇಟಿ ಮಲ್ಲಿಕಾರ್ಜುನ ಅವರಿಗೆ ಅಧ್ಯಯನ ಕೇಂದ್ರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಯೋಜನೆಯ ಅನುಷ್ಠಾನಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಯನ ಕೇಂದ್ರದ ಅಧ್ಯಕ್ಷರು, ಸದಸ್ಯ–ಕಾರ್ಯದರ್ಶಿಗಳು, ಅಧ್ಯಯನ ಕೇಂದ್ರದ ಕಾರ್ಯಾನುಷ್ಠಾನ ಮಂಡಳಿ ಸದಸ್ಯರು, ಮುಖಪುಟದ ವಿನ್ಯಾಸಕಾರಾದ ಶ್ರೀ ವಿಠ್ಠಲ್‌ರಡ್ಡಿ ಎಫ್. ಚುಳಕಿ ಅವರಿಗೆ, ಮುದ್ರಕರಾದ ರಶ್ಮಿ ಪ್ರಿಂಟರ್ಸ್ ಅವರಿಗೆ ಹಾಗೂ ನನ್ನೊಂದಿಗೆ ಸಹಕರಿಸಿದ ಅಧ್ಯಯನ ಕೇಂದ್ರದ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

**– ಕಾ ತ ಚಿಕ್ಕಣ್ಣ**
ಪ್ರಧಾನ ಸಂಪಾದಕರು

# ಲೇಖಕರ ನುಡಿ

"ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು" ಎಂಬ ವಿಷಯದ ಮೇಲಿನ ಈ ಶೋಧನಾಕಾರ್ಯ ನನ್ನ ಮಟ್ಟಿಗೆ ಕನ್ನಡ ಸಾಹಿತ್ಯವನ್ನು ಗ್ರಹಿಸುವ ಹೊಸ ಮಾದರಿಯನ್ನು ದೊರಕಿಸಿಕೊಟ್ಟಿದೆ. ಸಮಾಜ ವಿಜ್ಞಾನಗಳ ಹಿನ್ನಲೆಯನ್ನು ಹೊಂದಿದ್ದ ನನಗೆ ಈ ಪಯಣದಲ್ಲಿ ನಮ್ಮ ನೆಲದ ಜನಬದುಕಿನ ಕುರಿತು ಮೌಖಿಕ ಮತ್ತು ಲಿಖಿತ ಸಾಹಿತ್ಯ ಅಭಿವ್ಯಕ್ತಿಸಿರುವ ಸಹಜ ಅನುಭಾವಿಕ ನೆಲೆಯೊಂದು ಪರಿಚಯವಾಗಿದೆ. ಸರಳವಾಗಿ ಹೇಳುವುದಾದರೆ ಶೈಕ್ಷಣಿಕ ವ್ಯವಸ್ಥೆಯ ಕಾರಣಕ್ಕೆ ಪುಸ್ತಕದಿಂದ ಸಮಾಜವನ್ನು ನೋಡಲು ತರಬೇತಿ ಪಡೆದ ನನಗೆ ಈ ಶೋಧನೆ ಸಮಾಜದ ಮೂಲಕ ಪುಸ್ತಕಗಳನ್ನು ಅರ್ಥಮಾಡಿಕೊಳ್ಳುವ, ವಿಮರ್ಶಿಸುವ ತಿಳಿವೊಂದನ್ನು ದಕ್ಕಿಸಿಕೊಟ್ಟಿದೆ. ಈ ಅಂಶ ಖಂಡಿತ ಭವಿಷ್ಯದ ನನ್ನ ಮುಂದಿನ ಅಧ್ಯಯನಗಳಿಗೆ ನೆರವಾಗಲಿದೆ. ಈ ಅವಕಾಶಕ್ಕೆ ನಾನು ಸಂತಕವಿ ಕನಕದಾಸ ಅಧ್ಯಯನ ಕೇಂದ್ರಕ್ಕೆ ಆಭಾರಿಯಾಗಿದ್ದೇನೆ.

ಈ ಕಿರು ಶೋಧನೆಯ ಆರಂಭಿಕ ಹಂತದಲ್ಲಿಯೇ ನನ್ನ ಈ ಪ್ರಯತ್ನ ನಮ್ಮ ಕಾಲದಲ್ಲಿ ನಡೆಯಬೇಕಿರುವ ದೊಡ್ಡ ಬೌದ್ಧಿಕ ಯೋಜನೆಯ ಅತಿ ಸಣ್ಣ ಹೆಜ್ಜೆ ಅಷ್ಟೆ! ಎಂಬ ಮಾತನ್ನು ಹೇಳಿದ್ದೇನೆ. ಇಲ್ಲಿ ನಾನು ಇಟ್ಟ ಹೆಜ್ಜೆ ರೂಪಿಸಿಕೊಂಡ ಶೋಧನಾ ಪ್ರಶ್ನೆಗಳೂ ವಿಮರ್ಶೆಗೆ ಒಳಗಾಗುವ ಸಾಧ್ಯತೆಯೂ ಇಲ್ಲದಿಲ್ಲ! ಏಕೆಂದರೆ ಎಲ್ಲಾ ಹೊಸ ಹಾದಿಗಳು ಸಮರ್ಥವಾಗಿಯೇ ಇರಬೇಕು ಎಂಬ ನಿಯಮವನ್ನು ಜ್ಞಾನ ಬೆಳೆಯುವ ಕ್ರಮ ಒಪ್ಪುವುದಿಲ್ಲ. ಹಲವು ತಪ್ಪು ಹೆಜ್ಜೆಗಳು ಮಾತ್ರವೇ ಒಂದು ಸರಿಯನ್ನು ಸೃಜಿಸಬಲ್ಲವು ಎಂಬುದು ಜ್ಞಾನ ರಚನೆಯ ಮೂಲ ಪಥ್ಯವಾಗಿದೆ. ಇತ್ತೀಚೆಗೆ ಜನಪ್ರಿಯಗೊಂಡಿರುವ ಅನುಭಾವ ಪರಂಪರೆ ರೂಪಿಸಿದ ಅರಿವಿನ ಹಿನ್ನಲೆಯಲ್ಲಿ ಸಾಹಿತ್ಯ ಅದರಲ್ಲೂ ದಾಸ ಸಾಹಿತ್ಯವನ್ನು ಅವಲೋಕಿಸುವುದು ಅಷ್ಟು ಸರಳವಾದ ಕಾರ್ಯವಲ್ಲ. ಹಾಗಿದ್ದಾಗಿಯೂ ಕನ್ನಡದ ಸಾಹಿತ್ಯ ಪರಂಪರೆಯ ಹಿರಿಯರು ನನ್ನ ಈ ಹೆಜ್ಜೆಯನ್ನು ತಿದ್ದಿಯಾರು, ಸರಿ ಹೆಜ್ಜೆಗಳನ್ನು ಗುರುತಿಸಿಯಾರು ಎಂಬ ನಂಬಿಕೆ ನನಗಿದೆ.

ನನ್ನ ಈ ಪ್ರಯತ್ನ ಖಂಡಿತ ಕನಕದಾಸರು ಮತ್ತು ಕನ್ನಡದ ಅನುಭಾವ ಪರಂಪರೆಯ ಅಂತರ್ ಸಂಬಂಧಗಳ ಕುರಿತು ಸಣ್ಣ ಸಂವಾದಕ್ಕೆ, ನಮ್ಮ ಪರಂಪರೆಗಳು ಕಟ್ಟಿಕೊಂಡ ಜ್ಞಾನ ಶಾಖೆಗಳನ್ನು ಅರ್ಥಮಾಡಿಕೊಳ್ಳುವ ಹೊಸ ಮಾದರಿಗಳ ಕುರಿತ ಚರ್ಚೆಗೆ ವೇದಿಕೆ ಒದಗಿಸುತ್ತದೆ ಎಂಬ ಸಣ್ಣ ಭರವಸೆ ನನ್ನದು. ಅಂತರ್‌ಶಿಸ್ತೀಯ ಅಧ್ಯಯನಗಳು ಪ್ರಾಮುಖ್ಯತೆ ಪಡೆಯುತ್ತಿರುವ ಈ ಹೊತ್ತಿನಲ್ಲಿ ಕನಕ ಸೃಜಿಸಿದ ಸಾಹಿತ್ಯದ ಒಳಗೆ ಅಡಕವಾಗಿರುವ ಈ ನೆಲದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ರಚನೆಗಳನ್ನು ಗುರುತಿಸಿ ಚರ್ಚಿಸುವುದು ಮಹತ್ವದ ಕೆಲಸವಾಗಿದೆ. ಆ ನಿಟ್ಟಿನಲ್ಲಿ ಈ ಶೋಧ ಒಂದು ಸಣ್ಣ ಹೆಜ್ಜೆಯನ್ನಷ್ಟೆ ಇಡುವ ಪ್ರಯತ್ನವಾಗಿದೆ.

ಈ ಒಟ್ಟು ಕೆಲಸಕ್ಕೆ ನನ್ನ ಜೊತೆ ನಿಂತು ಮಾರ್ಗದರ್ಶನ ಮಾಡಿದ ಡಾ. ಮೇಟಿ ಮಲ್ಲಿಕಾರ್ಜುನ ಅವರಿಗೂ ತಿದ್ದಿದ ಡಾ. ಸಬಿತಾ ಬನ್ನಾಡಿ ಅವರಿಗೂ ಎಲ್ಲಕ್ಕಿಂತ ಮುಖ್ಯವಾಗಿ ಈ ಯೋಜನೆಯನ್ನು ರೂಪಿಸಿದ ಸಂತ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಕಾ.ತ. ಚಿಕ್ಕಣ್ಣ ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ಕೃತಜ್ಞತೆಗಳು, ನನ್ನ ಪ್ರಯತ್ನಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಮತ್ತೊಮ್ಮೆ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

**ಡಾ. ಕಿರಣ್ ಎಂ. ಗಾಜನೂರು**

# ಪರಿವಿಡಿ


ಅಧ್ಯಕ್ಷರ ನುಡಿ .... iii

ಮುಮ್ಮಾತು .... iv

ಲೇಖಕರ ನುಡಿ .... vi

ಅಧ್ಯಾಯ–1

ನಡೆ ಹಾದಿಯ ನಕ್ಷೆ .... 1

ಅಧ್ಯಾಯ–2

ಅನುಭಾವ ಚಿಂತನೆಯ ಹಾದಿ.... .... 6

ಅಧ್ಯಾಯ–3

ಕನ್ನಡದ ಅನುಭಾವಿ ಕನಕ .... 32

ಅಧ್ಯಾಯ–4

ಅರಿತು ಭಜಿಪರ್ಯಾರಯ್ಯ ನಿನ್ನ .... 62

ಅಧ್ಯಾಯ–5

ಎಲ್ಲಿಂದ ಬಂದೆ ಮುಂದೆತ್ತ ಪಯಣ .... 92

ಪರಾಮರ್ಶನ ಗ್ರಂಥಗಳು .... 102

## ಅಧ್ಯಾಯ-1

# ನಡೆ ಹಾದಿಯ ನಕ್ಷೆ

ಭಾರತೀಯ ಸಂಸ್ಕೃತಿಯ ಇತಿಹಾಸ ಮತ್ತು ಪ್ರಾಚೀನ ಪರಂಪರೆಯನ್ನು ಒಮ್ಮೆ ಅವಲೋಕಿಸಿದರೆ ಇಲ್ಲಿ ಹಲವಾರು ಅನುಭಾವಿ (ಧಾರ್ಮಿಕ) ಪರಂಪರೆಗಳು ಕಂಡುಬರುತ್ತವೆ. ಈ ಅನುಭಾವಿಕ ಪರಂಪರೆಗಳು ನಮ್ಮ ಸಂಸ್ಕೃತಿ ಮತ್ತು ಜನಜೀವನದ ಭಾಗವಾಗಿ ಸಮಕಾಲೀನ ಸಮಾಜಕ್ಕೆ ನೀಡಿರುವ ಕೊಡುಗೆಗಳು ಅಪಾರ. ಹಾಗೆ ನೋಡುವುದಾದರೆ ಮಾನವ ಬದುಕಿನ ಅರ್ಥಕ್ಕಾಗಿ ಹುಡುಕಾಟ ನಡೆಸಿದ ಈ ಪರಂಪರೆಗಳು ವಸಾಹತುಶಾಹಿ ಮತ್ತು ಆಧುನಿಕ ಜೀವನ ಕ್ರಮದಂತಹ ಕೆಲವು ಒತ್ತಡಗಳ ಕಾರಣಕ್ಕಾಗಿ ಸಮಕಾಲೀನ ಸಮಾಜದಿಂದ ಕೆಲವು ಕಾಲ ನಿರ್ಲಕ್ಷಿಸಲ್ಪಟ್ಟಿದ್ದರೂ, ನಮ್ಮ ಸಮಾಜದ ಜ್ಞಾನ ಮೂಲಗಳಾದ ಈ ಪರಂಪರೆಗಳ ಕುರಿತ ಅಧ್ಯಯನಗಳು ಇತ್ತೀಚೆಗೆ ಗಣನೀಯವಾಗಿ ಹೆಚ್ಚುತ್ತಿವೆ. ಇದಕ್ಕೆ ಮುಖ್ಯ ಕಾರಣ ವಸಾಹತೋತ್ತರ ಕಾಲದ ಚಿಂತನೆ. **"ಸಾಹಿತ್ಯದ ಪಠ್ಯಗಳನ್ನು ಕೇವಲ ಸಾಹಿತ್ಯಕವಾಗಿ ನೋಡದೆ ಅವುಗಳಲ್ಲಿ ಆಳವಾಗಿ ಹಾಸು ಹೊಕ್ಕಾಗಿರುವ ಸಂಸ್ಕೃತಿಯ ಮಹತ್ವವನ್ನು ಹೊರತರಬೇಕು"** ಎಂಬ ವಾದಗಳನ್ನು ಮುಂಚೂಣಿಗೆ ತಂದಿತು ಎಂಬುವ ಅಂಶವನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಬುದ್ಧ, ಬಸವ, ಜೈನ, ಮೀರಾಪಂಥ, ನಾಥಪಂಥ, ಕಬೀರಪಂಥ, ಚೈತನ್ಯಪಂಥ ಮುಂತಾದ ಹಲವು ಪಂಥಗಳೊಂದಿಗೆ ದಾಸ ಪಂಥವೂ ಒಂದು. ಈ ಪಂಥ ಪರಂಪರೆ ನಮ್ಮ ಸಂಸ್ಕೃತಿಯಲ್ಲಿ ಅತ್ಯಂತ ಅಮೂಲ್ಯವಾದ ಸ್ಥಾನವನ್ನು ಹೊಂದಿದೆ.

ದಾಸರು ತಮ್ಮ ಕೀರ್ತನೆಗಳನ್ನು ಅನುಭಾವಾತ್ಮಕ ನೆಲೆಯಲ್ಲಿ ರಚಿಸಿದ್ದು, ಮಾನವ ಬದುಕಿನ ಸರಳ ಸತ್ಯವನ್ನು ಸಾರುವ ಇವು ಇಂದಿನವರೆಗೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡು ಬಂದಿವೆ. ದಾಸರು ಎಂದಾಕ್ಷಣ ನಮ್ಮ ಸ್ಮೃತಿಪಟಲಕ್ಕೆ ಬರುವುದು, ಪುರಂದರದಾಸರು ಮತ್ತು ಕನಕದಾಸರು. ಇವರನ್ನು ಕುರಿತು "ದಾಸರ ದಾಸ" ಎಂಬ ಮಾತು ಕೂಡ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಅದರಲ್ಲಿಯೂ ಕನಕದಾಸರ ಕೀರ್ತನೆಗಳು ಮತ್ತು ಅವುಗಳಲ್ಲಿನ ಅರ್ಥ

ಜನಮನಗಳಲ್ಲಿ ಹಚ್ಚ ಹಸಿರಾಗಿರುವುದನ್ನು ಇಂದಿಗೂ ಕಾಣಬಹುದು. ಮಾನವ ಬದುಕನ್ನು ಸರಳಾತಿಸರಳವಾಗಿ ತಮ್ಮ ಅನುಭವದ ನೆಲೆಯಲ್ಲಿ ಕೀರ್ತನೆಗಳನ್ನು ರಚಿಸುವ ಮೂಲಕ ಕಟ್ಟಿಕೊಟ್ಟ ದಾಸರ ಮಾತುಗಳ ಹಿಂದಿನ ಅರ್ಥಗಳನ್ನು ಅವು ಇರುವಂತೆ ಗ್ರಹಿಸುವುದು ಇಂದಿನ ಅಗತ್ಯವಾಗಿದೆ. ಹಾಗೆ ಗುರುತಿಸುವುದಾದರೆ ಸಾಮಾಜಿಕ ಆಯಾಮಗಳಲ್ಲಿ ಕೀರ್ತನೆಗಳ ಪ್ರಸ್ತುತತೆಯನ್ನು ಹಲವಾರು ಚಿಂತಕರು ಹಲವು ರೀತಿಯಲ್ಲಿ ಅಧ್ಯಯನಗಳನ್ನು ಮಾಡಿದ್ದಾರೆ. ಕನಕದಾಸರ ಕೀರ್ತನೆಗಳನ್ನು ಅನುಭಾವದ ನೆಲೆಯಲ್ಲಿ ಗುರುತಿಸುವ ಅಥವಾ ಅರ್ಥಮಾಡಿಕೊಳ್ಳುವ ಒಂದು ಸಣ್ಣ ಪ್ರಯತ್ನ ಈ ಶೋಧನೆಯ ಮೂಲ ಉದ್ದೇಶವಾಗಿದೆ. ಅದನ್ನು ಸಾಧಿಸಲು ಕೆಳಗಿನಂತೆ ಸಂಶೋಧನಾ ಪ್ರಶ್ನೆಯನ್ನು ನಿರ್ವಚಿಸಿಕೊಳ್ಳಲಾಗಿದೆ.

ಕರ್ನಾಟಕದ ಬೌದ್ಧಿಕ ಇತಿಹಾಸವನ್ನು ಗಮನಿಸಿದರೆ ಇಲ್ಲಿನ ಪ್ರಾಚೀನ ಪರಂಪರೆಗಳನ್ನು ಆಧರಿಸಿ ಸೈದ್ಧಾಂತಿಕ ಹಂತದ ಅಥವಾ ಸಿದ್ಧಾಂತಗಳನ್ನು ಕಟ್ಟುವ ಮತ್ತು ಬೆಳೆಸುವ ಮಟ್ಟದ ಸಂಶೋಧನೆ ಹೆಚ್ಚಾಗಿ ನಡೆಯುತ್ತಿಲ್ಲ. ಬದಲಾಗಿ ಈಗಾಗಲೇ ಮಂಡಿತವಾಗಿರುವ/ವಾಗುತ್ತಿರುವ ಸಿದ್ಧಾಂತಗಳ ನೆಲೆಯಲ್ಲಿ ನಮ್ಮ ಸಾಮಾಜಿಕ ಸನ್ನಿವೇಶಗಳನ್ನು ವಿವರಿಸುವ ಮತ್ತು ಅವುಗಳ ಬೆಳಕಿನಲ್ಲಿ ತಮ್ಮ ಅನುಕೂಲಕ್ಕೆ ಪೂರಕ ಐಡಿಯಾಲಜಿಗಳನ್ನು ಸೃಷ್ಟಿಸಿ ಆ ಮೂಲಕ ತಮ್ಮ ಸಮುದಾಯಗಳ ಐಡೆಂಟಿಟಿ ಉಳಿಸಿಕೊಳ್ಳುವ ಕೆಲಸ ಹೆಚ್ಚಾಗಿ ನಡೆಯುತ್ತಿದೆ. ಹಾಗೆ ನೋಡಿದರೆ ಸಮಕಾಲೀನ ಸಂದರ್ಭದಲ್ಲಿ ಆಲೋಚಿಸುತ್ತಿರುವ ನಮ್ಮೆಲ್ಲರ ಬಹಳ ಪ್ರಮುಖವಾದ ಗುರಿ ನಮ್ಮ ಸಮಾಜವನ್ನು ಅಲ್ಲಿನ ಜನಜೀವನವನ್ನು ವೈಜ್ಞಾನಿಕವಾಗಿ ವಿವರಿಸಿ ಅವರುಗಳ ಜೀವನ ಮಟ್ಟವನ್ನು ಉತ್ತಮಗೊಳಿಸಬೇಕು, ಸಾಮಾಜಿಕ ಶೋಷಣೆಗಳನ್ನು ಹೋಗಲಾಡಿಸಬೇಕು, ಆ ನಿಟ್ಟಿನಲ್ಲಿ ಜ್ಞಾನವನ್ನು ಸೃಷ್ಟಿಸಬೇಕು ಎಂಬುದಾಗಿದೆ. ಇದುವರೆಗೆ ನಮ್ಮ ಸಮಾಜದ ಕುರಿತು ಯೋಚಿಸಿರುವ ಹಲವರು ಸಮಾಜದ ವಾಸ್ತವಗಳ ಕುರಿತು ವೈಜ್ಞಾನಿಕ ನಿರೂಪಣೆ ಮಾಡಿದ್ದೇವೆ ಎಂದು ನಂಬಿದ್ದಾರೆ! ಆ ನಿರೂಪಣೆಗಳು ಭಾರತ ಸಮಾಜದ ವಾಸ್ತವವನ್ನು ಆಧರಿಸಿವೆ ಎಂದು ಒಪ್ಪಿದ್ದಾರೆ!

ಇತ್ತೀಚಿನ ಕೆಲವು ಸಂಶೋಧನೆಯ ಪ್ರಕಾರ ಸಂಪ್ರದಾಯಕಾಲದ ಭಾರತ ಸಮಾಜದ ಆಧುನಿಕ ನಿರೂಪಣೆ ಪೌರಾತ್ಯವಾದಿಗಳ ಅಂಶವಲ್ಲ, ಬದಲಾಗಿ ಇದು ಪಾಶ್ಚಾತ್ಯರು ತಮ್ಮ ಒಂದು ಸಾಮಾಜಿಕ ಚೌಕಟ್ಟಿನಲ್ಲಿ ಪೌರಾತ್ಯ ಸಮಾಜಗಳ ಅದರಲ್ಲಿಯೂ ಭಾರತೀಯ ಸಮಾಜವನ್ನು ಮತ್ತು ಇಲ್ಲಿನ ಸಂಪ್ರದಾಯಗಳನ್ನು ನೋಡಿದುದರ ಪರಿಣಾಮವಾಗಿದೆ ಎಂಬ ವಿಶ್ಲೇಷಣೆಗಳು ಸಮಾಜ ವಿಜ್ಞಾನಗಳ ಸಂಶೋಧನೆಗಳನ್ನು ಪ್ರಭಾವಿಸುತ್ತಿವೆ. ಅಂದರೆ ನಾವು ಇದುವರೆಗೂ ಯಾವುದನ್ನು ಭಾರತ ಸಮಾಜದ ಆಧುನಿಕ ನಿರೂಪಣೆ ಎಂದು ಒಪ್ಪಿದ್ದೇವೆಯೋ, ಅದು

ನಿಜವಾಗಿಯು ಭಾರತದ ವಾಸ್ತವವನ್ನು ಆಧರಿಸಿರದೆ ಭಾರತದ ಕುರಿತು ಪಾಶ್ಚಿಮಾತ್ಯರ ಅನುಭವಗಳನ್ನು ಆಧರಿಸಿದೆ. ವಸಾಹತುಕಾಲದಲ್ಲಿ ನಿರೂಪಣೆಗೊಂಡ ಈ ಆಲೋಚನಾ ಕ್ರಮ ನಂತರ ಸಮಾಜ ವಿಜ್ಞಾನ ಸಂಶೋಧನೆಯನ್ನು ಪ್ರಭಾವಿಸುವುದರ ಮೂಲಕ ಭಾರತದ್ದೇ ಚಿಂತನಾಕ್ರಮ ಎಂಬುದಾಗಿ ವಿಶ್ಲೇಷಿಸಲ್ಪಟ್ಟಿದೆ. ಇದರಿಂದಾಗಿ ನಾವು ನಮ್ಮ ಸಂಸ್ಕೃತಿಗಳ ಅಧ್ಯಯನದಲ್ಲಿ ತೊಡಗಿದಾಗ ಕೆಲವು ದ್ವಂದ್ವಗಳು ಕಾಣತೊಡಗುತ್ತವೆ. ಇದಕ್ಕೆ ಮುಖ್ಯ ಕಾರಣ ವಸಾಹತು ಕಾಲದಲ್ಲಿ ನಮ್ಮ ನೆಲದ ಕುರಿತು ಇಲ್ಲಿನ ಜನಜೀವನದ ಕುರಿತು ಯುರೋಪ್ ನಿರ್ಮಿಸಿದ/ಕಟ್ಟಿಕೊಟ್ಟ ಬಹುಪಾಲು ಹೇಳಿಕೆಗಳು, ಯಾವುದೇ ಪ್ರಮುಖ ಸೈದ್ಧಾಂತಿಕ ಪ್ರಶ್ನೆಗಳಿಗೆ/ಗಳನ್ನು ಎದುರಿಸದೆ/ಒಳಗಾಗದೆ ಇಲ್ಲಿನ ಬೌದ್ಧಿಕತೆ ಎಂದೇ ನಿರೂಪಣೆಗೊಂಡು ನಮ್ಮ ಸಮಾಜದ ಪ್ರಮುಖ ವಿವರಣೆಯಾಗಿ ಬದಲಾದದ್ದು ಒಂದು ಮಿತಿಯಾದರೇ, ಈ ದೇಶದ ಉನ್ನತ ವರ್ಗವೊಂದರ ಚಿಂತನೆ ಇಲ್ಲಿನ ಅನುಭಾವಿ ಚಿಂತನಾಧಾರೆಯನ್ನು ಅಧ್ಯಾತ್ಮ ಎಂಬುದಾಗಿ ನಿರೂಪಿಸಿದ ಸಂಗತಿ ಮತ್ತೊಂದಾಗಿದೆ. ಇದನ್ನು ನಮ್ಮ ಜಗದ ಕವಿ ಕುವೆಂಪು ಅವರು "ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಕಾವ್ಯಮೀಮಾಂಸೆ ಏನಿದ್ದರೂ ಅದೆಲ್ಲ ಸಂಸ್ಕೃತದ ಪಡಿನೆಳಲಂತಿದೆ. ಮುಂದೆ ಬರುವ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ ಪಾಶ್ಚಾತ್ಯದ ಪಡಿನೆಳಲಾದರೆ ಅದಕ್ಕಿಂತಲೂ ಅಪಾಯಕರವಾಗುತ್ತದೆ" ಎಂದು ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

ನಮ್ಮ ಕಾಲದ ಸಮಾಜ ಚಿಂತನೆಗಳ ಮೇಲೆ ಈ ಪ್ರಭಾವ ಎಷ್ಟಿದೆ ಎಂದರೆ, ಈ ದೇಶದ ತಳಸಮುದಾಯಗಳು ತಮ್ಮ ತಲೆಮಾರುಗಳ ಕೊಡುಗೆಯನ್ನು ಮರೆಸುವಷ್ಟು! ಗಮನಿಸಬೇಕಾದ ಮಹತ್ವದ ಅಂಶ ಎಂದರೆ 18 ಮತ್ತು 19ನೆಯ ಶತಮಾನದಲ್ಲಿ ಇದೇ ಜ್ಞಾನ ಸಾಮಾಜಿಕ ಶಾಸ್ತ್ರವಾಗಿ ವಿವರಿಸಲ್ಪಟ್ಟಿತು.

ನಮ್ಮ ಸಮಾಜದ ಕುರಿತ ನಮ್ಮದಲ್ಲದ ಜ್ಞಾನಕ್ಕೆ ಶಾಸ್ತ್ರೀಯ ಸ್ಥಾನ ದೊರೆತ ಪರಿಣಾಮ ನಮ್ಮ ಸಮಾಜದ ನಿಜವಾದ ಅನುಭಾವಿ ಚಿಂತಕರುಗಳಾದ ಕನಕದಾಸ, ಬಸವಣ್ಣ, ಮಂಟೆಸ್ವಾಮಿ ಮುಂತಾದ ಅನುಭಾವಿಗಳು ಆ ಶಾಸ್ತ್ರೀಯ ಚೌಕಟ್ಟಿನೊಳಗೆ ವಿವರಿಸಲ್ಪಟ್ಟರು. ಪ್ರಸ್ತುತ ಅಧ್ಯಯನ, ಕನಕದಾಸರು ಮತ್ತು ಅವರ ಚಿಂತನೆಗಳಲ್ಲಿನ ಅನುಭಾವಿಕ ನೆಲೆಗಳ ವಿಶ್ಲೇಷಣೆಗಳಿಗೆ ಸೀಮಿತವಾಗಿರುವುದರಿಂದ ಈ ಒಟ್ಟು ಚಿಂತನೆಯನ್ನು ಕನಕದಾಸರಿಗೆ ಸೀಮಿತಗೊಳಿಸಿ ವಿವರಿಸಿಕೊಳ್ಳಲಾಗುವುದು.

ಹಾಗೆ ನೋಡುವುದಾದರೆ ಕನ್ನಡ ಸಾಹಿತ್ಯವನ್ನು ದಾಸ ಸಾಹಿತ್ಯದ ಮೂಲಕ ಕನಕದಾಸರು ಇನ್ನಷ್ಟು ಸರಳಗೊಳಿಸಿದರು. ಕನಕದಾಸರು 'ದಾಸ ಸಾಹಿತ್ಯದ ಬನದ ಕೋಗಿಲೆ' ಎಂದು ಬಿರುದಾಂಕಿತರಾಗಿದ್ದರು. ಕನಕದಾಸರು (1508–1606) ಕೆಳಸ್ತರದಿಂದ ಬಂದ ಕಾರಣ ಕೆಳಜಾತಿಯ ನೋವು ನಲಿವು ಅದರ

ಅರಿವು ಕನಕರ ಸಾಹಿತ್ಯದಲ್ಲಿ ಮಾರ್ದನಿಸಲು ಶುರು ಮಾಡಿತು. ಇವರು ತಮ್ಮ ಸಮಕಾಲೀನ ದಾಸರಂತೆ ಹರಿಯನ್ನು ಹೊಗಳದೆ "ಆರು ಬದುಕಿದರಯ್ಯಾ ಹರಿ ನಿನ್ನ ನಂಬಿ" ಎಂಬ ವೈಚಾರಿಕ ನೆಲೆಯಲ್ಲಿ ಹರಿಯನ್ನು ಪ್ರಶ್ನಿಸಿ, ತಮ್ಮ ವಿಶಿಷ್ಟ ವೈಚಾರಿಕ ದೃಷ್ಟಿಯಿಂದ ಬದುಕಿನ ನೈಜ ಚಿತ್ರಣವನ್ನು ಮುಂದಿನ ಪೀಳಿಗೆಗೆ ತಮ್ಮ ಕೀರ್ತನೆಗಳ ಮೂಲಕ ಕಟ್ಟಿಕೊಟ್ಟರು. ಈ ಕಾರಣವೇ ಕನಕನಿಗೆ ದಾಸರದಾಸ ಎಂದೆನಿಸಿಕೊಳ್ಳಲು ಸಾಧ್ಯವಾಗಿಸಿತು. ಕನಕದಾಸರು ತಮ್ಮ ಜೀವಿತಾವಧಿಯಲ್ಲಿ ಬಹುಮುಖ್ಯವಾಗಿ ಎರಡು ಕಾವ್ಯಗಳನ್ನು ರಸವತ್ತಾಗಿ ಚಿತ್ರಿಸುವ ಮೂಲಕ ಜೀವ ತುಂಬಿದ್ದಾರೆ. ಮೋಹನ ತರಂಗಿಣಿ (ಶೃಂಗಾರ ರಸಕಾವ್ಯ) ಹಾಗೂ ನಳಚರಿತ್ರೆ (ನಳ–ದಮಯಂತಿಯರ ಪ್ರೇಮಕಾವ್ಯ) ಪ್ರಮುಖವಾದವು. ಉಳಿದಂತೆ 'ಹರಿಭಕ್ತಿ ಸಾರ', 'ರಾಮಧಾನ್ಯ ಚರಿತೆ' ಕನಕದಾಸರ ವೈವಿಧ್ಯಮಯ ಸಾಹಿತ್ಯಕ್ಕೆ ಹಿಡಿದ ಕೈಗನ್ನಡಿ. ಹಾಗೆ ನೋಡುವುದಾದರೆ ಕನಕನ ಧ್ಯೇಯವನ್ನು ಪಾಲಿಸಿ ಬದುಕುತ್ತಿರುವ ಜನಪದರ ಬದುಕು ಇಂದಿಗೂ ಆ ಕೆಲಸ ಮಾಡುತ್ತಿದೆ. ಇದು ನಮಗಿರುವ ಬಹುದೊಡ್ಡ ನಿದರ್ಶನ. ಆದರೆ ನಮ್ಮ ಕಾಲದ ದುರಂತ ಎಂದರೆ, ಕನಕದಾಸರಂತಹ ಮಹನೀಯರು ಅನುಭವದ ಹಿನ್ನಲೆಯಲ್ಲಿ ರಚಿಸಿದ ಬರಹಗಳ ಆಧಾರದಲ್ಲಿ ಸಮಾಜವನ್ನು, ಸಂಸ್ಕೃತಿಯನ್ನು ಅವುಗಳಲ್ಲಿನ ತಾರತಮ್ಯಗಳನ್ನು ಅರ್ಥಮಾಡಿಕೊಳ್ಳದೆ 18 ಮತ್ತು 19ನೆಯ ಶತಮಾನದಲ್ಲಿ ಯುರೋಪಿಯನ್ನರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ನೆಲದ ಯಾವ ಗ್ರಹಿಕೆಗೂ ಸಂಬಂಧವಿಲ್ಲದಂತೆ ಸೃಷ್ಟಿಸಿದ ಚೌಕಟ್ಟಿನ ಒಳಗೆ ನಮ್ಮ ಕನಕಾದಿ ಶರಣರ ಅನುಭಾವದ ಮಾತುಗಳನ್ನು ಗುರುತಿಸಿ ವಿವರಿಸುತ್ತಿದ್ದೇವೆ.

ನಿಜ ಅರ್ಥದಲ್ಲಿ ಇಂದು ನಾವು ವಸಾಹತುಶಾಹಿ ನಿರ್ಮಿಸಿದ ಭಾರತದ ಸಮರ್ಥನೆಗೆ ಕನಕಾದಿ ಮಹನೀಯರ ಮಾತುಗಳನ್ನು ಬಳಸುತ್ತಿದ್ದೇವೆ ಮತ್ತು ಅದನ್ನೇ ಪ್ರಗತಿ ಎಂದು ತಿಳಿದಿದ್ದೇವೆ. ಶಿಕ್ಷಣದ ಹೆಸರಿನಲ್ಲಿ ಅದನ್ನೇ ಕಲಿಸುತ್ತಿದ್ದೇವೆ. ಇದು ನಿಜವಾದ ದ್ವಂದ್ವ, ನಮ್ಮ ಈ ಪ್ರವೃತ್ತಿಯಿಂದ ಬದುಕಿನ ಕುರಿತು ಸಾಮಾಜಿಕ ಸಾಮರಸ್ಯದ ಕುರಿತು ನಮ್ಮ ನೆಲದ ಸಂಸ್ಕೃತಿಯ ಕುರಿತು ತಮ್ಮ ಅನುಭವದ ಮೂಲಕ ಜಗತ್ತಿಗೆ ಮಾದರಿಯಾಗಬಹುದಾದ ಚಿಂತನೆಗಳನ್ನು ರಚಿಸಿದ ಅನುಭಾವಿಗಳು ಜಗತ್ತಿನ ಶ್ರೇಷ್ಠ ವಿದ್ವಾಂಸರ ಪಟ್ಟಿಯಲ್ಲಿ ಕಾಣಲಾಗಿಲ್ಲ ಎಂಬುದು ಒಂದು ನ್ಯೂನತೆಯಾದರೆ, ಇನ್ನೊಂದು ಈ ಹೊತ್ತಿನ ಆರೋಗ್ಯಪೂರ್ಣ ಸಮಾಜದ ನಿರೂಪಣೆಗೆ ಬೇಕಾಗಿರುವ ತಿಳಿವನ್ನು ರೂಪಿಸಲು ಕನಕರಂತವರು ಎಷ್ಟು ಮುಖ್ಯರೆಂಬುದನ್ನು ವಿವರಿಸುವ ಮಾದರಿಯ ಕೊರತೆಯನ್ನು ನಾವಿಂದು ಎದುರಿಸುತ್ತಿದ್ದೇವೆ.

ಇದಕ್ಕೆ ಕಾರಣ ನಾವು ಕಟ್ಟಿಕೊಂಡಿರುವ ಚಿಂತನಧಾರೆಯ ಮಿತಿ ಸಮಾಜದ ಸರ್ವ ಶ್ರೇಷ್ಠ ಅನುಭಾವಿಗಳನ್ನು ಒಂದೊಂದು ಜಾತಿಗೆ ಸೀಮಿತಗೊಳಿಸಿ

ವಿವರಿಸಿದ್ದಾಗಿದೆ. ಈ ಪ್ರವೃತ್ತಿಗೆ ನಮ್ಮ ಜ್ಞಾನ ನಿರೂಪಣ ಚೌಕಟ್ಟುಗಳ ಮಿತಿಗಳು ಕಾರಣವೇ ಹೊರತು ಆ ಮಹಾಪುರುಷರಲ್ಲ. ಆದ್ದರಿಂದ ಈ ತಲೆಮಾರಿನ ಯುವಜನ ಇನ್ನಾದರೂ ಈಗಿರುವ ಸಿದ್ಧಾಂತಗಳ ಒಳಗೆ ಕನಕದಾಸರನ್ನು ಅರ್ಥಮಾಡಿಕೊಂಡು ವಿವರಿಸುವ ವ್ಯರ್ಥ ಪ್ರಯತ್ನ ಬಿಟ್ಟು ಕನಕದಾಸರ ಸಾಹಿತ್ಯದ ಮೂಲಕವೇ ನಮ್ಮ ಸಮಾಜದ ಕುರಿತ ಸಿದ್ಧಾಂತಗಳನ್ನು ಮರುರಚಿಸಲು ಸಾಧ್ಯವೇ? ಎಂಬ ಮುಖ್ಯ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ಆ ದಾರಿಯಲ್ಲಿ **"ಕನ್ನಡ ಅನುಭಾವ ಪರಂಪರೆ ಮತ್ತು ಕನಕದಾಸರು ರೂಪಿಸಿದ ಅನುಭಾವದ ಸಂಬಂಧಗಳು"** [ಈ ಅಧ್ಯಯನದ ಶೀರ್ಷಿಕೆಯನ್ನು "ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು" ಎಂದು ಮಾರ್ಪಡಿಸಿಕೊಳ್ಳಲಾಗಿದೆ.] ಎಂಬ ಸಂಶೋಧನಾ ಕಾರ್ಯ ಕನ್ನಡದ ಅನುಭಾವ ಪರಂಪರೆಯಲ್ಲಿ ಕನಕದಾಸರ ಅನುಭಾವಿ ಚಿಂತನೆಗಳ ಮಹತ್ವವನ್ನು ಗುರುತಿಸುವ ಉದ್ದೇಶವನ್ನು ಹೊಂದಿದೆ ಎಂಬುದು ಒಂದು ಅಂಶವಾದರೆ ನಮ್ಮ ನಡುವಿನ ಪ್ರಭಾವಿ ಚಿಂತಕ ಡಿ.ಆರ್. ನಾಗರಾಜ್ ಸೂಚಿಸಿರುವಂತೆ 'ವಸಾಹತು ಕಾಲದ ಬೆಳವಣಿಗೆ ಭಾರತೀಯ ಸಂಸ್ಕೃತಿಯಲ್ಲಿ ಒಂದು ಛಿದ್ರವೆ ಸರಿ, ಆದರೆ ಆ ಛಿದ್ರವೂ ಇತಿಹಾಸದ ಕುಸುರಿ ಕೆಲಸದಲ್ಲಿ ಒಂದು ವಿರಾಟ್ ಕಲಾ ವಿನ್ಯಾಸದಲ್ಲಿ ಒಂದು ಆಕೃತಿಯಾಗಿಯೆ ಕಾಣಬಹುದು' ಎಂಬುದನ್ನು ನಾವು ಮರೆಯಬಾರದು. ಕನಕದಾಸರ ಕುರಿತ ಅನುಭಾವಿಕ ನೆಲೆಗಳ ಗುರುತಿಸುವಿಕೆ ಆ ನಿಟ್ಟಿನ ಕುಸುರಿ ಕೆಲಸಕ್ಕೆ ಒಂದು ಸಣ್ಣ ಪ್ರಮಾಣದ ಆರಂಭವನ್ನು ಒದಗಿಸುತ್ತದೆ. ಜೊತೆಗೆ ಯಾವುದೇ ಸಮಾಜಶಾಸ್ತ್ರೀಯ ಚೌಕಟ್ಟುಗಳ ನೆರವಿಲ್ಲದೆ, ಕನಕದಾಸರ ಸಾಹಿತ್ಯದ ಮೂಲಕವೇ ನಮ್ಮ ಸಮಾಜವನ್ನು ಇಲ್ಲಿನ ಸಾಮಾಜಿಕ ಸ್ಥಿತಿಯನ್ನು ಕನಕದಾಸರು ಗ್ರಹಿಸಿ ವಿವರಿಸಿದ ಮಾದರಿಯನ್ನು ಗುರುತಿಸಿ, ಆ ಮಾದರಿಯನ್ನು ಸೈದ್ಧಾಂತಿಕ ಸಂಶೋಧನೆಯ ಹಿನ್ನೆಲೆಯಲ್ಲಿ ವಿವರಿಸುವ ಬಹಳ ಪ್ರಮುಖ ಉದ್ದೇಶವನ್ನು ಪ್ರಸ್ತುತ ಸಂಶೋಧನಾ ಕಾರ್ಯ ಹೊಂದಿದೆ. ಜೊತೆಗೆ ಕನ್ನಡದ ಅನುಭಾವಿ ಚಿಂತನೆಗಳ ಕುರಿತ ಸೈದ್ಧಾಂತಿಕ ಹಂತದ ಸಂಶೋಧನೆಗೆ ಒಂದು ಹೊಸ ದಾರಿ ಸೂಚಿಸುವ ಗುರಿಯನ್ನು ಸದರಿ ಸಂಶೋಧನೆ ಒಳಗೊಂಡಿದೆ. ಒಂದು ವೇಳೆ ಈ ಪ್ರಯತ್ನದಲ್ಲಿ ಆ ದಾರಿ ನಿಚ್ಚಳವಾದಲ್ಲಿ ಕರ್ನಾಟಕದ ಸಂದರ್ಭದಲ್ಲಿ ಅಸ್ತಿತ್ವದಲ್ಲಿರುವ ಜಡ ಸಿದ್ಧಾಂತಗಳನ್ನು ಪ್ರಶ್ನಿಸುವ/ಮುರಿಯುವ ಮತ್ತು ಹೊಸದನ್ನು ಕಟ್ಟುವ ಮಹತ್ವದ ಸಂಶೋಧನಾ ಕೆಲಸಕ್ಕೆ ಅಡಿಪಾಯ ದೊರೆಯುತ್ತದೆ. ಆಗ ಮಾತ್ರವೇ 'ಓದು ವಾದಗಳೇಕೆ, ಗಾದಿ ಮಾತೇಕೆ, ವೇದ ಪುರಾಣ ನಿನಗೇಕೆ? ಲಿಂಗದಾ ಹಾದಿಯರಿದವಗೆ ಸರ್ವಜ್ಞ' ಎಂಬ ನುಡಿಗೆ ನಿಜ ಅರ್ಥ ಬಂದಂತಾಗುತ್ತದೆ.

❐

## ಅಧ್ಯಾಯ-2

# ಅನುಭಾವ ಚಿಂತನೆಯ ಹಾದಿ....

ಕನಕದಾಸರ ಕೀರ್ತನೆಗಳಲ್ಲಿರುವ ಅನುಭಾವದ ನೆಲೆಗಳನ್ನು ಗುರುತಿಸುವುದಕ್ಕಿಂತ ಪೂರ್ವದಲ್ಲಿ ನಮ್ಮ ಭಾರತೀಯ ಜ್ಞಾನ ಪರಂಪರೆಯಲ್ಲಿ ಅನುಭಾವ ಪರಿಕಲ್ಪನೆಗೆ ಯಾವ ಅರ್ಥವನ್ನು ಕಲ್ಪಿಸಿಕೊಡಲಾಗಿದೆ? ಅನುಭಾವದ ನೆಲೆಯನ್ನು ಹೇಗೆ ಗುರುತಿಸಲಾಗಿದೆ? ಹಲವಾರು ಅಧ್ಯಾತ್ಮ ಮಾರ್ಗಗಳನ್ನು ಆಧಾರವಾಗಿ ಇಟ್ಟುಕೊಂಡು ಅನುಭಾವದ ಸ್ಥಿತಿಯ ಸ್ವರೂಪವನ್ನು ಚಿಂತಕರು ಹೇಗೆ ವಿವರಿಸಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಅಧ್ಯಯನವು ಅನುಭಾವಿಕ ಚಿಂತನೆ ಬೆಳೆದಬಂದ ಹಾದಿಯನ್ನು ಗುರುತಿಸುವ ನಿಟ್ಟಿನಲ್ಲಿ ಅನುಭಾವದ ಕುರಿತು ಈ ಹಿಂದೆ ನಡೆದಿರುವ ಬೌದ್ಧಿಕ ಚರ್ಚೆಗಳನ್ನು ಈ ಅಧ್ಯಾಯದಲ್ಲಿ ವಿವರಿಸಿಕೊಳ್ಳಲಾಗಿದೆ.

ಅನುಭಾವದ ಸ್ಥಿತಿಯ ಲಕ್ಷಣಗಳನ್ನು ಕಾಲದಿಂದ ಕಾಲಕ್ಕೆ ಹಲವಾರು ಚಿಂತಕರು ವಿವಿಧ ಮಾರ್ಗಗಳಲ್ಲಿ ಗುರುತಿಸಿದ್ದಾರೆ. ಬೇರೆ ಬೇರೆ ಧರ್ಮ, ಪಂಥಗಳಿಗೆ ಸೇರಿದ ವಿದ್ವಾಂಸರು ಅನುಭಾವದ ಕುರಿತು ತಮ್ಮದೇ ಆದಂತಹ ದೃಷ್ಟಿಕೋನವನ್ನು ಮುಂದಿಟ್ಟಿದ್ದಾರೆ. ಅಂತಹ ವಿವರಣೆಗಳು ಮತ್ತು ಅವುಗಳ ಸ್ವರೂಪವನ್ನು ಈ ಕೆಳಗಿನಂತೆ ಸದರಿ ಸಂಶೋಧನೆಗೆ ಪೂರಕವಾಗಿ ವಿಶ್ಲೇಷಿಸಲಾಗಿದೆ.

### ಅನುಭಾವ: ಕೆಲವು ನೋಟಗಳು

ಅನುಭಾವ ಎಂಬುದು ಇಹ ಅಥವಾ ವಾಸ್ತವದ ನೆಲೆಗಟ್ಟಾದ ಲೋಕವನ್ನು ಮರೆತದ್ದಲ್ಲ, ಲೋಕದಲ್ಲಿ ಬೆರೆತದ್ದು, ಲೋಕವೆ ತಾನಾದದ್ದು. 'ಸ್ವಾನುಭವದ ಅರ್ಥ ಸ್ವ+ಅನುಭವ. ವ್ಯಕ್ತಿ ಪಡೆದ ವೈಯಕ್ತಿಕ ಲೋಕಾನುಭವ ಎಂದಲ್ಲ ಅಥವಾ ವ್ಯಕ್ತಿ ತಾನು ಹಿಂದೆ ಮಾಡಿದ ತಪ್ಪನ್ನು ತಿದ್ದಿಕೊಳ್ಳುವುದು, ಇಲ್ಲವೇ ಬದುಕಿನಲ್ಲಿ ಕಲಿತ ಪಾಠವನ್ನು ಬದುಕಿಗೆ ಒಪ್ಪಿಸುವುದು ಎಂತಲೂ ಅಲ್ಲ. ಬದಲಾಗಿ ತನ್ನನ್ನು ತಾನರಿವುದು, ಇಹವನ್ನು ಬೆರೆಯುವುದು, ಇಹವೆ ತಾನಾಗುವುದು ಎಂಬ ವ್ಯಾಪಕಾರ್ಥವನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಮುಂದುವರಿದು 'ಶರಣರ

ದೃಷ್ಟಿಯಲ್ಲಿ ಅನುಭಾವ ಎಂಬುದು ಒಂದು ಮನೋಧರ್ಮ. ಧರ್ಮದಂತೆಯೆ ಅದೂ ಒಂದು ಜೀವನವಿಧಾನ' ಎಂದು ಅರ್ಥೈಸಲ್ಪಟ್ಟಿದೆ (ಡಾ॥ ಸಾ.ಶಿ. ಮರುಳಯ್ಯ, ಇಪ್ಪತ್ತನೆಯ ಶತಮಾನದ ಭಾರತೀಯ ಅನುಭಾವಿಗಳು ಮತ್ತು ಬಸವಣ್ಣ – 2003, ಪು. 10–16) ಎಂದು ಹೇಳಬಹುದು.

"ಮಾನವನ ಜೀವಿತದ ಪ್ರಮುಖ ಉದ್ದೇಶವೆಂದರೆ 'ಆನಂದದ ಅನ್ವೇಷಣೆ' ಮತ್ತು ಆ ಮೂಲಕ ಸತ್ಯ ಸಾಕ್ಷಾತ್ಕಾರ. ಈ ಮಾತು ಅಷ್ಟು ಸರಳವಾದದ್ದಲ್ಲ. ಬೌದ್ಧಿಕ ಶಕ್ತಿಯು ಬೆಳೆದಂತೆಲ್ಲ ಆನಂದಾನ್ವೇಷಣೆ ಮತ್ತು ಸತ್ಯ ಸಾಕ್ಷಾತ್ಕಾರಗಳ ಹಂಬಲವು ಹೆಚ್ಚುತ್ತಾ ಹೋಗುವುದು ಸಹಜ ಕ್ರಿಯೆ ಎನಿಸಿದೆ. ಕೇವಲ ಬುದ್ಧಿಯೊಂದರಿಂದಲೇ ಈ ಪ್ರಪಂಚದ ಸತ್ಯವನ್ನೆಲ್ಲಾ ಅಳೆಯಬಹುದಾದ ವಿಚಾರವಾದವು ಈ ಜಗತ್ತಿನಲ್ಲಿದೆ. ಇದನ್ನು ರ್‍ಯಾಷನಲಿಸಂ (Rationalism) ಎಂದು ಕರೆಯುತ್ತಾರೆ. ಆದರೆ ಇದಕ್ಕೆ ಮೀರಿದ ಒಂದು ವಾದವೂ ಇದೆ. ಬುದ್ಧಿಯೊಂದರಿಂದಲೇ ಸತ್ಯದ ಸಮಗ್ರ ಸ್ವರೂಪವನ್ನರಿಯಲು ಸಾಧ್ಯವಿಲ್ಲ. ಈ ವಾದವು ಪ್ರಯೋಗ ಪರೀಕ್ಷೆಗಳ ಜ್ಞಾನವನ್ನು ಎತ್ತಿ ಹಿಡಿದರೂ, ಅನುಭವವೆ ಜ್ಞಾನಕ್ಕೆ ಮೂಲವಾದುದೆಂದೂ, ಅನುಭವದಿಂದ ಮಾತ್ರ ಪೂರ್ಣಜ್ಞಾನವನ್ನು ಪಡೆಯಬಹುದೆಂದು ಸಾಧಿಸಿದೆ. ಇದನ್ನು 'ಅನುಭವೈಕ್ಯವಾದ' ಎಂದು ಕರೆಯಬಹುದು. ಈ ಅನುಭಾವವನ್ನು ಮನುಷ್ಯನ ಬದುಕಿನ 'ಆನಂದದ ಅನ್ವೇಷಣೆ'ಯ ದಾರಿಯನ್ನಾಗಿ ಗುರುತಿಸಲಾಗಿದೆ.

ಜೊತೆಗೆ ಅನುಭಾವ ಪೂರ್ಣಸತ್ಯ. ಶೋಧಕನ ದೃಷ್ಟಿ ಅಂತರ್ಮುಖಿಯಾಗಿರಬೇಕು. ಇದರಿಂದ ಅದುವರೆಗೂ ಗೋಚರಿಸದ ಒಂದು ಹೊಸಭಾವವು ಜಾಗೃತವಾಗುತ್ತದೆ. ಹೃದಯದಲ್ಲಿ ಮಿಡಿಯುವ ಈ ಭಾವದ ಅನುಸಂಧಾನವನ್ನೆ 'ಅನುಭಾವ' ಎಂದು,ಕರೆಯಬಹುದು. ಅನುಭಾವ ಅದರ ಕೊನೆಯ ನಿಲುವಿನಲ್ಲಿ ಅವರ್ಣೀಯವೆಂಬ ಮಾತು ನಿಜ. ಸೃಷ್ಟಿ ಪ್ರವಾಹದ ಪೂರ್ಣ ಸ್ವರೂಪವನ್ನು ಅದರ ಚಲನೆಯಲ್ಲಿಯೆ ಭಾಗವಹಿಸಿ ಕಂಡುಕೊಳ್ಳುವ ಒಂದು ವಿಶಿಷ್ಟ ಶಕ್ತಿ ಇದು" (ಡಾ॥ ಅಬ್ದುಲ್ಲ ಹಮೀದ್, ಸೂಫಿಪಥ ಮತ್ತು ಶರಣಪಥಗಳ ತೌಲನಿಕ ಅಧ್ಯಯನ 1998, ಪು. 150–151) ಎಂದು ಹೇಳಬಹುದು.

ಅನುಭಾವವೆಂಬುದು ಅಂತರಂಗದ ರತ್ನ, ಅನುಭಾವವೆಂಬುದು ಆತ್ಮ ವಿದ್ಯೆ, ಅನುಭಾವವೆಂಬುದು ನಿಜನಿವಾಸದಲ್ಲಿ ಇರಿಸುವುದು ಮುಂತಾಗಿ ಶರಣರು ಹೇಳುವ ಮಾತುಗಳಿಂದ ಅನುಭಾವ ಎಂಬ ಶಬ್ದದ ಅರ್ಥಕಲ್ಪನೆಯನ್ನು ಮಾಡಿಕೊಳ್ಳಬಹುದಾಗಿದೆ. ಈ ಅನುಭಾವ ಎಂಬ ಮಾತಿನಲ್ಲಿ ಶರಣರು ತಮ್ಮ ಜೀವನದ ಅನುಭವ ಸಂಪತ್ತನ್ನು ತುಂಬಿ, ಮಾನವ ಜೀವಿತದ ಮಹೋದ್ದೇಶವನ್ನು ಒಳಗೊಳ್ಳಬಲ್ಲ ವ್ಯಾಪಕವಾದ ಅರ್ಥದಿಂದ ಅದನ್ನು ಶ್ರೀಮಂತಗೊಳಿಸಿದರು.

ಆಂಗ್ಲ ಭಾಷೆಯಲ್ಲಿ ಮಿಸ್ಟಿಸಿಸಂ ಎಂಬ ಮಾತಿದೆ. ಕೆಲವು ಸಂದರ್ಭಗಳಲ್ಲಿ ಇದನ್ನು ಗೂಢವಾದದ್ದು, ರಹಸ್ಯವಾದದ್ದು, ತಿಳಿಯಲು ಯೋಗ್ಯ ಕಾರಣಗಳಿಂದ ಸಮರ್ಥಿಸಲು ಅಸಾಧ್ಯವಾದದ್ದು, ಅನಿರ್ದಿಷ್ಟವಾದದ್ದು, ಕೇವಲ ಭಾವನಾತ್ಮಕವಾದದ್ದು, ಈ ಮುಂತಾದ ಅರ್ಥಗಳಲ್ಲಿ ಉಪಯೋಗಿಸಿರುವುದು ಕಂಡುಬರುತ್ತದೆ. ಇಷ್ಟೇ ಅಲ್ಲದೆ, ಈ ಪ್ರಪಂಚ ಮತ್ತು ದೇವರನ್ನು ಕುರಿತು ಬಹು ಅಸ್ಪಷ್ಟವಾದ ಮತ್ತು ಭ್ರಾಂತಿ ಮೂಲವಾದ ಅಭಿಪ್ರಾಯವೆಂಬ ಅರ್ಥದಲ್ಲಿಯೂ ಮತ್ತು ಐಂದ್ರಜಾಲಿಕ ವಿದ್ಯೆ, ಕನಸುಗಾರನ ವಿಚಿತ್ರ ಮನಸ್ಥಿತಿ ಈ ಮುಂತಾದ ಅರ್ಥಗಳಲ್ಲಿಯೂ ಈ ಮಾತನ್ನು ಅನೇಕ ವೇಳೆ ಉಪಯೋಗಿಸುವುದುಂಟು.

ಮಿಸ್ಟಿಸಿಸಂ ಪದಕ್ಕೆ ಇಷ್ಟೊಂದು ಪರಿಮಿತವಾದ ಅರ್ಥವನ್ನು ಮಾತ್ರ ಇಟ್ಟುಕೊಳ್ಳುವುದು ಸರಿ ಆಗುವುದಿಲ್ಲ. ಏಕೆಂದರೆ ಈ ಪದದ ಅರ್ಥ ವ್ಯಾಪ್ತಿ ಕೆಲವು ವೇಳೆ ಊರ್ಧ್ವಮುಖವಾಗಿ ವಿಸ್ತಾರಗೊಂಡು ಜೀವನವನ್ನು ಸಾರ್ಥಕಗೊಳಿಸುವ ಅಂತರಂಗದ ಅನುಭವವೆಂಬ ಮಟ್ಟಕ್ಕೇರಿರುವುದನ್ನು ಕಾಣುತ್ತೇವೆ. ಈ ಅರ್ಥದಲ್ಲಿ ತೆಗೆದುಕೊಂಡಾಗ ಮಾತ್ರ ಮಿಸ್ಟಿಸಿಸಂ ಎಂಬ ಪದವು ಅನುಭಾವ ಎಂಬ ಪದಕ್ಕೆ ಸಂವಾದಿಯಾದ ಅರ್ಥ ವ್ಯಾಪ್ತಿಯನ್ನು ಪಡೆಯಬಲ್ಲದು.

ಆಂಗ್ಲ ವಿಶ್ವಕೋಶದಲ್ಲಿ ಮಿಸ್ಟಿಸಿಸಂ ಎಂಬ ಪರಿಕಲ್ಪನೆಯನ್ನು ಅನುಭಾವಕ್ಕೆ ಸಂವಾದಿಯಾಗಿ ಹಲವಾರು ಚಿಂತಕರು ಬಳಸಿದ್ದಾರೆ. ವಿಶ್ವಕೋಶದಲ್ಲಿ ಮಿಸ್ಟಿಸಿಸಂ ಎಂಬ ಪರಿಕಲ್ಪನೆಯನ್ನು ಹೀಗೆ ವಿವರಿಸಲಾಗಿದೆ: "It (mysticism) appears in conection with the endeavor of human mind to grasp the divine essence or the ultimate reality of things, and to enjoy blessedness of actual communion with the highest. The first is the philosophical side of mysticism, second its religious side. The first is theoretical or speculative, the second is practical". ತಾತ್ವಿಕ ಮತ್ತು ಧಾರ್ಮಿಕ ಎಂಬೆರಡು ಮುಖಗಳಿಂದ ಇಲ್ಲಿ ಇದನ್ನು ಪರಿಶೀಲಿಸಲಾಗಿದೆ. ಮೊದಲನೆಯದು ಜಿಜ್ಞಾಸೆಯಾದರೆ ಎರಡನೆಯದು ಆ ಸತ್ಯವನ್ನು ಸಾಕ್ಷಾತ್ ಆಗಿ ಅರಿತು ಅನುಭವಿಸಿದಂತೆ. ಇದು ಯಾವುದೇ ಒಂದು ವಿಶಿಷ್ಟವಾದ ಮಾರ್ಗಕ್ಕೆ ಅನ್ವಯಿಸುವ ಹೆಸರಲ್ಲ. ಒಂದೇ ಸತ್ಯವನ್ನು ಕಂಡಿರುವ ಬೇರೆ ಬೇರೆ ಮಾರ್ಗಗಳ ಸಮನ್ವಯ.

ಈ ಪ್ರಪಂಚವನ್ನು ಕಣ್ತೆರೆದು ನೋಡಿ ಇದರ ಸ್ವರೂಪವನ್ನು ಕಂಡು, ಬೆರಗಾದ ಮಾನವ ಇದರ ರಹಸ್ಯವನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾನೆ. ಸೃಷ್ಟಿಯ ಸಮಗ್ರ ಸ್ವರೂಪವನ್ನು ಕಂಡುಕೊಳ್ಳುವ ಈ ಯತ್ನದಲ್ಲಿ ಮೂರು ಮುಖ್ಯ ಮಾರ್ಗಗಳನ್ನು ಕಾಣಬಹುದು. ಮೊದಲನೆಯದು, ಈ ಪ್ರಪಂಚದ ಸತ್ಯವನ್ನೆಲ್ಲಾ ಕೇವಲ ಬುದ್ಧಿಯೊಂದರಿಂದಲೇ ಅಳೆದು ನೋಡುವ ಸಾಹಸ.

'ಜ್ಞಾನ'ವನ್ನು ಪಡೆಯುವುದಕ್ಕೆ ಬುದ್ಧಿಯೊಂದೆ ಸಾಕು. ಬುದ್ಧಿಯಿಂದ ಪಡೆದ ಜ್ಞಾನವೇ ಮನುಷ್ಯನ ಅನುಭವವನ್ನು ನಿರ್ಧರಿಸುತ್ತವೆ. ಅದೊಂದೆ ಜ್ಞಾನದ ಒರೆಗಲ್ಲು ಎಂಬುದು ಈ ವಾದದ ತಿರುಳು. ಬುದ್ಧಿಯೊಂದನ್ನೇ ಪ್ರಮಾಣವಾಗಿ ಉಳ್ಳ ಈ ವಾದವನ್ನು ವಿಚಾರವಾದವೆಂದು ಕರೆಯಬಹುದು.

ಇವೆರಡು ಒಂದು ಮಟ್ಟದವರೆಗೆ ಜ್ಞಾನವನ್ನು ಪಡೆಯಲು ಸಹಾಯಕ ವಾಗುತ್ತವೆಯೇ ಹೊರತು ಪರಿಪೂರ್ಣ ಜ್ಞಾನವನ್ನು ಕಟ್ಟಿಕೊಡಲು ಅಸಮರ್ಥ ವಾಗುತ್ತವೆಂಬುದು ಇನ್ನೊಂದು ವಾದ. ಕೇವಲ ಬುದ್ಧಿಶಕ್ತಿಯಿಂದ ಅಥವಾ ಪ್ರಯೋಗ ಪರೀಕ್ಷೆಗಳಿಂದ ಸತ್ಯದ ಪೂರ್ಣಸ್ವರೂಪವನ್ನು ಕಂಡುಕೊಳ್ಳುವುದು ಸಾಧ್ಯವಿಲ್ಲ. ಎಲ್ಲಿಯೋ ಒಂದು ಕಡೆ ಬುದ್ಧಿ ಮುಂಗಾಣದೆ ದಿಗ್ಭ್ರಮೆಗೊಂಡು ನಿಲ್ಲಬೇಕಾಗುತ್ತದೆ. ಬಾಹ್ಯ ಪ್ರಯೋಗ ಪರೀಕ್ಷೆಗಳಿಂದ ಉಂಟಾದ ಅನುಭವ ತತ್ತರಿಸಬೇಕಾಗುತ್ತದೆ. ವಿಶ್ವವನ್ನೆಲ್ಲಾ ವ್ಯಾಪಿಸಿದ್ದರೂ ವಿಶ್ವಾತೀತವಾದ ಆ ಸತ್ಯ, ಬುದ್ಧಿಗೆ ತರ್ಕಕ್ಕೆ ಪ್ರಯೋಗ ಪರೀಕ್ಷೆಗಳಿಗೆ ಸಿಲುಕದ್ದು. ಅದನ್ನು ಕಂಡುಕೊಳ್ಳಲು ಇವುಗಳಿಗೆ ಅತೀತವಾದ ದೃಷ್ಟಿ ಇರಬೇಕು. ಅಂದರೆ, ಸತ್ಯ ಸ್ವರೂಪವನ್ನರಸುವ ಸಾಧಕನ ದೃಷ್ಟಿ ಅಂತರ್ಮುಖವಾಗಿರಬೇಕು. ಆಗ ಅದುವರೆಗೆ ಅಗೋಚರವಾದ ಒಂದು ಹೊಸ ಪ್ರಪಂಚ ಗೋಚರಿಸುತ್ತದೆ. ಕೇವಲ ಬುದ್ಧಿಪ್ರಯೋಗ ಪರೀಕ್ಷೆಗಳಿಗೆ ನಿಲುಕದ 'ಭಾವ'ವೊಂದು ಹೃದಯದಲ್ಲಿ ಜಾಗೃತಗೊಳ್ಳುತ್ತದೆ. ಜೀವನದ ಗಂಭೀರವಾದ ಸಮಸ್ಯೆಗಳಿಗೆ, ಹೃದಯದಲ್ಲಿ ಮಿಡಿಯುವ ಈ ಭಾವವೇ ನಿಜವಾದ ಉತ್ತರವನ್ನು ಕೊಡಬಲ್ಲದೆಂಬುದನ್ನು ಕಂಡುಕೊಳ್ಳಬಹುದು. ಇದನ್ನೇ 'ಮಿಸ್ಟಿಸಿಸಂ' ಎಂದು ಕರೆಯಬಹುದು.

ಹೃದಯದಲ್ಲಿ ಎಚ್ಚರಗೊಳ್ಳುವ ಈ ಭಾವದ ಅನುಸಂಧಾನವನ್ನು ಒಂದು ಅರ್ಥದಲ್ಲಿ ಅನುಭಾವವೆಂದು ಕರೆಯಬಹುದು. ಈ ಅನುಭಾವ ಎಂಬ ಶಬ್ದ ಶರಣರು ಅಧ್ಯಾತ್ಮ ಪ್ರಪಂಚಕ್ಕೆ ಕೊಟ್ಟ ಕಾಣಿಕೆ. ಅಲಂಕಾರ ಶಾಸ್ತ್ರದಲ್ಲಿ ಈ ಪದ ಬೇರೊಂದು ಅರ್ಥದಲ್ಲಿ ಬರುತ್ತದೆ. ಆದರೆ ಶರಣರು ಅದನ್ನು ವಿಶಿಷ್ಟ ಅರ್ಥದಲ್ಲಿ ಬಳಸಿದರು. ತಮ್ಮ ಅರಿವಿನಿಂದ ಅದರ ಆಚರಣೆಯಿಂದ ಪಡೆದ ಅನುಭವವನ್ನು ನಿರ್ದೇಶಿಸಲು ಈ ಮಾತನ್ನು ಬಳಸಿಕೊಂಡರು. ಇದು ಬ್ರಹ್ಮ ಸಾಕ್ಷತ್ಕಾರ, ಬ್ರಹ್ಮಾನುಭೂತಿ, ಮಿಸ್ಟಿಸಿಸಂ ಈ ಮಾತುಗಳ ಅರ್ಥವನ್ನು ಒಳಗೊಂಡಿದ್ದರೂ ಶರಣರ ಜೀವನದಿಂದ ಮತ್ತು ಸಾಧನೆಗಳಿಂದ ಅವುಗಳಲ್ಲಿಲ್ಲದ ಅರ್ಥವೊಂದು ಇದರಲ್ಲಿ ಗೋಚರಿಸುತ್ತದೆ. ಈಗ ಒಂದು ಅರ್ಥದಲ್ಲಿ 'ಅನುಭಾವ'ವೆಂಬುದನ್ನು ಮಿಸ್ಟಿಸಿಸಂ ಎಂಬುದಕ್ಕೆ ಸಂವಾದಿಯಾಗಿಟ್ಟುಕೊಂಡು ಮುಂದೆ ಆ ಮಾತಿನ ವ್ಯಾಪ್ತಿಯನ್ನು ವಿಶಿಷ್ಟತೆಯನ್ನು ಪರಿಶೀಲಿಸಬಹುದು.

ಮಿಸ್ಟಿಸಿಸಂನ ಕುರಿತು ಪಂಡಿತರಲ್ಲಿ ಸಾಕಷ್ಟು ಜಿಜ್ಞಾಸೆ ನಡೆದಿದೆ. ಅನೇಕ

ಸಾಧಕರ ಜೀವನವನ್ನು, ಹೇಳಿಕೆಗಳನ್ನು ಆಧಾರವಾಗಿಟ್ಟುಕೊಂಡು ಆ ಮಾತಿನ ವ್ಯಾಪ್ತಿಯನ್ನು ಅಳೆಯಲು ಅನೇಕರು ಪ್ರಯತ್ನಿಸಿದ್ದಾರೆ. ಇವುಗಳನ್ನು ನೋಡಿದರೆ, ನಮ್ಮ ಋಷಿಗಳು, ಸಾಧಕರು ಕಂಡುಕೊಂಡ ಸತ್ಯದರ್ಶನವನ್ನೇ ಬೇರೆ ಬೇರೆ ದೇಶದ ಸಾಧಕರು ಕಂಡುಕೊಳ್ಳಲು ಹವಣಿಸಿರುವುದನ್ನು ಕಾಣುತ್ತೇವೆ. ಮಾರ್ಗಗಳು ಹೊರಗೆ ನೋಡುವುದಕ್ಕೆ ಬೇರೆಬೇರೆಯಾಗಿದ್ದಂತೆ ಕಂಡರೂ ಅವರು ಅರಿಯಲು ಪ್ರಯತ್ನಿಸಿದ ಆ ಅಂತಃಸ್ಸತ್ವ ಒಂದೇ; ಪಡೆದ ಅನುಭವ ಒಂದೇ.

ಈ ಅನುಭಾವದ ಸಂಪೂರ್ಣ ಅರ್ಥವನ್ನು ಸೂತ್ರ ರೂಪವಾಗಿ ಹಿಡಿದಿಡುವುದು ಅಸಾಧ್ಯವಾದರೂ ಅದರ ಪ್ರಮುಖವಾದ ಅಂಶಗಳನ್ನು ಸೂತ್ರಪ್ರಾಯವಾಗಿ ಹೇಳಲು ಅನೇಕರು ಪ್ರಯತ್ನಿಸಿದ್ದಾರೆ. ಉದಾಹರಣೆಗೆ: "Mysticism is the immediate feeling of the unity of the self with God; it is nothing, therefore, but the fundamental feeling of religion, the religious life at its very heart and centre."

"Mysticism is religion in its most concentrated and exclusive form. it is that attitude of mind in which all other relations are swallowed up in the relation of the soul with the God".

"Mysticism denotes that attitude of mind which involves a direct, immediate, first hand intuitive apprehension of God".

ಈ ಸೂತ್ರಗಳನ್ನು ನೋಡಿದಾಗ ಅನುಭಾವ ಮೂರು ಮುಖ್ಯ ಅಂಶಗಳನ್ನು ಒಳಗೊಂಡಿರುವುದನ್ನು ಕಾಣುತ್ತೇವೆ. 'God' 'soul' & 'relation of the soul to the God' ಅಂದರೆ 'ಪರಮಾತ್ಮ' 'ಜೀವಾತ್ಮ' ಮತ್ತು ಇವುಗಳ ಸಂಬಂಧದಿಂದ ಉಂಟಾಗುವ 'ಅಮೃತತ್ವ' – ಇವು ಅನುಭಾವದ ಮೂಲಭೂತ ತಳಹದಿ. ಮಾನವ ತನ್ನ ಬದುಕಿನ ಸಹಜ ದಾರಿಯ ಮೂಲಕ ದೇವನೊಡನೆ ಸಮರಸಗೊಂಡು ಅಮೃತತ್ವವನ್ನು ಪಡೆಯಬೇಕೆಂಬ ಜೀವನದ ನಿರಂತರ ಹಂಬಲವನ್ನು ಕೈಗೂಡಿಸಿಕೊಡುವ ಸಾಧನೆಯೇ ಅನುಭಾವ ಮಾರ್ಗ.

## ಅನುಭಾವದ ಚಿಂತನೆಯ ಪ್ರಾಮುಖ್ಯತೆ

ವಸಾಹತೋತ್ತರ ಸಂದರ್ಭದಲ್ಲಿ ಪಾಶ್ಚಿಮಾತ್ಯ ಪ್ರಭಾವಗಳಿಂದ ಬಿಡುಗಡೆ ಹೊಂದಿ ಸ್ವತಂತ್ರ ಅಸ್ತಿತ್ವಕ್ಕಾಗಿ ಹೆಣಗಾಡುತ್ತಿರುವ ಸಮುದಾಯಗಳಿಗೆ ನಮ್ಮದೆ ನೆಲದಲ್ಲಿ ಟಿಸಿಲೊಡೆದ ಅನುಭಾವ ಪರಂಪರೆ ಇಂದು ಬಿಡುಗಡೆಯ ದಾರಿಯಾಗಿ ಗುರುತಿಸಲ್ಪಡುತ್ತಿದೆ. ಆ ಕಾರಣಕ್ಕಾಗಿಯೇ ಇಂದು ಸಂಸ್ಕೃತಿ ಅಧ್ಯಯನಕಾರರು ಅನುಭಾವ ಪರಂಪರೆಯ ಪ್ರಾಮುಖ್ಯತೆಯನ್ನು ಮತ್ತು ಅವು ಹೊಂದಿರುವ ವಿಶಿಷ್ಟ

ಮಾದರಿಗಳ ಕುರಿತು ವ್ಯಾಪಕವಾದ ಸಂಶೋಧನೆಯ ಅಗತ್ಯತೆಯನ್ನು ಒತ್ತಿ ಹೇಳುತ್ತಿದ್ದಾರೆ. ಹಾಗೆ ನೋಡುವುದಾದರೆ ಅನುಭಾವಿಗಳ ಪ್ರಕಾರ ಮಾನವ ತನ್ನ ಬದುಕನ್ನು ಮೇಲುಸ್ತರಕ್ಕೆ ಸಾಗಿಸುವ ಹಂತದಲ್ಲಿ ಮನಸ್ಸಿನ ಅಧ್ಯಾತ್ಮದ ನೆಲೆಗಳು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಈ ಅಧ್ಯಾತ್ಮದ ನೆಲೆಗಳನ್ನು ಖಚಿತವಾದ ಅರ್ಥಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಒಂದರ್ಥದಲ್ಲಿ ಮಾನವನ ಬದುಕು ಹಾಗೂ ಅದನ್ನು ಸುಂದರ ಮಾಡಲು ಅವನು ಪಡುವ ಪ್ರಯತ್ನಗಳಲ್ಲಿ ಇದನ್ನು ಕಾಣಬಹುದು ಅಥವಾ ಇದನ್ನು ಹೀಗೆ ಹೇಳಬಹುದೇನೋ – ಬದುಕುವ ಕ್ರಮವನ್ನು ಮಾನವ ತನ್ನ ವ್ಯಕ್ತಿತ್ವದ ಸ್ವರೂಪವನ್ನು ಅಧೀನ ಮಾಡದೆ, ಭೌತಿಕವಾಗಿ ಅಷ್ಟೇ ಅಲ್ಲದೆ ಮೌಲ್ಯಗಳ ನೆಲೆಗಳಲ್ಲಿಯೂ ಎತ್ತರಕ್ಕೆ ಏರಿಸಲು ಮಾಡುವ ಪ್ರಯತ್ನಗಳ ಸಂಬಂಧಗಳಲ್ಲಿ ಹುಡುಕಬಹುದು. ಈ ಮೌಲ್ಯಗಳ ಹುಡುಕಾಟದಲ್ಲಿ ಮನುಷ್ಯ ತನ್ನ ಬದುಕುವ ನೆಲೆಗಳನ್ನು ಕುರಿತು ಪ್ರಜ್ಞಾಪೂರ್ವಕವಾಗಿ ಆಲೋಚಿಸುವ ವಿಶಿಷ್ಟ ಲಕ್ಷಣಗಳನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತಾನೆ. ಈ ಕಾರಣಕ್ಕಾಗಿಯೆ 20ನೇ ಶತಮಾನದಲ್ಲಿಯೂ ತಮ್ಮ ಅನುಭಾವದ ಮೂಲಕ ಬದುಕಿನ ಕುರಿತ ಸತ್ಯಗಳನ್ನು ಅತ್ಯಂತ ಸರಳವಾಗಿ ವಿವರಿಸಿದ ಗಾಂಧಿ, ಐನ್‌ಸ್ಟೀನ್ ಮೊದಲಾದವರು ಪ್ರಸ್ತುತವೆನಿಸುತ್ತಾರೆ. (ಡಾ॥ ಬಸವರಾಜ ಕಲ್ಗುಡಿ ಅವರ ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ 1988, ಪು. 79)

ಸಮಕಾಲೀನ ಜ್ಞಾನ ಪರಂಪರೆಯಲ್ಲಿ ಭಕ್ತಿ ಪರಂಪರೆ, ಹಾಗೂ ಅನುಭಾವಿ ಸಂತರಷ್ಟು ಜನರಿಗೆ ಪ್ರಿಯವಾದಂತ ಬೇರೊಂದು ಪರಂಪರೆಯನ್ನು ಹುಡುಕಲು ಸಾಧ್ಯವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಇವು ಜನಪ್ರಿಯತೆಯನ್ನು ಪಡೆದವುಗಳಾಗಿವೆ. ಅತ್ಯಂತ ಸಾಮಾನ್ಯ ಮನುಷ್ಯನನ್ನು ಧಾರ್ಮಿಕ ಪ್ರಜ್ಞೆಯ ಕಕ್ಷೆಯೊಳಗೆ ಒಳಪಡಿಸಿಕೊಳ್ಳಬೇಕೆನ್ನುವ, ಈ ಪರಂಪರೆಗಳ ಆಶಯವು ಕಾಲಕಾಲಕ್ಕೆ ಮನುಷ್ಯನ ಅಸ್ತಿತ್ವಕ್ಕೆ, ಅವನ ಬೆಳವಣಿಗೆಗೆ ವಿರೋಧ ಮಾಡುತ್ತಿದ್ದ ಬಾಹ್ಯ ಒತ್ತಡ ಮತ್ತು ವಾತಾವರಣದ ತಾತ್ವಿಕ ನೆಲೆಗಳಿಗೆ ಕೊಟ್ಟ ಉತ್ತರವೇ ಆಗಿದೆಯೆನ್ನಬಹುದು. ಈ ಹಿನ್ನಲೆಯಲ್ಲಿ ಅನುಭಾವ ಪರಂಪರೆಯ ಕುರಿತು ಅಧ್ಯಯನ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ.

ಇನ್ನೊಂದು ರೀತಿಯಲ್ಲಿ ನೋಡುವುದಾದರೆ ಭಾರತೀಯ ಸಮಾಜದ ಮೂಲ ವಾದವಾದ ಭೌತಿಕ ಸವಲತ್ತುಗಳಿಗಾಗಿ ದುಡಿಯಬೇಕಾದ ಮತ್ತು ಈ ದುಡಿಮೆಯಿಂದಲೇ ಬದುಕಬೇಕಾದ ಅಸ್ಥಿರವಾದಂಥ ಲೌಕಿಕ ಜೀವನವನ್ನು ಮೀರುವ ನೆಲೆಯನ್ನು ಅನುಭಾವ ಮತ್ತು ಭಕ್ತಿಪರಂಪರೆಗಳು ಸಮಾಜದಲ್ಲಿ ರೂಢಿಸಿದವು. ಇದಕ್ಕೆ ಉದಾಹರಣೆಯಾಗಿ ವಚನ ಚಳವಳಿಯ ಅನೇಕ ಅನುಭಾವಿಗಳು ತಮ್ಮ ಕಾಯಕವನ್ನೆ ಇಷ್ಟ ದೈವ ಎಂದು ವಿವರಿಸಿರುವುದನ್ನು

ಗುರುತಿಸಬಹುದು. ಅನುಭಾವ ಪರಂಪರೆಗಳ ಮುಖ್ಯ ಧೋರಣೆ ಮನುಷ್ಯನ ವ್ಯಕ್ತಿತ್ವದ ಬೆಳವಣಿಗೆಯ ಆಶಯದಿಂದಲೇ ಬೆಳೆಯುತ್ತದೆ. ಆ ಕಾರಣಕ್ಕಾಗಿ ಇವು ಮನುಷ್ಯನ ಬದುಕಿನ ವಾಸ್ತವಗಳಾದ ಭಕ್ತಿ, ಕರ್ತವ್ಯ, ವೃತ್ತಿ ಇವುಗಳನ್ನು ಆಧರಿಸಿಯೆ ಅಥವಾ ಅವುಗಳ ಸುತ್ತಲೆ ವಿವರಿಸಲ್ಪಟ್ಟ ಜ್ಞಾನ ಶಾಖೆಗಳಾಗಿವೆ. ಆದ್ದರಿಂದ ಅನುಭಾವ ಪರಂಪರೆಯನ್ನು ಗ್ರಹಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

"ಮನುಷ್ಯನ ಧಾರ್ಮಿಕ ಅನುಭವವೆಂದು ಯಾವುದನ್ನು ಗುರುತಿಸುತ್ತೇವೆಯೋ ಅದು ಕೇವಲ ಈ ಜೀವನದ ವಿಷಮತೆ ಹಾಗು ಸಮಸ್ಯೆಗಳ ನಿಮಿತ್ತವಾಗಿ ಹುಟ್ಟಿದ್ದು ಎಂದು ತಿಳಿದುಕೊಳ್ಳುವುದು ಮುಖ್ಯವಾಗಿ ಮನುಷ್ಯನ ಆ ಅನುಭವಕ್ಕೆ ನಾವು ಹಾಕುವ ಮಿತಿ" ಎಂದು ಫ್ರೆಡರಿಕ್ ಜೆ. ಸ್ಟ್ರಂಗ್ ಹೇಳುತ್ತಾರೆ. ಇವನು ಹೇಳುವ ಅಭಿಪ್ರಾಯವನ್ನೆ ಸಮ್ಮತಿಸುವ ಹಲವಾರು ಜನ ಚಿಂತಕರು ಈ ರೀತಿಯ ಅನುಭವದ ಉಗಮಕ್ಕೆ ಕಾರಣಗಳನ್ನು ನಿಖರವಾಗಿ ಕೊಡುವುದು ಸಾಧ್ಯವಿಲ್ಲ. ಆದ್ದರಿಂದ ಕೆಲವು ಊಹಾತ್ಮಕ ನೆಲೆಗಳಿಂದ ಇದಕ್ಕೆ ವಿವರಣೆಗಳನ್ನು ನೀಡಬೇಕಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಇವರ ಪ್ರಕಾರ 'ಮನುಷ್ಯನಿಗೆ ಅಂತರ್ಗತವಾಗಿಯೆ ಈ ಭೌತಿಕ ಪ್ರಪಂಚದ ಅಸ್ತಿತ್ವವಷ್ಟೆ ಮುಖ್ಯವೆಂದು ಅನಿಸುವುದಿಲ್ಲ. ಈ ಜೀವನಕ್ಕೆ ಇದಕ್ಕಿಂತ ಹೆಚ್ಚಿನ ಅವಶ್ಯಕತೆ ಇದೆ ಎನ್ನುವ ಅಭೀಪ್ಸೆ ಇದನ್ನು ಆಶಿಸಲು ಬಯಸುತ್ತದೆ. ಮನುಷ್ಯನಲ್ಲಿನ ಈ ಹುಡುಕಾಟದ ಪರಿಣಾಮವೆ ಅನುಭಾವ ಪರಂಪರೆಗೆ ಕಾರಣ ಎಂಬುದಾಗಿ ವಿವರಿಸಿಕೊಳ್ಳಬಹುದು.

ಮನಃಶಾಸ್ತ್ರದ ವಿವರಣೆಯನ್ನು ಧರ್ಮವನ್ನು ಎರಡು ಬಗೆಯಲ್ಲಿ ವಿವರಿಸುವುದನ್ನು ಗಮನಿಸಬಹುದು. ಒಂದನೆಯದಾಗಿ; ಧರ್ಮವೆನ್ನುವುದು – ಮನುಷ್ಯನ ಉಳಿದ ಕ್ರಿಯೆಗಳ ಹಾಗೆಯೆ ಒಂದು ಆಚರಣೆಗೆ ಸಂಬಂಧಪಟ್ಟಿದ್ದು. ಇಲ್ಲಿ ಮನುಷ್ಯನ ನೈತಿಕ ನಡತೆಯನ್ನು ಸೂಚಿಸುವ ಸಂಕೇತವಾಗಿ ಕಾಣಿಸಿಕೊಳ್ಳುತ್ತದೆ. ಮನುಷ್ಯನ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ, ಬಹಳ ಸೀಮಿತವಾದ ಅರ್ಥವನ್ನು ಅದು ಇಲ್ಲಿ ಪಡೆದುಕೊಂಡಿದೆ. ಎರಡನೆಯದಾಗಿ – ಧರ್ಮವೆನ್ನುವುದು, ಸ್ವಪರಿಪೂರ್ಣತೆಯ ಸಾಧನೆಯನ್ನು ವಿವರಿಸುತ್ತದೆ. ಇಲ್ಲಿ ಧಾರ್ಮಿಕ ಮನುಷ್ಯನಾದವನಿಗೆ, ತನ್ನ ಅಸ್ತಿತ್ವವು ಒಂದು ಗುರಿಯನ್ನು, ನೆಲೆಯನ್ನು ತಲುಪಬೇಕಾಗಿರುವುದು ಅವಶ್ಯಕವಾಗಿರುತ್ತದೆ. ತನ್ನ ಅಸ್ತಿತ್ವಕ್ಕೆ ಆಧ್ಯಾತ್ಮಿಕ ನೆಲೆಯನ್ನು ಹುಡುಕುವುದು ಅಗತ್ಯವಾಗಿರುತ್ತದೆ (ಡಾ|| ಬಸವರಾಜ ಕಲ್ಗುಡಿ ಅವರ ಮಧ್ಯ ಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, 1988. ಪು. 82). ಈ ಹುಡುಕಾಟದ ನೆಲೆ ಮನುಷ್ಯನ ಭೌತಿಕ ಬದುಕಿನ ನಿಯಂತ್ರಣಗಳನ್ನು ಮೀರಿ ಇರುವುದರಿಂದ ವ್ಯಕ್ತಿ ಅನುಭಾವಿಕನಾಗಿ ಚಿಂತಿಸಲು ಸಾಧ್ಯವಾಗುತ್ತದೆ. ಇದನ್ನು ನಾವು ವಚನಕಾರರಲ್ಲಿ ಪ್ರಮುಖವಾಗಿ ಗುರುತಿಸಬಹುದಾಗಿದೆ. ಉದಾಹರಣೆಗೆ ವಚನಕಾರರಲ್ಲಿ ಸಾಕಾರ

ರೂಪದ ದೈವ ಮತ್ತು ನಿರಾಕಾರ ಲಿಂಗ ಇವು ಅನುಭಾವದ ಆಶಯಗಳಾಗಿವೆ. ಮಾನವ ಸಂಬಂಧಗಳ ಸಫಲತೆಗಿಂತ ತನ್ನನ್ನು ತಾನು ಅರಿಯುವುದು, ಬೆಳೆಯುವುದು, ಅನುಭಾವ ಸ್ವರೂಪಗಳಲ್ಲಿ ಮುಖ್ಯವಾದ ಆಶಯವಾಗಿದೆ. ಬದುಕಿನ ಎಲ್ಲಾ ಅರ್ಥಗಳನ್ನು ವಿವರಣೆಗಳ ಸಂಪೂರ್ಣ ನೆಲೆ ಮತ್ತು ಅಸ್ತಿತ್ವವನ್ನು ಕಾಣಲು ಯತ್ನಿಸುವುದು ಮಧ್ಯಕಾಲೀನ ಭಾರತದಲ್ಲಿ ಅನುಭಾವದ ಮುಖ್ಯ ಸ್ವರೂಪವಾಗಿರುವ ಲಕ್ಷಣವೂ ಅತ್ಯಂತ ಮಹತ್ವದ ಬೆಳವಣಿಗೆಯೆ ಆಗಿದೆ ಎಂಬುದನ್ನು ಚಿಂತಕರು ಗುರುತಿಸುತ್ತಾರೆ. ಏಕೆಂದರೆ ಆ ಕಾಲಘಟ್ಟದಲ್ಲಿ ರಚನೆಯಾದ ಅನುಭಾವಿಕ ಸಾಹಿತ್ಯ ಮನುಷ್ಯನನ್ನು ಕೇವಲ ಭಾವನೆಯಲ್ಲಿ ಕೊಚ್ಚಿ ಹೋಗುವಂತೆ ಮಾಡುವುದಾಗಲಿ ಅಥವಾ ವಸ್ತುವಿನಂತೆ ಹೇಗೆ ಬೇಕಾದರೂ ಭಾವಿಸಬಹುದೆಂಬ ಆಲೋಚನೆಯನ್ನಾಗಲಿ ನಿರಾಕರಿಸುತ್ತದೆ. ಅನುಭಾವದ ಸ್ವರೂಪಗಳು ಮನುಷ್ಯನ ಅಸ್ತಿತ್ವವನ್ನು ಕುರಿತ ಹಾಗೆ ಮೌಲ್ಯಾತ್ಮಕವಾಗಿ ಭಿನ್ನ ಆಲೋಚನೆಗಳನ್ನು ವ್ಯಕ್ತಪಡಿಸುತ್ತವೆ. ಭಕ್ತಿ ಪರಂಪರೆಯ ಸ್ವರೂಪಗಳು – ತಾವು ಬಯಸುವ ಇನ್ನೊಂದು ವಾತಾವರಣವು ಲೋಕದ ಗುಣಗಳಿಗೆ ಸಂವಾದಿಯಾಗಿರುವಂತೆಯೂ, ಆದರೆ ಪ್ರತ್ಯೇಕ ರಚನೆಯಲ್ಲಿ ರೂಪುಗೊಳ್ಳುವಂತೆಯು ಭಾವಿಸುತ್ತವೆ. ಹಾಗಾಗಿ ಲೌಕಿಕದ ಸಂಪರ್ಕದಿಂದ ಮುಕ್ತನಾದ ಅನುಭಾವಿಯೇ ಈ ಪರಂಪರೆಗಳ ವಾಸ್ತವವಾಗಿದ್ದಾನೆ ಎಂಬುದಾಗಿ ವಿದ್ವಾಂಸರು ಗ್ರಹಿಸುತ್ತಾರೆ.

ಮನುಷ್ಯನ ಅಸ್ತಿತ್ವವನ್ನು ವಿವರಿಸುವ ಈ ಮೊದಲನೆಯ ವಿಭಾಗದ ಲಕ್ಷಣಗಳು, ಜಗತ್ತಿನ ಧಾರ್ಮಿಕ ಕ್ಷೇತ್ರಗಳಲ್ಲಿ ಅತ್ಯಂತ ಬಹು ಜನಪ್ರಿಯವು, ಸಾಮಾನ್ಯ ಮನುಷ್ಯನಿಗೂ ಸಹ ಅತ್ಯಂತ ಹೃದ್ಯವೂ ಮನ ಕಲಕುವಂತವೂ ಆಗಿವೆ. ಇಲ್ಲಿ ಧಾರ್ಮಿಕ ಮನುಷ್ಯರ ಮುಖ್ಯವಾದ ಕಾಳಜಿ ತನ್ನ ಅಸ್ತಿತ್ವದ ನೆಲೆ ತನ್ನಿಂದ ಬೇರೊಂದು ಕಡೆಗೆ ಇದೆ ಎನ್ನುವ ಸಮಸ್ಯೆಯೊಂದಿಗೆ ಪ್ರಾರಂಭವಾಗುತ್ತದೆ. ಆದರೆ ಇಲ್ಲಿ ಈ ಮನುಷ್ಯ ತಾನು ಯಾವುದನ್ನು ಗ್ರಹಿಸಬೇಕು ಯಾವುದರಲ್ಲಿ ತಾನು ಒಂದಾಗಬೇಕೆಂದು ಬಯಸುತ್ತಾನೆಯೋ, ಆ ಕಲ್ಪನೆ ಒಂದು ಅತೀತ ವಸ್ತುವಿನದಲ್ಲ; ಬದಲು, ಈ ವಾತಾವರಣದಿಂದ ಭಿನ್ನವಾದ ಒಂದು ಸ್ಥಿತಿಯನ್ನು ಬಯಸುವಂತದ್ದು. ಮನುಷ್ಯನ ಅಸ್ತಿತ್ವವನ್ನು ರೂಪಿಸುವಂಥ ನೆಲೆಯೊಂದನ್ನು ಈ ಸ್ಥಿತಿ ಪ್ರಮುಖವಾಗಿ ಮಾಡುತ್ತದೆ (ಡಾ॥ ಬಸವರಾಜ ಕಲ್ಗುಡಿ ಅವರ ಮಧ್ಯ ಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, 1988. ಪು. 86).

ಸಾಮಾನ್ಯವಾದ ಅನುಭವಗಳಿಂದ ಮುಕ್ತನಾಗುತ್ತ ತನ್ನನ್ನು ತಾನು ಅರಿಯುವ, ಸ್ವತಂತ್ರನಾಗುವ, ಹೊಸ ಮನಸ್ಥಿತಿಯೊಂದನ್ನು ದೊರಕಿಸಿಕೊಳ್ಳುತ್ತಾನೆ ಎಂಬಂತಹ ನೆಲೆಯಿಂದಲೇ, ಈ ಅನುಭಾವಿಯ ಅನುಭಾವದ ನೆಲೆಗಳು ಪ್ರತಿಯೊಬ್ಬ

ಅನುಭವಿಯಲ್ಲು ಸಾಮಾನ್ಯವಾಗಿ ಪ್ರತ್ಯೇಕ ಸ್ವರೂಪವನ್ನು ಹೊಂದಿರುತ್ತವೆ. ಇವರೆಲ್ಲರಿಗೆ ಇರುವ ಸಾಮಾನ್ಯ ನೆಲೆ ಅಂದರೆ ದಿನನಿತ್ಯದ ಈ ಪ್ರಪಂಚದಿಂದ ಭಿನ್ನವಾಗುವುದು. ಪ್ರತ್ಯೇಕಗೊಳ್ಳುವುದು. ಜಗತ್ತಿನ ಎಲ್ಲ ಅನುಭಾವಿಗಳ ಹುಡುಕಾಟದ ಕ್ರಿಯೆ ಪ್ರಾರಂಭವಾಗುವುದು ಈ ಅಂಶವನ್ನು ಒಪ್ಪಿಕೊಂಡೆ ಆಗಿರುತ್ತದೆ. ಈ ನಿರಾಕರಣೆಗೆ ಈ ಜಗತ್ತಿನ ನೋವುಗಳು, ನಿರಾಶೆಗಳು, ದುಃಖ, ಚಂಚಲತೆ ಹಾಗೂ ಅಧೀನತೆಗಳು ಮುಖ್ಯ ಕಾರಣವಾಗಿರುತ್ತವೆ. ವ್ಯಕ್ತಿಯು ಬದುಕಿನ ಜಂಜಾಟದಲ್ಲಿ ತನ್ನ ಆಧ್ಯಾತ್ಮಿಕ ಸ್ಥಿತಿಯನ್ನು ಕಳೆದುಕೊಂಡು ಸ್ವಹಿತ ಸಾಧನೆಗೆ ತೊಳಲಾಡುತ್ತಾ ಲೋಭಿಯು, ಕ್ರೂರಿಯೂ ಮದ ಮಾತ್ಸರ್ಯವುಳ್ಳವನು ಆಗಿರುತ್ತಾನೆ. ಆದ್ದರಿಂದ ಈ ಪ್ರಾಣಿ ಪಾತಳಿಯ ಬದುಕನ್ನು ತ್ಯಜಿಸುವುದು ಮುಖ್ಯವೆಂದು ಇವರು ಭಾವಿಸಿರುತ್ತಾರೆ.

ಹಾಗಾದರೆ ಅನುಭಾವಿ ಆಶಿಸುವ ಇನ್ನೊಂದು ವಾಸ್ತವತೆ, ವಾತಾವರಣ ಎನ್ನುವುದನ್ನು ಹೇಗೆ ಗ್ರಹಿಸಬೇಕು? ಅನುಭಾವಿಗಳ ಮಾತುಗಳಲ್ಲಿ ಈ ಬಗ್ಗೆ ಯಾವ ಖಚಿತವಾದ ಮಾತುಗಳೂ ಇರುವುದಿಲ್ಲ. ಅವರ ಮಾತುಗಳೆಲ್ಲ ಮುಖ್ಯವಾಗಿ ಈ ಭೌತಿಕ ಜಗತ್ತಿನ ಗುಣಗಳಿಗೆ ವಿರೋಧವಾದಂಥ ಗುಣಗಳನ್ನು ತಮ್ಮ ಅನುಭಾವದ ಮುಖ್ಯ ಅಭಿವ್ಯಕ್ತಿಯನ್ನಾಗಿ ಮಾಡಿಕೊಂಡಿರುತ್ತವೆ. ಅಂದರೆ ಅವರು ತಾವು ಯಾವುದನ್ನು ಕಂಡೆವು ಎಂದು ಹೇಳುತ್ತಾರೋ ಅದು ಈ ಜಗತ್ತಿನ ಸಕಲ ಗುಣಗಳಿಗಿಂತ ಭಿನ್ನವಾದದ್ದು. ಉದಾಹರಣೆಗೆ, ಅದು ಸಕಲ ರೂಪು, ಗುಣಗಳಿಂದ ಅತೀತವಾದದ್ದು, ನಿಶ್ಶಬ್ದವಾದದ್ದು, ಶೂನ್ಯವಾದದ್ದು, ಹೀಗೆ ಯಾವುದು ಕ್ಷಣಿಕವೋ ಅದರಿಂದ ಹೊರತಾದದ್ದು.

ಅನುಭಾವ ಸ್ವರೂಪದಲ್ಲಿ ಎಲ್ಲ ತತ್ವ ಹಾಗೂ ಧರ್ಮಗಳು ಒಂದು ಸಂಕ್ರಮಣ ಕಾಲದಲ್ಲೇ ಹುಟ್ಟಿದವುಗಳೆನ್ನುವುದನ್ನು ಗಮನಿಸಬೇಕು. ಆದ್ದರಿಂದಲೇ ಇವುಗಳು ವ್ಯಕ್ತಿಯ ಆಧ್ಯಾತ್ಮಿಕ ಸಾಧನೆಯ ಬಗ್ಗೆ ಹೆಚ್ಚು ಒತ್ತು ಕೊಡುತ್ತವೆ. ಯಾವ ವಾತಾವರಣದಲ್ಲಿ ವ್ಯಕ್ತಿಯ ಬಗ್ಗೆ ಕಾಳಜಿಯು ಇರಲಿಲ್ಲವೋ ಅಂಥ ವಾತಾವರಣದ ನಿರಾಕರಣೆ ಇಲ್ಲಿ ನಡೆಯುತ್ತದೆ (ಡಾ॥ ಬಸವರಾಜ ಕಲ್ಗುಡಿ ಅವರ ಮಧ್ಯ ಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, 1988. ಪು. 97–98).

ಅನುಭಾವದ ಮುಖ್ಯ ಪ್ರಕ್ರಿಯೆ ಈ ಕ್ಷಣಿಕ ಜಗತ್ತಿನಿಂದ ದೂರವಾಗಿ ಅನಂತತೆಯೊಂದಿಗೆ ಬೆರೆಯುವುದೇ ಆಗಿದೆ. ಈ ನಿರಾಕರಣೆಯನ್ನು ತಮ್ಮ ಅನುಭಾವದ ಹಾದಿಯಲ್ಲಿ ಮೊದಲ ಹೆಜ್ಜೆ ಎಂದೇ ಇವು ತಿಳಿಯುತ್ತವೆ. ಈ ನಿರಾಕರಣೆಯನ್ನು ತಮ್ಮ ಮೊದಲ ಕ್ರಿಯೆ ಎಂದು ತಿಳಿದ ಆದರೆ ಪರತತ್ವದಲ್ಲಿ

ನಂಬಿಕೆ ಇಲ್ಲದ ನಿರೀಶ್ವರವಾದಿಗಳು ಇದ್ದಾರೆ. ಬೌದ್ಧ, ಜೈನ, ಸಾಂಖ್ಯ ಹಾಗೂ ಯೋಗ ದರ್ಶನಗಳ ಅನುಭಾವದ ನೆಲೆ ಈ ಸ್ವರೂಪದ್ದು. ಇಲ್ಲಿ ಮುಖ್ಯವಾಗಿ ಈ ಜಗತ್ತನ್ನು ನಿರಾಕರಿಸುವ ವ್ಯಕ್ತಿ ಪ್ರಜ್ಞೆ, ತನ್ನನ್ನು ತಾನು ಅರಿಯುವ ಕ್ರಮವನ್ನೇ ಪ್ರಮುಖವೆಂದು ಭಾವಿಸುತ್ತದೆ. ವ್ಯಕ್ತಿ ಪ್ರಜ್ಞೆಯು ತಲುಪುವ ಈ ನೆಲೆ 'ಅನಂತ ಸತ್ಯ ಸ್ವರೂಪದ್ದು' ಎಂದು ಇವು ವಿವರಿಸುತ್ತವೆ. ಇಲ್ಲಿಯ ವ್ಯಕ್ತಿ ಪ್ರಜ್ಞೆಯು 'ತನ್ನನ್ನು ತಾನು' ಅರಿಯುವ ಲಕ್ಷಣವು ಜಗತ್ತಿನ ಗುಣ ಸಮೂಹಗಳಿಗೆ ವಿರುದ್ಧವಾಗಿಯೆ ಇರುತ್ತವೆ ಎನ್ನುವುದನ್ನು ಗಮನಿಸಬೇಕು.

ಬುದ್ಧನ ಪ್ರಕಾರ ಈ ಅನುಭವ ಮನುಷ್ಯನನ್ನು ದುಃಖ ನೋವುಗಳಿಂದ ಮುಕ್ತನಾಗಿಸುತ್ತದೆ. ಆದ್ದರಿಂದಲೇ ದುಃಖ ನೋವಿನ ಪ್ರತೀಕವಾಗಿರುವ ಮರುಹುಟ್ಟಿನ ಚಕ್ರದಿಂದ ಬಿಡುಗಡೆ ಮಾಡುತ್ತದೆ. ಆದ್ದರಿಂದ ಇವನು ಹೇಳುವಂತೆ ನಿರ್ವಾಣವೆಂದರೆ, ವ್ಯಕ್ತಿಯು ಕಾಲ–ದೇಶಗಳಿಂದ ಬದ್ಧವಾದ ಈ ಜಗತ್ತಿನಿಂದ ಬೇರೆಯಾಗುವುದು (ಡಾ॥ ಬಸವರಾಜ ಕಲ್ಗುಡಿ ಅವರ ಮಧ್ಯ ಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, 1988. ಪುಟ 99).

ಅನುಭಾವದ ಸ್ವರೂಪಗಳಲ್ಲಿ ಸತ್ಯವೆನ್ನುವ ವಾದವನ್ನು ಮಾಡುವುದರಲ್ಲಿ ಯಾವ ಅರ್ಥವು ಇಲ್ಲ. ಯಾಕೆಂದರೆ, ಎರಡು ಅನುಭಾವಿಗಳ ಭಿನ್ನ ರೀತಿಯ ಅನುಭವಗಳನ್ನೇ ಹೇಳುತ್ತಿವೆ. ಈ ಎರಡು ಸ್ವರೂಪಗಳಲ್ಲಿ ಗುರುತಿಸಬಹುದಾದ ಒಂದು ಮುಖ್ಯವಾದ ಅಂಶವೆಂದರೆ ಎರಡು ಪರಸ್ಪರ ವಿರೋಧ ಗುಣಗಳನ್ನು ಹೊಂದಿರುವಂತವು. ಒಂದು ಸಂಪೂರ್ಣ ಗುಣಾತ್ಮಕ ಅಂಶವನ್ನು ಹೇಳಿದರೆ, ಇನ್ನೊಂದು ಸಂಪೂರ್ಣ ನಿರ್ಗುಣ ಸ್ವರೂಪವನ್ನು ಹೇಳುವಂತದ್ದು. ಒಂದು ಸಾಂದ್ರತೆಯ ಅಂಶಗಳನ್ನು ಹೊಂದಿದ್ದರೆ ಇನ್ನೊಂದು ಶೂನ್ಯತೆಯನ್ನು ಒಪ್ಪಿಕೊಳ್ಳುವಂತದ್ದು. ಹೀಗೆ ಒಂದು ಅತಿರೇಕದಿಂದ ಇನ್ನೊಂದು ಅತಿರೇಕಕ್ಕೆ ಹೊಯ್ದಾಡುವ ಈ ಲಕ್ಷಣಗಳು ಸೂಕ್ಷ್ಮವಾಗಿ ನೋಡಿದರೆ, ಇತಿಹಾಸ, ಸಾಂಸ್ಕೃತಿಕ ಪರಿಣಾಮಗಳಿಂದಲೇ ರೂಪುಗೊಂಡವುಗಳೆಂಬುದು ಗೊತ್ತಾಗುತ್ತದೆ.

ಮಾನವನ ಅಸ್ತಿತ್ವದಲ್ಲಿ ಪ್ರಧಾನ ಪಾತ್ರವಹಿಸುವ ಎರಡು ರೀತಿಯ ಮನೋಭೂಮಿಕೆಗಳು ಇಲ್ಲಿ ಕೆಲಸ ಮಾಡುವುದನ್ನು ಗಮನಿಸಬಹುದು. ದೇವರ ಗುಣಾತ್ಮಕ ಸ್ವರೂಪವನ್ನು ಒಪ್ಪುವ ಮನೋಭೂಮಿಕೆ ಮುಖ್ಯವಾಗಿ ಭಾವನಾತ್ಮಕವಾದದ್ದು. ಈ ಭಾವನಾತ್ಮಕತೆ ತನ್ನ ಬದುಕಿನ ಈ ಜಗತ್ತಿನಲ್ಲಿ ಸುಂದರಗೊಳಿಸಿಕೊಳ್ಳುವ ಆಶಯದಿಂದ ಹುಟ್ಟಿರುವಂತದ್ದು. ಆದ್ದರಿಂದಲೇ ಇಲ್ಲಿ ಮನುಷ್ಯನ ಅಸ್ತಿತ್ವದಲ್ಲಿ ಅನಿವಾರ್ಯವಾಗಿ ಬೇಕಾದ ಶಾಶ್ವತ ಮೌಲ್ಯಗಳನ್ನು ದೇವರಿಗೆ ಅನ್ವಯಿಸಲಾಗುತ್ತದೆ. ಆದ್ದರಿಂದಲೇ ಇಲ್ಲಿ ಮನುಷ್ಯನ ಅಸ್ತಿತ್ವದಲ್ಲಿ ಅನಿವಾರ್ಯವಾಗಿ

ಬೇಕಾದ ಶಾಶ್ವತ ಮೌಲ್ಯಗಳನ್ನು ದೇವರಿಗೆ ಅನ್ವಯಿಸಲಾಗುತ್ತದೆ. ಆದ್ದರಿಂದಲೇ ಇಲ್ಲಿ ದೇವರು ಪ್ರೇಮಿಸುತ್ತಾನೆ, ರಕ್ಷಿಸುತ್ತಾನೆ. ಈ ಆಶಯಗಳೆಲ್ಲ ಮೂಲತಃ ಜಗತ್ತಿಗೆ ಸಂಬಂಧಪಟ್ಟ ಮೌಲ್ಯಗಳಾದ್ದರಿಂದ ಇವನು ಒಪ್ಪುವ ದೇವರ ಪ್ರತಿಮೆಯು ಈ ಅಂಶಗಳನ್ನು ಒಳಗೊಂಡ ಸ್ವರೂಪವೇ ಆಗಿರುತ್ತದೆ.

ದೇವರ ನಿರ್ಗುಣ ಸ್ವರೂಪವನ್ನು ಒಪ್ಪುವ ಮನೋಭೂಮಿಕೆಯ ಆಳದಲ್ಲಿ ವೈಚಾರಿಕತೆಯನ್ನು ತನ್ನಲ್ಲಿ ಒಳಗೊಂಡಿರುತ್ತದೆ. ಅನೇಕ ಅನುಭಾವಿಗಳು ಈ ವೈಚಾರಿಕ ಭೂಮಿಕೆಯನ್ನು ಅಲ್ಲಗಳೆಯುತ್ತರಾದರೂ ಈ ಜೀವನದ ನಿರಾಕರಣೆಯು ಹಾಗೂ ಶಾಶ್ವತ ಸತ್ಯದ ಕಡೆಗೆ ಸುಗಮ ಸಾಧನೆಯ ದಾರಿಯ ಆಯ್ಕೆಯೆ ಹೆಚ್ಚು ಪ್ರಜ್ಞಾಪೂರ್ವಕವಾದದ್ದು. ಆದ್ದರಿಂದ ಕೊನೆಯ ಮೋಕ್ಷ ಸ್ಥಿತಿಯನ್ನು ಕಾಣುವ ಹಾದಿ ತೀವ್ರ ಪ್ರಜ್ಞಾಪೂರ್ವಕ ಪ್ರಯತ್ನಗಳೆಲ್ಲ ಶ್ರಮವೇ ಆಗಿದೆ. ಈ ಪ್ರಜ್ಞಾ ಪೂರ್ವಕವಾದ ಜಗತ್ತಿನ ನಿರಾಕರಣೆ, ಯಾವ ಸಾಂಸ್ಕೃತಿಕ, ಐತಿಹಾಸಿಕ ಕಾರಣಗಳಿಂದ ಹುಟ್ಟುತ್ತದೆ? ಇದು–ಮಾನವ ತನ್ನ ಬದುಕಿನ ಬಗ್ಗೆ ತಾನೆ ನಿರಾಶೆಗೊಂಡಂತಹ ಸ್ಥಿತಿಯೊಂದರ ಪರಿಣಾಮವೇ? ಅಥವಾ ಮನುಷ್ಯನಲ್ಲಿ ಅಂತಸ್ಥವಾಗಿರುವಂತ ಕ್ರೂರತನದ ಆವಿಷ್ಕಾರಗಳನ್ನು ನಿವಾರಿಸಲು ಸಾಧ್ಯವಿಲ್ಲ ಎನ್ನುವ ಹತಾಶೆಯೇ?

ಅನುಭಾವದ ಅಭಿವ್ಯಕ್ತಿಗಳು ಯಾವ ಸ್ವರೂಪದ್ದೇ ಇರಲಿ, ಇವುಗಳು ಒಂದು ಸಾಂಸ್ಕೃತಿಕ ಪರಿಸರದ ಅಭಿವ್ಯಕ್ತಿಗಳಿಂದ ನೋಡಿದಾಗ, ಚಾರಿತ್ರಿಕವಾಗಿ ಅವುಗಳ ಮಹತ್ವವನ್ನು ಗುರುತಿಸಬಹುದಾಗುತ್ತದೆ. ಇಲ್ಲದೆ ಹೋದರೆ, ಈ ಅಭಿವ್ಯಕ್ತಿಗಳು ಎಲ್ಲಾ ಕಾಲಕ್ಕು, ಎಲ್ಲಾ ದೇಶಗಳಿಗೂ ಸಮಾನವೆಂದು ತಿಳಿಯುವ ತೊಂದರೆ ಉಂಟಾಗುತ್ತದೆ. ಅನುಭಾವದ ಸ್ವರೂಪಗಳು ಅನೇಕ ಬಾರಿ ಕಾಲ, ದೇಶಗಳ ಅನಿವಾರ್ಯ ಹಾಗೂ ಮಹತ್ವವನ್ನು ಹೊಂದಿರುತ್ತವೆ (ಡಾ॥ ಬಸವರಾಜ ಕಲ್ಗುಡಿ ಅವರ ಮಧ್ಯ ಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, 1988. ಪು. 102–103).

## ಅನುಭಾವದ ಮಹತ್ವ ಮತ್ತು ವಿಕಾಸ

"ಯಾವುದೇ ಸಾಧಕನ ಜೀವನದಲ್ಲಿ ಅನುಭಾವ ಉಂಟಾಗಬೇಕಾದಲ್ಲಿ ಎರಡು ರೀತಿಯ ಪರಿವರ್ತನೆಗಳು ಆಗುವುದುಂಟು. ಕೆಲವು ಸಾಧಕರಲ್ಲಿ ಇದ್ದಕ್ಕಿದ್ದ ಹಾಗೆ ಅನಿರೀಕ್ಷಿತವಾಗಿ ಪರಿವರ್ತನೆಯು ಕಂಡುಬಂದರೆ, ಕೆಲವರಲ್ಲಿ ತಮ್ಮ ದೃಢ ಸಂಕಲ್ಪದಿಂದ ಉಂಟಾದ ಪರಿಶ್ರಮದ ಫಲವಾಗುತ್ತದೆ. ಅವರಲ್ಲಿನ ಈ ರೀತಿಯ ಪರಿವರ್ತನೆಗಳನ್ನು ಪುನರ್ಜನ್ಮವೆಂದೇ ಹೇಳಬೇಕು. ಪಾಶ್ಚಾತ್ಯರು ಇದನ್ನು "ಪ್ಯೂರಿಫಿಕೇಶನ್" ಎಂದು ಕರೆದಿರುವರು. ಸಾಧಕರ ಜೀವನದಲ್ಲಿ ಉಂಟಾಗುವ

ತಲ್ಲಣ, ಮಾನಸಿಕ ತಳಮಳಗಳಿಗೆ ಅಂತಿಮ ಶಾಂತಿಯನ್ನು, ಆಯಾ ಧರ್ಮದ ಸಾಧಕರು ಕೆಲವು ಆಧ್ಯಾತ್ಮಿಕ ಪದ್ಧತಿಗಳನ್ನು ಅನುಸರಿಸಿ ಕಂಡುಕೊಂಡಿದ್ದಾರೆ. ಅಂತೆಯೇ ಶಿವಶರಣರು ಷಟ್ಸ್ಥಲ ಸಿದ್ಧಾಂತ ಹಂತಗಳನ್ನು ಶಿವಯೋಗ ಮಾರ್ಗದಲ್ಲಿ ಪಾಲಿಸಿರುವುದು ಕಂಡುಬರುತ್ತದೆ. ಅವರ ಸಂಕಲನಾತ್ಮಕ ಶ್ರಮವು ಜೀವಾತ್ಮನನ್ನು ಪರಮಾತ್ಮನಲ್ಲಿ ಐಕ್ಯಹೊಂದಲು ಸಹಾಯ ಮಾಡಿದೆ ಎನ್ನಬಹುದು". ನಿಜ ಅರ್ಥದ ಅನುಭಾವಿಯ ಸ್ಥಿತಿ ಹೇಗಿರುತ್ತದೆ ಎಂದರೆ ಅದು **ಒಳಪಟ್ಟ ಅನುಭಾವವೇ ಇರುವಿಕೆಯ ಅರಿವು** ಎಂಬಂತೆ ಇರುತ್ತದೆ. ಅಂದರೆ "ಪ್ರತಿ ಬಾರಿ ನಾನು ಬೀಳಲ್ಪಟ್ಟಾಗ, ಆಗುವ ನೋವು ನಾನಲ್ಲ. ಉಪಚಾರ, ಅಪಚಾರ, ಆದರೋಪೇಕ್ಷೆಗಳು ನಾನಲ್ಲ. ಇದೆಲ್ಲಕೆ ಅನುಭವ ಪಡುವವ ನಾನಲ್ಲ. ಇದೆಲ್ಲದಕೆ ಒಳಗಾದೆ ಎಂದನಿಸುವುದೇನಿದೆ, ಅದೇ ನಾನು!! ಇದರ ಸುತ್ತಲಿನ ಯಾವ ವಲಯವು ನಾನಲ್ಲ ಹಾಗೂ ನನ್ನದಲ್ಲ, ಅಂತೆಯೇ ಎಚ್ಚರ, ಕನಸು, ನಿದ್ದೆ ಎಂಬ ಅವಸ್ಥೆಗಳಲ್ಲಿನ ಪ್ರತಿ ಕ್ಷಣದ ಪ್ರತಿಭಾವ, ಅಭಾವಗಳೂ ಸಹ, ಮೂರು ಮಡಿಕೆಯಲ್ಲಿ ತೆರೆದುಕೊಂಡ ಬದುಕು. ಮೂರು ಬಗೆಗೆ ಹಂಚಿಹೋಗಿ ಮೂರೇ ಆಗುಳಿವುದು. ಇದಾವುದು ನಾನಲ್ಲ, ನನ್ನಿಂದಲ್ಲ. ಇದರ ಅರಿವೇ ಸ್ವಾನುಭೂತಿ ಎಂದು ವಿವರಿಸಲಾಗಿದೆ. ಜೊತೆಗೆ ಜಗತ್ತಿನ ಎಲ್ಲಾ ಆಲೋಚನೆಗಳ ನಡುವೆ ಸಹಜವಾದ ಚೈತನ್ಯವೊಂದು ಹರಿದಾಡುತ್ತಿದೆ. ಅದೇ ಚೈತನ್ಯವು ಜಗದೆಲ್ಲೆಡೆ ಹರಿದು ಹಂಚಿಕೊಂಡಿದೆ. ತನ್ನ ತಾನೇ ಅನಾಯಾಸವಾಗಿ, ಅಪ್ರೇರಿತವಾಗಿ, ಇದೊಂದೇ ಸರ್ವತಂತ್ರ ಸ್ವತಂತ್ರವಾಗಿ ಇದು ಹರಿದಾಡುವ ಅನಂತ ಚಿಲುಮೆ, ಅನಂತ ರೂಪ, ಏನೆಂದು ಕರೆವುದು? ಏನೇನೆಂದು ಕರೆದರು ಎಲ್ಲೆಲ್ಲೂ ಇದು ಎಲ್ಲದರಿಂದಲೂ ಕರೆಸಿಕೊಂಡೂ ಸಹ, ತಾನು ಇಚ್ಚಿಸದೆ ಯಾರ ಕರೆಗೂ ಓಗೊಡದ, ಕಾಣದ ಶಾಶ್ವತ ನಿಗೂಢದರಿವು, ಅದರ ಸಣ್ಣ ಗುಮಾನಿ ಬಂದರೆ ಸಾಕು, ಅದೇ ಭಾಗ್ಯ". ವ್ಯಕ್ತಿಯ ಮಾನಸಿಕ ಪಕ್ವತೆಯ/ವಿಕಸತೆಯ ಈ ಹಂತಗಳು ಮಾನವ ಬದುಕಿನ ವಿಕಸನವನ್ನು ಅತ್ಯಂತ ಸರಳವಾಗಿ ವ್ಯಕ್ತಪಡಿಸಿವೆ. 'ನಾನು' ಎಂಬುದು ನಾನೆಂದುಕೊಂಡಿರುವ ಭಾವ ಮಾತ್ರ ಎಂಬ ಅನುಭಾವಿಕ ನುಡಿಗಟ್ಟು ಮನುಕುಲದ ಉದ್ದೇಶವನ್ನು ಅತ್ಯಂತ ಸರಳವಾಗಿ ಮತ್ತು ಅಷ್ಟೇ ಕ್ಲಿಷ್ಟವಾಗಿ ವಿವರಿಸಿದೆ. ಕೇಳಲು ಸರಳವೆನಿಸುವ ಈ ಅನುಭಾವಿಕ ನುಡಿಗಳು ಅತ್ಯಂತ ಕ್ಲಿಷ್ಟವಾದ ಅರ್ಥವಿವರಣೆಯನ್ನು ಹೊಂದಿ ಮಾನವ ವಿಕಸನದ ಅಥವಾ ಬೆಳವಣಿಗೆಯ ವಿವರಣೆಗಳಾಗಿ ನಮ್ಮ ಮುಂದಿವೆ. ಈ ಪರಂಪರೆಗಳ ಅಧ್ಯಯನ ಮುಂದೆ ಖಂಡಿತವಾಗಿ ನಮ್ಮದೆ ಆದ ಒಂದು 'ಸ್ವ' ವನ್ನು ರೂಪಿಸಿಕೊಳ್ಳಲು ಆ ಮೂಲಕ ನಮ್ಮನ್ನು ನಾವು ಅರಿತುಕೊಳ್ಳಲು ಸಾಧ್ಯವಾಗಬಹುದಾದ ಮಾರ್ಗಗಳನ್ನು ತೆರೆದಿಡುತ್ತವೆ.

## ಅನುಭಾವದ ಕುರಿತಾಗಿ ಚಿಂತಕರ ಅಭಿಪ್ರಾಯಗಳು

ನಾವು ಈಗಾಗಲೆ ಮೇಲೆ ಚರ್ಚಿಸಿರುವಂತೆ ಭಾರತೀಯ ಜ್ಞಾನ ಪರಂಪರೆ ಅನುಭವಗಳನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುವ ಮಹತ್ವದ ಮತ್ತು ಸರಳವಾದ ಮಾರ್ಗವನ್ನು ಅನುಸರಿಸಿದೆ. ವಿವಿಧ ಪಂಥ ಮತ್ತು ಗುಂಪುಗಳು ಸೃಷ್ಟಿಸಿರುವ ಆ ಮಾರ್ಗವನ್ನು ನಾವು ಒಂದು ಸಾರವಾಗಿ "ಅನುಭಾವಿಕ ನೆಲೆಗಳು" ಎಂದು ಅರ್ಥಮಾಡಿಕೊಳ್ಳಬಹುದಾಗಿದೆ. ಸದರಿ ಅಧ್ಯಯನದ ಅಗತ್ಯಕ್ಕಾಗಿ ಭಾರತದ ವಿವಿಧ ಮಹನೀಯರು ವಿವರಿಸುವಂತೆ ಅನುಭಾವದ ವಿವರಣೆಗಳನ್ನು ಮುಂದಿನಂತೆ ಗುರುತಿಸಿಕೊಳ್ಳಲಾಗಿದೆ.

### ಶ್ರೀ ರಾಮಕೃಷ್ಣ ಪರಮಹಂಸರು

ಪರಮಹಂಸರು ಅನುಭಾವವನ್ನು ತಮ್ಮದೇ ಆದ ಅರ್ಥದಲ್ಲಿ ವಿವರಿಸಿದ್ದಾರೆ. ಅವರ ಪ್ರಕಾರ "ಅನುಭಾವವು ಸಮರ್ಥಿಸಲು ಅಸಾಧ್ಯವಾದದ್ದು". ಅಷ್ಟೇ ಅಲ್ಲ ಅನುಭಾವವನ್ನು ಹುಡುಕುವ ಮಾನವನ ಸ್ಥಿತಿ "ಉಪ್ಪಿನ ಬೊಂಬೆಯೊಂದು ಸಮುದ್ರದ ಆಳವನ್ನು ಹುಡುಕಹೊರಟಂತೆ" ಎಂದು ಅವರು ಹೇಳಿರುವರು.

### ಡಾ. ರಾಧಾಕೃಷ್ಣನ್ ಅವರು ಹೇಳುವಂತೆ:

"**Intuition** is the extension of perception to regions beyond sense" ಅನುಭಾವ ಅಂದರೆ ಇಂದ್ರಿಯ ದರ್ಶಿತ ಲೋಕಗಳಾಚೆಗೆ ವ್ಯಾಪಿಸುವ ಕಾಣ್ಕೆ ಎಂದು ವಿವರಿಸಿದ್ದಾರೆ.

### ರಮಣ ಮಹರ್ಷಿಗಳ ಪ್ರಕಾರ:

ನಾನು ಎಂಬುದು 'ಆತ್ಮ', ದೇಹ ಅಲ್ಲ: ಆತ್ಮ ಅವಿನಾಶಿ, ಆನಂದರೂಪಿ. ಅನುಭಾವಿಗೆ ಅದೊಂದೇ ಸತ್ಯ, ಮಿಕ್ಕವೆಲ್ಲವೂ ತೋರಿಕೆಗಳು ಎಂದು ವ್ಯಕ್ತಿಯ ಅನುಭಾವವನ್ನು ಆತ್ಮ ಸಾಕ್ಷಾತ್ಕಾರಕ್ಕೆ ಹೋಲಿಸಿ ವಿವರಿಸಿದ್ದಾರೆ.

### ಶ್ರೀ ಅರವಿಂದರು ತಿಳಿಸುವಂತೆ:

"Intuition has a fourfold power. A power of revelatory, truth-seeing, a power of inspiration of truth-hearing, a power of truth touching or immediate seeing of significance, a power of true and automatic discrimination of the orderly and exact relations of truth-these are fourfold potencies of intuition."

ಅರವಿಂದರು ಅನುಭಾವ ಸ್ಥಿತಿಯನ್ನು ಸೃಷ್ಟಿಗೆ ಮೂಲ ಕಾರಣವಾದ ಸತ್ಯದ ಸ್ವರೂಪವನ್ನು ಪ್ರತ್ಯಕ್ಷವಾಗಿ ಕಾಣುವ, ಕೇಳುವ, ಸ್ಪರ್ಶಿಸುವ ಮತ್ತು ವಿವೇಚಿಸುವ ಶಕ್ತಿ ಎಂದಿದ್ದಾರೆ. ಪ್ರಜ್ಞೆಯುಳ್ಳ ಸಾಮಾನ್ಯ ಮನಸ್ಸಾಗಿ, ಇದೆಲ್ಲವನ್ನು ಮೀರಿದ 'ಅತಿಮಾನಸ ಪ್ರಜ್ಞೆ'ಯಾಗಿ ವಿಶ್ವಾತ್ಮನಲ್ಲಿ ಲೀನಗೊಳ್ಳುವ ಸಾಹಸ ಯಾತ್ರೆಯನ್ನು ತಮ್ಮ 'ದಿವ್ಯ ಜೀವನ' ಎಂಬ ಗ್ರಂಥದಲ್ಲಿ ಅನುಭಾವ ಪೂರ್ವಕವಾಗಿ ಚಿತ್ರಿಸಿದ್ದಾರೆ.

ಈ ಸೃಷ್ಟಿಯೊಂದು ನಿರಂತರ ಪ್ರವಾಹ. ನಮ್ಮ ಬುದ್ಧಿ ಆ ಪ್ರವಾಹದ ಒಂದು ಕ್ಷಣದ ಪ್ರತಿಯನ್ನು ತೆಗೆದುಕೊಂಡು ಅದರ ಸ್ವರೂಪವನ್ನು ಅರಿಯಲು ಪ್ರಯತ್ನಿಸುತ್ತದೆ. ಆದರೆ ಆ ಪ್ರವಾಹದ ಪೂರ್ಣ ಸ್ವರೂಪವನ್ನು ತಿಳಿಯಬೇಕಾದರೆ ಅದರ ಚಲನೆಯಲ್ಲಿಯೇ ಭಾಗವಹಿಸಿ ಅದನ್ನು ಕಂಡುಕೊಳ್ಳುವ ಶಕ್ತಿ ಬೇಕು. ಇಂತಹ ಶಕ್ತಿಯಿಂದ ಸೃಷ್ಟಿ ಪ್ರವಾಹದ ಬಾಹ್ಯ ಸೌಂದರ್ಯವನ್ನು ಕಂಡು, ಮತ್ತೆ ಅದರ ಹಿಂದಿರಬಹುದಾದ ಸೃಷ್ಟಿಕರ್ತನ ಸೌಂದರ್ಯವನ್ನು ಊಹಿಸಿಯು ಉಂಟಾದ ಭಾವದೀಪ್ತತೆಯಿಂದ ಹುಟ್ಟುವುದು ಕಾವ್ಯ. ಈ ಅನುಭಾವ ಇನ್ನೂ ತೀವ್ರತರವಾದಾಗ ಪ್ರವಾಹ ರೂಪವಾದ ಈ ಪ್ರಪಂಚದ ಚಲನೆಯಲ್ಲಿಯೆ ಒಂದು ನಿಶ್ಚಲ ಸತ್ಯವನ್ನು ಕಂಡು ತಾನೇ ಅದು "ಆಗಿ ಪರಿಣಮಿಸುವ" ಮಹಾ ಪರಿವರ್ತನೆ ಅನುಭಾವ.

ಈ ಅನುಭಾವ ಅದರ ಕೊನೆಯ ನಿಲುವಿನಲ್ಲಿ ಅವರ್ಣನೀಯ. ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ: ಉಪ್ಪಿನ ಬೊಂಬೆ ಸಮುದ್ರದ ಆಳವನ್ನು ನೋಡಲು ಹೊರಟಂತೆ ಆಗುತ್ತದೆ. ಮಾತು ಅಲ್ಲಿ ಮೌನವಾಗಿ ಪರಿಣಮಿಸುತ್ತದೆ. ಮಾತು ಮನಂಗಳಿಂದ ಅತ್ತ ಇರುವ ಜ್ಯೋತಿ ಅದು. ಆದರೂ ಸಾಧಕ ತನ್ನ ಸಾಕ್ಷಾತ್ಕಾರದ ಅನುಭವವನ್ನು ಮಾತು ಮತ್ತು ಕೃತಿಯೆಡೆಗೆ ನಡೆಯುವ ಮಾರ್ಗದರ್ಶನವನ್ನು ಇತರರಿಗೂ ಉಂಟುಮಾಡಿಕೊಡಲು ಹವಣಿಸುತ್ತಾನೆ. ಆ ಮಾತುಗಳು ಅನುಭವದ ಪೂರ್ಣತೆಯನ್ನು ವ್ಯಕ್ತಗೊಳಿಸಲು ಸಾಧ್ಯವಾಗದಿದ್ದರು ಆ ಕಡೆಗೆ ನಡೆಯುವ ಸಾಧಕನಿಗೆ ತೋರ್ಬೆರಳಾಗಿ ನಿಂತು ಮಾರ್ಗದರ್ಶನವಾಗುವಷ್ಟರ ಮಟ್ಟಿಗೆ ಜೀವಂತವಾಗಿ ಚಿರಂತನವಾಗುತ್ತವೆ.

'ಅನುಭಾವ ಮಾರ್ಗ', 'ಅನುಭಾವ ಸಾಹಿತ್ಯ' ಎಂದು ಮುಂತಾಗಿ ಹೇಳುವುದನ್ನು 'ಅನುಭಾವ' ಎಂಬುದನ್ನು 'ಕೇವಲ ಆನಂದಮಯವಾದ ಸ್ಥಿತಿ' ಎಂಬ ಅರ್ಥದಲ್ಲಿ ತೆಗೆದುಕೊಳ್ಳದೆ ಅದರ ವ್ಯಾಪ್ತಿಯ ಪರಿಧಿಯನ್ನು ಹಿಗ್ಗಿಸಿಕೊಳ್ಳಬೇಕಾಗುತ್ತದೆ. "ಮಿಸ್ಟಿಸಿಸಂ" ಎಂಬುದು "A State of being" and "Kind of Knowledge" ಎಂಬೆರಡು ಅರ್ಥಗಳನ್ನು ನಿರ್ಧರಿಸುತ್ತದೆ ಎಂದು

ಆಂಗ್ಲ ಲೇಖಕನೊಬ್ಬನು ಹೇಳುತ್ತಾನೆ. ಅಂದರೆ ಅದು "ಸಾಕ್ಷಾತ್ಕಾರದ ಕೊನೆಯ ಸ್ಥಿತಿ" ಮತ್ತು "ಅದನ್ನು ಪಡೆಯುವ ಮಾರ್ಗ" ಎಂಬೆರಡು ಅಂಶಗಳನ್ನು ಒಳಗೊಳ್ಳಬೇಕಾಗುತ್ತದೆ. ಈ ಎರಡನೆಯ ಅರ್ಥದಲ್ಲಿ ಅನುಭಾವವನ್ನು ವಿವರಿಸಬೇಕಾದರೆ ಹೀಗೆ ಹೇಳಬಹುದು: ಬುದ್ಧಿ ತರ್ಕಗಳಿಗೆ ಅತೀತವಾದ ಒಂದು ಶಕ್ತಿಯಿಂದ ಮಾತ್ರ ಸತ್ಯ ಸಾಕ್ಷಾತ್ಕಾರವನ್ನು ಪಡೆಯುವುದು ಸತ್ಯವೆಂಬ ತತ್ವವನ್ನು ತಳಹದಿಯಾಗಿಟ್ಟುಕೊಂಡು ಹೊರಟ ಮಾರ್ಗ.

ಹೀಗೆಂದ ಮಾತ್ರಕ್ಕೆ ಇದು ಯೋಗ್ಯ ಕಾರಣಗಳಿಂದ ಸಮರ್ಥನೀಯ ವೆಂದಾಗಲೀ, ಅಂಧಶ್ರದ್ಧೆಯೆ ಇದರ ಆಶ್ರಯವೆಂದಾಗಲಿ ಭಾವಿಸಲಾಗದು ಇಲ್ಲಿ ಬೇಕಾದದ್ದು ಅಂಧಶ್ರದ್ಧೆಯಲ್ಲ, ಇದನ್ನು ಮೀತಿದ ಅಂತಃಕರಣದ ಅರಿವು ಇದು ಭಾವನಾತ್ಮಕವಾಗಿದ್ದು ಹೌದು, ಆದರೆ ಆ ಭಾವನೆ ವಿಕಾರ ಮನಸ್ಸಿನ ಉದ್ರೇಕದ ಹುಚ್ಚು ಹೊಳೆಯಲ್ಲ. ಪ್ರೇಮದ ಬೆಳಕಿನಿಂದ ಸ್ಫೂರ್ತಿಗೊಂಡ ದಿವ್ಯವಾಹಿನಿ. "The love of God is one legitimate definition of mysticism" ಎಂದು W.R. Inge ಹೇಳುತ್ತಾನೆ. ಇಲ್ಲಿ ಸಾಮಾನ್ಯ ತರ್ಕಕ್ಕೆ ಮೀರಿದ ವಿಚಾರ ಶಕ್ತಿಯ ಸ್ಥಾನವನ್ನು ಹೀಗೆ ನಿರ್ದೇಶಿಸಿದ್ದಾನೆ: "Mysticism is reason abive rationalism, reason being used for the affirmation of the whole personality acting under the guidance of its highest faculty". ವಿಚಾರ ಶಕ್ತಿಯು ಅನುಭವದ ಆಧಾರ ಸಾಧಕನ ವ್ಯಕ್ತಿತ್ವದ ವಿಕಾಸವನ್ನು ಒರೆಗೆ ಹಚ್ಚಿ ಉಜ್ಜಿ ನೋಡುವುದಕ್ಕೂ ವಿಚಾರ ಶಕ್ತಿ ಬೇಕು. ಆದರೆ ಈ ವಿಚಾರ ಶಕ್ತಿ ಸಾಮಾನ್ಯ ತತ್ವಕ್ಕೆ ಅತೀತ ವಾದದ್ದೆನ್ನುತ್ತಾನೆ ಇಂಗ್. ಇದೇ ಅಭಿಪ್ರಾಯವನ್ನು ಅರವಿಂದರು ತಮ್ಮ ಗ್ರಂಥಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಕೇವಲ ಬೌದ್ಧಿಕವಾದ ಜಗದಾನಂದವೊಂದೆ ಜೀವನದ ಪರಿಪೂರ್ಣತೆಗೆ ಸಾಲದು ಎಂದು ಹೇಳುತ್ತಾರೆ.

"Intellectual clarity is not enough; he must see with the insight illumining his blind outward human vision, so that he may act with the consent of his whole being, with a perfect faith in all his members, sradda, with a perfect devotion to the self of his self and the master of his being and to the same of the world and master of all being in the universe" ಎನ್ನುತ್ತಾರೆ ಅರವಿಂದರು.

ಬೌದ್ಧಿಕ ಶಕ್ತಿಗೆ ಅತೀತವಾದ ಈ ಪ್ರಜ್ಞಾವಿಕಾಸದ ನಿಲುವನ್ನೇ ಅವರು "supreme reason" ಎಂದು ಕರೆದಿದ್ದಾರೆ ತಮ್ಮ "Life of divine" ಎಂಬ ಗ್ರಂಥದಲ್ಲಿ. ಇದು ಬೌದ್ಧಿಕ ಜ್ಞಾನಕ್ಕೆ ವಿರೋಧವಾದದ್ದಲ್ಲ; ಅದನ್ನು ಒಳಗೊಂಡು

ಅದಕ್ಕೆ ಅತೀತವಾದದ್ದು. ಇದು ನಮ್ಮ ಸಾಮಾನ್ಯ ಮರ್ತ್ಯಪ್ರಜ್ಞೆಯ ಪರಿಧಿಯನ್ನು ಹಿಗ್ಗಿಸುತ್ತದೆ; ಜೀವನದ ಅನಂತತೆಯನ್ನು ಕುರಿತು ಚರ್ಚಿಸುತ್ತದೆ. ಬಹುರೂಪ ವೈವಿಧ್ಯದ ಈ ಸೃಷ್ಟಿಯಲ್ಲಿ, ಏಕರೂಪವಾದ ಸೃಷ್ಟಿ ಶಕ್ತಿಯ ಸ್ವರೂಪವನ್ನು ಕಂಡುಕೊಳ್ಳುತ್ತದೆ. ಮಾನವನ ಜೀವನದ ಗುರಿಯನ್ನು ನಿರ್ದೇಶಿಸುತ್ತದೆ ಮತ್ತು ಆ ಗುರಿಯ ಅನುಭವವನ್ನು ಸಾಕ್ಷಾತ್ತಾಗಿ ಜೀವನದಲ್ಲಿ ಕಂಡುಕೊಳ್ಳಲು ಸಹಾಯಕವಾಗುತ್ತದೆ.

**ಇದೇ ಅಭಿಪ್ರಾಯವನ್ನು ಪ್ಲಾಟನಸ್ ತನ್ನ Enneads ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾನೆ:**

"The consdiousness of the one comes not by knowledge but by an actual presene superior to any knowing. to have it, the soul must rise a above knowledge and above all its wandering from its unity." ಸಾಮಾನ್ಯ ಜ್ಞಾನಕ್ಕೆ ಅತೀತವಾದ ಪ್ರಜ್ಞೆ ಬೇಕು ಮತ್ತು ಅದರಿಂದ ಅನೇಕತೆಯನ್ನು ದಾಟಿ ಏಕತೆಯ ಕಡೆಗೆ ಮೇಲೇರಬೇಕು ಎನ್ನುತ್ತಾರೆ. ಹೀಗೆ ಬಹುರೂಪದಲ್ಲಿ ಏಕರೂಪವನ್ನೂ, ಚಲನೆಯಲ್ಲಿ ನಿಶ್ಚಲತೆಯನ್ನೂ ಕಾಣುವ ಮತ್ತು ಅದರಲ್ಲಿ ತಾನೂ ಲೀನನಾಗುವುದನ್ನು ಕೈಗೂಡಿಸಿಕೊಡುವ ಮಾರ್ಗ ಅನುಭವ ಮಾರ್ಗ.

ಜೀವನದ ಗುರಿಯನ್ನು ಕುರಿತು ಮನುಷ್ಯ ಆಲೋಚಿಸಲು ತೊಡಗಿದಂದಿನಿಂದಲೇ ಈ ಮಾರ್ಗದ ಅನ್ವೇಷಣೆ ಪ್ರಾರಂಭವಾಯಿತೆಂದು ಹೇಳಬಹುದು. ಸಾಧಕರ ನಿರಂತರ ಸಾಧನೆಯಿಂದ ಆ ಮಾರ್ಗ ಪೂರ್ಣತೆಯನ್ನು ಪಡೆಯಿತು. ಬೇರೆ ಬೇರೆ ದೇಶಗಳಲ್ಲಿ, ಬೇರೆ ಬೇರೆ ಕಾಲಗಳಲ್ಲಿ. ಆ ಸಾಧಕರು ಜೀವನದ ರಹಸ್ಯವನ್ನರಿಯಲು ಹೋರಾಟವನ್ನು ಕೈಗೊಂಡಿದ್ದರೂ ಎಲ್ಲರೂ ಒಂದೇ ಗುರಿಯ ಕಡೆಗೆ ನಡೆದಿದ್ದಾರೆ. ಅವರ ಹೋರಾಟದ ಸ್ವರೂಪ ಹೊರನೋಟಕ್ಕೆ ಬೇರೆ ಬೇರೆ ರೀತಿಯಲ್ಲಿ ಕಂಡರು ಕೊನೆಯ ಗುರಿಯನ್ನು ಕಂಡುಕೊಂಡವರೆಲ್ಲ ಒಂದೇ ರೀತಿಯ ಅನುಭವವನ್ನು ಪಡೆದಿರುವುದು ಕಂಡುಬರುತ್ತದೆ. ಮಾರ್ಗಗಳು ಬೇರೆ ಬೇರೆಯಿದ್ದಂತೆ ತೋರಿದರೂ ಒಂದೇ ಸಮುದ್ರದ ಕಡೆಗೆ ಸಾಧಕನನ್ನು ನಡೆಸಿಕೊಂಡು ಹೋಗಿವೆ. ಬೇರೆ ಬೇರೆ ಕಣಿವೆಗಳಿಂದ ಅವರು ಬಂದರೂ ಏರಬೇಕಾಗಿರುವ ಶಿಖರ ಮಾತ್ರ ಒಂದೇ. ಪಡೆಯಬೇಕಾದ ದೈವಶಕ್ತಿಯ ದರ್ಶನವೂ ಒಂದೇ. ಆದುದರಿಂದಲೇ ಜಗತ್ತಿನ ಅನುಭಾವಿಗಳೆಲ್ಲರ ಮಾತಿನಲ್ಲಿ ಒಂದೇ ಸತ್ಯದ ಸೂತ್ರವನ್ನು ಕಾಣುತ್ತೇವೆ.

ಆದರೆ ಪ್ರಾರಂಭದ ದೆಸೆಯಲ್ಲಿಯೇ ಮಾರ್ಗಗಳು ಬೇರೆ ಬೇರೆಯಾಗಿ ಸಾಧಕ ಮುಂದುವರೆಯದೆ ಅಲ್ಲಿಯೆ ನಿಂತಾಗ ಭಿನ್ನತೆ ತೋರುವುದುಂಟು. ಅಲ್ಲದೆ

ಪೂರ್ಣತೆಯನ್ನು ಪಡೆಯುವುದಕ್ಕಿಂತ ಮೊದಲು ಪ್ರಾರಂಭದ ದಿಸೆಯಲ್ಲಿಯೆ ತಾನು ನೋಡಿದುದೆ ಪೂರ್ಣವೆಂಬ ಅಂತರ್‌ದೃಷ್ಟಿಯನ್ನು ಪಡೆಯುವ ಸಂಭವವೂ ಉಂಟು. ಇದನ್ನು ಎಲ್ಲಾ ದೇಶಗಳ ಅನುಭಾವದ ಚರಿತ್ರೆಯಲ್ಲೂ ಕಾಣಬಹುದು.

**ಕೀರ್ತಿನಾಥ ಕುರ್ತಕೋಟಿಯವರು ತಿಳಿಸುವಂತೆ:**

"ಅನುಭಾವವೂ ನೈತಿಕವೂ ಅಲ್ಲ, ಅನೈತಿಕವು ಅಲ್ಲ. ಆದರೆ ಅನುಭಾವದ ಸ್ವಭಾವವೇ ನೈತಿಕವಾದದ್ದು. ನೈತಿಕವಾಗಿ ಅಳೆಯಬಲ್ಲ ವಸ್ತುವೆಂದರೆ ಅದು ಅನುಭಾವವೊಂದೆ. ಅನುಭಾವದಲ್ಲಿ ದ್ವಂದ್ವಕ್ಕೆ ಎಡೆಯಿಲ್ಲ. ಕತ್ತಲೆ ಬೆಳಕು ಒಂದರೊಳಗೊಂದು ಕೂಡುವುದಿಲ್ಲ. ಬಿಲ್ಲು ಬೆಳವಲಕಾಯ ಹಿಡಿಯಬಲ್ಲದಯ್ಯ ಎಂದು ಹೇಳಿರುವುದು ಅದಕ್ಕಾಗಿಯೇ"

**ಶ್ರೀ ಸಿದ್ದೇಶ್ವರ ಸ್ವಾಮಿಗಳು:** "ಆತ್ಮ ಪರಮಾತ್ಮರ ಐಕ್ಯಭಾವವೆ ಅನುಭಾವ" ಎಂಬುದಾಗಿ ಹೇಳುತ್ತಾರೆ.

**ಡಾ. ಜಿ.ಎಸ್. ಶಿವರುದ್ರಪ್ಪನವರು ತಿಳಿಸುವಂತೆ:**

"ಆಧ್ಯಾತ್ಮಿಕಾನುಭವ ಎನ್ನುವುದು ವೈಯಕ್ತಿಕ ಸಾಧನೆಯಿಂದ ಶ್ರದ್ಧೆ–ನಿಷ್ಠೆ ಸ್ವಂತ ಪರಿಶೀಲನೆಗಳಿಂದ ಲಭಿಸತಕ್ಕದ್ದೇ ಹೊರತು ವೇದಶಾಸ್ತ್ರಗಳ ಪಠಣದಿಂದ ಪರಂಪರಾಗತವಾದ ವಿಚಾರಗಳನ್ನು ನಂಬಿಕೆಗಳನ್ನು ಒಪ್ಪಿಕೊಳ್ಳುವುದರಿಂದ ಬರೋಲ್ಲ. ಅನುಭಾವ ಅಥವಾ ಆಧ್ಯಾತ್ಮಿಕ ಅನುಭವ ಎನ್ನುವುದು ಅಂತರಂಗದ ರತ್ನ."

**ಹೆಚ್. ತಿಪ್ಪೇರುದ್ರಸ್ವಾಮಿ ಹೇಳುವಂತೆ:**

"ಮನುಷ್ಯನಲ್ಲಿರುವ ಶಕ್ತಿಗಳನ್ನು ಆಧ್ಯಾತ್ಮಿಕ ಸಾಧನೆಯ ದೃಷ್ಟಿಯಿಂದ ಗುರುತಿಸುವುದಾದರೆ, ಅಲ್ಲಿ ಪ್ರಧಾನವಾಗಿ ಕೆಲವು ಬಗೆಗಳನ್ನು ಕಾಣುತ್ತೇವೆ. ಕೆಲವರಲ್ಲಿ ವಿಚಾರಶಕ್ತಿ, ತರ್ಕಶಕ್ತಿ, ಯಾವುದನ್ನು ಕಾರ್ಯಕಾರಣ ಸಂಬಂಧದಿಂದ ಅಳೆದುನೋಡಿ ಬುದ್ಧಿಯನ್ನು ತೃಪ್ತಿಪಡಿಸಿ ಮುಂದುವರೆಯುವ ಮನೋಧರ್ಮ ಪ್ರಧಾನವಾಗಿ ಕಂಡುಬಂದರೆ ಇನ್ನೂ ಕೆಲವರಲ್ಲಿ ಭಾವುಕತೆ, ಆಂತರ್ಯದ ಹಂಬಲದಿಂದ ಮಿಡಿಯುವ ಪ್ರೇಮದ ಆವೇಶಗಳು ಪ್ರಧಾನವಾಗಿರುತ್ತವೆ. ಕೆಲವರಲ್ಲಿ ಕ್ರಿಯಾಶಕ್ತಿ ಪ್ರಧಾನವಾಗಿರುತ್ತದೆ. ಅಂತರಂಗದ ಈ ಶಕ್ತಿಗಳ ಭೇದದಿಂದಲೆ ಸಾಧನೆಯಲ್ಲಿ ಜ್ಞಾನ, ಯೋಗ, ಕರ್ಮಯೋಗ ಮುಂತಾದ ಯೋಗ ಮಾರ್ಗಗಳು ರೂಪಿತವಾಗಿವೆ ಎನ್ನಬಹುದು".

**ಸ್ಟೇಸ್‌ನ ಪ್ರಕಾರ:**

"ಅನುಭಾವದ ನಿಜವಾದ ಸ್ವರೂಪವು ಯಾವುದೇ ತಾರ್ಕಿಕ, ಗುಣಾತ್ಮಕ ಸ್ವರೂಪದ ಆಚೆಗೆ ಇರುವುದರಿಂದ ಅದನ್ನು ದ್ವೈತದ ನೆಲೆಯಲ್ಲಿ ವಿವರಿಸಲು ಸಾಧ್ಯವಿಲ್ಲ. ಅನುಭಾವದ ಸ್ವರೂಪ ವಸ್ತುನಿಷ್ಠವು ಅಲ್ಲ; ಇದನ್ನು ವಿವರಿಸಲು ಉಪನಿಷತ್‌ನ ಒಂದು ಅಭಿಪ್ರಾಯವನ್ನು ಇವನು ಉದ್ಧರಿಸುತ್ತಾನೆ. ಮಂಡಕೋಪನಿಷತ್ತಿನಲ್ಲಿ ಮೂರು ರೀತಿಯ ಮನಸ್ಥಿತಿಗಳನ್ನು ವಿವರಿಸಲಾಗಿದೆ. ಅವು "ಎಚ್ಚರದ ಸ್ಥಿತಿ, ಕನಸಿನ ಸ್ಥಿತಿ, ಗಾಢಸ್ಥಿತಿ" ಆಗಿದೆ ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

**ಭಾರತೀಯ ಪರಂಪರೆಯ ವಿವಿಧ ಪಂಥಗಳ ಅನುಭಾವಿಕ ನೆಲೆ**

ನಾವು ಈಗಾಗಲೆ ಮೇಲೆ ಚರ್ಚಿಸಿರುವಂತೆ ಭಾರತ ಹಲವು ಭಾಷೆ, ಜನಾಂಗ, ಪಂಥ ಇತ್ಯಾದಿ ಸಮುದಾಯಗಳ ಒಕ್ಕೂಟ. ಇಲ್ಲಿ ಜ್ಞಾನ ಎಂಬುದು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾವಣೆಯಾಗುವುದು ಹಿರಿಯರು ಸೃಜಿಸಿದ ಅನುಭಾವಿಕ ನೆಲೆಯಲ್ಲಿಯೆ. ಇಲ್ಲಿ ಭಿನ್ನತೆಗಳುಳ್ಳ ಬೇರೆ ಬೇರೆ ಸಮುದಾಯಗಳು ಇದ್ದರೂ ಈ ಎಲ್ಲಾ ಸಮುದಾಯಗಳು ತಮ್ಮನ್ನು ತಾವು ಕಂಡುಕೊಳ್ಳಲು ಹಿರಿಯರು ಸೃಜಿಸಿದ ಅನುಭಾವ ಸಾಹಿತ್ಯವನ್ನು ಆಧರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತದ ವಿವಿಧ ಗುಂಪುಗಳು ಹೇಗೆ ಅನುಭಾವವನ್ನು ವಿವರಿಸಿಕೊಂಡಿವೆ ಎಂಬುದನ್ನು ಈ ಹಂತದಲ್ಲಿ ವಿವರಿಸಲಾಗಿದೆ.

**ವೇದಗಳ ಕಾಲದಲ್ಲಿ ಅನುಭಾವದ ನೆಲೆ**

ಭರತಖಂಡವನ್ನು ತೆಗೆದುಕೊಂಡರೆ ವೇದಗಳೇ ಮೊಟ್ಟ ಮೊದಲನೆಯ ಅನುಭಾವ ಗ್ರಂಥಗಳೆನ್ನಬಹುದು. ವೇದಗಳ ಕಾಲದಲ್ಲಿ ಆರಂಭವಾದ ಅನುಭಾವದ ಸೆಲೆ, ಕ್ರಮೇಣ ವಿಸ್ತಾರಗೊಳ್ಳುತ್ತಾ ಹೋಗಿ ಅದೇ ಕೊನೆಯ ಭಾಗಕ್ಕೆ ಅಂದರೆ ಉಪನಿಷತ್ತುಗಳಿಗೆ ಬರುವ ವೇಳೆಗೆ, ಹೊನಲಾಗಿ ಹರಿದು ಸಾಗರಗಾಮಿ ಯಾಗಿರುವುದನ್ನು ಕಾಣಬಹುದು. ವೇದಗಳ ಪ್ರಾರಂಭದಲ್ಲಿ ಕಾಣುವುದು ಅನೇಕ ಶಕ್ತಿಗಳ ಉಪಾಸನೆ, ಅಲ್ಲಿ ಪ್ರಕೃತಿಯ ಒಂದೊಂದು ಶಕ್ತಿಗೂ ಒಂದೊಂದು ದೈವತ್ವದ ಕಲ್ಪನೆಯನ್ನು ಆರಾಧಿಸಿದರು. ವೇದಗಳಲ್ಲಿನ ಪ್ರಮುಖವಾದ ಅಂಶ, ಯಜ್ಞ ಯಾಗಾದಿಗಳಿಗೆ ಸಂಬಂಧಿಸಿದುದು. ನಿಯಮಬದ್ಧವಾಗಿ ಯಜ್ಞಗಳನ್ನು ಆಚರಿಸುವುದರಿಂದ ಒಂದು ಬಗೆಯ ರಹಸ್ಯವಾದ ಅಲೌಕಿಕ ಶಕ್ತಿ ಲಭಿಸುತ್ತದೆ. ಅದರ ಸಹಾಯದಿಂದ ಇಹ ಪರಗಳೆರಡರಲ್ಲೂ ಸೌಖ್ಯವನ್ನು ಕಾಣಬಹುದು ಎಂಬ ನಂಬುಗೆ ಇದರ ತಳಹದಿ.

## ವೇದಗಳು ತಿಳಿಸುವ ಅನುಭಾವ ಮಾರ್ಗ

ಅನುಭಾವದ ಆದರ್ಶ ಒಂದೇ ಆಗಿದ್ದರೂ ಅದನ್ನು ಸಾಧಿಸುವ ಒಬ್ಬೊಬ್ಬ ಸಾಧಕನ ಮನೋಧರ್ಮವು ಆತನ ಸಂಸ್ಕಾರ, ಶಕ್ತಿ, ಪೂರ್ಣಸಿದ್ಧತೆಗಳಿಗನುಗುಣವಾಗಿ ಬೇರೆ ಬೇರೆಯಾಗಿರುತ್ತದೆ. ಸಾಧಕ ಈ ಸಂಕುಚಿತ ವ್ಯಕ್ತಿತ್ವವನ್ನು ವಿಶ್ವ ವ್ಯಕ್ತಿತ್ವದಲ್ಲಿ ಲೀನಗೊಳಿಸುತ್ತಾನೆ ನಿಜ. ಆದರೆ, ಅವನು ಪ್ರಾರಂಭದಲ್ಲಿ ಒಬ್ಬ ವ್ಯಕ್ತಿ ಆದವನು, ಕಾಲ ದೇಶಗಳ ಮಿತಿಯಲ್ಲಿ ಬದುಕಬೇಕಾದವನು, ಈ ವ್ಯಕ್ತಿ ವಿಶಿಷ್ಟತೆಯು ಮತ್ತು ಕಾಲದೇಶಗಳ ಮಾರ್ಗ ಪರಿಣಾಮವೂ ಅನುಭಾವ ಮಾರ್ಗವನ್ನು ರೂಪುಗೊಳಿಸುತ್ತದೆ.

ಒಬ್ಬ ಸಾಧಕ ಅತೀಂದ್ರಿಯ ತತ್ವವಾದಿಯಾಗಿರಬಹುದು. ಅದು ಅವನ ದೃಷ್ಟಿಗೆ ಅವಶ್ಯವಾದದ್ದು. ಏಕೆಂದರೆ ಅವನ ದೈವತ್ವದ ಕಲ್ಪನೆ ಈ ಎಲ್ಲಾ ಸಾಮಾನ್ಯ ಇಂದ್ರಿಯಗಳ ನೋಟವನ್ನು ಮೀರಿದ ಅಂತಃಸ್ಫೂರ್ತಿಯಿಂದ ಪ್ರೇರಿತವಾದದ್ದು. ಇನ್ನೊಬ್ಬ ಸಾಧಕ ತನ್ನ ವಿಶಿಷ್ಟ ಧರ್ಮ, ಮತ, ಸಂಸ್ಕಾರಗಳ ಮತ್ತು ಸಿದ್ಧಾಂತದ ಹಾದಿಯಲ್ಲಿಯೆ ನಡೆಯಬಹುದು. ಅದು ಅವನಿಗೆ ಅವಶ್ಯಕ. ಏಕೆಂದರೆ ಅವನ ಮನೋಧರ್ಮ ಇವುಗಳ ಶಕ್ತಿಯಿಂದಲೇ ದೈವತ್ವದ ಸಾಕ್ಷಾತ್ಕಾರವನ್ನು ಪಡೆಯಲು ಶಕ್ತವಾದದ್ದು. ಮತ್ತೊಬ್ಬ ಧ್ಯಾನಿಯಾಗಿರಬಹುದು, ಕರ್ಮಯೋಗಿಯಾಗಿರಬಹುದು. ಒಬ್ಬ ಸುಗುಣ ಸಾಕಾರಮೂರ್ತಿಯನ್ನು ಉಪಾಸಿಸಿದರೆ, ಇನ್ನೊಬ್ಬ ನಿರ್ಗುಣ ನಿರಾಕಾರ ಪರಬ್ರಹ್ಮನ ಅನುಭೂತಿಗಾಗಿ ಹಂಬಲಿಸಬಹುದು. ಅಥವಾ ಪ್ರಕೃತಿ ಸೌಂದರ್ಯದ ವಿವಿಧ ಮುಖಗಳಲ್ಲಿಯೆ ಸೃಷ್ಟಿ ಚೈತನ್ಯದ ರಹಸ್ಯವನ್ನು ಕಾಣುವ ರಸ ಯೋಗಿಯಾಗಬಹುದು. ಅದನ್ನು ಕುರಿತು ಚರ್ಚಿಸುವುದಾಗಲಿ ಊಹಿಸುವುದಾಗಲಿ, ಭೋದಿಸುವುದಾಗಲಿ ಅಲ್ಲ. ಪ್ರತ್ಯಕ್ಷವಾಗಿ ಕಂಡು ಅನುಭವಿಸುವುದು. ಈ ಒಂದು ಸರ್ವ ಸಮಾನವಾದ ಆಕಾಂಕ್ಷೆಯ ತೋರಿಕೆಯು ಎಲ್ಲಾ ಭೇದಗಳಲ್ಲಿಯೂ ಒಂದು ಐಕ್ಯತೆಯನ್ನು ತಂದಿದೆ. ವಿವಿಧ ಅನುಭವದ ಮತ್ತು ಅನುಭಾವಿಗಳ ಅವಲೋಕನವನ್ನು ಮಾಡುವಾಗ ಇದನ್ನು ಹಿನ್ನೆಲೆಯಾಗಿ ಇಟ್ಟುಕೊಂಡಿರಬೇಕಾಗುತ್ತದೆ ಎಂಬುದಾಗಿ ತಿಳಿಸುತ್ತದೆ.

## ಸೂಫಿ ಅನುಭಾವಿಕ ಸ್ಥಿತಿ

ಸೂಫಿಗಳ ಸಾಧನಪಥದ ಅಂತ್ಯದಲ್ಲಿ ಕೆಲವು ಅತ್ಯಂತ ಶ್ರೇಷ್ಠಮಟ್ಟದ ಸಂದರ್ಭಗಳು ಒದಗುತ್ತವೆ. ಅವುಗಳನ್ನು ಅಂತಿಮ ಘಟ್ಟದ ಹಂತಗಳೆಂದೇ ಪರಿಗಣಿಸಬಹುದು. ಇವು ಬಹಳ ಸೂಕ್ಷ್ಮ ಹಂತಗಳಾಗಿವೆ. ಈ ಸಂದರ್ಭದಲ್ಲಿಯೇ ಸಾಧಕನ ಉದ್ದೇಶಗಳು ಈಡೇರುವುದಾಗಿದ್ದು, ಇದನ್ನು ಎರಡು ರೀತಿಯಲ್ಲಿ ನೋಡಬಹುದು. ವಖ್ತ್ ಮತ್ತು ಹಾಲ್.

ಈ ವಖ್ತಿನ ಸಮಯದಲ್ಲಿ ಸಾಧಕನು ಆನಂದದ ಹಂತಕ್ಕೆ ತಲುಪಿರುತ್ತಾನೆ. ಸಚ್ಚಿದಾನಂದ ಸ್ವರೂಪಿಯಾಗಿರುತ್ತಾನೆ. ಇಂತಹ ಸಮಯ ಒದಗಿದಾಗ ತ್ರಿಕಾಲದಲ್ಲಿನ ಎಲ್ಲಾ ಆಗು–ಹೋಗುಗಳ ಜ್ಞಾನ ಉಂಟಾಗುತ್ತದೆ. ಸೃಷ್ಟಿಯ ಎಲ್ಲಾ ವಸ್ತುಗಳಿಗಿಂತಲೂ ಆ ಕ್ಷಣದ ಆನಂದ ಮತ್ತು ಜ್ಞಾನ ಅತ್ಯುನ್ನತ ಮಟ್ಟದಾಗಿರುತ್ತದೆ ಎಂಬುದನ್ನು ಸೂಚಿಸುತ್ತದೆ.

**ಶರಣರ ಅನುಭಾವದ ಸ್ವರೂಪ**

ಅನುಭವದ ಅರ್ಥ ವಿಶಾಲ ಹಾಗೂ ಗಹನವಾದದ್ದು. ಇದರ ಅರ್ಥವನ್ನು ತಿಳಿದಾಗಲೇ ಶರಣರ ವಚನಗಳ ಧ್ವನಿಯನ್ನು ಅರಿಯಲು ಸಾಧ್ಯವಾಗುತ್ತದೆ. ಇಂಗ್ಲಿಷಿನಲ್ಲಿ ಅನುಭಾವಕ್ಕೆ ಸಂವಾದಿಯಾದ ಪದ "ಮಿಸ್ಟಿಸಿಸಂ" ಎಂದಿದೆ. ಇದರ ಅರ್ಥ ರಹಸ್ಯ ಜ್ಞಾನ, ಗೂಢಜ್ಞಾನವೆಂದು ಹೇಳಬಹುದು. ಇದು ಕೆಲವು ಸಮಯದಲ್ಲಿ ತಿಳಿಯಲು ಯೋಗ ಕಾರಣಗಳಿಂದ ಸಮರ್ಥಿಸಲು ಅಸಾಧ್ಯವಾದದು ಅನಿರ್ದಿಷ್ಟವಾದದು, ಕೇವಲ ಭಾವನಾತ್ಮಕವಾದದು ಎಂದು "ವೆರೈಟೀಸ್ ಆಫ್ ರಿಲಿಜಿಯಸ್ ಎಕ್ಸ್‌ಪಿರಿಯನ್‌ಸಸ್" ಎಂಬ ಗ್ರಂಥದಲ್ಲಿ ಡಬ್ಲ್ಯೂ ಜೇಮ್ಸ್‌ನ ಅಭಿಪ್ರಾಯವಾಗಿದೆ. ಅನುಭಾವ ಯಾವುದೇ ಒಂದು ವರ್ಗಕ್ಕೆ ಸೀಮಿತವಲ್ಲ.

"Mysticism is not a name applicable to any particular system. It may be the out growth of may differing modes of thought and feeling" – Encyclopaedia of britanica.

ಮತ್ತೊಬ್ಬರು ಹೀಗೆಂದಿದ್ದಾರೆ:

"Mystical experience is the experience of the whole of life as irradicated by the light divine."

ಮಾನವನ ಯಾವುದೇ ಒಂದು ಪದ್ಧತಿ ವಿಶೇಷಕ್ಕೆ ಸೀಮಿತವಾಗಿರದೆ, ಅದು ಆಂತರಿಕ ಹಾಗು ಬಾಹ್ಯ ಬೆಳವಣಿಗೆಯಾಗಿರುತ್ತದೆ. ಯಾವುದೇ ಸಂದರ್ಭದಲ್ಲಾದರು ಹೃದಯದಲ್ಲಿ ಎಚ್ಚರಗೊಳ್ಳಬಹುದಾದ ಇಂತಹ ಭಾವನೆಗಳನ್ನು ಅನುಭಾವವೆಂದು ಕರೆಯಬಹುದು.

ಅನುಭಾವವು ಮೂರು ಮುಖ್ಯ ಭಾವಗಳನ್ನೊಳಗೊಂಡಿರುತ್ತದೆ. "ಗಾಡ್" (ಶಿವ) "ಸೋಲ್" (ಆತ್ಮ) ಮತ್ತು "Relation of the soul to the God" (ಪರಮಾತ್ಮನಿಗೂ ಜೀವನಿಗೂ ಇರುವ ಸಂಬಂಧ) ಇವು ಅನುಭಾವಕ್ಕೆ ಬೇಕಾದ ಮೂಲ ತಳಹದಿ. ಆದ್ದರಿಂದ ಶರಣರು ಈ ವಿಶ್ವತತ್ವವನ್ನು ತಮ್ಮ ಸಿದ್ಧಾಂತದಲ್ಲಿ

ಅಳವಡಿಸಿಕೊಂಡರು. ಶಿವನೊಡನೆ ಸಮರಸಗೊಂಡ ಅಮೃತತ್ವವನ್ನು ಪಡೆಯಲು ನಿರಂತರ ಹಂಬಲಿಸುವ ಸಾಧನಾ ಮಾರ್ಗವೇ ಅನುಭಾವ ಮಾರ್ಗ.

ಅಂತರಂಗದಲ್ಲಿರುವ ಶಕ್ತಿಗಳನ್ನು ಜಾಗೃತಗೊಳಿಸುವುದೇ ಅನುಭಾವ ಮಾರ್ಗದಲ್ಲಿ ಇಡುವಂತಹ ಪ್ರಥಮ ಹೆಜ್ಜೆಯಾಗಿರುತ್ತದೆ. ಕೆಲವೊಮ್ಮೆ ಯಾವ ಶಕ್ತಿಗಳನ್ನು ಎಚ್ಚರಿಸದಿದ್ದರು. ಮನ, ಬುದ್ಧಿಗೆ ನಿಲುಕದಂತಹ ಅದ್ಭುತ ಅನುಭವಗಳು ಆಗಿಬಿಡುತ್ತವೆ. ಇದಕ್ಕೆ "ಇನ್ಟ್ಯುಷನ್" "ಸಮಬುದ್ಧಿ" ಅಂತಃಸ್ಫುರಣ ಎಂದು ಕರೆಯುತ್ತಾರೆ. ಈ ರೀತಿಯ ಅನುಭವ ಎಲ್ಲರಿಗೂ ಸಾಧ್ಯವಾಗಲಾರದು. ವಿಜ್ಞಾನಿಗಳಿಗೆ ಇದ್ದಕ್ಕಿದ್ದಂತೆಯೆ ಒಳಗಿನ ಪ್ರಜ್ಞೆ ಜಾಗೃತವಾದ ಅಂಶವನ್ನು ಅವರ ಜೀವನ ಚರಿತ್ರೆಗಳಿಂದ ನಾವು ಅರಿಯಬಹುದು. ಡಾ. ರಾಧಾಕೃಷ್ಣರವರು "ಇನ್ಟ್ಯುಷನ್" ಬಗ್ಗೆ ಹೀಗೆಂದಿದ್ದಾರೆ: "Intuition is the extention of perception to regions beyond sense". ಮತ್ತೊಬ್ಬ ಲೇಖಕ ಕೆ.ಎಸ್. ರಾಮಸ್ವಾಮಿ ಶಾಸ್ತ್ರಿಗಳ ಪ್ರಕಾರ "Intuition is the inner eye of intellect, just as intellect is the inner eye of man". ಅಂತಃಸ್ಫುರಣದಿಂದ ಆಗುವ ಜ್ಞಾನವು ನಮ್ಮ ಬುದ್ಧಿಗೆ ನಿಲುಕುವುದಿಲ್ಲವೆಂದು, ಅದು ಮನುಷ್ಯನಿಗೆ ಅನಿರೀಕ್ಷಿತವಾಗಿ ಯಾವಾಗ ಲಭಿಸುವುದೋ ತಿಳಿಯದು. ಈ ಸೃಷ್ಟಿಯ ಅಗಾಧವಾದ ರಹಸ್ಯಗಳನ್ನು ಅರಿಯಲು ಪ್ರಯತ್ನಿಸಿದಾಗಲೇ ಅರಿವು ಮೂಡಲು ಸಾಧ್ಯ. ಇಂತಹ ನಿಶ್ಚಲ ಸಾಧನೆ, ಚಿಂತನೆ, ಮಂಥನಗಳಿಂದ ಸತ್ಯವನ್ನು ಕಂಡ ಅನುಭಾವಿಗಳು ಅದನ್ನು ಬಾಹ್ಯ ಪ್ರಪಂಚದಲ್ಲಿ ಅಭಿವ್ಯಕ್ತಿಪಡಿಸಿದಾಗ ಅದೊಂದು ಶಾಶ್ವತ ಪರಿವರ್ತನೆಗಳಾಗಿ ಪರಿಣಮಿಸಿವೆ; ಜ್ಞಾನ ಸಂದೇಶಗಳಾಗಿವೆ. ಅಂತಹವರು ಮಹಾಪುರುಷರೆಂದು ಪರಿಗಣಿಸಲ್ಪಟ್ಟಿದ್ದಾರೆ. ಶರಣರ ಅನುಭಾವ ಪಂಥವು ಇಂತಹ ಮಹಾಪುರುಷರನ್ನು ಜಗತ್ತಿಗೆ ಪರಿಚಯಿಸಿದೆ.

"ಶರಣರ ಆಧ್ಯಾತ್ಮದ ಹಾದಿ: ಕಾಯಕಕ್ಕೆ ಹೆಚ್ಚಿನ ಮಾನ್ಯತೆಯನ್ನು ಕೊಟ್ಟರು ಕೂಡ ಆ ಕಾಯಕ ದೇವನಿಗೆ ಪ್ರಿಯವಾಗಬೇಕು, ಅರ್ಪಿತವಾಗಬೇಕು ಎಂದು ಹೇಳುತ್ತಾರೆ. ಅಂದರೆ, ಇದೂಕೂಡ ಅವರ ಆಧ್ಯಾತ್ಮವನ್ನು ಸೂಚಿಸುತ್ತದೆ. ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ, ಈ ಮಾತುಗಳಲ್ಲಿ ಶರಣರು ಕಂಡ ಆಂತರಿಕ ಅನುಭವದ ದೃಷ್ಟಿ ಪ್ರಧಾನವಾಗಿ ಗೋಚರಿಸುತ್ತದೆ. ಭಾರತದ ಆಧ್ಯಾತ್ಮಿಕ ಲೋಕಕ್ಕೆ ಕೊಟ್ಟ ಒಂದು ವಿಶಿಷ್ಟ ಕಾಣಿಕೆ ಶರಣರ ಶಿವಯೋಗ". ಈ ರೀತಿಯಲ್ಲಿ ಶರಣರ ಅನುಭಾವ ಸ್ಥಿತಿಯನ್ನು ಕಾಣಬಹುದು.

### ಕ್ರಿಶ್ಚಿಯನ್‌ರ ಅನುಭಾವ ಮಾರ್ಗದ ಸ್ವರೂಪ

ಅನುಭಾವವೆಂಬುದು ಕೇವಲ ವ್ಯಕ್ತಿನಿಷ್ಠವಾದ ಅನುಭವ ಮಾತ್ರವೇ ಅಲ್ಲ. ಆ ಅನುಭವಕ್ಕೆ ಸಾಧಕನನ್ನು ಕೊಂಡೊಯ್ಯಲು ಸಹಾಯಕವಾದ ಜೀವನದರ್ಶನವೂ

ಮತ್ತು ಮಾರ್ಗವೂ ಹೌದೆಂಬುದನ್ನು ಹಿಂದೆಯೇ ಹೇಳಿದೆ. ಈ ಅರ್ಥದಲ್ಲಿ ನೋಡಿದಾಗ ಕ್ರಿಶ್ಚಿಯನ್ ಅನುಭಾವದ ಮೂಲಪುರುಷ ಏಸುಕ್ರಿಸ್ತನಿಗಿಂತ ಹೆಚ್ಚಾಗಿ ಸೇಯಿಂಟ್‌ಪಾಲ್ ಎಂದು ಹೇಳಬೇಕಾಗುತ್ತದೆ. ಕ್ರಿಸ್ತ ತನ್ನ ಸಮಸ್ತ ವ್ಯಕ್ತಿತ್ವವನ್ನು ದೈವತ್ವದ ಮಹಾಸಾಗರದಲ್ಲಿ ಲೀನಗೊಳಿಸಿದ ಅದ್ವಿತೀಯ ಮಹಾಶಕ್ತಿ. ಆದರೆ ಅದು ವೈಯಕ್ತಿಕ ಅನುಭವದಿಂದ ಇಳಿದು ಆಳವಾದ ಆಲೋಚನೆಯಿಂದ ದರ್ಶನದ ರೂಪದಲ್ಲಿ ಮೂಡಿಬರಲಿಲ್ಲ. ಈ ದೃಷ್ಟಿಯಿಂದ ಸೇಯಿಂಟ್ ಪಾಲ್ ಕ್ರಿಶ್ಚಿಯನ್ ಅನುಭಾವದ ಮೂಲಪುರುಷ.

ಸೇಯಿಂಟ್ ಪಾಲ್‌ನು ಮಾನವನ ವ್ಯಕ್ತಿತ್ವದಲ್ಲಿ ಮೂರು ಮುಖಗಳನ್ನು ಕಾಣುತ್ತಾನೆ. "There is the flesh which is our animal nature: the physical man and the spirtual man". ಅಂದರೆ ಸ್ಥೂಲವಾಗಿ ದೇಹದ ಪ್ರಜ್ಞೆ; ಮನೋಮಯ ಪ್ರಜ್ಞೆ; ಮತ್ತು ಆಧ್ಯಾತ್ಮಿಕ ಪ್ರಜ್ಞೆ – ಎಂಬ ಈ ತ್ರಿಮುಖಗಳು ಮಾನವನ ವ್ಯಕ್ತಿತ್ವವನ್ನೂ ಪೂರ್ಣಗೊಳಿಸುತ್ತವೆನ್ನುತ್ತಾರೆ. ಇದು ನಮ್ಮಲ್ಲಿ ಮಾಡಿರುವ ಸ್ಥೂಲ, ಸೂಕ್ಷ್ಮ, ಕಾರಣವೆಂಬ ಮೂರು ದೇಹಗಳನ್ನು ಮತ್ತು ಪಂಚಕೋಶಗಳ ವಿಭಜನೆಯನ್ನೂ ನೆನಪಿಗೆ ತರುತ್ತದೆ. ಮುಂದೆ ಇವುಗಳಲ್ಲಿ ಒಂದೊಂದನ್ನು ಕುರಿತು ಸೂಕ್ಷ್ಮವಾಗಿ ವಿವೇಚಿಸುತ್ತಾನೆ ಪಾಲ್.

'ದೇಹವೇ ದೇಗುಲ'ವೆಂದು ಬಸವಣ್ಣನು ಹೇಳುವಂತೆ, ಈ ದೇಹವನ್ನು ಕುರಿತು ಪಾಲ್ ಹೇಳುವ ಮಾತನ್ನು ಗಮನಿಸಬಹುದು.

"The body must be reverenced and preserved from defilement because, it is the temple of the holy spirite". ಈ ದೇಹವೆಂಬುದು ನಮ್ಮಿಂದ ಬೇರೆಯಲ್ಲ. ಅದೂ ನಮ್ಮ ವ್ಯಕ್ತಿತ್ವದ ಒಂದಂಶವೇ, ಆದರೆ ಇದು ನಾಶವಾಗತಕ್ಕದು. ಇದು ನಾಶವಾದಾಗ ಇನ್ನೊಂದು ಆಧ್ಯಾತ್ಮಿಕ ದೇಹ ನಮಗಾಗಿ ಸಿದ್ಧವಾಗುತ್ತದೆ ಎನ್ನುತ್ತಾರೆ ಪಾಲ್. ಸ್ಥೂಲ, ಸೂಕ್ಷ್ಮ, ಕಾರಣ ತನುಗಳೆಂದು ನಮ್ಮವರು ಕಂಡ ರೀತಿ ಇದಕ್ಕಿಂತ ಹೆಚ್ಚು ಸೂಕ್ಷ್ಮ ವಿಭಜನೆಯೆಂದು ಹೇಳಬಹುದು.

ಇನ್ನು ಆತನು ಹೇಳುವ ಫಿಸಿಕಲ್ ಮ್ಯಾನ್, ಅಥವಾ ಮನೋಮಯ ಮನುಷ್ಯನೆನ್ನುವುದು. ನಮ್ಮ ಮನಸ್ಸಿನ ಸಾಮಾನ್ಯ ಅನುಭವಗಳ ಮಟ್ಟದಲ್ಲಿರುವ ಮಾನವನ ಮನಸ್ಸು, ಒಂದು ಕಡೆ ಶಾಶ್ವತ ಆಧ್ಯಾತ್ಮಿಕ ಸುಖ ಇವುಗಳ ಮಧ್ಯೆ ಹೊಯ್ದಾಡುತ್ತಿರುತ್ತದೆ. ಈ ಇಬ್ಬಗೆಯ ಹೋರಾಟದ ಸೆಳೆತದಲ್ಲಿ ಆತ ಮೇಲ್ಮುಖನಾಗಿ ಆಧ್ಯಾತ್ಮಿಕ ಸುಖದ ಮಟ್ಟಕ್ಕಾದರು ಏರಬಹುದು: ಇಲ್ಲವೇ ಅಧೋಮುಖನಾಗಿ ಇಂದ್ರಿಯ ತೃಪ್ತಿಯ ಕ್ಷಣಿಕ ಸುಖಕ್ಕಾದರೂ ಬೀಳಬಹುದು ಎನ್ನುತ್ತಾರೆ ಪಾಲ್. ವಿನಾಶಕಾರಿ ಶಕ್ತಿಯ ಹಿಡಿತದಿಂದ ಪಾರಾಗಿ ಮೇಲಕ್ಕೇರಿದಾಗ ಆತ

ಮನೋಮಯವನ್ನು ದಾಟಿ ಆಧ್ಯಾತ್ಮಿಕ ದೇಹವನ್ನು ಪಡೆಯುತ್ತಾನೆನ್ನುವುದು ಆತನ ಅಭಿಪ್ರಾಯ.

ಆ ಆಧ್ಯಾತ್ಮಿಕ ದೇಹವನ್ನು ಪಡೆಯುವುದೇ ಸಾಧಕನ ಎಲ್ಲ ಸಾಧನೆಯ ಕೊನೆಯ ಗುರಿ. ಇಲ್ಲಿ ವ್ಯಕ್ತಿ ತನ್ನತನವನ್ನು ಸಂಪೂರ್ಣವಾಗಿ ಇಲ್ಲಗೈಯುತ್ತಾನೆ. ಅಂದರೆ ಅದು ವ್ಯಕ್ತಿತ್ವದ ನಾಶವಲ್ಲ, ವಿಕಾಸಗೊಂಡ ವ್ಯಕ್ತಿ ಸಂಕುಚಿತವಾದ ನಾನು ತಾನೆಂಬ ಭೇದಗಳನ್ನು ದಾಟಿ ವಿಶ್ವಶಕ್ತಿಯಾಗಿ ಪರಿಣಮಿಸುತ್ತಾನೆ.

"In the spiritual life personality is not abolished; but individual separateness is transcended" ಎಂಬ ಅರ್ಥವುಳ್ಳ ಮಾತನ್ನು ಪಾಲ್ ಹೇಳಿದ್ದಾನೆ. ಅಲ್ಪವ್ಯಕ್ತಿತ್ವವನ್ನು ನೀಗಿ ವಿಶ್ವವ್ಯಕ್ತಿತ್ವದಲ್ಲಿ ತನ್ನನ್ನು ತಾನು ಲೀನಗೊಳಿಸಿಕೊಳ್ಳುವುದು. ಮತ್ತು ವಿಶ್ವದ ಎಲ್ಲಾ ವ್ಯಕ್ತಿಗಳಲ್ಲಿಯೂ ತನ್ನನ್ನು ಕಂಡುಕೊಳ್ಳುವುದು ಇದು ಅನುಭಾವವೆಂದು ಪಾಲ್ ಹೇಳುವ ಮಾತು, ನಮ್ಮ ಉಪನಿಷತ್‌ನ ಋಷಿಗಳು ಹೇಳುವ ಮಾತಿಗೆ ಸಂವಾದಿಯಾಗಿದೆ.

ಸೆಯಿಂಟ್ ಪಾಲ್‌ನಂತೆಯೇ ಇತರ ಅನೇಕ ಕ್ರಿಶ್ಚಿಯನ್ ಸಂತರು ಅನುಭಾವ ಮಾರ್ಗವನ್ನು ರೂಢಿಸುವುದಕ್ಕೆ ತಮ್ಮ ಕಾಣಿಕೆಯನ್ನಿತ್ತಿದ್ದಾರೆ. ಉದಾಹರಣೆಗೆ ಸೆಯಿಂಟ್ ಆಗಸ್ಟಿನ್, ಏಕ್ ಹಾರ್ಟ್, ಬೋಹಿಮೆ, ಸೆಯಿಂಟ್ ಬರ್ನಾರ್ಡ್, ಸೆಯಿಂಟ್ ಜಾನ್ ಆಫ್ ದಿ ಕ್ರಾಸ್ – ಈ ಮೊದಲಾದವರನ್ನು ಹೆಸರಿಸಬಹುದು.

**ಅಲ್ಲಮಪ್ರಭು: ಮೂರ್ತ ಅಮೂರ್ತಗಳ ನಡುವೆ ಪ್ರಸ್ತಾಪಿಸಲಾದ ಅನುಭಾವಿಕ ನೆಲೆ**

ಪ್ರಾಚೀನ ಕನ್ನಡ ಸಾಹಿತ್ಯವನ್ನು ಉದ್ದಕ್ಕೂ ನಿಯಂತ್ರಿಸಿದ ಶಕ್ತಿಗಳಲ್ಲಿ 'ಧರ್ಮ'ವೂ ಒಂದಾಗಿತ್ತೆಂಬುದು ತಿಳಿದ ಸಂಗತಿಯಾಗಿದೆ. ಅದರಲ್ಲಿಯೂ ಜೈನ, ವೀರಶೈವ ಹಾಗೂ ವೈದಿಕ ಧರ್ಮಗಳು ಕನ್ನಡ ಸಾಹಿತ್ಯದ ಹಿಂದಿರುವ ಪ್ರೇರಕ ಶಕ್ತಿಗಳಾಗಿವೆ. ಹೀಗೆ ಧರ್ಮದಿಂದ ಪ್ರೇರಣೆ ಪಡೆದು ನಿರ್ಮಿತಿಯಾದ ಸಾಹಿತ್ಯವನ್ನು ಸ್ಥೂಲವಾಗಿ ಮೂರು ವಿಭಾಗಗಳನ್ನಾಗಿ ಮಾಡಿಕೊಂಡು ನೋಡಬಹುದು; ಒಂದು, 'ಧಾರ್ಮಿಕ ಸಾಹಿತ್ಯ' (Religious literature); ಎರಡನೆಯದು 'ಭಕ್ತಿ ಸಾಹಿತ್ಯ' (Devotional literature); ಮೂರನೆಯದು 'ಅನುಭಾವ ಸಾಹಿತ್ಯ' (Mystic literature). ಈ ಮೂರೂ ಬಗೆಗಳನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗುರುತಿಸಬಹುದು. ಈ ಮೂರರಲ್ಲಿ ಮೊದಲನೆಯದನ್ನು ಉಳಿದೆರಡರಿಂದ ಸ್ಪಷ್ಟವಾಗಿ ಬೇರ್ಪಡಿಸಿ ತೋರಿಸುವಂತೆ, ಎರಡು ಮೂರನೆಯವುಗಳನ್ನು ತೋರಿಸುವುದು ಕಷ್ಟ. ಮೊದಲನೆಯದಾದ 'ಧಾರ್ಮಿಕ ಸಾಹಿತ್ಯ' ಎನ್ನುವ ಮಾತನ್ನು

ಮುಖ್ಯವಾಗಿ ಕವಿಗಳು ತಮ್ಮ ತಮ್ಮ ಮತ ಧರ್ಮ ಶ್ರದ್ಧೆಯ ಪ್ರಕಟಣೆಗಾಗಿ ಹಾಗೂ ಪ್ರಸಾರಕ್ಕಾಗಿ ತಮ್ಮ ಸಾಹಿತ್ಯ ನಿರ್ಮಿತಿಯನ್ನು ಮೂಲಮಾನವನ್ನಾಗಿ ಮಾಡಿಕೊಂಡ ಸಂದರ್ಭಗಳನ್ನು ಸೂಚಿಸಲು ಬಳಸಬಹುದಾಗಿದೆ. ಕವಿಗಳು, ತಾವು ಆಕಸ್ಮಿಕವಾಗಿ ಹುಟ್ಟಿ ಬೆಳೆದ ಧರ್ಮಗಳ ಬಗ್ಗೆ ತಮ್ಮ ಶ್ರದ್ಧೆಯನ್ನು ಕೃತಿ ರಚನೆಯ ಮೂಲಕ ಪ್ರಕಟಿಸುವುದು ತಮ್ಮ ಕರ್ತವ್ಯಗಳಲ್ಲಿ ಒಂದು ಎಂಬಂತೆ ನಡೆದುಕೊಂಡಿದ್ದಾರೆ ಎನ್ನುವುದು ಅಪರಿಚಿತವಾದ ಸಂಗತಿಯೇನಲ್ಲ. ಜೈನಕವಿಗಳು ಬರೆದ ತೀರ್ಥಂಕರ ಚರಿತೆ ಹಾಗೂ ಪುರಾಣಗಳಾಗಲಿ, ವೀರಶೈವರು ಬರೆದ ಪುರಾತನ ಹಾಗೂ ನೂತನರನ್ನು ಕುರಿತ ಕಾವ್ಯ ಹಾಗೂ ಪುರಾಣಗಳಾಗಲಿ, ವೈಷ್ಣವ ಕವಿಗಳು ಬರೆದ ಕೀರ್ತನೆ ಹಾಗೂ ಭಾರತ – ಭಾಗವತಾದಿಗಳಾಗಲಿ 'ಧಾರ್ಮಿಕ ಸಾಹಿತ್ಯ'ದ ನಿದರ್ಶನಗಳಾಗಿವೆ. ಇಂಥ ಕೃತಿಗಳಲ್ಲಿ ಆಯಾ ಧರ್ಮಗಳನ್ನು ಕುರಿತು ಕವಿಗಳಿಗಿರುವ ಧರ್ಮಶ್ರದ್ಧೆ ಪ್ರಧಾನವಾದ ಲಕ್ಷಣವಾಗಿರುತ್ತದೆ.

ಇನ್ನು 'ಭಕ್ತಿ ಸಾಹಿತ್ಯ' ಮತ್ತು 'ಅನುಭಾವ ಸಾಹಿತ್ಯ'ಗಳನ್ನು ಕುರಿತು ಹೇಳುವುದಾದರೆ, ಧಾರ್ಮಿಕ ಸಾಹಿತ್ಯದಲ್ಲಿ ತೊಡಗಿದ ಕವಿಗೆ ಆಯಾ ಮತ–ಧರ್ಮವನ್ನು ಕುರಿತ ಶ್ರದ್ಧೆ ಮುಖ್ಯವಾದರೆ, 'ಭಕ್ತಿ ಸಾಹಿತ್ಯ' ಮತ್ತು 'ಅನುಭಾವ ಸಾಹಿತ್ಯ'ಗಳಲ್ಲಿ ಅವನ್ನು ಬರೆಯುವವನಿಗೆ ಕೇವಲ ಧರ್ಮಶ್ರದ್ಧೆ ಮಾತ್ರವಲ್ಲದೆ, ಒಂದು ಬಗೆಯ ಆಧ್ಯಾತ್ಮಿಕ ನಿಲುವೂ ಮತ್ತು ಅದರೊಂದಿಗೆ ವೈಯಕ್ತಿಕವಾದ ಸಾಧನೆಯು ಮುಖ್ಯವಾಗುತ್ತದೆ. ಕವಿ ಇಲ್ಲಿ ಒಬ್ಬ ಸಾಧಕನಾಗುತ್ತಾನೆ. ವಚನಗಳನ್ನು ಬರೆದ ಬಸವಣ್ಣನಂಥವರನ್ನು, ಕೀರ್ತನೆಗಳನ್ನು ಬರೆದ ಪುರಂದರದಾಸರಂಥವರನ್ನು ಭಕ್ತಿ ಹಾಗೂ ಅನುಭಾವ ಮಾರ್ಗದ ಸಾಧಕರೆಂದು ಭಾವಿಸುವಂತೆ, 'ಆದಿಪುರಾಣ'ವನ್ನು ಬರೆದ ಪಂಪನನ್ನು, 'ಅಜಿತ ಪುರಾಣ'ವನ್ನು ಬರೆದ ರನ್ನನನ್ನು ಹಾಗೂ ಇದೇ ವರ್ಗದ ಜೈನ ಕವಿಗಳನ್ನು, ಜೈನ ಧರ್ಮದ 'ಸಾಧಕ'ರೆಂದು ಕರೆಯುವುದು ಕಷ್ಟವಾಗುತ್ತದೆ. ಭಕ್ತಿ ಹಾಗೂ ಅನುಭಾವ ಸಾಹಿತ್ಯಗಳ ನಿರ್ಮಿತಿಗೆ ಒಂದು ಬಗೆಯ 'ಸಾಧಕ' ಮನೋಭಾವವೂ, ಆಧ್ಯಾತ್ಮಿಕ ಅನುಭವಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಹಂಬಲಗಳೂ ಅಗತ್ಯ. ಇಂಥ ನೆಲೆಯಿಂದ ಬರೆದವರು ವಚನಕಾರರು, ಹರಿದಾಸರು, ಹರಿಹರ, ಕುಮಾರವ್ಯಾಸ, ಲಕ್ಷ್ಮೀಶಾದಿಗಳು. 'ಅನುಭಾವ ಸಾಹಿತ್ಯ' ಎನ್ನುವುದು, ಭಕ್ತಿ ಸಾಹಿತ್ಯದೊಳಗಿನ ಒಂದು ಪ್ರಭೇದ ಎನ್ನಬಹುದು. 'ಅನುಭಾವ' ಎನ್ನುವುದು ಒಂದು ವಿಶೇಷವಾದ ಮಾನಸಿಕ ನಿಲುವು, ಆ ನಿಲುವಿನಿಂದ ಅನುಭಾವಿಯು ಕಂಡ 'ಕಾಣ್ಕೆ'ಗಳು ಅನುಭಾವ ಸಾಹಿತ್ಯದಲ್ಲಿ ಪ್ರಕಟವಾಗುತ್ತವೆ. ಅನುಭಾವಿಯು ಮೂಲತಃ ಭಕ್ತನಾಗಿದ್ದರೂ, ಅದನ್ನೂ ಮೀರುತ್ತಾನೆ. ಆದರೆ 'ಭಕ್ತ'ರಾದವರೆಲ್ಲರೂ ಅನುಭಾವದ ನೆಲೆಗೆ ಏರಿದವರಾಗಿರುತ್ತಾರೆಂದು ಹೇಳಲುಬಾರದು. ಧರ್ಮದ ನೆಲೆಗಟ್ಟನ್ನುಳ್ಳ ಸಾಹಿತ್ಯವನ್ನು

ಅಧ್ಯಯನದ ಅನುಕೂಲಕ್ಕಾಗಿ 'ಧಾರ್ಮಿಕ ಸಾಹಿತ್ಯ', 'ಭಕ್ತಿ ಸಾಹಿತ್ಯ', 'ಅನುಭಾವ ಸಾಹಿತ್ಯ' ಎಂದು ವಿಂಗಡಿಸಿಕೊಂಡರೂ, ಈ ಮೂರೂ ಒಂದೇ ಕಾಲದ ಅಥವಾ ಯಾವುದೇ ಧರ್ಮದ ಸಾಹಿತ್ಯದಲ್ಲಿರಲಾರವೆಂದು ಅರ್ಥವಲ್ಲ. ಹಾಗೆ ನೋಡಿದರೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈ ಮೂರೂ ಏಕಕಾಲಕ್ಕೆ ಮೇಳಗೊಂಡ ಕಾಲವೆಂದರೆ ವಚನ ಚಳವಳಿಯ ಕಾಲವೇ ಸರಿ. ವೀರಶೈವ ಧರ್ಮದ ಶಿವಭಕ್ತಿಯ ಈ ಶರಣ ಚಳವಳಿಯ ಸಂದರ್ಭದಲ್ಲಿ ಭಕ್ತಿಯ ಹಲವು ನೆಲೆಗಳನ್ನು ಪ್ರತಿನಿಧಿಸುವ ಹಾಗೂ ಅನುಭಾವದ ನಿಲುವುಗಳನ್ನು ಅಭಿವ್ಯಕ್ತಪಡಿಸುವ ವಿವಿಧ ವ್ಯಕ್ತಿಗಳನ್ನು ಕಾಣಬಹುದು. ಅದರಲ್ಲಿಯೂ ಅಲ್ಲಮಪ್ರಭು ಈ ಸಂದರ್ಭದಲ್ಲಿ ಕನ್ನಡನಾಡು ಕಂಡಂತಹ ಮೊಟ್ಟಮೊದಲ ನಿಜವಾದ ಅನುಭಾವಿಯಾಗಿದ್ದಾನೆ.

ಅನುಭಾವಿಯ ದೃಷ್ಟಿ ಎಂದರೆ ಅದು ಸದಾ ಮೂರ್ತದಿಂದ ಅಮೂರ್ತಕ್ಕೆ ಹಾಯುವಂಥದು. ಅಲ್ಲಮನ ಅಭಿವ್ಯಕ್ತಿಗಳಲ್ಲಿ ಮೂರ್ತಾಮೂರ್ತಗಳೆರಡನ್ನೂ ಏಕಕಾಲಕ್ಕೆ ಗುರುತಿಸಬಹುದು. ದೈವದ ನಿಲುವನ್ನು ಕುರಿತು 'ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ ನಿಲುವು' ಎಂಬ ಉಕ್ತಿಯೊಂದೇ ಸಾಕು. ಇದೊಂದು ಅದ್ಭುತವಾದ ಉಕ್ತಿ. ಹಾಗೆಯೇ 'ಹೂವ ಮುಡಿಯಬಹುದಲ್ಲದೆ ಗಂಧವ ಮುಡಿಯಬಹುದೆ?" ಎಂಬ ಪ್ರಶ್ನೆ ಕೂಡಾ ಈ ಮೂರ್ತ–ಅಮೂರ್ತಗಳ ಪರಿಭಾಷೆಯದೇ. 'ಹರಿವ ನದಿಗೆ ಮೈಯೆಲ್ಲ ಕಾಲು, ಉರಿವ ಅಗ್ನಿಗೆ ಮೈಯೆಲ್ಲ ಬಾಯಿ, ಬೀಸುವ ಗಾಳಿಗೆ ಮೈಯೆಲ್ಲ ಕೈ' – ಎಂಬಂಥ ಉಕ್ತಿಗಳೂ ಕೇವಲ ಮೂರ್ತವಾದ ವಿವರಣೆಯ ತೆಕ್ಕೆಯಿಂದ ತಪ್ಪಿಸಿಕೊಳ್ಳುತ್ತವೆ.

ಅನುಭಾವ ಮಾರ್ಗವನ್ನು ಮೂರ್ತ ಅಮೂರ್ತಗಳ ಪ್ರತೀಕದಲ್ಲಿಯೇ ವರ್ಣಿಸುತ್ತದೆ. 'ಕಾಣದುದನರಸುವರಲ್ಲದೆ ಕಂಡುದನರಸುವರೆ' (ವ.33– ಅಲ್ಲಮನ ವಚನ, 'ವಚನಕಾರರ ವಿಚಾರಕ್ರಾಂತಿ', ಕಣಜ, ಡಾ. ಜಿ.ಎಸ್. ಶಿವರುದ್ರಪ್ಪ), 'ಕಂಡುದ ಕಂಡು ಗುರುಪಾದವ ಹಿಡಿದಲ್ಲಿ ಕಾಣದುದ ಕಾಣಬಹುದು' (ವ. 32– ಅಲ್ಲಮನ ವಚನ, 'ವಚನಕಾರರ ವಿಚಾರಕ್ರಾಂತಿ', ಕಣಜ, ಡಾ. ಜಿ.ಎಸ್. ಶಿವರುದ್ರಪ್ಪ) ಎಂಬ ಈ ದೃಷ್ಟಿಕೋನವೇ ಮೂರ್ತ ಅಮೂರ್ತಗಳ ವಿವೇಚನೆಯನ್ನು ಕುರಿತದ್ದು. ಹೀಗಾಗಿ ಕಂಡದ್ದರ ಮೂಲಕ, ಕಾಣುದುದರ ಕಡೆ ನಡೆಯುವುದೇ, ಮೂರ್ತವಾದ ವಾಸ್ತವಗಳನ್ನು ಮೀರುವಿಕೆಯೆ ಈ ಅನುಭಾವಿಯ ನಿಲುವಾಗಿದೆ. ಹೀಗಾಗಿ ವಾಸ್ತವವಾದ ಹಾಗೂ ಮೂರ್ತವಾದ ನೆಲೆಗಳಿಂದ, ಅಮೂರ್ತವಾದ ಹಾಗೂ ಶಾಶ್ವತವಾದ ನೆಲೆಗಳಿಗೆ ತುಡಿಯುವುದೆ ಈ ಮನೋಧರ್ಮದ ಲಕ್ಷಣವಾಗಿದೆ.

ಮೇಲಿನ ಎಲ್ಲಾ ವಿವರಣೆಗಳಲ್ಲಿ ಭಾರತೀಯ ಸಂದರ್ಭದಲ್ಲಿ ಅನುಭಾವಿಕ ಸ್ಥಿತಿಯನ್ನು ಬೇರೆ ಬೇರೆ ಸಂಪ್ರದಾಯಗಳು ಗುರುತಿಸಿರುವ ರೀತಿಯನ್ನು ಪಟ್ಟಿ

ಮಾಡಲಾಗಿದೆ. ಮನುಷ್ಯನ ಅನುಭಾವಿಕ ಸ್ಥಿತಿಯನ್ನು ಸೈದ್ಧಾಂತೀಕರಿಸುವ ಪ್ರಯತ್ನಗಳನ್ನು ಗುರುತಿಸಲಾಗಿದೆ. ಆ ಎಲ್ಲಾ ಪ್ರಯತ್ನಗಳ ಹಿನ್ನಲೆಯಲ್ಲಿ ಅನುಭಾವ ಎಂಬುದನ್ನು **"ಒಬ್ಬ ವ್ಯಕ್ತಿ ತನ್ನ ಅನುಭವದಿಂದ ಸೃಜಿಸಿಕೊಂಡ ಸಮಾಜದ ಕುರಿತ ಜ್ಞಾನವನ್ನು ಒಂದು ನಿರ್ದಿಷ್ಟ ರೂಪದಲ್ಲಿ ಗ್ರಹಿಸಿ ವಿವರಿಸುವ ಕ್ರಮ"** ಎಂಬ ರೀತಿಯಲ್ಲಿ ರೂಪಿಸಿಕೊಳ್ಳಲಾಗಿದೆ. ಮುಂದಿನ ಅಧ್ಯಾಯ ಕನ್ನಡದ ಅನುಭಾವಿಕ ಪರಂಪರೆ ಅನುಭಾವ ಮತ್ತು ಕನಕದಾಸರನ್ನು ಒಳಗೊಂಡಿರುವ ಕ್ರಮವನ್ನು ವಿಶ್ಲೇಷಣೆಗೆ ಒಡ್ಡುತ್ತದೆ.

❑

## ಅಧ್ಯಾಯ-3

# ಕನ್ನಡದ ಅನುಭಾವಿ ಕನಕ

ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಕಾವ್ಯಮೀಮಾಂಸೆ ಏನಿದ್ದರೂ ಅದೆಲ್ಲ ಸಂಸ್ಕೃತದ ಪಡಿನೆಳಲಂತಿದೆ. ಮುಂದೆ ಬರುವ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ ಪಾಶ್ಚಾತ್ಯದ ಪಡಿನೆಳಲಾದರೆ ಅದಕ್ಕಿಂತಲೂ ಅಪಾಯಕರ ವಾಗುತ್ತದೆ. ಏಕೆಂದರೆ ತನ್ನತನವನ್ನೇ ಕಳೆದುಕೊಳ್ಳುವ ಸಂಭವವಿರುವುದರಿಂದ ನಮ್ಮ ಮುಂದಿನ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ತ್ವಶಾಸ್ತ್ರ, ಯೋಗವಿಜ್ಞಾನ, ಸೌಂದರ್ಯ ಮೀಮಾಂಸೆ ಮತ್ತು ಮನಃಶ್ಶಾಸ್ತ್ರ – ಇವುಗಳಿಂದಲೂ ಬೆಳಕು ಪಡೆದು ಧೀರವಾಗಿ ಸ್ವತಂತ್ರವಾಗಿ ಪೂರ್ಣದೃಷ್ಟಿಯ ಕಡೆಗೆ ಮುನ್ನಡೆಯಬೇಕಾಗುತ್ತದೆ. ಯುಗದ ಕವಿ ಕುವೆಂಪು ಅವರ ಸುಮಾರು ಐವತ್ತು ವರ್ಷಗಳ ಹಿಂದಿನ ಮಾತನ್ನು ರಹಮತ್ ತರೀಕೆರೆ ಅವರು ಒಂದು ಕಡೆ ದಾಖಲಿಸುತ್ತಾರೆ.

ಮುಂದುವರಿದು ಅವರೇ ವಿವರಿಸುವಂತೆ, ಕಳೆದ 50 ವರುಷಗಳಿಂದ 'ಭಾರತೀಯ' ಹೆಸರಿನಲ್ಲಿ ಸಂಸ್ಕೃತದ ಹಾಗೂ ಪಾಶ್ಚಾತ್ಯ ಎಂಬ ಹೆಸರಲ್ಲಿ ಪಶ್ಚಿಮದ ಸಾಹಿತ್ಯ ಚಿಂತನೆಯನ್ನು ಸಾಹಿತ್ಯ ಬೋಧನೆಯಲ್ಲಿ ಕಲಿಸಲಾಗುತ್ತಿದೆ. ಕನ್ನಡದ ಪ್ರಾಚೀನ ಕ್ಲಾಸಿಕಲ್ ಸಾಹಿತ್ಯಕ್ಕೆ ಸಂಸ್ಕೃತದ ಹಾಗೂ ಆಧುನಿಕ ಸಾಹಿತ್ಯಕ್ಕೆ ಯುರೋಪಿನ ಸಾಹಿತ್ಯಕ ಸಂಬಂಧಗಳು ಇವೆ. ಇವು ಸಾಹಿತ್ಯ ಕೃತಿಗಳ ಮೂಲಕ ಉಂಟಾದ ಅನುಸಂಧಾನಗಳು. ಕುವೆಂಪು ವರ್ಡ್ಸ್‌ವರ್ತ್‌ನ ಜತೆ ಬೇಂದ್ರೆ ಕೀಟ್ಸನ ಜತೆ ಬೆಳೆಸಿದ ಸ್ವತಂತ್ರ ಸಂಬಂಧವಿದು. ಇದನ್ನು ಸೃಜನಶೀಲ ಕೃತಿಗಳ ನಡುವಣ ಸಂಬಂಧ ಎನ್ನಬಹುದು. ಆದರೆ ಸಂಸ್ಕೃತ ಅಥವಾ ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಗಳಿಗೂ ಕನ್ನಡ ಸಾಹಿತ್ಯಕ್ಕೂ ಇಂತಹ ಜೀವಂತ ಸಂಬಂಧ ಇಲ್ಲ. ಆದರೂ ನಾವು ನಮ್ಮ ಸಾಹಿತ್ಯಗಳ ಮೇಲೆ ಈ ಮೀಮಾಂಸೆಗಳನ್ನು ಬಳಸುತ್ತಿದ್ದೇವೆ. ಇದರ ಪರಿಣಾಮ ಮತ್ತು ಪ್ರಯೋಜನ ನಮ್ಮ ಸಾಹಿತ್ಯದಲ್ಲಿ ಯಾವ ಸ್ವರೂಪದ್ದು? 'ಭಾರತೀಯ' ಎಂಬ ಹೆಸರಲ್ಲಿ ಕಲಿಯುತ್ತಿರುವ ರಸ, ಧ್ವನಿ, ಗುಣ, ರೀತಿ,

ಔಚಿತ್ಯ, ಸಹೃದಯ, ಕಾವ್ಯಪ್ರಯೋಜನ – ಮುಂತಾದ ಸಂಸ್ಕೃತ ಕಾವ್ಯಮೀಮಾಂಸೆ ಪರಿಕಲ್ಪನೆಗಳು ಕನ್ನಡ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಯಾವ ರೀತಿ ಸಹಾಯಕವಾಗಿವೆ? ಶರಣರ ವಚನಗಳನ್ನು ಶಿಶುನಾಳರ ತತ್ವಪದವನ್ನು ಅಥವಾ ಮಂಟೆಸ್ವಾಮಿ ಕಾವ್ಯವನ್ನು ಈ ಪರಿಕಲ್ಪನೆಗಳ ಮೂಲಕ ಹೇಗೆ ನೋಡಬಹುದು? – ಇಂತಹ ಪ್ರಶ್ನೆಗಳನ್ನು ಎತ್ತಿದರೆ, ನಾವು ಕಲಿಯುತ್ತಿರುವ ಸಾಹಿತ್ಯ ಚಿಂತನೆಗೂ ನಮ್ಮ ಸಾಹಿತ್ಯಕ್ಕೂ ಇರುವ ವೈರುಧ್ಯಗಳು ಗೊತ್ತಾಗುತ್ತವೆ. ಈ ವೈರುಧ್ಯವು ಸಾಹಿತ್ಯ ಸೃಷ್ಟಿಸುವ ಲೇಖಕ ಸಮುದಾಯ ಎದುರಿಸುತ್ತಿರುವ ಸಮಸ್ಯೆಯಲ್ಲ. ಸಾಹಿತ್ಯದ ಬಹುಸಂಖ್ಯಾತ ಓದುಗರ ಸಮಸ್ಯೆಯೂ ಅಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿ ಸಾಹಿತ್ಯದ ಅಧ್ಯಯನ ಮಾಡುವವರ ಸಮಸ್ಯೆಯಾಗಿದೆ. ಇಲ್ಲಿ ತತ್ವ ಮತ್ತು ಪಠ್ಯಗಳ ನಡುವೆ ಇರಬೇಕಾದ ಅರ್ಥಪೂರ್ಣ ಸಂಬಂಧವೇ ಭಗ್ನಗೊಂಡಿದೆ ಎಂಬ ಮಾತುಗಳು ನಮ್ಮ ಕಾಲದ ಸಾಹಿತ್ಯ ಚಿಂತನೆಗಳಲ್ಲಿನ ಮಿತಿಗಳನ್ನು ಅತ್ಯಂತ ಸ್ಪಷ್ಟವಾಗಿ ಕಟ್ಟಿಕೊಡುತ್ತವೆ. ಈ ಎಲ್ಲಾ ಚರ್ಚೆಗಳು "ಹಾಗಾದರೆ ನಮಗಿರುವ ದಾರಿ ಯಾವುದು?" ಎಂಬ ಪ್ರಶ್ನೆಯನ್ನು ಮುಂದಕ್ಕೆ ತಂದಿವೆ.

ಕನ್ನಡದ ಅನುಭಾವ ಪರಂಪರೆಯ ಕುರಿತ ಈಗ ಬರುತ್ತಿರುವ ಕೆಲವೇ ಚಿಂತನೆಗಳು ಬಹುಶಃ ಶಂಬಾ ಅವರ ಪರಂಪರೆಯ ಮುಂದುವರಿಕೆಯಂತೆ ಕಾಣುತ್ತವೆ ಎಂಬ ಅಂಶವನ್ನು ಹಲವಾರು ಚಿಂತಕರು ಗುರುತಿಸಿದ್ದಾರೆ. ಈ ಚಿಂತನೆಗಳ ಮೂಲ ಸತ್ವ ಮನುಕುಲವನ್ನು ಕುರಿತು ತಮಗಿರುವ ಕಳಕಳಿ, ಸಾಂಸ್ಕೃತಿಕ ತುರ್ತು, ರಾಜಕೀಯ ಪ್ರಜ್ಞೆಗಳಿಂದ, ಒಂದು ಬಗೆಯ ತೀವ್ರತೆಯನ್ನು ಪಡೆದುಕೊಂಡು ಬೆಳೆದಂತಹವು. ಇವುಗಳ ಮೂಲದಲ್ಲಿ ಕಾಣುವ ಮಹತ್ವದ ಪ್ರಶ್ನೆ ವಸಾಹತುಶಾಹಿಯು ದುಷ್ಪರಿಣಾಮಗಳಿಂದ ಬಿಡುಗಡೆಗೊಂಡು ಚಿಂತಿಸಬೇಕೆನ್ನುವ ಆಕಾಂಕ್ಷೆ ಹಾಗೂ ಮತೀಯವಾದದ ವಿಕಾರಗಳಿಗೆ ಪ್ರತಿಕ್ರಿಯಿಸುವ ತುಡಿತ ಈ ಚಿಂತನೆಗಳಿಗೆ ಪ್ರೇರಣೆ ಎಂಬುದನ್ನು ಗುರುತಿಸಬೇಕಾಗಿದೆ. ಈ ಎಲ್ಲಾ ಮಹತ್ವದ ಅಂಶಗಳು ಇರುವುದರಿಂದ ನಮ್ಮ ಜನಪರಂಪರೆಗಳನ್ನು ಮುಖ್ಯವಾಗಿ ಅನುಭಾವಿ ಪಂಥಗಳನ್ನು, ಕುತೂಹಲ ಪ್ರೀತಿಗಳಿಂದ ನೋಡಬೇಕೆನಿಸಿತು. ಈ ಕೆಲಸಕ್ಕೆ ಶೈಕ್ಷಣಿಕ ಅಧ್ಯಯನಗಳಿಗಿಂತ ಭಿನ್ನವಾದ ಸಾಂಸ್ಕೃತಿಕ ಹೊಣೆಗಾರಿಕೆಯಿದೆ ಎಂಬ ಅನುಭಾವ ಪರಂಪರೆಯ ಮೂಲಧಾತುವನ್ನು ರಹಮತ್ ತರೀಕೆರೆ ಅವರು ಒಂದು ಪ್ರಸ್ತಾವನೆಯಲ್ಲಿ ಕಟ್ಟಿಕೊಡುತ್ತಾರೆ. ಮುಂದುವರಿದು ನಮ್ಮ ಕಾಲದ ಅನುಭಾವಿ ಚಿಂತನೆ ಅಥವಾ ಸಂಶೋಧನೆ ಅನುಭಾವಿಗಳನ್ನು ಒಂದು ಧರ್ಮ, ಜಾತಿ, ಮತಕ್ಕೆ ಸೀಮಿತಗೊಳಿಸಿ ನೋಡುವುದು ಸಂಕುಚಿತ ಮತ್ತು ಅಪಾಯಕಾರಿಯಾದ ನಿಲುವು ಎಂಬುದನ್ನು ಅತ್ಯಂತ ಮುಖ್ಯವಾಗಿ ವಿವರಿಸುತ್ತಾರೆ. ಇದನ್ನು ಅವರದೆ ಮಾತುಗಳಲ್ಲಿ ನೋಡುವುದಾದರೆ:

ಅನುಭಾವಿ ಕವಿ ತತ್ವಜ್ಞಾನಿಗಳನ್ನು 'ಇಸ್ಲಾಮ್ ಧರ್ಮಕ್ಕೆ ಸೇರಿದವರು' ಎಂದರೆ, ಹೆಚ್ಚಿನದೇನನ್ನೂ ಹೇಳಿದಂತಾಗುವುದಿಲ್ಲ. ನಾಥಸಿದ್ಧರು 'ಹಿಂದೂ ಧರ್ಮ'ದ ಅನುಯಾಯಿಗಳು, ಅಲ್ಲಮಪ್ರಭು, 'ವೀರಶೈವ' ಧರ್ಮಕ್ಕೆ ಸೇರಿದವನು, ಶರೀಫನು 'ಮುಸ್ಲಿಂ' ಸಂತಕವಿ–ಎಂದಂತೆ ಆಗುತ್ತದೆ ಅಷ್ಟೆ. ಯಾವುದನ್ನು ಇಸ್ಲಾಂ ಎಂದು ಸಾಂಪ್ರದಾಯಿಕ ಧರ್ಮಶಾಸ್ತ್ರಜ್ಞರು ಮಂಡಿಸುತ್ತಿದ್ದರೊ, ಆ ಪರಿಕಲ್ಪನೆಗೆ ಪರ್ಯಾಯವಾಗಿ ಚಿಂತಿಸುತ್ತಲೂ ಬದುಕುತ್ತಲೂ ಹೆಚ್ಚಿನ ಸೂಫಿಗಳು ಬಂದಿದ್ದಾರೆ.... ಸೂಫಿ ದರ್ಶನದಲ್ಲಿ ತನ್ನ ತಾನು ತಿಳಿಯುವ ಸ್ವಸ್ವರೂಪ ಜ್ಞಾನವು ಮುಖ್ಯವಾದುದು. ತನ್ನ ತಾನರಿವ ಮಾತು ಅಲ್ಲಮನನ್ನು ಒಳಗೊಂಡಂತೆ ಕನ್ನಡದ ಅವಧೂತರಲ್ಲಿ ಮತ್ತೆಮತ್ತೆ ಬರುತ್ತದೆ. ಅನುಭಾವಿ ಸಾಹಿತ್ಯದಲ್ಲಿ ತಾನು ತನ್ನ ಎಂಬ ಸರ್ವನಾಮಗಳು ಬಹಳ. ಒಂದರ್ಥದಲ್ಲಿ ಮಹಾವ್ಯಕ್ತಿವಾದಿಯಂತೆ ತೋರುವ ಈ ಸ್ವಕೇಂದ್ರಿತ ದರ್ಶನವು ಜಗತ್ತಿನ ಎಲ್ಲ ಅನುಭಾವಿಗಳ ಲೋಕದೃಷ್ಟಿಯ ಭಾಗವೇ ಆಗಿದೆ.

ಈ ಮೇಲಿನ ಎಲ್ಲಾ ಚಿಂತನೆ ದಾಸರ ಕೀರ್ತನೆಗಳನ್ನು, ಶರಣರ ವಚನಗಳನ್ನು, ಶಿಶುನಾಳರ ತತ್ವಪದವನ್ನು, ಅಥವಾ ಮಂಟೆಸ್ವಾಮಿ, ಜುಂಜಪ್ಪರ ಕಾವ್ಯವನ್ನು, ಜಾನಪದೀಯ ಸಾಹಿತ್ಯವನ್ನು ಯಾವ ಆಧುನಿಕ ಚೌಕಟ್ಟಿನಲ್ಲಿಯೂ ವಿವರಿಸಿಕೊಳ್ಳದೆ, ಅವುಗಳ ಮೂಲಕವೆ ನಮ್ಮ ಸಮಾಜವನ್ನು ಇಲ್ಲಿನ ಜೀವನ ವಿಧಾನವನ್ನು ವಿವರಿಸುವ ಪರಿಕಲ್ಪನೆಗಳನ್ನು ರಚಿಸಿಕೊಳ್ಳುವ ಬಹಳ ಪ್ರಮುಖವಾದ ಸವಾಲಿಗೆ ನಮ್ಮನ್ನು ತಂದು ನಿಲ್ಲಿಸಿವೆ! ಈ ಸವಾಲನ್ನು ಸ್ವೀಕರಿಸುವುದು ಅಷ್ಟು ಸುಲಭ ಸಾಧ್ಯವಲ್ಲ! ಆದರೆ ನಮಗೆ ಅನ್ಯ ಮಾರ್ಗಗಳಿಲ್ಲ! ಈ ನೆಲೆಯಲ್ಲಿ ನಾವು ಮೊದಲು ಮಾಡಬಹುದಾದ ಕೆಲಸ ಈಗಾಗಲೇ ಸಂಸ್ಕೃತ ಮತ್ತು ಪಶ್ಚಿಮದ ಚೌಕಟ್ಟುಗಳಲ್ಲಿ ಸಿಕ್ಕಿಕೊಂಡಿರುವ ನಮ್ಮ ಪೂರ್ವಜರ ಚಿಂತನೆಗಳನ್ನು ಮುಕ್ತಗೊಳಿಸಿ, ಅವರನ್ನು ಸ್ವತಂತ್ರ ಚಿಂತಕರನ್ನಾಗಿ ಗುರುತಿಸುವುದು. ನನಗೆ ಅನ್ನಿಸುವಂತೆ ಸದರಿ ಶೋಧ ಕನಕದಾಸರ ಕುರಿತಂತೆ ಈ ಒಂದು ದೊಡ್ಡ ಸವಾಲಿನ ಸಣ್ಣ ಭಾಗವಾಗಿದೆ ಎನ್ನಿಸುತ್ತಿದೆ. ಕನಕರ ಚಿಂತನೆಯಲ್ಲಿನ ಅನುಭಾವಿಕ ನೆಲೆಗಳನ್ನು ಗುರುತಿಸುವ ಉದ್ದೇಶದ ಹಿಂದಿನ ಜಾಗೃತಿ ಇದೆ ಎಂಬುದನ್ನು ಒಪ್ಪಿಕೊಂಡು ನಾನು ಮುಂದೆ ನಡೆಯುತ್ತಿದ್ದೇನೆ.

ಕನ್ನಡದ ತತ್ವಪದಗಳ ಕುರಿತು ವಿದ್ವತ್‌ಪೂರ್ಣವಾದ ಕೆಲಸವನ್ನು ಮಾಡಿರುವ ಡಿ. ರಘುನಾಥರಾವ್ ಅವರು ಅನುಭಾವಿಗಳು ಮತ್ತು ತತ್ವಪದಕಾರರು ಪರಸ್ಪರ ಪ್ರಭಾವಿತರಾಗಿ ಬೆಳೆದಿದ್ದಾರೆ ಎಂಬ ಮಾತುಗಳನ್ನು ಹೇಳಿದ್ದಾರೆ. ಅವರ ಪ್ರಕಾರ ದಾಸ ಮತ್ತು ದಾಸ ಸಾಹಿತ್ಯ ಭಕ್ತಿಯನ್ನು ಮನುಷ್ಯ ವಿಮೋಚನೆಯ ದಾರಿಯಾಗಿಸಿಕೊಂಡಿದ್ದರು. ಮೂಲದಲ್ಲಿ ಅನುಭಾವಿ ಚಳುವಳಿಯೊಂದಿಗೆ ಒಂದು

ಬೆಸುಗೆಯನ್ನು ಸಾಧಿಸಿಕೊಳ್ಳುವ ಮೂಲಕ ಈ ಚಳುವಳಿ ಒಂದು ಜಾತಿ, ಮತ, ಪಂಥ, ಧರ್ಮಕ್ಕೆ ಸೀಮಿತವಾಗದೆ ಸಮಾಜದ ಎಲ್ಲ ಸ್ತರಗಳಿಗೂ ವಿಸ್ತರಿಸಿಕೊಂಡು ಸಮುದಾಯದ ಚಟುವಟಿಕೆಯಗಿ ಬೆಳೆದದ್ದು ಅದರ ಘನಾಂಶವಾಗಿದೆ ಎಂಬ ಅಂಶವನ್ನು ಗುರುತಿಸುತ್ತಾರೆ. ಮುಂದುವರಿದು ಅನುಭಾವಿಗಳು ರೂಢಿಯನ್ನು, ಜಡತೆಯನ್ನು, ಚಲನರಾಹಿತ್ಯತೆಯನ್ನು, ಸಾಂಸ್ಥಿಕ ಧರ್ಮವನ್ನು ಪ್ರಶ್ನಿಸುತ್ತಾ, ಎದುರಿಸುತ್ತಾ, ಹೊಸ ಸವಾಲುಗಳಿಗೆ ಉತ್ತರವನ್ನು ಹುಡುಕುವ ಪ್ರಕ್ರಿಯೆಯಲ್ಲಿ ಬಂಡುಕೋರರಾಗಿ ಕಂಡುಬಂದರೆ, ದಾಸರು ಸಂಪ್ರದಾಯವನ್ನು, ರೂಢಿಯನ್ನು, ಸ್ಥಾಪಿತ ಮೌಲ್ಯ–ಧರ್ಮವನ್ನು ಸ್ಥಿರೀಕರಿಸುವ ಪ್ರಕ್ರಿಯೆಯಲ್ಲಿ ತೊಡಗಿ ಕೊಂಡಂಥವರಾಗಿ ಕಂಡುಬರುತ್ತಾರೆ ಎಂಬ ಮಿತಿಯನ್ನು ಗುರುತಿಸುತ್ತಾರೆ.

ಇಷ್ಟಾಗಿಯೂ ಭಕ್ತಿ ಪರಂಪರೆಯಲ್ಲಿ ಅನ್ಯಮತ–ಅನ್ಯದೈವಗಳ ಖಂಡನೆ–ಟೀಕೆ ಸಾಮಾನ್ಯ ಎಂಬ ಮಿತಿಯನ್ನು ಗುರುತಿಸುವ ಲೇಖಕರು ಆ ಪರಂಪರೆಯಲ್ಲಿ ಬರುವ ಕನಕ–ಪುರಂದರರಲ್ಲಿ ಇದಕ್ಕೆ ತದ್ವಿರುದ್ಧವಾದ ಆಶಯಗಳಿದ್ದವು ಎಂಬುದನ್ನು ಗಮನಿಸುತ್ತಾರೆ.

## ಕನಕದಾಸರಲ್ಲಿನ ಆಧ್ಯಾತ್ಮ/ಅನುಭಾವಿಕ ನಿಲುವು

“ಹರಿದಾಸರಲ್ಲಿ ಪ್ರಮುಖವಾದವರು ಕನಕದಾಸರು. ಈ ದಾಸ ಪದದ ಅರ್ಥವನ್ನು ಇವರು ಯಾವ ರೀತಿಯಲ್ಲಿ ಬಳಸುತ್ತಿದ್ದರು ಎಂಬುದನ್ನು ನೋಡುವುದಾದರೆ, ‘ದಾಸ’ನೆಂದರೆ ಸ್ವ ಕೇಂದ್ರಿತ ದೃಷ್ಟಿಕೋನವನ್ನು ತೊರೆದವನು. ‘ಸ್ವ’ದ ಜಾಗೆಯಲ್ಲಿ ಹರಿಯೋ–ಹರನೋ ಅಥವಾ ಇನ್ನಾವುದೊ ವಿಶ್ವಮನಸ್ಸಿನ ದೇವರನ್ನು ಇಟ್ಟುಕೊಂಡವನು. ವಿಶ್ವ ಚಿತ್ತವು ಸತ್ಯ ಎಂದು ನಂಬಿದವನು. ಸತ್ಯ ಎಂದರೆ ಸ್ವತಂತ್ರ ಎಂದು ಆದ್ದರಿಂದ ತನ್ನದಾದ ವೈಯಕ್ತಿಕ ಚಿತ್ತ ವೃತ್ತಿಯನ್ನು ವಿಶ್ವ ಚಿತ್ತಕ್ಕೆ ಅಧೀನವನ್ನಾಗಿಸಿ, ತಾನು ಅಸ್ವತಂತ್ರ ಆದ್ದರಿಂದ ‘ದಾಸ’ ಎನಿಸಿಕೊಂಡವನು.

ಲೋಕದಲ್ಲಿ ಯಾವುದು ಶಾಶ್ವತವಲ್ಲ, ನಂಬಿಕೆಗೆ ಯೋಗ್ಯವಲ್ಲ. ನೆಚ್ಚುವುದಾದರೆ ಆದಿಕೇಶವನನ್ನು ನೆಚ್ಚು. ಅವನ ಅನುಭವದಲ್ಲಿ ಈ ಎಲ್ಲ ಅನುಭವಗಳು ಅಡಗಿವೆ ಇತ್ಯಾದಿ ಭಾವಗಳೆಲ್ಲ ಕನಕದಾಸರ ಅಮೋಘ ಕೃತಿ – ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ ಎಂಬ ಹಾಡಾಗಿ ಪರಿಣಮಿಸಿದೆ. “ಬಯಲು ಆಲಯ ದೊಳಗೊ ಆಲಯ ಬಯಲಿನೊಳಗೊ ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ” ಕನಕದಾಸರ ಈ ನಿಲುವು ಶೂನ್ಯವಾದಕ್ಕೆ ಹತ್ತಿರವಾಗಬಹುದು. ಕನಕನ ಕುರಿತು ಸೃಷ್ಟಿಯಾಗಿರುವ ಆಧುನಿಕ ಜಾನಪದರ ಪ್ರಕಾರ, ಆತ ಭಕ್ತಿ ಪಂಥದ ಇತರ ಸಂತರಂತೆ ಅಧ್ಯಾತ್ಮವನ್ನು ಜನ ಸಾಮಾನ್ಯರ ಗ್ರಹಿಕೆಗೆ ನಿಲುಕುವಂತೆ

ಮಾಡಿದ. ಇದಕ್ಕಾಗಿ ಆತ ಜನರ ಆಡು ಮಾತು, ಸರಳ ಲಯಗಳನ್ನು ಬಳಸಿಕೊಂಡ. ಕನಕ ಕೆಳ ಜಾತಿಯನಾಗಿರುವುದು ಈ ಜಾನಪದದಲ್ಲಿ ಅವನ ಕಾವ್ಯದ ಈ ಜನಪರ ಆಯಾಮಕ್ಕೆ ಪೂರಕವಾಗಿರುವ ಸಂಗತಿಯಾಗಿದೆ. ಆಡುಮಾತು, ಸರಳ ಲಯಗಳ ಕೀರ್ತನೆಗಳನ್ನು ಕನಕ ರಚಿಸಿದ್ದಾನೆ ನಿಜ. ಈ ಕೀರ್ತನೆಗಳಲ್ಲಿ ಅವನು ಆಧ್ಯಾತ್ಮವನ್ನು ಎಲ್ಲರಿಗೂ ಎಟುಕುವ ಭಕ್ತಿಯಾಗಿ ಪರಿವರ್ತಿಸಿರುವುದು ಹೌದು. ಈ ಮೇಲಿನ ವಿಶ್ಲೇಷಣೆ ಕನಕದಾಸರ ಅನುಭಾವಿಕ ನಿಲುವಿಗೆ ಪೂರಕವಾದ ಪರಿಕಲ್ಪನೆಯಾಗಿದೆ.

ಹಾಗೆ ನೋಡುವುದಾದರೆ ಕನಕದಾಸರು ಪ್ರತಿಪಾದಿಸಿದ ಅಧ್ಯಾತ್ಮ, ಮತ, ಧರ್ಮಗಳ ಪರಿಧಿಯನ್ನು ಮೀರಿದ್ದು, ಸ್ವತಂತ್ರವಾದದ್ದು. ಸಾಮಾನ್ಯ ಜನರ ಆಶಯಗಳಿಗೆ ಪೂರಕವಾದದ್ದು. ಆದ್ದರಿಂದಲೇ ಅವರಿಗೆ ಸಂಸಾರದಲ್ಲಿದ್ದುಕೊಂಡೆ ಸಂಸಾರವನ್ನು ದಾಟಬಹುದು ಎಂಬ ಮಹತ್ವದ ಆಲೋಚನೆಯನ್ನು ಅಧ್ಯಾತ್ಮದ ಆಸರೆಯಿಂದ ಕಟ್ಟಿಕೊಳ್ಳಲು ಸಾಧ್ಯವಾಗಿದೆ.

ವ್ಯಕ್ತಿ ತನ್ನ ಬದುಕಿನಲ್ಲಿ ಜೀವಾತ್ಮನನ್ನು ಕುರಿತು, ಪರಮಾತ್ಮನನ್ನು ಕುರಿತು ಚಿಂತಿಸಬೇಕು, ತನ್ನನ್ನು ತಾನು ಅರಿತುಕೊಳ್ಳಲು ಭಕ್ತಿಯೆಂಬ ದಾರಿಯನ್ನು ಅನುಸರಿಸಬೇಕು, ಹಾಗೆ ಸ್ಮರಿಸದವರು ಡೊಂಕುಬಾಲದ ನಾಯಕರಂತೆ ಆಗುತ್ತಾರೆ ಎಂದು ಕನಕದಾಸರು ತಮ್ಮ ಪ್ರಸಿದ್ಧ ಕೀರ್ತನೆಯಲ್ಲಿ ವಿವರಿಸಿದ್ದಾರೆ. ವ್ಯಕ್ತಿ ಆಧರಿಸುವ ಭಕ್ತಿಯ ದಾರಿ ಅವನ ನಡೆ ನುಡಿಯಲ್ಲಿ ಬದಲಾವಣೆ ತರುತ್ತದೆ. ಆ ದಾರಿಯಿಂದ ಬದುಕಿನ ಅಂತರಂಗ ಮತ್ತು ಬಹಿರಂಗದಲ್ಲಿ ಶಾಂತಿ ನೆಮ್ಮದಿ ವೃದ್ಧಿಸುತ್ತದೆ ಎಂಬುದು ಕನಕದಾಸರು ಒಪ್ಪಿದ್ದ ನಂಬಿಕೆಯಾಗಿತ್ತು. ಇದಕ್ಕೆ ಪೂರಕವೆನ್ನುವಂತೆ ಅವರು 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ಕೀರ್ತನೆಯನ್ನು ರಚಿಸಿದ್ದಾರೆ.

ಕನಕದಾಸರು ಪ್ರತಿಪಾದಿಸಿದ ತತ್ವ ಶೂನ್ಯವಾದಕ್ಕೆ ಹತ್ತಿರವಾದದ್ದು. ಅಂದರೆ ಭವದ ಬಂಧನದಿಂದ ಮುಕ್ತನಾಗಿ ಹರಿಸೇವೆಯಲ್ಲಿ ಎಲ್ಲವನ್ನೂ ಕಾಣುವ ಕ್ರಿಯಾಶೀಲ ಶೂನ್ಯವದು, ಲೋಕದಲ್ಲಿ ಯಾವುದು ಶಾಶ್ವತವಲ್ಲ ನಂಬಿಕೆಗೆ ಯೋಗ್ಯವಲ್ಲ. ಕನಕದಾಸರ ಚಿಂತನೆಗಳ ಕುರಿತ ಈ ವಿಶ್ಲೇಷಣೆ ನಾವು ಮಾತನಾಡುತ್ತಿರುವ ಅನುಭಾವ ಪರಿಕಲ್ಪನೆಯಾಗಿದೆ. ಏಕೆಂದರೆ ನಾವು ಯಾವ ಕಾವ್ಯಗಳನ್ನು ಅನುಭಾವ ಪರಂಪರೆಯ ಧಾತುಗಳು ಎಂಬುದಾಗಿ ಕನ್ನಡದ ಸಂದರ್ಭದಲ್ಲಿ ಗುರುತಿಸುತ್ತೇವೊ ಅವುಗಳಲ್ಲಿ ಸತ್ವವು ಇದೆ ಎಂಬುದನ್ನು ಗುರುತಿಸಬಹುದಾಗಿದೆ.

## ಹರಿದಾಸ, ಭಕ್ತಿಪಂಥ ಮತ್ತು ಕನಕದಾಸರು

ನಮ್ಮ ನಡುವಿನ ಮಹತ್ವದ ಚಿಂತಕರಲ್ಲಿ ಒಬ್ಬರಾದ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು "ಭಾರತೀಯ ಭಕ್ತಿಪಂಥ ಮತ್ತು ಕನಕದಾಸರು" ಎಂಬ

ಮಹತ್ವದ ಲೇಖನದಲ್ಲಿ ಹರಿದಾಸ ಭಕ್ತಪಂಥದ ವಿಧಗಳು ಅವುಗಳಲ್ಲಿ ಪ್ರಭಾವಿಯಾಗಿರುವ ಚಿಂತಕರು ಆ ಧಾರೆಯಲ್ಲಿ ಕನಕದಾಸರ ಸ್ಥಾನ ಇತ್ಯಾದಿಗಳನ್ನು ಕುರಿತು ಅತ್ಯಂತ ವಿಶಿಷ್ಟವಾಗಿ ವಿಶ್ಲೇಷಣೆಯನ್ನು ಮಾಡಿದ್ದಾರೆ. ಜೊತೆಗೆ ಈ ಹರಿದಾಸ ಪಂಥಗಳಲ್ಲಿನ ಸಂತರಲ್ಲಿ ಅತ್ಯಂತ ತಳವರ್ಗದಿಂದ ಬಂದ ಕನಕದಾಸರು ಹೇಗೆ ಭಿನ್ನವಾಗಿ ಅನುಭಾವಿಕ ಮತ್ತು ಆಧ್ಯಾತ್ಮಿಕ ನುಡಿಗಟ್ಟಿನಲ್ಲಿ ಜನಸಾಹಿತ್ಯವನ್ನು ಸೃಷ್ಟಿಸಿದ್ದಾರೆ ಎಂಬುದನ್ನು ಲೇಖಕರು ಕನಕದಾಸರ ಕೀರ್ತನೆಗಳನ್ನು ಉದಾಹರಿಸಿ ವಿವರಿಸಿದ್ದಾರೆ. ಈ ವಿಶ್ಲೇಷಣೆಯ ಅಗತ್ಯ ಭಾಗವನ್ನು ಈ ಕೆಳಗಿನಂತೆ ನೋಡಬಹುದಾಗಿದೆ. ಈ ಹರಿದಾಸ ಭಕ್ತಪಂಥದಲ್ಲಿ ನಾಲ್ಕು ಹಂತಗಳಲ್ಲಿ ಮಾಡಬಹುದೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಶ್ರೀ ಮಧ್ವಾಚಾರ್ಯರು ಮತ್ತು ಅವರ ಶಿಷ್ಯರಾದ ನರಹರಿತೀರ್ಥರು. ಜಯತೀರ್ಥರು 12–13ನೆಯ ಶತಮಾನಗಳಲ್ಲಿ ಬೋಧಿಸಿದುದು ಮೊದಲನೆಯ ಘಟ್ಟ. ಎರಡನೆಯ ಘಟ್ಟ ಪುರಂದರದಾಸ, ಕನಕದಾಸರನ್ನು ಕೇಂದ್ರವಾಗಿ ಉಳ್ಳದ್ದು (15–16ನೆಯ ಶತಮಾನ). ಅನಂತರ 17–18ನೆಯ ಶತಮಾನಗಳಲ್ಲಿ ವಿಜಯದಾಸ ಮೊದಲಾದವರ ನೇತೃತ್ವದಲ್ಲಿ ನಡೆದುದು ಮೂರನೆಯ ಹಂತ. ಇನ್ನೂ ಈಚೆಗಿನ ಪ್ರಾಣೇಶದಾಸರು ಮೊದಲಾದವರನ್ನು ಸೇರಿಸಿ ನಾಲ್ಕನೆ ಘಟ್ಟ ಎಂದು ಕರೆದಿದ್ದಾರೆ ಶ್ರೀ ಪಂಚಮುಖಿ ಅವರು. ವಿಭಾಗದ ದೃಷ್ಟಿಯಿಂದ ಹೀಗೆ ನಾಲ್ಕು ಘಟ್ಟಗಳನ್ನು ಗುರುತಿಸ ಬಹುದಾದರೂ ವಿಶಿಷ್ಟ ಶಕ್ತಿ ಮತ್ತು ಸಾಂಸ್ಕೃತಿಕ ಪ್ರಭಾವದ ದೃಷ್ಟಿಯಿಂದ ನೋಡಬಹುದಾದುದು ಒಂದೇ ಘಟ್ಟ; ಅದು ಪುರಂದರದಾಸ, ಕನಕದಾಸರ ಯುಗ.

ಒಂದು ದೃಷ್ಟಿಯಿಂದ ಶ್ರೀಪಾದರಾಜರೇ ಹರಿದಾಸ ಸಾಹಿತ್ಯದ ಆದ್ಯ ಪ್ರವರ್ತಕರೆನ್ನಬಹುದು. ಅವರು ನೆಟ್ಟ ಹರಿದಾಸ ಸಾಹಿತ್ಯದ ಬೀಜ ಶ್ರೀ ವ್ಯಾಸ ರಾಯರ ಆರೈಕೆಯಿಂದ ಮೊಳಕೆಯೊಡೆದು, ಶ್ರೀ ವಾದಿರಾಜರ ಸಾಧನೆಯಿಂದ ಶಾಖೋಪಶಾಖೆಗಳಾಗಿ ಬೆಳೆಯಿತು. ಇವರನ್ನು ಹರಿದಾಸ ಸಾಹಿತ್ಯದ ಬೆಳವಣಿಗೆಗೆ ಕಾರಣರಾದ ರತ್ನತ್ರಯರೆಂದು ಡಾ. ಜಿ. ವರದರಾಜರಾಯರು ಕರೆದಿದ್ದಾರೆ ('ಹರಿದಾಸ ಸಾಹಿತ್ಯ ಸಾರ'). ಹೀಗೆ ಹರಿದಾಸ ಸಾಹಿತ್ಯ ಬೆಳವಣಿಗೆಯ ಹಾದಿಯಲ್ಲಿರುವಾಗ ಪ್ರತಿಭಾಶಾಲಿಗಳಾದ ಪುರಂದರದಾಸ, ಕನಕದಾಸರ ಆಗಮನದಿಂದ ಹೊಸ ಸುಗ್ಗಿಯ ಸುವರ್ಣಯುಗ ಆರಂಭವಾಯಿತು. ಪುರಂದರದಾಸರಂತೂ ತಮ್ಮ ಅಗಾಧವಾದ ಲೋಕಾನುಭವದಿಂದ ಕೂಡಿದ ಅಸಂಖ್ಯಾತ ಕೀರ್ತನೆಗಳಲ್ಲಿ ತಮ್ಮ ಭಕ್ತಿಸಾಧನೆಯ ವಿವಿಧ ಮುಖಗಳನ್ನು ಪ್ರತಿಭಾಪೂರ್ಣವಾಗಿ ಹರಿಯಬಿಟ್ಟಿದ್ದಾರೆ. ಈ ಕ್ಷೇತ್ರದಲ್ಲಿ ಕನಕದಾಸರ ಸಾಧನೆಯೂ ಕಡಿಮೆಯಾದುದೇನಲ್ಲ. ಪುರಂದರದಾಸರಿಗೆ ಹೊಯ್‌ಕಯ್ಯಾಗಿ ನಿಲ್ಲಬಲ್ಲವರೆಂದರೆ

ಕನಕದಾಸರೊಬ್ಬರೇ. ಭಾರತೀಯ ಭಕ್ತಿಪಂಥದ ಈ ಹಿನ್ನೆಲೆಯಲ್ಲಿ ಅವರ ಭಕ್ತಿ ಸಾಧನೆಯನ್ನು ಸಂಗ್ರಹವಾಗಿ ಈಗ ನೋಡಬಹುದಾಗಿದೆ.

ಇಡೀ ಹರಿದಾಸ ಪರಂಪರೆಯಲ್ಲಿ ಕನಕದಾಸರ ಸ್ಥಾನ ಅನೇಕ ಕಾರಣಗಳಿಂದ ವಿಶಿಷ್ಟವಾದುದು. ಅಂದು ಸಮಾಜದ ಕೆಳವರ್ಗದವರೆಂದು ಪರಿಗಣಿಸಲ್ಪಟ್ಟ ಕುರುಬರಲ್ಲಿ ಜನ್ಮವೆತ್ತ ಕನಕದಾಸರು ವಿಜಯನಗರದ ಸಾಮ್ರಾಜ್ಯಕ್ಕೆ ನಿಷ್ಠೆಯನ್ನುಳ್ಳ ಮಹಾಶೂರನಾದ ನಾಯಕನಾಗಿದ್ದು, ಲೌಕಿಕ ಅಧಿಕಾರವನ್ನು ಪಡೆದಿದ್ದರೂ ಅಂತರಂಗದಲ್ಲಿ ನಿರಂತರವಾಗಿ ಮೊರೆಯುತ್ತಿದ್ದ ಆಧ್ಯಾತ್ಮಿಕ ಅಭೀಪ್ಸೆಗೆ ಓಗೊಟ್ಟು ಲೌಕಿಕವನ್ನು ತ್ಯಜಿಸಿ, ದಾಸಪಂಥದ ಕಡೆಗೆ ಆಕರ್ಷಿತವಾದುದು ದಾಸಪರಂಪರೆಗೇ ಒಂದು ಗೌರವವನ್ನು ತಂದುಕೊಡುವುದಕ್ಕೆ ಕಾರಣವಾಯಿತು. ಶ್ರೀ ವ್ಯಾಸರಾಯರ ಸರ್ವಸಮತಾಭಾವದ ಉದಾರದೃಷ್ಟಿ ಆತನನ್ನು ಆ ಕಡೆಗೆ ಸೆಳೆಯಿತು. ವ್ಯಾಸರಾಯರ ಇತರ ಮೇಲುವರ್ಗದ ಶಿಷ್ಯರ ಕೀಳು ವರ್ತನೆಯ ಮಧ್ಯದಲ್ಲಿಯೂ ಈತ ತನ್ನ ಆಧ್ಯಾತ್ಮಿಕ ಔನ್ನತ್ಯವನ್ನೂ ಮೆರೆದು ಗುರು ಕೃಪೆಯನ್ನು ಪಡೆಯಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ಕೆಲಕಾಲ ಜೊತೆಯಲ್ಲಿದ್ದ ಪುರಂದರದಾಸರೂ ಇವರ ಮಹತ್ವವನ್ನು ಗುರುತಿಸಿ ಮೆಚ್ಚಿ ನುಡಿದಿರುವುದರ ಸೂಚನೆ ಅವರ ಒಂದು ಕೀರ್ತನೆಯಲ್ಲಿಯೂ ಕಂಡುಬರುತ್ತದೆ. ಸಹಜವಾಗಿಯೇ ಕಾವ್ಯಪ್ರತಿಭೆಯನ್ನು ಪಡೆದಿದ್ದ ತಿಮ್ಮಪ್ಪನಾಯಕ ವೈರಾಗ್ಯಪರನಾಗಿ ಗುರುಕೃಪೆಯನ್ನು ಪಡೆದು ಕನಕದಾಸರಾಗಿ ಕೀರ್ತನೆಗಳನ್ನು ಜನಮನಕ್ಕೆ ಮುಟ್ಟಿಸುತ್ತಾ ಸಂಚಾರವನ್ನು ಕೈಗೊಂಡುದು ಒಂದು ಪ್ರಧಾನ ಘಟ್ಟವಾಗಿ ಪರಿಣಮಿಸಿತು.

ಕನಕದಾಸರ ಭಕ್ತಿಸಾಧನೆಯ ದೃಷ್ಟಿಯಿಂದ 'ಹರಿಭಕ್ತಿಸಾರ' ಬಹಳ ಮುಖ್ಯವಾದ ಕೃತಿ ಮತ್ತು ಜನಪ್ರಿಯವಾದುದೂ ಹೌದು. 'ರಕ್ಷಿಸು ನಮ್ಮನನವರತ' ಎಂಬ ಸಾಲಿನೊಡನೆ ಮುಗಿಯುವ 108 ಭಾಮಿನಿ ಷಟ್ಪದಿಗಳನ್ನೂ ಅನಂತರ ಕೆಲವು ಪದ್ಯಗಳಲ್ಲಿ ಫಲಶ್ರುತಿಯನ್ನೂ ಒಳಗೊಂಡ ಈ ಚಿಕ್ಕ ಕೃತಿ ಶತಕ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಪೌರಾಣಿಕ ಕಥಾ ಸಂದರ್ಭಗಳೂ, ಅಲ್ಲಲ್ಲಿ ತಾತ್ವಿಕ ಚಿಂತನೆಗಳು, ಇವುಗಳ ಹಿನ್ನೆಲೆಯಲ್ಲಿ ಮೂಡಿ ಬಂದ ಅನನ್ಯ ಶರಣಾಗತಿಯ ಭಕ್ತಿ ಪ್ರವಾಹ ಇಲ್ಲಿ ನಿರರ್ಗಳವಾಗಿ ಹರಿಯುತ್ತದೆ. ಪ್ರಪತ್ತಿ ಮಾರ್ಗದ ಸಂಪೂರ್ಣ ಶರಣಾಗತಿಯನ್ನು ಇಲ್ಲಿನ ಭಕ್ತಿಮಾರ್ಗದಲ್ಲಿ ಕಾಣಬಹುದಾಗಿದೆ.

ಇನ್ನು ಕನಕದಾಸರ ಸಾಧಕ ಜೀವನದ ಸ್ಪಷ್ಟ ಚಿತ್ರವನ್ನು ನಾವು ಕಂಡುಕೊಳ್ಳುವುದು ಅವರ ಕೀರ್ತನೆಗಳಲ್ಲಿಯೇ. ಪುರಂದರದಾಸರಿಗೆ ಹೋಲಿಸಿದರೆ ಅವರ ಕೀರ್ತನೆಗಳ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಆದರೂ ಅವುಗಳು ದಾಸ ಸಾಹಿತ್ಯದಲ್ಲಿ ವಿಶಿಷ್ಟವಾದ ಒಂದು ಸುವರ್ಣ ಸಂಪುಟವಾಗಿ ಪರಿಣಮಿಸಿವೆ.

ನೇರವಾದ ನಿಷ್ಕಪಟ ಮನೋಧರ್ಮದ ಸಾಧಕರಾಗಿ ಬೆಳೆದ ಅವರ ಆಧ್ಯಾತ್ಮಿಕ ಯಾತ್ರೆಯ ವಿವಿಧ ಹಂತಗಳನ್ನು ಅವರ ಕೀರ್ತನೆಗಳು ಪ್ರತಿಬಿಂಬಿಸುತ್ತವೆ. ತಮ್ಮ ಸುತ್ತಲಿನ ಪರಿಸರವನ್ನು ಕಣ್ದೆರೆದು ನೋಡಿದ ಅವರು ಜಾತಿಮತಗಳ ತಾರತಮ್ಯಗಳನ್ನೂ, ಧರ್ಮದ ಆಚರಣೆಯ ಹಿನ್ನೆಲೆಯಲ್ಲಿರುವ ಕುಟಿಲ ಕುಹಕಗಳನ್ನೂ, ಆಧ್ಯಾತ್ಮಿಕ ಬೂಟಾಟಿಕೆಗಳನ್ನೂ ಶೋಷಣೆಯ ಜಾಣ್ಮೆಯನ್ನೂ ಕಂಡು ಕೆರಳುತ್ತಾರೆ, ಸಿಡಿದು ನಿಲ್ಲುತ್ತಾರೆ. ಅನೇಕ ಕೀರ್ತನೆಗಳಲ್ಲಿ ಕಂಡುಬರುವ ಅವರ ಕಟುವಾದ ಮಾತುಗಳ ಹಿಂದೆ ಅವರ ವೈಚಾರಿಕ ಮನೋಧರ್ಮ ಮಿಂಚುತ್ತದೆ. ಸಾಂಪ್ರದಾಯಿಕ ಚೌಕಟ್ಟಿನೊಳಗಿದ್ದೂ ಅದನ್ನು ಮೀರುವ ಈ ಮನೋಧರ್ಮದ ಹಿಂದೆ ಅಪಾರವಾದ ಮಾನವೀಯ ಅನುಕಂಪ, ಸಾಮಾಜಿಕ ಕಳಕಳಿ ಕಂಡು ಬರುತ್ತದೆ. ಅಂತಹ ಕೀರ್ತನೆಗಳಲ್ಲಿ ಕಂಡುಬರುವ ಮಾನವೀಯ ಮಿಡಿತವನ್ನೂ, ಸಾಮಾಜಿಕ ಪ್ರಜ್ಞೆಯನ್ನೂ, ಕಾವ್ಯ ಮೌಲ್ಯಾದಿಗಳನ್ನೂ ಇಲ್ಲಿ ವಿವೇಚಿಸಲು ಹೋಗದೆ ಅವರ ಭಕ್ತಿ ಸಾಧನೆಯ ವಿವಿಧ ಹಂತಗಳನ್ನು ಗುರುತಿಸಲು ಇಲ್ಲಿ ಉದ್ದೇಶಿಸಲಾಗಿದೆ.

ಕನಕದಾಸರ ಭಕ್ತಿಗೆ ಹಿನ್ನೆಲೆಯಾಗಿ ನಿಂತದ್ದು ಮಧ್ವ ಸಿದ್ಧಾಂತದ ಹರಿದಾಸ ಭಕ್ತಿ ಎಂಬುದು ನಿಜವಾದರೂ, ಅದಕ್ಕಿಂತ ಮೊದಲೇ ಅವರ ಮೇಲೆ ಪ್ರಭಾವವನ್ನು ಬೀರಿದ ಶ್ರೀವೈಷ್ಣವ ಪ್ರಪತ್ತಿಭವವೂ ಪ್ರಧಾನವಾಗಿ ಅವರ ಕೀರ್ತನೆಗಳಲ್ಲಿ ಕಂಡುಬರುತ್ತದೆ. ಸಾಂಪ್ರದಾಯಿಕವಾದ ಪೌರಾಣಿಕ ನಂಬಿಕೆಗಳು, ಕಲ್ಪನೆಗಳು, ಕಥಾನಕಗಳು ಅವರ ಸಾಧನೆಯ ಮಾರ್ಗದಲ್ಲಿ ಇಣುಕು ಹಾಕುತ್ತಿದ್ದರೂ ಅವುಗಳನ್ನು ಮೀರಿ ಆಂತರಿಕ ವಿಕಾಸದ ಅಂತರ್ ದೃಷ್ಟಿಯನ್ನು ಅವಲಂಬಿಸಿ ಅವರ ಭಕ್ತಿ ಬೆಳೆಯುತ್ತಾ ಊರ್ಧ್ವಗಾಮಿಯಾಗಿದೆ. ಸಿದ್ಧಾಂತ ಯಾವುದೇ ಇದ್ದರೂ ಭಕ್ತಿಯ ಸಹಜವಾದ ವಿಕಾಸ ಮಾರ್ಗದಲ್ಲಿ ಕೆಲವು ಮೂಲಭೂತವಾದ ಭಾವನೆಗಳ ಅಭಿವ್ಯಕ್ತಿಯನ್ನೂ ಅನುಭವದ ಅನ್ವೇಷಣೆಯನ್ನೂ ಕಾಣುತ್ತೇವೆ. ಭಾರತೀಯ ಭಕ್ತಿಪಂಥಗಳ ವಿವಿಧತೆಯಲ್ಲಿ ಕಾಣುವ ಏಕಸೂತ್ರ ಈ ಆಂತರಿಕ ಅಭೀಪ್ಸೆಯ ಮುನ್ನಡೆ. ಇದಕ್ಕೆ ಸಾಧಕವಾಗುವಂತೆ ಕೆಲವು ಪಂಥಗಳು ನವವಿಧ ಭಕ್ತಿಯನ್ನು ಹೇಳಬಹುದು; ಇನ್ನು ಕೆಲವು, ಪಂಚವಿಧಗಳನ್ನು ಎತ್ತಿ ಹಿಡಿಯಬಹುದು; ಕೆಲವು ಪ್ರಪತ್ತಿಮಾರ್ಗದಲ್ಲಿ ಮೈಮರೆಯಬಹುದು; ಇಲ್ಲವೆ ದ್ವೈತವನ್ನು ಅಳಿದು ಸಮರಸದ ಸಾಕ್ಷಾತ್ಕಾರವನ್ನು ಪಡೆಯಬಹುದು. ಇವುಗಳ ಹಿಂದಿರುವ ಆಶಯ ಒಂದೆ; ಆಶ್ರಯ ಒಂದೆ.

ಈ ಲೌಕಿಕವನ್ನು ಕುರಿತ ಅತೃಪ್ತಿ ಯಾವುದೇ ಸಾಧನೆಯ ಮೊದಲ ಮೆಟ್ಟಿಲು, ಈ ಲೌಕಿಕ ಭೋಗಭಾಗ್ಯಗಳಲ್ಲಿ ಸರ್ವಸುಖವನ್ನು ಕಾಣುವ ವಿಷಯತೃಪ್ತ ಜೀವನಕ್ಕೆ ಇದರಾಚೆಯ ಆನಂದದ ಅಭೀಪ್ಸೆಯೆ ಮೂಡುವುದಿಲ್ಲ. ಹೊರಗಡೆ ಕಾಣುವ

ಈ ಲೋಕಸುಖದ ಪರಿಮಿತಿಯ ಪರಿಭಾವನೆಯಿಂದ ಉಂಟಾಗುವ ಅತೃಪ್ತಿಯೇ ಇದರಾಚೆಯ ಸುಖದ ಅನ್ವೇಷಣೆಗೆ ನಾಂದಿಯಾಗುತ್ತದೆ. ಆದುದರಿಂದ ಭಕ್ತಿ ಸಾಧನೆಯ ಮೊದಲ ಮೆಟ್ಟಿಲು. ಈ ಸಂಸಾರವನ್ನು ಕುರಿತ ನಶ್ವರತೆಯ ಅರಿವು, ಶಾಶ್ವತತೆಯ ಹಂಬಲ, ಈ ಆಂತರಿಕ ಅತೃಪ್ತಿ ತಳಮಳ ಹೋರಾಟಗಳನ್ನು ಕನಕದಾಸರ ಅನೇಕ ಕೀರ್ತನೆಗಳಲ್ಲಿ ಕಾಣುತ್ತೇವೆ.

ಈ ಮೇಲಿನ ವಿವರಣೆಯಿಂದ ನಮಗೆ ಒಂದು ಕಾಲದ ಚಿಂತನೆ ಕನಕದಾಸರನ್ನು ಭಕ್ತಿಪಂಥದಲ್ಲಿ ಗುರುತಿಸಿದರೂ, ಅವರ ಎಲ್ಲಾ ಆಲೋಚನೆಗಳು ಲೌಕಿಕವಾಗಿ ಮನುಷ್ಯ ನಿರ್ಮಿಸಿಕೊಂಡಿರುವ ಬೇಲಿಗಳನ್ನು ಮೀರುವ ಉದ್ದೇಶವನ್ನು ಹೊಂದಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಅವರ ಕೀರ್ತನೆಯ ಆಧಾರವಾಗಿರುವ ಕೆಲವು ಸಂಗತಿಗಳನ್ನು ವಿಶ್ಲೇಷಿಸಿಕೊಳ್ಳುವ ಮೂಲಕ ಈ ನಿಲುವನ್ನು ನಾವು ಇನ್ನು ಗಟ್ಟಿಗೊಳಿಸಿಕೊಳ್ಳಬಹುದಾಗಿದೆ.

*"ನೆಚ್ಚದಿರು ಸಂಸಾರ ನೆಲೆಯಲ್ಲವೀ ಕಾಯ*
*ಅಚ್ಯುತನ ನಾಮವನು ನೆನೆದು ಸುಖಿಯಾಗೊ"*

ಎಂಬ ಈ ಕೀರ್ತನೆ ಸಂಸಾರದ ನೆಲೆಯಿಂದ ಮೇಲೇರುವ ನಿಲುವಿಗೆ ನಾಂದಿಯಾಗುತ್ತದೆ. ಮನುಷ್ಯ ಈ ಜಗತ್ತಿನಲ್ಲಿ ಸಾಧಿಸುವ ಯಾವ ವಸ್ತುವೂ ಜೊತೆಗೆ ಬರುವುದಿಲ್ಲವೆನ್ನುವುದನ್ನು "ಏನು ಬರುವುದೋ, ಸಂಗಡೇನು ಬರುವುದೋ" ಎಂಬ ಕೀರ್ತನೆಯಲ್ಲಿ ಅತ್ಯಂತ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಈ ಜಗತ್ತಿನ ಜಂಟಾಟದಲ್ಲಿ ನಮ್ಮನ್ನು ಹೊಂದಿಕೊಂಡು ಬರುವುದು ಎರಡೇ ಸಂಗತಿಗಳು. ಒಂದು ಕೀರ್ತಿ ಮತ್ತೊಂದು ಅಪಕೀರ್ತಿ ಎನ್ನುವುದನ್ನು "ಪೊಂದಿಕೊಂಡು ಬರುವ ವಸ್ತು, ಕೀರ್ತಿ ಅಪಕೀರ್ತಿ ಎರಡೇ" ಎಂಬ ಎರಡು ಸಾಲುಗಳ ಕೀರ್ತನೆಯಲ್ಲಿ ವಿವರಿಸಿದ್ದಾರೆ. "ಆರು ಹಿತವರು ಎಂದು ನಂಬಬೇಡ, ಯಾರಿಗ್ಯಾರಿಲ್ಲ ಆಪತ್ತು ಬಂದೊದಗಿದಡೆ" ಎಂಬ ಸಾಲುಗಳು ಇವೆ ಧ್ವನಿಯನ್ನು ಹೊಂದಿವೆ.

ಇವೆಲ್ಲಕ್ಕಿಂತ ಮುಖ್ಯವಾಗುವ ಕನಕರ ಕೀರ್ತನೆ....

*"ದಾಸದಾಸರ ಮನೆಯ ದಾಸಿಯರ ಮಗ ನಾನು*
*ಸಾಸಿರ ನಾಮದೊಡೆಯ ರಂಗಯ್ಯನ ಮನೆಯ"*

ಇದು ಲೋಕದಲ್ಲಿ ನಾನೊಬ್ಬ ದಾಸನಷ್ಟೆ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ಒಪ್ಪಿಕೊಳ್ಳುವ ಕೀರ್ತನಕಾರ ಇನ್ನೊಬ್ಬರಿಲ್ಲ ಎನ್ನಬಹುದು. ತಮ್ಮನ್ನು ತಾವು ಹರಿದಾಸರ ಮನೆಯ ದಾಸರ ದಾಸಿಯ ಮಗನೆಂದು ಕರೆದುಕೊಳ್ಳುವುದಾಗಲೀ, "ಶಂಕುದಾಸರ ಮನೆಯ ಮಂಕುದಾಸನು ನಾನು" ಎಂಬಂತಹ ಮಾತುಗಳು,

ಮನುಷ್ಯನ ಅಹಂ ಅನ್ನು ಮುರಿಯುವ ಜಾಗೃತ ಮನಸ್ಸೊಂದರ ಪ್ರಯತ್ನವಾಗಿ ಕಾಣುತ್ತದೆ.

*"ಅಡುಗೆಯನ್ನು ಮಾಡಬೇಕಣ್ಣ ನಾನೀಗ ಜ್ಞಾನ*
*ದಡುಗೆಯನು ಮಾಡಬೇಕಣ್ಣ"*

ಕನಕದಾಸರ ಮೇಲಿನ ಈ ಕೀರ್ತನೆ ಮನುಷ್ಯ ಈ ಬದುಕೆಂಬ ಸಂಸಾರದಲ್ಲಿ ಮಾಡಬೇಕಾದ ಪಾಕದ ಮಾದರಿಯನ್ನು ಕಟ್ಟಿಕೊಟ್ಟಿದ್ದಾರೆ. ಈ ಸಂಸಾರದಲ್ಲಿ ಭವದ ಬಂಧನಗಳನ್ನು ಮೀರಿ ಮನುಷ್ಯ ಜನಸಾಂಗತ್ಯವೆಂಬ ನಿಜ ಜ್ಞಾನವನ್ನು ಶೋಧಿಸಿಕೊಳ್ಳುವುದೆ ಮಹತ್ವದ ಸಂಗತಿಯಾಗಿದೆ ಎಂಬ ಆಶಯವನ್ನು ಕನಕದಾಸರು ಅತ್ಯಂತ ಸಮರ್ಥವಾಗಿ ವಿಶ್ಲೇಷಿಸಿದ್ದಾರೆ.

ಕನಕದಾಸರ ಇಂತಹ ಕೆಲವು ರಚನೆಗಳು ವ್ಯಕ್ತಿಯ ಅಂತರಂಗದ ಸಾಧನೆಯು ಹೊಂದಬಹುದಾದ ದಾರಿಯನ್ನು ನೇರವಾಗಿ ಪ್ರತಿಬಿಂಬಿಸಿದರೆ, ಇನ್ನು ಕೆಲವು ಕೀರ್ತನೆಗಳಲ್ಲಿ ಸಾಂಕೇತಿಕ ಪ್ರತಿಮೆಗಳ ಮೂಲಕ ಅವುಗಳನ್ನು ವಿವರಿಸಿದ್ದಾರೆ. ಅಂತಹ ಒಂದು ಹಾಡನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

*ಮುತ್ತು ಬಂದಿದೆ ಕೇರಿಗೆ, ಜನರು ಕೇಳಿ*
*ಮುತ್ತು ಬಂದಿದೆ ಕೇರಿಗೆ ಭಕ್ತಿಯುಳ್ಳವರೆಲ್ಲ*
*ಕಟ್ಟಿಕೊಳ್ಳಿ ಸೆರಗಿನಲ್ಲಿ ॥ಪ॥*

ಎಂದು ಅಚ್ಯುತನೆಂಬ ಅಚ್ಚಳಿಯದ ಮುತ್ತನ್ನು ಜನರ ಬಳಿಗೆ ತರುತ್ತಾರೆ. ಆ ಮುತ್ತಿನ ವರ್ಣನೆ ತುಂಬಾ ಅರ್ಥವತ್ತಾಗಿ ಈ ಗೀತೆಯಲ್ಲಿ ಮೂಡಿ ಬಂದಿದೆ. ಇನ್ನೊಂದು ಗೀತೆಯಲ್ಲಿ ಅದು ಆನೆಯಾಗಿದೆ; "ಆನೆಯ ನೋಡಿರಯ್ಯ ನೀವೆಲ್ಲರು, ಆನಂದ ಪಡೆಯಿರಯ್ಯ" ಎಂಬ ಪಲ್ಲವಿಯೊಡನೆ ಆ ಭಾವವನ್ನೇ ಒಂದು ಕೀರ್ತನೆಯಾಗಿ ಬೆಳೆಸಿದ್ದಾರೆ. ಇನ್ನೊಂದು ಕಡೆ ಹಣ್ಣಿನ ರೂಪದಲ್ಲಿ ಅದನ್ನು ಕಂಡು ಹಾಡುತ್ತಾರೊ.

*ಹಣ್ಣು ಕೊಂಬುವ ಬನ್ನಿರಿ, ಹರಿದಾಸರು*
*ಹಣ್ಣು ಕೊಂಬುವ ಬನ್ನಿರಿ*
*ಚೆನ್ನಬಾಲಕೃಷ್ಣನೆಂಬ*
*ಕನ್ನೆಗೊನೆ ಬಾಳೆಹಣ್ಣು ॥ಪ॥*

ಇನ್ನು ಕನಕದಾಸರ ಮಹತ್ವದ ಕೀರ್ತನೆ "ನಾವು ಕುರುಬರು" ಎನ್ನುವ ಹಾಡಂತೂ ಕುಲಕಸುಬನ್ನೇ ಆಧ್ಯಾತ್ಮಿಕ ಸಾಧನೆಯ ನಿರಂತರ ಜಾಗೃತಿಗೆ ಸಂಕೇತವನ್ನಾಗಿ ಮಾಡಿದ ಅಪೂರ್ವ ಕಲಾಕೃತಿಯಾಗಿದೆ ಎನ್ನುವ ಅಭಿಪ್ರಾಯ ಚಿಂತಕರ ವಲಯದಲ್ಲಿ ವ್ಯಕ್ತವಾಗಿದೆ.

*"ನಾವು ಕುರುಬರೊ ನಮ್ಮ ದೇವರು ಬೀರಯ್ಯ*
*ಕಾವ ನಮ್ಮಜ್ಜ ನರಕುರಿ ಹಿಂಡುಗಳ ॥ಪ॥*

ಎಂಬ ಪಲ್ಲವಿಯಲ್ಲಿಯೇ ಇದು ಹೊಸ ಆಯಾಮವನ್ನು ಪಡೆಯುತ್ತದೆ. ಇದು ನರಕುರಿ ಹಿಂಡುಗಳನ್ನೆಲ್ಲಾ ಕಾಯುವ ಅಧ್ಯಾತ್ಮ ಕಾಯಕ. ಈ ಮಾತುಗಳನ್ನು ಹೇಳುವ ಮೂಲಕ ಕಾಯಕದಲ್ಲಿಯೇ ಹೇಗೆ ಸಾಧನೆಯನ್ನು ಅನುಭಾವಿಕ ನೆಲೆಯನ್ನು, ಕ್ರಿಯಾಶೀಲ ಶೂನ್ಯವನ್ನು, ಹೇಗೆ ಸಾಧಿಸಬಹುದು ಎಂಬುದನ್ನು ಅರ್ಥವತ್ತಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ದೇಹದಲ್ಲಿಯೆ ಟಗರುಗಳೂ ಆಡುಗಳೂ ಇವೆ. ಅವುಗಳನ್ನೆಲ್ಲಾ ಕಾಯುವುದು ಹೇಗೆಂಬುದನ್ನು ದೀರ್ಘವಾದ ಈ ಸಾಂಕೇತಿಕತೆ ನಿರೂಪಿಸುತ್ತದೆ. ಹಾಗೆಯೇ "ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ" ಮೊದಲಾದ ಅನೇಕ ಗೀತೆಗಳನ್ನು ಉದಾಹರಿಸಬಹುದು.

ಈ ಮೇಲಿನ ಎಲ್ಲಾ ಮುಖ್ಯವಾದ ಕೀರ್ತನೆಗಳು ಭಕ್ತಿ ಸಾಧನೆಯ ಕೆಲವು ಹಂತಗಳನ್ನು ಸ್ಪಷ್ಟವಾಗಿ ಗುರುತಿಸಿವೆ. ಮನುಷ್ಯ ತನ್ನ ಲೋಕದ ಜಂಜಾಟಗಳಾದ ಸಂಸಾರ, ಉದ್ಯೋಗ, ಸಾಧನೆ ಇತ್ಯಾದಿಗಳ ಭಾಗವಾಗಿಯೇ ಹೇಗೆ ಒಂದು ಅಲೌಕಿಕವಾದ ವಿದ್ವತ್ತನ್ನು ಸಾಧಿಸಬಹುದು ಎಂಬುದನ್ನು ಕನಕದಾಸರು ಅತ್ಯಂತ ಸಮಚಿತ್ತದಿಂದ ತಮ್ಮ ಕೀರ್ತನೆಗಳಲ್ಲಿ ವಿವರಿಸಿದ್ದಾರೆ. ಸಂಸಾರ ಸಾಗರವನ್ನು ದಾಟಿದರೆ ಮಾತ್ರ ಮುಕ್ತಿ ಎಂಬ ಭಕ್ತಿ ಮತ್ತು ಅಧ್ಯಾತ್ಮ ಚಿಂತನೆಯ ಸಾರವನ್ನು, ಸಂಸಾರವೂ ಮುಕ್ತಿ ಸಾಧಿಸಲು ಹರಿಭಕುತಿಯ ದಾಸನಾಗಲು ಒಂದು ಸಾಧನ ಎಂಬಂತೆ ಚಿಂತಿಸಿರುವ ಕನಕರು ಇಡೀ ಭಕ್ತಿ ಪಂಥದ ಚಿಂತಕರನ್ನು ಮೀರಿಸಿದ್ದಾರೆ ಎಂಬ ಅಲೋಚನೆಯನ್ನು ಓದುಗರಿಗೆ ಸೃಷ್ಟಿಸಿದ್ದಾರೆ. ಜಾತಿಗಳ ನಡುವಿನ ಸಂಬಂಧಗಳು ಮೇಲು–ಕೀಳು ಎಂಬ ಬಿರುಕುಗಳಿಂದ ತುಂಬಿ ಹೋಗಿದ್ದ ಕಾಲದಲ್ಲಿ ಕನಕರು ತಾನೊಬ್ಬ ಕುರುಬ ಎನ್ನುವ ಮೂಲಕ ಸಾಧನೆಗೆ ಜಾತಿ ಅಡ್ಡಿಯಲ್ಲ ಎಂಬ ತತ್ವವನ್ನು ನಿರ್ಭಯವಾಗಿ ಸಾರುತ್ತಾರೆ. ಈ ಎಲ್ಲಾ ಚಿಂತನೆಗಳ ಕಾರಣಕ್ಕೆ ಅವರನ್ನು ಕೇವಲ ಒಬ್ಬ ಅಧ್ಯಾತ್ಮ ಸಾಧಕ, ಕೀರ್ತನಕಾರರು, ಅಥವಾ ಭಕ್ತಿ ಚಳುವಳಿಯ ಒಬ್ಬ ಪ್ರತಿನಿಧಿ ಎನ್ನುವ ಸಂಕುಚಿತ ವಿವರಣೆಗಳನ್ನು ಮೀರಿ ಅವರೊಬ್ಬ ಅನುಭಾವಿಯಾಗಿ ಗುರುತಿಸಿಕೊಳ್ಳುತ್ತಾರೆ.

ಕನ್ನಡದ ಸಂದರ್ಭದಲ್ಲಿ ಬಂದ ಎಲ್ಲಾ ಅನುಭಾವ ಪರಂಪರೆಗಳ ಸತ್ವವನ್ನು ಕನಕರ ಚಿಂತನೆಯಲ್ಲಿ ನಾವು ಗುರುತಿಸಬಹುದಾಗಿದೆ. ಈ ದಾರಿಯಲ್ಲಿ ನಮಗೆ ಕನಕರನ್ನು ಈ ನಾಡಿನ ಜನಪದರು ಹೇಗೆ ಕಂಡಿದ್ದಾರೆ ಮತ್ತು ತಮ್ಮ ಬದುಕಿನ ಭಾಗವಾಗಿಸಿಕೊಂಡಿದ್ದಾರೆ ಎಂಬುದನ್ನು ಗುರುತಿಸಿದರೆ ಅರ್ಥವಾಗುತ್ತದೆ. ಆದ್ದರಿಂದಲೇ ಕೆಲವು ವಿದ್ವಾಂಸರು "ಒಟ್ಟಾರೆ ಕನಕರ ಆಂತರಿಕ ಸಾಧನೆ, ಕೇವಲ ನೈತಿಕ ನಿಯಮಗಳ ಪರಿಪಾಲನೆಯಲ್ಲಷ್ಟೇ ಪರ್ಯವಸಾನವಾಗದೆ, ಪರಮ ಸತ್ಯದೊಡನೆ

ಸಂಗತವಾಗಿ ಅನುಭವದ ತುತ್ತ ತುದಿಗೇರಿತು. ಕೆಲವು ದಾಸರಲ್ಲಿ ಮಾತ್ರ ತತ್ತ್ವ ಸಿದ್ಧಾಂತಕ್ಕಿಂತ ಅನುಭವದ ಕೈಮೇಲಾದಾಗ ಸಮರಸದ ಮಾತುಗಳು ಆಗಾಗ ಬರುವುದುಂಟು. ಕನಕದಾಸರಲ್ಲಿ ಇದು ಇನ್ನೂ ಹೆಚ್ಚು. ಸಂಪ್ರದಾಯದಲ್ಲಿದ್ದು, ಸ್ವತಂತ್ರ ವೈಚಾರಿಕ ನಿಲುವನ್ನು ಅವರ ಅನೇಕ ಕೀರ್ತನೆಗಳೂ ಸಾಧಿಸುತ್ತವೆ. ಜ್ಞಾನ ಮಾರ್ಗದ ಹಿನ್ನೆಲೆಯನ್ನುಳ್ಳ ಸಾಮರಸ್ಯದ ಕಡೆಗೆ ಅವರ ಒಲವು ಹೆಚ್ಚು. ಈ ದೃಷ್ಟಿಯಿಂದ ಇಡೀ ದಾಸ ಸಾಹಿತ್ಯದಲ್ಲಿಯೇ ಕನಕದಾಸರು ವಿಶಿಷ್ಟವಾಗಿ ನಿಲ್ಲುತ್ತಾರೆ. ಅಷ್ಟೇ ಅಲ್ಲ ಭಾರತೀಯ ಭಕ್ತಿ ಪಂಥದಲ್ಲೇ ಅವರ ಕೆಲವು ಕೀರ್ತನೆಗಳೂ ವಿಶಿಷ್ಟವಾಗಿ ಉಳಿಯುತ್ತವೆ" ಎಂಬ ಮೌಲ್ಯಯುತ ಮಾತುಗಳನ್ನು ಹೇಳಿದ್ದಾರೆ.

ಈ ವಿಷಯಗಳ ಜೊತೆ ಜೊತೆಗೆ ಕನಕರು ಆಧ್ಯಾತ್ಮ ಸಾಧನೆಗೈದ ಮಹಾನ್ ಯೋಗಿ ಎಂಬುದಾಗಿ "ಕನಕದಾಸರ ಅಧ್ಯಾತ್ಮ ಸಾಧನೆ ಮತ್ತು ಆತ್ಮಶೋಧನೆ" ಎಂಬ ಒಂದು ಸಂಶೋಧನೆಯಲ್ಲಿ ಎಂ.ವಿ. ಸೀತಾರಾಮಯ್ಯನವರು ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ....

ಅಧ್ಯಾತ್ಮಕ ಸಾಧಕನಿಗೆ ಆತ್ಮಶೋಧ ಅಥವಾ ಆತ್ಮಪರೀಕ್ಷೆ ಸಾಧನ ಸೋಪಾನದ ಮೊದಲ ಮೆಟ್ಟಿಲು. ತನ್ನ ಅರಿವಿಲ್ಲದೆ, ಬುದ್ಧಿಪೂರ್ವಕವಾಗಿಯಲ್ಲದೆ, ತಾನು ಎಸಗಿರಬಹುದಾದ ಪಾಪಕಾರ್ಯಗಳು ಜನ್ಮಾಂತರದ ಕರ್ಮಫಲ ಎಂದು ಸಾಧಕ ನಂಬುತ್ತಾನೆ. "ಹಲವು ಜನ್ಮದ ಪಾಪವೆನಿಪ ಸೊಕ್ಕಾನೆ ಸೊಂಡಿಲು ಸುತ್ತಿ ಬಂದು ಸೀವರಿಸುತಿದೆಕೊ; ಮಲೆವ ದುಷ್ಕೃತವೆಂಬ ಗಜಕೆ ಕೇಸರಿಯೆಂಬ ಛಲ ಬಿರುದು ತಾಳ್ದ ದೇವರದೇವ ನೀನೆನ್ನ ಕಡಹಾಯಿಸೋ ತಡಿಯ ಸೇರಿಸೊ" ಎಂದು ಆರ್ತರಾಗಿ ಆದಿಕೇಶವನನ್ನು ಕನಕರು ಬೇಡಿಕೊಂಡಿದ್ದಾರೆ.

ಪುರಾಣ ಶಾಸ್ತ್ರಾದಿಗಳನ್ನು ವ್ಯಾಸಂಗ ಮಾಡಿ ಕನಕರು ವಿದ್ಯಾಸಂಪನ್ನ ನಾಗಿರಬೇಕು. ರಾಮಾನುಜ ಮತ ಸ್ವೀಕಾರ ಕಾಲದಲ್ಲಿಯೇ ದಾಸರ ವಿದ್ಯಾವ್ಯಾಸಂಗ ಸಾಗಿರಬೇಕು. ಅವರು ತಮ್ಮ 'ಮೋಹನ ತರಂಗಿಣಿ' ಕಾವ್ಯದಲ್ಲಿ ಕುಮಾರವ್ಯಾಸಾದಿ ಪ್ರಮುಖ ಕವಿಗಳನ್ನು ಸ್ಮರಿಸುವುದರಿಂದಲೂ, "ಬುಧರಾಮ್ನಾಯ ಶಾಸ್ತ್ರವ ತಿಳಿದು ನಾನಿದ ಪೇಳ್ವೆ ಕೇಲಾಯತಾಕ್ಷಿ" ಎಂದು ಹೇಳಿಕೊಂಡಿರುವುದರಿಂದಲೂ ಆತ ಮೇಲು ಜಾತಿಯ ವರ್ಗದವರಿಗೆ ಮೀಸಲಾಗಿದ್ದ ವೇದ ಪುರಾಣಾದಿ ಶಾಸ್ತ್ರಗ್ರಂಥಗಳನ್ನೂ, ಕನ್ನಡ ಸಂಸ್ಕೃತ ಕವಿ ಕೃತಿಗಳನ್ನೂ, ವ್ಯಾಸಂಗ ಮಾಡಿದ್ದರು ಎಂದು ತಿಳಿಯಬೇಕು. ಈ ವಿದ್ಯಾಸಂಪನ್ನತೆ ಮೇಲ್ಜಾತಿಯವರ ಅಸೂಯೆಗೂ, ಆಡಿಕೆಗೂ, ಅವಹೇಳನಕ್ಕೂ ಕಾರಣವಾಗಿರಬೇಕು. ಈ ಸನ್ನಿವೇಶದಲ್ಲಿಯೇ ಅವರು ತಮ್ಮ ಕುಲದ ಬಗ್ಗೆ ಚಿಂತಿಸತೊಡಗಿದ್ದು. ಮೇಲು ವರ್ಗದವರಿಗೆ ಅಂದಿನ ದಿನಗಳಲ್ಲಿ ಕುಲ ಎನ್ನುವುದು ಪ್ರತಿಷ್ಠೆಯ ವಿಷಯವಾಗಿತ್ತು. ಕನಕದಾಸರು ಕುಲಪ್ರತಿಷ್ಠೆಯನ್ನು ಒಂದು ಸವಾಲಾಗಿ ಸ್ವೀಕರಿಸಿದಂತೆ ಕಾಣುತ್ತದೆ. ಹಾಗಿರದಿದ್ದರೆ ತಮ್ಮ ಕುರುಬ

ಕುಲದ ಬಗ್ಗೆ ಸೊಲ್ಲೆತ್ತುತ್ತಿರಲಿಲ್ಲ. ವ್ಯಕ್ತಿಯ ಉತ್ತಮ ಗುಣಶೀಲ, ಭಗವದ್‌ಭಕ್ತಿ, ವಿದ್ಯೆ ಇವು ಇರುವಾಗ ಕುಲದ ಪ್ರಶ್ನೆ ಅಪ್ರಸ್ತುತ ಎಂಬುದು ಅವರ ವಿಚಾರಪೂರ್ವಕ ನಂಬುಗೆಯಾಗಿತ್ತು. ಹಾಗಿರದೆ ಹೋಗಿದ್ದರೆ, "ಕುಲ ಕುಲ ಕುಲವೆನ್ನುತಿಹರೂ ಕುಲವಾವುದು ಸತ್ಯ ಸುಜನರಿಗೆ", "ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎಂಬ ಸವಾಲನ್ನು ಹಾಡಿನ ಮೂಲಕ ಪ್ರಕಟವಾಗಿ ಜನರ ಮುಂದೆ ಇಡುತ್ತಿರಲಿಲ್ಲ. "ಸಿರಿಕಾಗಿನೆಲೆಯಾದಿ ಕೇಶವರಾಯನ ಚರಣ ಕಮಲವನು ಕೀರ್ತಿಸುವನೆ ಕುಲಜ" ಎಂಬ ಆತ್ಮವಿಶ್ವಾಸದ ಹಿನ್ನೆಲೆಯಲ್ಲಿ, ತಮ್ಮ ಹುಟ್ಟಿಗೂ ನಡೆನುಡಿಗಳ ತಪ್ಪುನೆಪ್ಪುಗಳಿಗೂ ಕೇಶವನನ್ನೆ ಹೊಣೆಗಾರನನ್ನಾಗಿ ಮಾಡುತ್ತಾರೆ. "ನನ್ನಿಂದ ನಾನೇ ಜನಿಸಿ ಬಂದೆನೆ ದೇವ? ನಿನ್ನ ಪ್ರೇರಣೆಯಿಂದ ನಡೆದು ನುಡಿದ ಮೇಲೆ ನಿನ್ನದು ತಪ್ಪೊ ಎನ್ನದು ತಪ್ಪೊ?" ಎಂದು ದೇವರಿಗೆ ಸವಾಲು ಒಡ್ಡುತ್ತಾರೆ ಕನಕದಾಸರು. "ನಾರಿಮಕ್ಕಳು ತನು-ಮನ ನಿನ್ನವಯ್ಯ" ಎಂದು ತಮ್ಮ ಜೀವಿತ ಸರ್ವಸ್ವದ ಭಾರವನ್ನೂ ತಮ್ಮ ಕುಲದೈವದ ಮೇಲೆ ಹಾಕಿಯೂ, "ಹೇರನೊಪ್ಪಿಸಿದ ಮೇಲೆ ಸುಂಕವೇತಕೆ?" ಎಂಬ ನ್ಯಾಯವಾದ ಪ್ರಶ್ನೆಯನ್ನು ಹಾಕಿಯೂ, ಕೈಕೊಡವಿಕೊಂಡು ನೆಮ್ಮದಿಯಾಗಿರುವುದಿಲ್ಲ. ಪ್ರಯತ್ನಪೂರ್ವಕವಾಗಿ ತಮ್ಮ ಬಹಿರಂಗ ಅಂತರಗಂಗ ಶೋಧನೆಗೆ ತೊಡಗಿ, ತಮ್ಮ ಬದುಕನ್ನು ಆಧ್ಯಾತ್ಮ ಸಾಧನೆಗೆ ಯೋಗ್ಯವನ್ನಾಗಿ ಮಾಡಿಕೊಳ್ಳುವ ಚಿಂತನೆ ನಡಸುತ್ತಾರೆ; ಈ ಪ್ರಯತ್ನದಲ್ಲಿ ಪರಮಾತ್ಮನ ನೆರವನ್ನು ಬೇಡುತ್ತಾರೆ. ಪರಮಾತ್ಮ ಧೈರ್ಯಸ್ಥೈರ್ಯಗಳನ್ನು ನೀಡಬಹುದು, ಮನಶ್ಶಾಂತಿಯನ್ನು ಕೊಡಬಹುದು. 'ತನ್ನ ದರ್ಶನವನ್ನೂ ನೀಡಿಯಾನು, ದಿನದಿನದ ಹೊಟ್ಟೆಬಟ್ಟೆಗೂ ವ್ಯವಸ್ಥೆ ಮಾಡುತ್ತಾನೆಯೆ? ಪರಮಾತ್ಮನಿಗೆ ಇದು ಚಿಲ್ಲರೆ ವಿಷಯ. ಎಂಥ ಸಾಧುಸಂತನಾದರೂ ಉದರಭರಣಕ್ಕೆ ಯಾಯಿವಾರಕ್ಕೆ ಹೋಗೇಕು. ಕನಕದಾಸರು ದಾಸನಾದ ಮೇಲೆ ಯಾಯಿವಾರಕ್ಕೆ ಹೋದಾಗಲೂ ಬಹುಶಃ ಸರಿಯಾಗಿ ಭಿಕ್ಷೆ ಹುಟ್ಟುತ್ತಿರಲಿಲ್ಲ ಎಂದು ಕಾಣುತ್ತದೆ. ಅವರು ಮಡದಿ ಮಕ್ಕಳನ್ನು ತೊರೆದವರಲ್ಲ, ಅವರ ಪೋಷಣೆಯೂ ನಡೆಯಬೇಕೆಂದುಕೊಂಡಾಗ ಮನಸ್ಸು ತಲ್ಲಣಗೊಂಡಿದೆ. ಇಂಥ ಮನಸ್ಥಿತಿಯಲ್ಲಿ ಅವರು "ತಲ್ಲಣಿಸದಿರು ಕಂಡ್ಯ ತಾಳು ಮನವೆ, ಸ್ವಾಮಿ ನಿಲ್ಲದೆಲೆ ರಕ್ಷಿಸುವ ಸಂದೇಹ ಬೇಡ; ಹುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾದ ಮೇಲೆ ಕೊಟ್ಟು ರಕ್ಷಿಸುವನು. ಇದಕೆ ಸಂದೇಹ ಬೇಡ" ಎಂದು ಅಶನ ಚಿಂತೆಯನ್ನು ಬಿಡುತ್ತಾರೆ.

ಪಂಚೇಂದ್ರಿಯಗಳ ಬಯಲಾಸೆಗೆ ದುರ್ಜನರ ಸಹವಾಸ ಎಂದೂ ಒತ್ತಾಸೆಕೊಡುವಂಥದು. ಆದ್ದರಿಂದ, "ಸಜ್ಜನರಸಂಗದೊಳಗಿರಿಸೆನ್ನ ರಂಗ" ಎಂದು ಕೇಶವನನ್ನು ಬೇಡಿಕೊಳ್ಳುತ್ತಾರೆ.

ಕನಕದಾಸರ ಕುರಿತಾದ ಈ ಮೇಲಿನ ವಿವರಣೆ ಹೇಗೆ ಒಬ್ಬ ವ್ಯಕ್ತಿ ಎಲ್ಲಾ ಶಾಸ್ತ್ರಗಳಲ್ಲಿ ಪಾರಂಗತನಾಗಿಯೂ ಒಂದು ಅತಂತ್ರದ ಬದುಕನ್ನು ನಿರ್ವಹಿಸುವ ಸ್ಥಿತಿಗೆ ಅಂದಿನ ಸಮಾಜ ತಳ್ಳಿತ್ತು ಎಂಬುದನ್ನು ಗುರುತಿಸಬಹುದಾಗಿದೆ. ಕನಕರು ತಮ್ಮ ಬದುಕಿನಲ್ಲಿ ಜೀವನದ ನಶ್ವರತೆ, ಹೆಣ್ಣು, ಮಣ್ಣು, ಹೊನ್ನಿಗೆ ಆಸೆಪಡದಿರುವ ಸಮಚಿತ್ತದ ಅಗತ್ಯತೆಯನ್ನು ಹೇಳಿದ್ದಾರೆ. ಬದುಕಿನ ಪಯಣವನ್ನು ಮುಗಿಸಿ ಕಟ್ಟಕಡೆಯ ತಾಣವಾದ ಮುಕ್ತಿ ಸ್ಥಾನವನ್ನು ತಲುಪಲು ಯಾವ ಕುಲಾದಿಗಳು ನೆರವಾಗಲಾರವು. ಅದಕ್ಕೆ ಭಗವತ್ ಕೃಪೆಯ ಅಗತ್ಯ, ಭಗವದ್ ಭಕ್ತಿಯ ಮೂಲಕ ಮಾತ್ರವೆ ಆಧ್ಯಾತ್ಮ ಸಾಧನೆಗೆ ಅಗತ್ಯವಾದ ವೈರಾಗ್ಯವನ್ನು ಸಾಧಿಸಲು ಸಾಧ್ಯ. ಈ ಸಾಧನ ಪಥವನ್ನು ಇತರರಿಗೆ ಬೋಧಿಸಿದ ಕನಕದಾಸರು ತಾವೂ ಅದೆ ದಾರಿಯಲ್ಲಿ ನಡೆದಿದ್ದಾರೆ. ಕುಲ ಕುಲವೆಂದು ಹೊಡೆದಾಡುವ ಮೂಲಕ ನೀವುಗಳು ಮತ್ತೆ ಲೋಕದ ಭವಗಳಿಗೆ ಬೀಳುತ್ತಿದ್ದೀರಾ ಎನ್ನುವ ಮೂಲಕ ವ್ಯಕ್ತಿಯ ಆತ್ಮಸಾಕ್ಷಿ ಮತ್ತು ಲೋಕದ ಭವಗಳಿಗೆ ಬೀಳುತ್ತಿದ್ದೀರಾ ಎನ್ನುವ ಮೂಲಕ ವ್ಯಕ್ತಿಯ ಆತ್ಮಸಾಕ್ಷಿ ಮತ್ತು ನಿರ್ಮಲ ಭಕ್ತಿಯೊಂದೆ ಮುಕ್ತಿದು ದಾರಿ ಎಂಬುದನ್ನು ಕೀರ್ತನೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಕುಲ ಹಿರಿಮೆ, ಶಾಸ್ತ್ರಗಳಲ್ಲಿನ ಪಾಂಡಿತ್ಯವೆ ಮುಕ್ತಿಯ ದಾರಿ ಎಂದು ತಿಳಿದಿದ್ದವರಿಗೆ ಕನಕದಾಸರ ಕುಲ ವ್ಯವಸ್ಥೆ ವಿರೋಧಿ ದಾರಿ ಅಧ್ಯಾತ್ಮ ಸಾಧನೆಯ ತುತ್ತ ತುದಿಯನ್ನು ಅರ್ಥಮಾಡಿಸುವಂತಿದೆ.

## ಜನಪದರ ಕಣ್ಣಲ್ಲಿ ಶ್ರೀ ಕನಕದಾಸರು

ಒಬ್ಬ ಸಾಧಕನ ಸಾಧನೆ ಆತನ ನಂತರ ಅವನ ಚಿಂತನೆಗಳು ಸಮಾಜದ ವಿವಿಧ ವರ್ಗಗಳು ಹೇಗೆ ತಮ್ಮ ಬದುಕಿನ ಭಾಗವಾಗಿಸಿಕೊಳ್ಳುತ್ತವೆ ಎಂಬುದನ್ನು ಆಧರಿಸುತ್ತದೆ. ಆ ನೆಲೆಯಲ್ಲಿ ಒಬ್ಬ ಆಧ್ಯಾತ್ಮಿ, ಕೀರ್ತನೆಕಾರ, ಭಕ್ತಿ ಪಂಥದಲ್ಲಿ ಮೂಡಿ ಬಂದ ದಾಸರ ದಾಸ ಕನಕದಾಸರ ಬದುಕು ಮತ್ತು ಚಿಂತನೆಗಳನ್ನು ನಮ್ಮ ನಡುವಿನ ಸಮಾಜ ಹಲವಾರು ರೂಪಗಳಲ್ಲಿ ತಮ್ಮದಾಗಿಸಿಕೊಂಡಿದೆ. ಇಂದಿಗೂ ನಮ್ಮ ಸಮಾಜದ ಎಲ್ಲಾ ವರ್ಗಗಳು ಕನಕ ಚಿಂತನೆಯ ಬೆಳಕಿನಲ್ಲಿ ನಡೆಯುತ್ತಿವೆ. ಆ ಎಲ್ಲಾ ವಿಷಯಗಳನ್ನು ಡಾ. ನಿಂಗಣ್ಣ ಸಣ್ಣಕ್ಕಿ ಇವರು "ಜನಪದರ ಕಣ್ಣಲ್ಲಿ ಶ್ರೀ ಕನಕದಾಸರು" ಎಂಬ ಲೇಖನದಲ್ಲಿ ಅತ್ಯಂತ ವಸ್ತುನಿಷ್ಠವಾಗಿ ದಾಖಲಿಸಿದ್ದಾರೆ. ಅವರ ಪ್ರಕಾರ ಕನಕದಾಸರನ್ನು ಕೇವಲ ಒಬ್ಬ ಸಂತರಾಗಿ, ಆಧ್ಯಾತ್ಮಿಕ ಚಿಂತಕನಾಗಿ ಗುರುತಿಸುವ ನೆಲೆ ಬಹಳ ಸಂಕುಚಿತವಾದದ್ದು, ಇದಕ್ಕೆ ಬದಲಾಗಿ ಕನಕದಾಸರು ಇಂದು ಒಬ್ಬ ಅನುಭಾವಿಯಾಗಿ ನಮ್ಮ ಸಮಾಜದ ವಿವಿಧ ವರ್ಗಗಳು ನಮ್ಮ ಸಮುದಾಯದ ಕಲಾಪ್ರಕಾರಗಳ ಭಾವಾಗಿ ನಡೆಸುತ್ತಾ ಬಂದಿರುವ **ಡೊಳ್ಳಿನ ಪದಗಳಲ್ಲಿ, ತ್ರಿಪದಿಗಳಲ್ಲಿ, ಹಂತಿಯ ಹಾಡಿನಲ್ಲಿ, ಏಕತಾರಿ ಹಾಡಿನಲ್ಲಿ, ಗೀಗೀ ಮತ್ತು ಸಖೀ ಪದಗಳಲ್ಲಿ,**

**ಸಂಪ್ರದಾಯದ ಆಚರಣೆಗಳಲ್ಲಿ, ಗಾದೆಗಳಲ್ಲಿ** ಹಾಸು ಹೊಕ್ಕಾಗಿ ಕಾಣಸಿಗುತ್ತಾರೆ. ಈ ಅಂಶ ಒಂದು ಸಾಕು ಕನಕರು ಎಷ್ಟು ಜನಚಳುವಳಿಯ, ಎಲ್ಲಾ ವರ್ಗಗಳ ವಿಮೋಚನೆಯ ದಾರಿಯಲ್ಲಿ ಚಿಂತಿಸಿದ್ದರು ಎಂಬುದನ್ನು ಅರ್ಥಮಾಡಿಕೊಳ್ಳಲು. ಆ ಕಾರಣಕ್ಕೆ ಕನಕದಾಸರು ದಾಸತ್ವಕ್ಕೂ ಮೀರಿದ ಅನುಭಾವಿಗಳಾಗಿದ್ದರು ಎಂಬುದು ಅರ್ಥವಾಗುತ್ತದೆ. ಕನಕರು ಹೇಗೆ ನಮ್ಮ ಸಮಕಾಲೀನ ಸಮುದಾಯಗಳ ವಿವಿಧ ಕಲಾಪ್ರಕಾರಗಳ ಭಾಗವಾಗಿ ಬೆಳೆದಿದ್ದಾರೆ, ಬೆಳೆಯುತ್ತಿದ್ದಾರೆ ಎಂಬುದನ್ನು ಡಾ. ನಿಂಗಣ್ಣ ಸಣ್ಣಕ್ಕಿ ಇವರ ಸಂಶೋಧನೆಯ ಆಧಾರದಲ್ಲಿ ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಕರ್ನಾಟಕ ರಾಜ್ಯ ಧಾರವಾಡ ಜಿಲ್ಲೆಯ ಶಿಗ್ಗಾಂವ ತಾಲೂಕು ಸಾಧುಸಂತರು, ಸತ್ಪುರುಷರು, ಜೈನಯತಿಗಳು ಬಾಳಿ ಬೆಳಕಾದ ಪುಣ್ಯಭೂಮಿಯ ಭಾಗವಾಗಿ ಕಂಗೊಳಿಸುವುದು. ಶಿಗ್ಗಾಂವ ತಾಲೂಕಿನ ಬಂಕಾಪುರ ಮತ್ತು ಬಾಡ ಗ್ರಾಮಗಳು ಧಾರ್ಮಿಕ ಇತಿಹಾಸವನ್ನೆ ತೆರೆದಿಟ್ಟಿವೆ. ದಾಸಶ್ರೇಷ್ಠರಲ್ಲಿ ಶ್ರೀ ಪುರಂದರದಾಸರ ಸಮಕಾಲಿನರೂ, ಮಹಾನ್‌ಭಕ್ತರೂ, ಸಂತರೂ, ಕವಿಗಳೂ, ದಾರ್ಶನಿಕರೂ ಆದ ಶ್ರೀ ಕನಕದಾಸರ ಜೀವನ ಮತ್ತು ಅವರ ಸಾಹಿತ್ಯ ಮನುಕುಲಕ್ಕೆ ಆದರ್ಶವಾಗಿದೆ. ಇವರ ವಿಚಾರಗಳು ಮಾನವರು ಮಾನವರಾಗಿ ಉಳಿಯುವುದಕ್ಕೆ ಬಹು ಉಪಯುಕ್ತವಾಗಿವೆ. ಇವರ ಸಾಹಿತ್ಯ ಕೃತಿಗಳು, ಕೀರ್ತನೆಗಳು, ಮುಂಡಿಗೆಗಳು ಕನ್ನಡ ಸಾಹಿತ್ಯದಲ್ಲಿ ಅಮರವಾಗಿ ಕಂಗೊಳಿಸುತ್ತಿವೆ.

ಇಂತಹ ಕವಿ ಕನಕದಾಸರ ತಂದೆಯ ಹೆಸರು ಬೀರಪ್ಪ; ತಾಯಿ ಹೆಸರು ಬಚ್ಚಮ್ಮ. ಹಾಲು ಮತದ ಪರಂಪರೆಯವರು. ಕುರುಬ ಜನಾಂಗದವರು ಬೀರದೇವನ ಭಕ್ತರು. ಈ ಎಲ್ಲ ವಿಚಾರಗಳನ್ನು ಜನಪದ ಹಾಡುಗಳಲ್ಲೂ ಕೇಳುತ್ತೇವೆ. ಐತಿಹಾಸಿಕ ದಾಖಲೆಗಳಲ್ಲಿ ಐತಿಹಾಸಿಕ ದಾಖಲೆಗಳಲ್ಲಿ ಐತಿಹ್ಯಗಳಲ್ಲಿ ತಿಳಿಯುತ್ತೇವೆ.

ಬೀರಪ್ಪ-ಬಚ್ಚಮ್ಮ ದಂಪತಿಗಳಿಗೆ ಬಹುದಿಗಳವರೆಗೆ ಸಂತಾನವಾಗದೇ ಇದ್ದಾಗ, ಹಲವು ದೇವರಿಗೆ ಹರಕೆ ಹೊತ್ತರು. ಆ ದೇವರುಗಳ ಸಾಲಿನಲ್ಲಿ ತಿರುಪತಿಯ ತಿಮ್ಮಪ್ಪನೂ ಸೇರಿದ್ದನು. ಕೃಷಿಕನೂ, ಊರಿನ ಗೌಡನೂ, ಅನೇಕ ಗ್ರಾಮಗಳ ಒಡೆಯನೂ ಆಗಿ ಹೆಸರುವಾಸಿಯಾದ ಬೀರಗೌಡನಿಗೆ ವಿಜಯನಗರ ಅರಸರ ಪಾಳೆಯಗಾರಿಕೆಯೂ ದೊರೆತಿತ್ತು.

ಶ್ರೀ ರಾಜಶ್ರೀ, ಸಂತಾನಶ್ರೀ ಹೊಂದಿದ ಬೀರಗೌಡರು ಮಗನಿಗೆ ತಿಮ್ಮಪ್ಪನೆಂಬ ಹೆಸರನ್ನು ಇಟ್ಟನು. ಬಿದಿಗೆಯ ಚಂದ್ರನಂತೆ ಬೆಳೆಯುತ್ತ ನಡೆದ ಮಗನನ್ನು ಗುರುಗಳಲ್ಲಿ ವಿದ್ಯಾಭ್ಯಾಸಕ್ಕೆ ಕಳಿಸಿದನು. ಗರಡಿಯಲ್ಲಿ ಪಳಗಿಸಿದನು. ಕತ್ತಿವರಸೆ,

ದೊಣ್ಣೆವರಸೆಗಳಲ್ಲೂ ಬಲ್ಲಿದವನಾದನು. ತನ್ನ ಮಗನ ಶಕ್ತಿ ಸಾಮರ್ಥ್ಯವನ್ನು ಕಂಡ ಬೀರಪ್ಪಗೌಡನು ಮಗ ಪಾಳೆಗಾರಿಕೆಯಿಂದ ಮಾಂಡಲಿಕನಾಗುವ ಕನಸು ಕಂಡನು. ಈ ವಿಚಾರಗಳಿಗೆಲ್ಲ ಜನಪದ ಹಾಡುಗಳಲ್ಲಿ ಹಿರಿಮೆಯಲ್ಲಿ ಸಾಧಿಸಿದ ಡೊಳ್ಳಿನ ಹಾಡು ಪುಷ್ಟಿಯನ್ನು ನೀಡುತ್ತದೆ.

*ಬೀರಪ್ಪ ಬಚ್ಚಮ್ಮನ ದೇವ ಒಲಿದಾನೋ*
*ಬೀರಪ್ಪ ಬಚ್ಚಮ್ಮನ ದೇವ ಒಲಿದಾನಯ್ಯಾ*
*ಬಕುತರಿಗೆ ತಿಮ್ಮಪ್ಪ ಫಲವನು ನೀಡ್ಯಾನೊ*
*ಬಕುತರಿಗೆ ತಿಮ್ಮಪ್ಪ ಫಲವನು ನೀಡ್ಯಾನಯ್ಯಾ*

*ನವಮಾಸ ತುಂಬಿ ಬಚ್ಚಮ್ಮ ಹಡದಾಳೋ*
*ನವಮಾಸ ತುಂಬಿ ಬಚ್ಚಮ್ಮ ಹಡದಾಳಯ್ಯಾ*
*ಕಂದಗ ತಿಮ್ಮಪ್ಪನೆಂದು ಕರೆದಾರೋ*
*ಕಂದಗ ತಿಮ್ಮಪ್ಪನೆಂದು ಕರೆದಾರಯ್ಯಾ*

*ಬಿದಿಗೆಯ ಚಂದ್ರಮನೆಂದು ಬಗೆದಾರೋ*
*ಬಿದಿಗೆಯ ಚಂದ್ರಮನೆಂದು ಬಗೆದಾರಯ್ಯಾ*
*ಸಾಲಿಯ ಮನಿಗವನ ಕಳಿಸ್ಯಾರೋ*
*ಸಾಲಿಯ ಮನಿಗವನ ಕಳಿಸ್ಯಾರಯ್ಯಾ*

*ಗುರುಗಳ ಕಂಡು ಹಿರಿಹಿರಿ ಹಿಗ್ಯಾರೋ*
*ಗುರುಗಳ ಕಂಡು ಹಿರಿಹಿರಿ ಹಿಗ್ಯಾನಯ್ಯಾ*
*ಅಕ್ಷರವಿದ್ಯಾ ಸರಸರ ಕಲಿತಾನೋ*
*ಅಕ್ಷರವಿದ್ಯಾ ಸರಸರ ಕಲಿತಾನಯ್ಯಾ*

*ಗರಡಿಯ ಮನಿಗಳಕಡೆ ನಡೆದಾನೋ*
*ಗರಡಿಯ ಮನಿಗಳಕಡೆ ನಡೆದಾನಯ್ಯಾ*
*ಕತ್ತಿವರಸೆ ಡೊನ್ನಿವರಸೆಗಳ ಕಲಿತಾನೋ*
*ಕತ್ತಿವರಸೆ ಡೊನ್ನಿವರಸೆಗಳ ಕಲಿತಾನಯ್ಯಾ*
*ಗುರುಗಳ ಸೇವಾ ಮನಮುಟ್ಟಿ ಮಾಡ್ಯಾನೋ*
*ಗುರುಗಳ ಸೇವಾ ಮನಮುಟ್ಟಿ ಮಾಡ್ಯಾನಯ್ಯಾ*

*ತಂದೆ ತಾಯಿಗಳಿಗೆ ತಿಮ್ಮಪ್ಪ ನಮಿಸ್ಯಾನೋ*
*ತಂದೆ ತಾಯಿಗಳಿಗೆ ತಿಮ್ಮಪ್ಪ ನಮಿಸ್ಯಾನಯ್ಯಾ*
*ಕಮತದ ಕಡೆಗೆ ತಾನು ನೋಡ್ಯಾನೋ*
*ಕಮತದ ಕಡೆಗೆ ತಾನು ನೋಡ್ಯಾನಯ್ಯಾ*

*ಮಗಾ ಮಾಂಡಲಿಕನಾಗುವ ಕನಸು ಕಂಡಾರೋ*
*ಮಗಾ ಮಾಂಡಲಿಕನಾಗುವ ಕನಸು ಕಂಡಾರಯ್ಯಾ*
*ತಿಮ್ಮಪ್ಪ ನ ವರಾ ಅವರಿಗಿದೆ ಎಂದಾರೋ*
*ತಿಮ್ಮಪ್ಪ ನ ವರಾ ಅವರಿಗಿದೆ ಎಂದಾರಯ್ಯಾ*

*ಹರಕೆಯ ಭಕ್ತಿಯಲಿ ಅವರು ನಲಿದಾರೋ*
*ಹರಕೆಯ ಭಕ್ತಿಯಲಿ ಅವರು ನಲಿದಾರಯ್ಯಾ*
*ನಲಿಯುತ ನಲಿಯುತ ದೇವನ ನೆನದಾರೋ*
*ನಲಿಯುತ ನಲಿಯುತ ದೇವನ ನೆನದಾರಯ್ಯಾ*

*ಅಲ್ಲಿಗಿಲ್ಲಿಗೆ ಇದೊಂದು ಸಂಧೋ*
*ಸಂಧಿಗೆ ರಳು ಬಳ್ ಮುಂದ್ಹೇಳೋ*

ತಿಮ್ಮಪ್ಪನು ತಿಮ್ಮಪ್ಪಗೌಡನಾಗಿ, ಸುಂದರ ಸತಿಗೆ ಪತಿಯಾಗಿ, ಒಂದು ಗಂಡು ಮಗುವಿನ ತಂದೆಯೂ ಆದನು. ಆದರೆ ತನ್ನ ಸಾಧನೆಗಳಾದ ಯುದ್ಧನೀತಿ, ಧರ್ಮ ವಿಚಾರ, ತನಗಿರುವ ಪಾಳೆಗಾರಿಕೆ ಜೊತೆ ಶಾಸ್ತ್ರಪುರಾಣಗಳ ಆದರ, ಸಂಗೀತ ಸಭೆಗಳು ಮುಂತಾದವುಗಳೆಲ್ಲ ನಡೆದೇ ಇದ್ದವು. ಕಮತಿಗನಾದ ತಿಮ್ಮಪ್ಪನಿಗೆ ಹೊಲದಲ್ಲಿ ಉಳುವಾಗ ಏಳು ಕೊಪ್ಪರಿಗೆ ಹೊನ್ನು ದೊರಕಿತು. ಆ ಹೊನ್ನಿನ (ಕನಕ) ರಾಶಿಯನ್ನೆಲ್ಲ ತನ್ನ ಯಜಮಾನಿಕೆಯಲ್ಲಿ ಜನೋಪಯೋಗಕ್ಕಾಗಿ ಬಳಸಿದನು. ನಂತರ ಜನತೆ ವಾತ್ಸಲ್ಯದಿಂದ ತಿಮ್ಮಪ್ಪನಿಗೆ ಕನಕಪ್ಪನೆಂದೂ ಕನಕನಾಯಕನೆಂದೂ ಕರೆಯತೊಡಗಿದರು. ಗುರು ಹಿರಿಯರ ಮಾರ್ಗದಲ್ಲಿ ಜನತೆಯ ಕಲ್ಯಾಣದ ಕಾರ್ಯಗಳನ್ನು ಮಾಡುತ್ತ ನಡೆದನು. ತಂದೆಗಿಂತ ಒಂದು ಹೆಜ್ಜೆ ಮುಂದೊರೆದನು. ಕನಕನಾಯಕನಾಗಿ ಸಾಗಿದನು. ಕನಕನಾಯಕನಲ್ಲಿ ಜೀವನದ ಅನುಭವಗಳ ಜೊತೆ ಕಾವ್ಯಾನುಭವವೂ ಬೆಳೆಯತೊಡಗಿತು. ತನ್ನ ಪಾಳೆಗಾರಿಕೆಯ ಕ್ಷೇತ್ರದಲ್ಲಿ ಹಲವೆಡೆಗೆ ಸಂಗೀತ, ಕಾವ್ಯ, ಶಾಸ್ತ್ರ, ಪುರಾಣ ಇತ್ಯಾದಿಗಳ ಚರ್ಚಾಗೋಷ್ಠಿಗಳು ಪಂಡಿತರಿಂದ ಪಾಮರರವರೆಗೆ ಸಾಗಿದವು–ಎಂಬುದಕ್ಕೆ ಅನೇಕ ನಿದರ್ಶನಗಳು ಜನಪದ ಹಾಡುಗಳಲ್ಲಿವೆ.

## ಡೊಳ್ಳಿನ ಪದಗಳಲ್ಲಿ ಶ್ರೀ ಕನಕದಾಸರು

ವೇದಾಭ್ಯಾಸವನ್ನು, ಸಂಗೀತವನ್ನೂ, ವ್ಯಾಕರಣವನ್ನೂ, ಕಾವ್ಯರಚಾನ ಕಲೆಯನ್ನೂ ಕನಕನಾಯಕನು ಕಲಿತನು. ಸ್ವಂತ ಕಾವ್ಯರಚನೆ ಮಾಡುವ ಶಕ್ತಿಯೂ ಮೂಡಿನಿಂತಿತು. ಸುತ್ತ–ಮುತ್ತ ಇವರ ಕೀರ್ತಿ ಹರಡಿತು. ಆಡುಗಳ ತುಡುಗರು ನೆರೆ ರಾಜ್ಯಗಳಿಂದ ಪೀಡೆಯನ್ನು ಕೊಡತೊಡಗಿದರು. ಎಲ್ಲರನ್ನೂ ಎಲ್ಲೆಡೆಗಳಿಂದ ಓಡಿಸಿದನು. ಕದನದ ಸೂಚನೆಗಳು ನೆರೆಯವರಿಂದ ಬಂದಾಗ ತನ್ನ ದಳವನ್ನೂ

ಕೂಡಿಸುತ್ತಾನೆ, ದಳದೊಂದಿಗೆ ಸಜ್ಜಾಗುತ್ತಾನೆ. ಕದನ ನಡೆಯುತ್ತದೆ. ಅದೇ ವೇಳೆಗೆ ಮಗ ಮತ್ತು ಮಡದಿ ಮಡಿದ ಸಂದೇಶ ಕನಕನಾಯಕನಿಗೆ ತಲುಪುತ್ತದೆ.

*ಹಾಡಿಗೆ ಹಾಡು ಕನಕನು ಕಟ್ಯಾನೋ*
*ಹಾಡಿಗೆ ಹಾಡು ಕನಕನು ಕಟ್ಯಾನಯ್ಯಾ*
*ವೇದಕ ಹಾದಿ ತಾನು ಹುಡುಕ್ಯಾನೋ*
*ವೇದಕ ಹಾದಿ ತಾನು ಹುಡುಕ್ಯಾನಯ್ಯಾ*

*ಅರಸೊತ್ತಿಗೆಯ ಕಡೆ ಹೊರಳ್ಯಾನೋ*
*ಆಡುದುಡುಗರ ದಂಡು ತಂದಾರೋ*
*ಆಡುದುಡುಗರ ದಂಡು ತಂದಾರಯ್ಯಾ*
*ಕನಕನ ಹೊಡೆತಕ್ಕಂಜಿ ಓಡ್ಯಾರೋ*

*ಅವು ದುಡುಗರ ದಂಡು ಬಂದಾವೋ*
*ಅವು ದುಡುಗರ ದಂಡು ಬಂದಾವಯ್ಯಾ*
*ಕನಕನ ದಂಡಿಗಂಜಿ ನಿಲ್ಲದೆ ಓಡ್ಯಾರೋ*
*ಕನಕನ ದಂಡಿಗಂಜಿ ನಿಲ್ಲದೆ ಓಡ್ಯಾರಯ್ಯಾ*

*ಹಗೆಗಳು ಸುತ್ತಮುತ್ತ ಸೇರ್‍ಯಾರೋ*
*ಹಗೆಗಳು ಸುತ್ತಮುತ್ತ ಸೇರ್‍ಯಾರಯ್ಯಾ*
*ಸತಿ ಮಡಿದ ಸುದ್ದಿ ಕನಕನ ತಿಳಿದಾವೋ*
*ಮಗಾ ಮಡದ ಸಂಗತಿ ಹಬ್ಬ್ಯಾವೋ*

ಹತ್ತು ದಿನಗಳವರೆಗೆ ವೈರಿಗಳ ದಂಡನ್ನು ವಿವಿಧ ಬಗೆಯಾಗಿ ಹಿಮ್ಮೆಟ್ಟಿಸಿದನು. ಮೋಸತನದಿಂದ ವೈರಿಯು ಹಿಂದೆ ಬಂದು ತಿವಿದಾಗ, ಯುದ್ಧಭೂಮಿಯಲ್ಲಿ ಕನಕ ನಾಯಕನು ಬಿದ್ದನು. ಸಂಕಟದ ಸಮಯದಲ್ಲಿ ವೆಂಕಟಪ್ಪ (ತಿಮ್ಮಪ್ಪ)ನ ನೆನಪಾಗಿ ಎಚ್ಚೆತ್ತನು. ಸಂಸಾರದಲ್ಲಿ ವಿರಕ್ತಿ ಮೂಡಿ ವೈರಾಗ್ಯದ ಮನಸ್ಸು ಹೆಚ್ಚಿತು.

*ದಳದ ಕಡೆಗೆ ಕತ್ತಿವರಸೆಯ ತಿರುವ್ಯಾನೋ*
*ದಳದ ಕಡೆಗೆ ಕತ್ತಿವರಸೆಯ ತಿರುವ್ಯಾನಯ್ಯಾ*
*ಮತ್ತ ಮತ್ತ ಸೈನ್ಯ ಅಲ್ಲಿಗೆ ಬಂದಿತೋ*
*ಮತ್ತ ಮತ್ತ ಸೈನ್ಯ ಅಲ್ಲಿಗೆ ಬಂದೀತಯ್ಯಾ*

*ಹತ್ತುದಿನಗಳ ನಡೆದ ಯುದ್ಧೇನೋ*
*ಸತ್ತದಳದ ಕಳವಳ ತಾನು ಕಂಡನೋ*

ಸತ್ತದಳದ ಕಳವಳ ತಾನು ಕಂಡನಯ್ಯಾ
ಹೊತ್ತ ಮುಳುಗುವತನಕ ಹೊಡದಾನೋ

ವೈರಿಯು ಹಿಂಬಂದ ಇರದಾನೋ
ವೈರಿಯು ಹಿಂಬಂದ ಇರದಾನಯ್ಯಾ
ರಕ್ತದ ಮಡದಲಿ ಕನಕನಾಯಕ ಬಿದ್ದಾನೋ
ರಕ್ತದ ಮಡದಲಿ ಕನಕನಾಯಕ ಬಿದ್ದಾನಯ್ಯಾ

ಸಂಕಟ ಸಂಕಟವೆಂದು ವೆಂಕಟನ ನೆನದಾನೋ
ಸಂಕಟ ಸಂಕಟವೆಂದು ವೆಂಕಟನ ನೆನದಾನಯ್ಯಾ
ಕನಕನಾಯಕನೇಳೋ ನನ್ನ ಸೇವಕನೆಂದಾನೋ
ಕನಕನಾಯಕನೇಳೋ ನನ್ನ ಸೇವಕನೆಂದಾನಯ್ಯಾ

ಕನಕನಾಯಕನೆದ್ದು ತಾನು ಕಂಡಾನೇನೇನೋ
ಕನಕನಾಯಕನೆದ್ದು ತಾನು ಕಂಡಾನೇನೇನಯ್ಯಾ
ಕಾಗಿನೆಲೆಯ ಆದಿಕೇಶವನಮೂರತಿಯನೋ
ಕಾಗಿನೆಲೆಯ ಆದಿಕೇಶವನಮೂರತಿಯನಯ್ಯಾ

ಕನಕದಾಸನಾಗುವ ಗುಣ ಮನದಲ್ಲಿ ಮೂಡಿತೋ
ಕನಕದಾಸನಾಗುವ ಗುಣ ಮನದಲ್ಲಿ ಮೂಡಿತಯ್ಯಾ
ಕಾಗಿನೆಲೆಯ ಕಡೆಗೊಮ್ಮೆ ನೋಡ್ಯಾನೋ
ಕಾಗಿನೆಲೆಯ ಕಡೆಗೊಮ್ಮೆ ನೋಡ್ಯಾನಯ್ಯಾ

ಅರಸೊತ್ತಿಗೆಯ ಕಡೆಗೊಮ್ಮೆ ಹೊರಳ್ಯಾನೋ
ಅರಸೊತ್ತಿಗೆಯ ಕಡೆಗೊಮ್ಮೆ ಹೊರಳ್ಯಾನಯ್ಯಾ
ವೇದಕಹಾದಿ ಕಂಡಾನವನೋ

ಅಲ್ಲಿಗಿಲ್ಲಿಗೆ ಇದೊಂದು ಸಂಧಿ ಸಂಧಿಗೇಳಬಳ್ ಮುಂದ್ವೇಳೋ

ಕನಕನಾಯಕನು ಕಾಗಿನೆಲೆಯ ಆದಿಕೇಶವನನ್ನು ನೆನಸುತ್ತ, ವೈರಾಗ್ಯ ತಾಳಿ, ಕಾಗಿನೆಲೆಗೆ ಬಂದು ಕೆಲದಿನಗಳನ್ನು ಅಲ್ಲಿಯೇ ಕಳೆದನು. ಮುಂದೆ ತಾನು ದಾಸ(ಭಕ್ತ)ನಾಗುವ ಮಾರ್ಗವೇ ಮನದಲ್ಲಿ ಗಟ್ಟಿಯಾಗಿ ನಿಂತಿತು. ವಿಜಯನಗರ ಸಾಮ್ರಾಜ್ಯದಲ್ಲಿ ವ್ಯಾಸರಾಯರ ಕೀರ್ತಿ ಹಬ್ಬಿತ್ತು. ವ್ಯಾಸರಾಯರಲ್ಲಿ ಬರುವ ತವಕ ಹೆಚ್ಚಾಯಿತು. ವ್ಯಾಸರಾಯರಲ್ಲಿಗೆ ಬಂದು ಕನಕನಾಯಕನು ಕನಕದಾಸನಾದನು.

ಹೋಗಹೋಗತ ಕನಕ ನಕ್ಕಾನೋ
ಹೋಗಹೋಗತ ಕನಕ ನಕ್ಕಾನಯ್ಯಾ
ಹಾಡುಹಾಡುತ ಕನಕ ನಲಿದಾನೋ
ಹಾಡುಹಾಡುತ ಕನಕ ನಲಿದಾನಯ್ಯಾ

ಹಾಡಿನ ಹಾದಿಗುಂಟ ನಡದಾನೋ
ಹಾಡಿನ ಹಾದಿಗುಂಟ ನಡದಾನಯ್ಯಾ
ಹರಿದಾಸರ ಗುರುವರನ ಹುಡಿಕ್ಯಾನೋ
ಹರಿದಾಸರ ಗುರುವರನ ಹುಡಿಕ್ಯಾನೋ

ವ್ಯಾಸರಾಯರನ ಕಂಡ ನಮ್ಮಿಸ್ಯಾನೋ
ವ್ಯಾಸರಾಯರನ ಕಂಡ ನಮ್ಮಿಸ್ಯಾನಯ್ಯಾ
ತಾಳ–ತಂಬೂರಿಗಳ ನಾದ ಮಾಡ್ಯಾನೋ
ತಾಳ–ತಂಬೂರಿಗಳ ನಾದ ಮಾಡ್ಯಾನಯ್ಯಾ

ಪಾವನ ಬದುಕ ತನಗರಿ ಎಂದಾನೋ
ಪಾವನ ಬದುಕ ತನಗರಿ ಎಂದಾನಯ್ಯಾ
ಕುರುಬನೆಂದು ತಾ ಕರೆಯಿಸಿಕೊಂಡಾನೋ
ಕುರುಬನೆಂದು ತಾ ಕರೆಯಿಸಿಕೊಂಡಾನಯ್ಯಾ

ಕುರುಬನೆಂದರೆ ಬರಿ ಕುರುಬನಲ್ಲೋ
ನರಕುರಿಗಳ ಕಾಯುವ ಕುರುಬನಯ್ಯಾ
ಕಂಬಳಿ ಮಹಿಮಾ ತಿಳಿದವನೋ
ಕಂಬಳಿ ಮಹಿಮಾ ತಿಳಿದವನಯ್ಯಾ

ಸಾವಿರ ಕವನಗಳ ಕಟ್ಟಿದ ಕುರುಬನೋ
ಸಾವಿರ ಕವನಗಳ ಕಟ್ಟಿದ ಕುರುಬನಯ್ಯಾ
ಕನಕಗಿರಿಯ ಹೆಸರು ಸ್ಥಿರ ಮಾಡಿದನೋ
ಕನಕಗಿರಿಯ ಹೆಸರು ಸ್ಥಿರ ಮಾಡಿದನಯ್ಯಾ

ಕಂಡು ಕಂಡುದನು ತಾನ ತಿಳಿದವನೋ
ಕಂಡು ಕಂಡುದನು ತಾನ ತಿಳಿದವನಯ್ಯಾ
ಕಾಗಿನೆಲೆಯ ಆದಿಕೇಶವನ ನೆನದನೋ
ಕಾಗಿನೆಲೆಯ ಆದಿಕೇಶವನ ನೆನದನಯ್ಯಾ

ಕವನ ಕೀರ್ತನೆಗಳ ರಚಿಸ್ಯಾನೋ
ಕವನ ಕೀರ್ತನೆಗಳ ರಚಿಸ್ಯಾನಯ್ಯಾ

*ಕಡಲ ದಂಡಿಗೆ ತಾ ತಿರುಗ್ಯಾನೋ*
*ಕಡಲ ದಂಡಿಗೆ ತಾ ತಿರುಗ್ಯಾನಯ್ಯಾ*

*ಕುರುಬನ ಮಹಿಮಾ ತಿಳಿಸ್ಯಾನೋ*
*ಕುರುಬನ ಮಹಿಮಾ ತಿಳಿಸ್ಯಾನಯ್ಯಾ*
*ತಾಳ-ತಂಬೂರಿ ಬಾರಿಸುತ ತಿರಿಗ್ಯಾನೋ*

*ಅಲ್ಲಿಗಿಲ್ಲಿಗೆ ಇಂದೊಂದು ಸಂಧಿ, ಸಂಧಿಗೇಗಬಳ್ ಮುಂದ್ಹೇಳೋ*

ಈ ಹಾಡಿನ ಸಂಧಿಯನ್ನು ಸರಾಗವಾಗಿ ಹಾಡಿದ ಜನಪದ ಕವಿಯ ಭಾವವು ಕನಕದಾಸರ ಜೀವನದ ಇನ್ನೊಂದು ಮಜಲನ್ನು ಮುಂದೂಡಿಕೊಂಡು ಹೋಗುತ್ತದೆ. ಕನಕದಾಸರಲ್ಲಿ ಮೂಡಿದ ಜ್ಞಾನ ಸಂಗ್ರಹವು ಕೀರ್ತನೆಗಳಲ್ಲಿ ಕಾವ್ಯಗಳಲ್ಲಿ ಹಾಸುಹೊಕ್ಕಾಗಿದೆ. ಕನಕರು ನಿಂತ ಸ್ಥಳ ಕನಕಗಿರಿಯಾಯಿತೆಂಬುದಕ್ಕೆ ಜನಪದ ಕವಿ ಐತಿಹ್ಯವನ್ನು ತಿಳಿಸುತ್ತಾನೆ.

## ತ್ರಿಪದಿಗಳಲ್ಲಿ ಶ್ರೀ ಕನಕದಾಸರು

ಶ್ರೀ ಕನಕದಾಸರ ಜೀವನದ ವಿವರಗಳು ಪರಂಪರೆಯಾಗಿ ಸಾಗಿ ಬಂದು ಅನೇಕ ಜನಪದ ಹಾಡುಗಳಲ್ಲಿ ದೊರೆಯುತ್ತಲಿವೆ. ಗರತಿಯರ ಹಾಡುಗಳಲ್ಲಿ ದೊರಕಿದ ವಿವರಗಳನ್ನು ಇಲ್ಲಿ ಕಾಣಬಹುದು.

ಬಾಡ ಊರನ್ನು ಬಿಟ್ಟು ಹೊರಟಂತಹ ಸಮಯದಲ್ಲಿ ಕನಕದಾಸರು ಗರತಿಯ ಕನಸಿನಲ್ಲಿ ಕಾಣುವರು. ಆ ಚಿತ್ರಣ ಇಲ್ಲಿದೆ.

*ಹರೆಯ ಹೊತ್ತಿನ ಕನಸ ಹಡದವ್ವ ನೀಕೇಳ*
*ಹೆಗಲ ಮ್ಯಾಲವನ ಗೊಂಗಡಿ* ಬಾಡದ*
*ಸಿರಿ ಕನಕದಾಸ ಬಂದಿದ್ದ ಸಪನಾಗ*

ಈ ಕನಸು ಕಂಡ ಗರತಿಯು ಸಿರಿಕನಕದಾಸರಿಗೆ ಆರತಿಯನ್ನು ಬೆಳಗುವ ಬಾಡಗ್ರಾಮದ ಪಲ್ಲಕ್ಕಿಯನ್ನು ಕುರಿತು ತಿಳಿಸಿರುವ ಚಿತ್ರಣವೂ ಇದೆ.

ಕನಕಪ್ಪನು ಶ್ರೀ ಕನಕದಾಸರಾದ ಬಳಿಕ ಓಣಿಗಳಲ್ಲಿ ನಿಂತು ಹಾಡುಗಳನ್ನು ಹಾಡುವ ಸಜ್ಜನಿಕೆಯನ್ನು ಇನ್ನೊಂದು ತ್ರಿಪದಿಯಲ್ಲಿ ಕಾಣುತ್ತೇವೆ.

*ಸಾಲ ಓಣಿಯೊಳಗ ಸಾರುತ ನಿಂತಾನ*
*ಸಾವಿರ ಹಾಡು ನಾಲಿಗೆಗೆ ಕನಕಪ್ಪ*
*ಸಾಧುರ ಮಾತು ಸುರಿಸ್ಯಾನ*

* *ಗೊಂಗಡಿ=ಕಂಬಳಿ*

ವೈರಾಗ್ಯ ಹೊಂದಿದ ಶ್ರೀ ಕನಕದಾಸರು ಸಂಚರಿಸುತ್ತ ಹೊರಟು, ದೇವಧ್ಯಾನದಿಂದ ಹರಿಯ ಸಮನಾಗಿ, ಅಲ್ಲದೆ ಇನ್ನೂ ಒಂದು ಗುಂಜಿತೂಕ ಮಿಗಿಲಾದ ಎಂಬ ಭಾವನ್ನು ಕಾಣುತ್ತೇವೆ.

*ಸಂಸಾರ ಸರಿಸ್ಯಾನ ಸುಖದಾಗ ಇಳಿದಾನ*
*ಸಾವಿರ ಗಾವುದ ನಡೆದಾನ ಕನಕಪ್ಪ*
*ಉಡುಪಿಯ ಹರಿಗೆ ತಾ ಮಿಗಿಲಾದ*

*ಕೀರುತಿ ತುಂಬ್ಯಾನ ಕೀರುತಿ ಬರದಾನ*
*ಕಳವಳದ ಸ್ವಾಮಿ ಕನಕಪ್ಪ ಬಂದಾನ*
*ಸಾವಿರ ಹರದಾರಿ ನಡೆಯೂತ*

ಶ್ರೀ ಕನಕದಾಸರ ಬದುಕು ಜನಪದ ನಾಲಿಗೆ ಮೇಲೆ ಮಿಂತಿನಂತೆ ಸಂಚಾರ ಮಾಡುತ್ತಿದೆ.

ಇದೇ ರೀತಿ ಗಂಡಸು ಹಂತಿಯ ಹಾಡುಗಳಲ್ಲಿ ಭಕ್ತ ಕನಕದಾಸರ ಬದುಕನ್ನು ಹಾಡಿಕೊಂಡಿದ್ದಾರೆ.

**ಹಂತಿಯ ಹಾಡಿನಲ್ಲಿ ಭಕ್ತ ಕನಕದಾಸರು**

ಕೋರಿಕೆಗಳಿಂದ ಶುರುವಾಗುವ ಹಂತಿಯ ಹಾಡುಗಳನ್ನು ಇಲ್ಲಿ ತಿಳಿಯುವ ತಮ್ಮ ರಾಶಿ ಕನಕದಂತೆ ಹಸನಾಗಬೇಕೆಂಬ ನಿಲುವು ಹಾಡುಗಾರರದಾಗಿದೆ.

*ಹಂತಿಯ ಹೊಡೆಯುತ ನಾವ್ಯಾರ ನೆನೆಬೇಕ*
*ಕನಕದಾಸರ ಆದಿಕೇಶವನೋ*

ಗರತಿಯ ಹಾಡುಗಳನ್ನು ಹಾಡಿದವರು: 1) ಶ್ರೀಮತಿ ಬಂಗಾರೆವ್ವ ಯಲ್ಲಪ್ಪ ಬಾಡದ ಹಾಗೂ 2) ಶ್ರೀಮತಿ ರೇಣುಕಾ ಯಲ್ಲಪ್ಪ ಬಾಡದ, ಚೌಡಕಿಮೇಳ; ಹಳೇ ಹುಬ್ಬಳ್ಳಿ, (ಜಿ: ಧಾರವಾಡ).

*ಕನಕದಾಸರ ಆದಿಕೇಶವನ ನೆನದರ*
*ಕನಕದ ರಾಶಿ ಹಸನಗ್ಯೋ*

ತಮ್ಮ ಭಾವನೆಗಳು ಕಲಾತ್ಮಕವಾಗಿ ಹೊರಸೂಸಿ ಬರುವ ಬಾಡ ಗ್ರಾಮದ ಶ್ರೀ ಕನಕದಾಸರ ಸಂಬಂಧವನ್ನು ಹಾಡಿನಲ್ಲಿ ನೀಡುತ್ತಾರೆ.

*ಊರ ಬಾಡದೊಳಗ ಗುಗ್ಗಳ ಹೊಗಿನ್ಯಾಕ*
*ದರಮಕ್ಕಿಳಿದಾರ ಹರಿ ಬಕುತರ ಬಕುತರೋ*

*ದರಮಕ್ಕಿಳಿದಾರ ಹರಿ ಬಕುತರ ಬಕುತರೋ*
*ಕನಕದಾಸರ ಸರಮ್ಯಾಲ್ಯೋ*

ಶ್ರೀ ಕನಕದಾಸರು ವೈರಾಗ್ಯನಿಧಿಯಾಗಿ ತೋರಿದರು. ಅವರು ತಿಮ್ಮಪ್ಪ ನಾಯಕನೆಂದು ಹೆಸರುವಾಸಿಯಾದಾಗ ನೇಗಿಲಯೋಗಿಂ ಯೋಧನಾಗಿ, ಕೋಟೆ ಕಟ್ಟಿದ ನಾಯಕನಾಗಿ ಬದುಕು ಸಾಗಿಸಿದ್ದನ್ನು ಚರಿತ್ರೆಯಲ್ಲಿ ಕಾಣುತ್ತೇವೆ. ಒಮ್ಮೆಲೆ ಎಲ್ಲವನ್ನು ಸರಿಸಿ, ಸಂಸಾರದಿಂದ ಸನ್ಯಾಸ ಜೀವನ ಸಾಗಿಸಲು ಲೋಕೋಪಜೀವಿಯಾದ ಪ್ರಸಂಗವನ್ನು ಹಂತಿಯ ಹಾಡುಗಳಲ್ಲಿ ಕಾಣುತ್ತೇವೆ.

*ಮೇಟಿಯ ಸರಿಸ್ಯಾನ ಕ್ವಾಟಿಕ ಬಿಟ್ಟಾನ*
*ಕಾಗಿ ನೆಲೆಯ ಹಾದಿ ಹಿಡದಾನ*
*ಕಾಗಿ ನೆಲೆಯ ಹಾದಿ ಹಿಡದಾನ ಕನಕಯ್ಯ*
*ಲೋಕದ ಮಾನ ಬೆಳಗ್ಯಾನ*

*ಕಂಚಿನ ಕೈತಾಳ ತಂತಿಯ ಏಕತಾರಿ*
*ಕಾಗಿನೆಲೆಯ ಗುಡಿಮುಂದೋ*
*ಕಾಗಿನೆಲೆಯ ಗುಡಿಮುಂದ ಕನಕಯ್ಯಾ*
*ಬಕುತಿಯ ಹಾಡ ಬರದಾನೋ*

*ಪಾದುಕ ಮೆಟ್ಯಾನ ಕಂಬಳಿಯ ಹೊತ್ತಾನ*
*ಮಾತಿಗೆ ಮಾತು ಬೆಳೆಸ್ಯಾನೋ*
*ಮಾತಿಗೆ ಮಾತು ಬೆಳೆಸ್ಯಾನೋ ಕನಕಯ್ಯಾ*
*ಸೂರ್ಯಾನ ಬೆಳಕಾ ತೋರ್ಯಾನೋ*

ಹಂತಿಯ ಹಾಡಿನ ಪರಂಪರೆಯಲ್ಲಿ ಶ್ರೀ ಕನಕದಾಸರನ್ನು ವರ್ಣಿಸಿ ಹೇಳುವ ಹಾಡುಗಳು ಶಿಗ್ಗಾಂವದ ಸುತ್ತಮುತ್ತಲಿನ ಕೃಷ್ಟಿ ಕುಟುಂಬಗಳಲ್ಲಿ ಇವೆ. ಅವರು ಹಂತಿಯ ಕಟ್ಟಿದಾಗ ಮಾತ್ರ ಹಾಡುಗಳನ್ನು ಹೇಳುತ್ತಾರೆಂಬುದಾಗಿ ಉಪ್ಪಿನ ಬೆಟಗೇರಿಯ ಕೆಲವು ಹಾಡುಗಾರರು ತಿಳಿಸಿದ್ದಾರೆ.

**ಏಕತಾರಿ ಹಾಡಿನಲ್ಲಿ ಶ್ರೀ ಕನಕದಾಸರು**

ಉತ್ತರ ಕರ್ನಾಟಕದಲ್ಲಿ ವೃತ್ತಿಗಾಯಕರಾದ ಸಂಚಾರಿ ಜನಾಂಗದ ದಾಸಪಂಗಡದವರು ಪುರಂದರದಾಸರ ಬಗೆಗೂ, ಭಕ್ತಿ ಪಂಥವ ಬಗೆಗೂ ಹಾಡುಗಳನ್ನು ಹಾಡುತ್ತ ಬಂದಿದ್ದಾರೆ. ವೃತ್ತಿಗಾಯಕರಾದ ಇವರು ಏಕತಾರಿಯನ್ನು ಹಿಡಿದು, ಬಾರಿಸಿ, ಚಿಟ್‌ತಾಳ ಹೊಡೆದು ನಾದ ತೆಗೆಯುತ್ತಾರೆ. ಜನಪದ ಧಾಟಿಗಳಲ್ಲಿ ಪದಗಳನ್ನು ವಿವರಿಸುತ್ತಾರೆ.

ಎಲ್ಲ ಮತಗಳು ಸಮಾನವಾದವುಗಳು. ಅವು ಮಾನವನನ್ನು ತಿದ್ದಲು ಉಂಟಾದ ತತ್ವಗಳಾಗಿವೆ. ಹೀಗಾಗಿ ಒಟ್ಟು ಮಾನವ ಮತ ಅಂದರೆ ಮನುಜಮತ 'ಒಂದೇ ಒಂದು' ಎಂಬ ಸಂದೇಶವನ್ನು ನೀಡುತ್ತವೆ.

**ಹಾಡು**

*ನೀವೇನು ಬಲ್ಲಿರಿ ನೀವೇನು ಬಲ್ಲಿರಿ*
*ಕನಕದಾಸರನು ನೀವೇನು ಬಲ್ಲಿರಿ*

*ಹಾಲುಮತದ ಕನಕದಾಸನೂ*
*ಸಾಲು ಮತಗಳ ತಿಳಿದವನೂ*
*ಸಾಲು ಮತಗಳ ತಿಳಿದ್ಹೇಳಿದನ*
*ಸಾಕು ಮಾಡಬೇಕು ಜಾತಿಗಳನೂ*

ಹಂತಿಯ ಹಾಡುಗಳನ್ನು ಹೇಳಿದವರು: ಶ್ರೀ ಶಿವರಾಯ ದ್ಯಾಮಣ್ಣಣ ಗೊರವ, ಊರು: ಉಪ್ಪಿನ ಬೆಟಗೇರಿ, ಧಾರವಾಡ ಜಿಲ್ಲೆ.

*ಒಂದು ಮತ ಹಿಡಿದ್ಹೇಳಿದನೂ*
*ಮಾನವ ಮತವ ತಿಳಿದವನೂ*
*ಮಾನವ ಮತವ ತಿಳಿದ್ಹೇಳಿದನ*
*ಬೆಳಕಿಗೆ ಇಲ್ಲ ಜಾತಿಯನೂ*

*ಒಂದು ಮತ ಅರಿತ್ಹೇಳಿದನೂ*
*ಮಾನವ ಮತವ ಅರಿತವನೂ*
*ಮಾನವ ಮತವ ಅರಿತ್ಹೇಳಿದನ*
*ನೀರಿಗೆ ಇಲ್ಲ ಜಾತಿಯನೂ*

*ಹಲವು ಮತ ತಿಳಿದವನನನೂ*
*ಒಂದೇ ಒಂದು ಮತ ಎಂದವನೂ*
*ಒಂದೇ ಮತ ತಿಳಿದ್ಹೇಳಿದನ*
*ಭೂಮಿಗೆ ಇಲ್ಲ ಜಾತಿಯನೂ*

ಉಡುಪಿಯ ಶ್ರೀ ಕೃಷ್ಣನನ್ನು ಶ್ರೀ ಕನಕದಾಸರು ಗೆಲ್ಲುತ್ತಾರೆಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಮತ ಧರ್ಮಗಳ ಸರ್ವ ಸಿದ್ಧಾಂತಗಳನ್ನು ಬಲ್ಲವನಾಗಿದ್ದ ಶ್ರೀ ಕನಸಕದಾಸ, ಹಾಗೆಯೇ ಹಾಡು ಮುಂದುವರೆಯುತ್ತದೆ.

*ಹರಿಗೆ ಹರಿಯ ತಿಳಿದವನೂ*
*ಉಡುಪಿಯ ಹರಿಯ ಗೆದ್ದವನೂ*

*ದರಮನ ತಿಳಿದ್ಹೇಳಿದನ*
*ಸರವವೂ ಒಂದೆಂದ ಕನಕದಾಸನೂ*

*ಭೂಮಿಯ ಮೇಲೆ ತಿರಗುತಾನೂ*
*ತಾಳ ತಂಬೂರಿಯ ಜೋಡವನೂ*
*ತಿರುಪತಿ ತಿಮ್ಮಪ್ಪನ ಮಾತಾಡಿಸಿದನು*
*ಉಡುಪಿಯ ಕೃಷ್ಣನ ದರುಶನ ಪಡೆದವನೂ*

*ಗುರು ವ್ಯಾಸರಾಯನ ಹರಕೆ ಪಡೆದವನೂ*
*ದಾಸ ಮತದಲಿ ಮೊದಲಿಗನೂ*
*ಬಕುತಿ ಭಾವದಲಿ ಬಲ್ಲಿದವನು*
*ದಾಸರಲಿ ಸರವ ಹೆಚ್ಚಿನ ಬದುಕನೂ*

*ಸಂಸಾರ ಸಸಾರ ಮಾಡಿದವನೂ*
*ವೈರಾಗ್ಯನಿಧಿ ಕನಕದಾಸನೂ*
*ಕಾವ್ಯ ಕಥೆಗೊಳ ಬರೆದವನು*
*ಜ್ಞಾನ ಹರಡಿ ಮುಕುತಿ ಪಡೆದವನೂ*
*ನೀವೇನು ಬಲ್ಲಿರಿ ಕನಕದಾಸನೂ*

ಗದ್ಯದ ಲಯವನ್ನು ಹೊಂದಿರುವ ಏಕತಾರಿ ಪದಗಳು ಹಾಡುವವರ ನಾಲಗೆಯಲ್ಲಿ ರಸವಾಗಿ ಸೂಸುತ್ತಿವೆ. ಗೋಕಾಕ ತಾಲೂಕಿನ ಬಿಲಕುಂದಿ ಗ್ರಾಮದಲ್ಲಿ ವಾಸವಾಗಿದ್ದ ದಾಸರ ಯಮನವ್ವ ಎಂಬ ಮಹೆಳೆ ಈ ಪದವನ್ನು ಹೇಳಿಕೊಟ್ಟಿರುವುದಾಗಿ ತಿಳಿಸಿದ್ದಾನೆ. ಕನಕದಾಸರ ಬಗೆಗೆ ಹಾಡುವ ಜನಪದ ಹಾಡುಗಳು ಇವೆ ಎಂಬುದಾಗಿ ಶ್ರೀ ಮಾಳಪ್ಪ ಗಂಗಪ್ಪ ದಾಸರ ತಿಳಿಸಿದ್ದಾನೆ. ಆದರೆ ಆ ಮಹಿಳೆ ಈಗಿಲ್ಲ. ಇನ್ನಾರಿಗಾದರೂ ಹಾಡುಗಳನ್ನು ದಾನವಾಗಿ ನೀಡಿದ್ದಾಳೆಂಬುದನ್ನು ಶೋಧಿಸಬೇಕು. ಇಂತಹ ಹಾಡುಗಳು ಹೊರಬಂದಾಗ ಭಕ್ತ ಕನಕದಾಸರ ಜೀವನ ಮತ್ತು ಸಾಹಿತ್ಯದಲ್ಲಿ ಹೆಚ್ಚಿನ ಹೊಳಪು ಕಾಣುತ್ತದೆ.

**ಗೀಗೀ ಪದಗಳಲ್ಲಿ ಮಹಾತ್ಮ ಕನಕದಾಸ**

ಕನ್ನಡದಲ್ಲಿ ಗೀಗೀ ಪದಗಳು ರಚನೆಯಾದ ಮೊದಲ ಹಂತದಲ್ಲಿಯೇ ಕನ್ನಡ ನಾಡಿನಲ್ಲಿ ಲಾವಣಿ ಸಖೀಪದವನ್ನು ಗೀಗೀ ರೂಪದಲ್ಲಿ ಹಾಡುವುದು ಶುರುವಾಯಿತು.

ಆ ವೇಳೆಗೆ ರಚನೆಯಾದ ಮಹಾತ್ಮ ಕನಕದಾಸರ ಬಗೆಗಿರುವ ಸಖೀಪದವನ್ನು ಇಲ್ಲಿ ತಿಳಿಯೋಣ. ಬಸವಣ್ಣನವರು ಅಲ್ಲಮಪ್ರಭುಗಳು ಗತಿಸಿದ

ನಂತರ ದಾಸ ಪಂಕ್ತಿಯಲ್ಲಿ ಪುರಂದರದಾಸರು, ಕನಕದಾಸರು ಕನ್ನಡ ಸಾಹಿತ್ಯಕ್ಕೆ ಬಹು ದೊಡ್ಡ ಕಾಣಿಕೆಗಳನ್ನು ನೀಡಿದ್ದಾರೆ. ಅವರಿಬ್ಬರಲ್ಲಿ ಕನಕದಾಸರು ಮಹಾತ್ಮರೆಂದು ತಾವು ಬಾಳಿ ಬದುಕಿನ ಅವಧಿಯಲ್ಲಿಯೆ ಕರೆಯಿಸಿಕೊಂಡರು. ಹೀಗೆಂದು ತಿಳಿಸುವ ಗೀಗೀ ಪದವನ್ನು ತಿಳಿಯೋಣ.

ಹಾಡು ಹಾಡಿದವನು: ಶ್ರೀ ಮಾಳಪ್ಪ ಗಂಗಪ್ಪ ದಾಸರ ಊರು: ಸಾಲಹಳ್ಳಿ: ತಾ: ರಾಮದುರ್ಗ, ಜಿಲ್ಲೆ: ಬೆಳಗಾವಿ.

**ಮಹಾತ್ಮ ಕನಕದಾಸರ ಸಖೀಪದ**

*ಪುಣ್ಯಭೂಮಿ ಭರತಖಂಡದಾಗ*
*ಕನ್ನಡನಾಡಿನ ಬಹು ಮಿಗಿಲಾ 'ಗೀಯ ಗೀಯ ಗೀಯಗಾ'*
*ಹುಟ್ಟುತಾರ ಮೇಲಿಂದ ಮೇಲೆ ಮಹಾತ್ಮರಾ*
*ಆಗಿ ಹೋಗಿದಾರ ದೇವದೂತರಾ*
*ಬಸವಣ್ಣ ಅಲ್ಲಮ ಪ್ರಭುವರಾ ಹರಾ*
*ತಿಳಿಸಿದಾ ಮಾನವರಿಗೆಲ್ಲ ಜೀವಧಾರಾ*
*ಕೂಡಿಸಿದಾರ ಶರಣರ ದೊಡ್ಡ ದೊಡ್ಡ ಮೇಳಾ*
*ಮಾಡಿದಾರ ಶರಣರು ಬದುಕುವಕಳಾ*
*ಮುಂದಿನ ಕಾಲಿದಾಗ ಬಂದಾರ ದಾಸವರಾ*
*ಪರಂಪರಾ ನಡಸಿದಾರ ಪುಣ್ಯದ ಭಾರಾ*
*ವ್ಯಾಸರಾಯ ತಿಳಿಸಿದಾ ಬಕುತಿಯ ಧಾರಾ*
*ಓಡಿ ಬಂದಾರ ಬಕುತ ಮಹಿಮರಾ*
*ಪುರಂದರದಾಸ–ಕನಕದಾಸ ಮತ್ತು ಮಹಾಬಹಾದೂರಾ*
*ಕನಕದಾಸ ನಿಂತಿದಾರ ಕಠೀಣನೀಗಿಸಾರಾ*
*ಕುರುಬನೆಂದರೂ ಕನಕದಾಸ ಮಹಾಬಹಾದೂರಾ*
*ತಿಳಿಸಿದಾನ ಸರವರಿಗೆಲ್ಲ ದೇವರಿರುವ ಕಳಾ*
*ಉಡುಪಿಯ ಹರಿನ ತಿರಿಗಾಸ್ಯಾನೋ ಹಿಂದಕಾ*
*ತಿರುಪತಿ ತಿಮ್ಮಪ್ಪ ಮಾತಾಡ್ಯಾನೋ ಮುಂದಕಾ*
*ಜ್ಞಾನದ ಬಾಗಿಲು ತೆರದಾನೋ ಮುಂದಮುಂದಾ*
*ಸಾಹಿತ್ಯ ರಚನೆ ಮಾಡ್ಯಾನೋ ಚಂದ ಚಂದಾ*
*ಮಾನವರಿಗೆಲ್ಲರಿಗೂ ತಿಳಿಸ್ಯಾರೋ ಕುಲ ಒಂದೆಂದಾ*
*ತಾವು ಆಗಿ ನಿಂತಾರೊ ಸರವರಲ್ಲಿ ಮಹಾತ್ಮರಿಂದಾ*
*ಮಹಾತ್ಮರ ಹಾದಿ ಕೇಳಿರೋ ನೀವು ನಮ್ಮಿಂದಾ*
*ನಮಸ್ಕಾರ ಮಾಡತೇವ ನಿಮಗ ಹೊನ್ನ ಹಳ್ಳಿಯಿಂದಾ*

ಗೀಗೀ ಹಾಡಿದವನು: ದಿವಂಗತ ಶ್ರೀ ತಮ್ಮಣ್ಣ ಮಲ್ಲಪ್ಪ ಹೊಸಕೋಟೆ, ಊರು: ರಾಮದುರ್ಗಂ.

## ಸಂಪ್ರದಾಯದ ಆಚರಣೆಗಳಲ್ಲಿ ಶ್ರೀ ಕನಕದಾಸರು

ಧಾರವಾಡ ಜಿಲ್ಲೆಯ ಒಕ್ಕಲಿಗರು ಹಂತಿಮ ನೈವೇದ್ಯವನ್ನು ಮಾಡುವಾಗ ಪಾಂಡವರಿಗೆ ಎಡೆ ಮಾಡುವಂತೆ, ಬಾಳೆಯ ಎಲೆಯನ್ನು ತಂದು ಶ್ರೀ ಕನಕದಾಸರ ಎಡೆ ಎಂದು ಬೇರೊಂದು ಎಡೆಯನ್ನು ಮಾಡಿ; ಮೇಟಿಯ ಸುತ್ತಲಿನ ರಾಶಿಗೆ ಎಡೆ ತೋರಿಸಿ, ಬೆಳಗ್ಗೆ ಆ ಎಡೆಯನ್ನು ಸಾಕುಪ್ರಾಣಿಗಳ ಮುಂದಿಟ್ಟು ಕೈ ಮುಗಿಯುವ ಪರಂಪರೆ ಈಗಲೂ ಇದೆ ಎಂಬುದಾಗಿ ತಿಳಿದುವರುತ್ತದೆ.

ಬಾಡ ಗ್ರಾಮದಲ್ಲಿ ಮಹಾತ್ಮ ಕನಕದಾಸರ ಗುಡಿ ಎಂದು ಈಗ ನಿರ್ಮಿಸಲಾಗಿದೆ. ಈ ಸ್ಥಳ ಮೊದಲು ಗದ್ದಿಗೆಯಾಗಿತ್ತು. ಇಲ್ಲಿ ವಿಜಯದಶಮಿಯ ದಿನ ಮತ್ತು ದೀಪಾವಳಿಯ ಪಾಡ್ಯದ ದಿನ ಕುರುಬ ಸಮಾಜದವರು ಹಾಗೂ ಇತರ ಸಮಾಜದವರು ಬಂದು ಕಂಬಳಿಯನ್ನು ಹಾಸಿ ಕುಳಿತುಕೊಂಡು ಶ್ರೀ ಕನಕದಾಸರ ಹೆಸರಿನಿಂದ ಕಂಕಣಗಳನ್ನು ತಯಾರಿಸಿಕೊಂಡು ಅಲ್ಲಿಂದ ಹೊರಡುವ ಸಂಪ್ರದಾಯವಿತ್ತು.

ಈ ಕಂಕಣಗಳನ್ನು ಕುರಿಯ ಉಣ್ಣೆಯಿಂದ ತಯಾರುಮಾಡುತ್ತಿದ್ದರು. ಈ ಕಂಕಣಗಳನ್ನು ಮನೆಯಲ್ಲಿ ದೇವರ ಮಾಡ ಅಥವಾ ಜಗಲಿಯಲ್ಲಿಟ್ಟು ಹುಟ್ಟಿದ ಕೂಸಿಗೆ, ಒಂದು ತಿಂಗಳಾದ ಬಳಿಕ ಎರಡೂ ಕೈಗಳಿಗೆ ತೊಡಿಸುವ ಸಂಪ್ರದಾಯವಿದೆ.

ಮೇಲಿನ ಸಂಪ್ರದಾಯಗಳನ್ನು ಜನ ಇನ್ನೂ ಪಾಲಿಸುತ್ತಿದ್ದಾರೆ. ಶ್ರೀ ಕನಕ ದಾಸರು ತಮ್ಮ ಇಷ್ಟಾರ್ಥಗಳನ್ನು ಪೂರೈಸುವರೆಂಬ ಬಲವಾದ ನಂಬುಗೆ ಜನಪದರಲ್ಲಿ ಮೂಡಿ ಬಂದಿದೆ.

## ಗಾದೆಗಳಲ್ಲಿ ಶ್ರೀ ಕನಕದಾಸರು

ಜನಪದರು ಭಕ್ತ ಕನಕದಾಸರನ್ನು ಅನೇಕ ಬಗೆಯಾಗಿ ಹೊಗಳುವ ಗಾದೆಯ ಮಾತುಗಳನ್ನು ಚಲಾಯಿಸಿದ್ದಾರೆ. 'ಕನಕನ ತಾಳಾಗು ಇಲ್ಲದಿದ್ದರೆ ಹಾಳಾಗು'. ತಾಳವು ಭಕ್ತಿಯ ನಾದವನ್ನು ನೀಡುತ್ತದೆ ಎಂಬುದಾಗಿ ನಂಬಿದವರಾಗಿದ್ದಾರೆ. 'ತಾಳಿದವನು ಬಾಳಿಯಾನು' ಎಂಬ ಗಾದೆಗೂ 'ತಾಳು' ಎಂಬ ಒಳ ಅರ್ಥಕ್ಕೂ ಸಂಬಂಧ ಇದ್ದೇ ಇದೆ. ಕೈ ತಾಳಿಗೂ ತಾಳುವುದಕ್ಕೂ ಸಮಾನಾರ್ಥವನ್ನು ಹೊಂದಿಸಿ ಹೇಳುವ ರೂಢಿಯೂ ಇದೆ.

'ಕಂಡ ಕಂಡಂತೆ ಹೇಳಾಕ ಕನಕದಾಸನೇನು?' ಎಂಬ ಮಾತು ಹಲವು ಕಡೆಗೆ ಪ್ರಯೋಗದಲ್ಲಿದೆ. 'ಕನಕನಾಗಿ ಬದುಕಿ ಸಂತನಾಗಿ ಸಾಯಬೇಕು' ಎಂಬುವ ಮಾತು ಸಂತ ಕನಕದಾಸರ ಜೀವನವನ್ನು ಕರಿಯು ಕನ್ನಡಿಯಲ್ಲಿ ತೋರಿದಂತಿದೆ. ಸಂತ ಕನಕದಾಸರು ಸಂಚಾರಿಯಾಗಿ ಜನರಿಗೆಲ್ಲ ತಿರುಗುವ ಸಂತನೆಂದೇ ಕರೆದದ್ದುಂಟು. ಸಂತರ ಜೀವನವು ಮಾನವರ ಕಲ್ಯಾಣಕ್ಕಾಗಿಯೇ ಇದೆ.

'ರಾಗಿಯ ಉಂಡು ರಾಗಾ ಮಾಡು' ಎಂಬ ಗಾದೆಯೂ ಇದೆ. ರಾಗಿಯ ಮಹಿಮೆಯನ್ನು 'ರಾಮಧಾನ್ಯ' ಚರಿತ್ರೆಯಲ್ಲಿ ಸಂತ ಕನಕದಾಸರು ವಿವರಗಳನ್ನು ಕಾವ್ಯ ಮುಖಾಂತರ ನೀಡಿರುವರು. ರಾಗಿ–ಭತ್ತದ ಬೆಳೆಗಳನ್ನು ಬೆಳೆದ ಕನಕಪ್ಪನು ತಾನು ಕಂಡಂತೆ ನುಡಿದು ಸಾಹಿತ್ಯ ಚರಿತ್ರೆಯಲ್ಲಿ ಬಂಡಾಯದ ಧ್ವನಿಯನ್ನು ಎತ್ತಿ ತೋರಿಸಿದ್ದಾನೆ.

ರಾಗಿಯ ಅಂಬಲಿಯು ಬಹುರೋಗಗಳ ನಿವಾರಿ ಎಂಬುದಾಗಿ ಗರತಿಯರು ತಿಳಿದದ್ದುಂಟು. ಬೇಸಿಗೆಯ ಕಾಲದಲ್ಲಿ ರಾಗಿಯ ಅಂಬಲಿಯನ್ನು ತಯಾರಿಸಿ ಈಗಲೂ ಕುಡಿಯುತ್ತಾರೆ. ಉತ್ತರ ಕರ್ನಾಟಕದ ಮಠಗಳಲ್ಲಿ ಈಗಲೂ ಇದೆ. ಗೋಕಾಕ ತಾಲೂಕಿನ ತವಗಮಠ ಹಾಗೂ ಅಂಕಲಗಿ ಮಠಗಳಲ್ಲಿ ರಾಗಿಯ ಅಂಬಲಿಯು ಹರಿಯದಂಬಲಿಯಾಗಿ ಸಾಗಿಯೇ ಇದೆ.

'ಕನಕನನ್ನು ಕೆಣಕಬೇಡ, ಕೆಣಕಿ ತಿಣಕಬೇಡ' ಎಂಬ ಮಾತು ಕನಕದಾಸರ ಸಮಕಾಲೀನ ಗಾದೆಯಾಗಿ ಸಾಗಿ ಬಂದಿದೆ. ಕುಂತರೆ ಕುಂಬಾರನಾಗು, ತಿರುಗಿದರೆ ತಿಮ್ಮಪ್ಪನಾಗು ಎಂಬ ಗಾದೆಯ ಮಾತು ಭಕ್ತ ಕುಂಬಾರನನ್ನೂ ಮತ್ತು ಭಕ್ತ ಕನಕದಾಸರನ್ನೂ ಕುರಿತೇ ಹೇಳಿದ ಮಾತಾಗಿದೆ. ಎಲ್ಲಿದ್ದರೂ ಹೇಗಿದ್ದರೂ ಭಕ್ತನಾಗಲು ಸಾಧ್ಯ: ಕುಂತರೂ, ನಿಂತರೂ, ಬಲಿಸಿದರೂ ಭಕ್ತರಾಗಲಿಕ್ಕೆ ಸಾಧ್ಯ ಎಂಬುದಕ್ಕೆ ಭಕ್ತ ಗೋರಾಕುಂಬಾರನ ಜೀವನವನ್ನೂ, ಭಕ್ತ ಕನಕದಾಸರ ಜೀವನವನ್ನೂ ಈ ಗಾದೆಯ ತಿಳಿಸುತ್ತದೆ.

ಕನ್ನಡದ ಸಾಹಿತ್ಯ ಪರಂಪರೆಯಲ್ಲಿ ನಿರ್ದಿಷ್ಟವಾಗಿ ಅನುಭವಿಕ ಜ್ಞಾನ ಪರಂಪರೆಯ ಜಿಜ್ಞಾಸೆಯ ಎಲ್ಲಾ ಕಾಲದಲ್ಲೂ ಚರ್ಚೆಯಲ್ಲಿರುವ ವ್ಯಕ್ತಿ ಕನಕದಾಸರು. ದಾಸ ಶ್ರೇಷ್ಠರಾದ ಕನಕದಾಸರು ರಚಿಸಿದ ಕೀರ್ತನೆಗಳು ಅವರ ಸಾಹಿತ್ಯ ಎಲ್ಲಾ ಕಾಲಕ್ಕೂ ಪ್ರಚಲಿತ ಹೀಗಾಗಿ ಅವರನ್ನು ಎಲ್ಲಾ ಕಾಲಕ್ಕೂ ಸಮಕಾಲೀನರು ಎನ್ನಲೂ ಅಡ್ಡಿಯಿಲ್ಲ. ಹೀಗಾಗಿಯೆ ಅವರು ಸದಾ ಚರ್ಚೆಯ ವಿಷಯವಾಗಿರುತ್ತಾರೆ.

ಸಮಕಾಲೀನ ಬರಹಗಾರರ ಅರ್ಥದಲ್ಲಿ ಹೇಳುವುದಾದರೆ, "ಓರ್ವ ಬರಹಗಾರನ ಅಥವಾ ಸಾಹಿತಿಯ ಬರಹ ಎಂಬುದು ಆತ ಬದುಕಿನ ಕಾಲಘಟ್ಟದ ಸಾಮಾನ್ಯ ಜನರ ಬದುಕು ಹಾಗೂ ಅಂದಿನ ಪ್ರಸ್ತುತ ಸಾಮಾಜಿಕ ಜೀವನದ

ಮುಖವಾಣಿಯಾಗಿರುತ್ತದೆ. ಆತನ ಬರಹ ಶತಮಾನ ಕಳೆದರೂ ಸಹ ಒಂದು ಸಮಾಜದ ಕೂಗಾಗಿ ಪ್ರತಿಧ್ವನಿಸುತ್ತದೆ. ಅಲ್ಲದೆ ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಸಾಕ್ಷೀಕರಿಸುತ್ತದೆ.” ಆ ನಿಟ್ಟಿನಲ್ಲಿ 16ನೆಯ ಶತಮಾನದಲ್ಲಿ ಅಂದಿನ ಸಾಮಾಜಿಕ ಪರಿಸ್ಥಿತಿ. ಜನಜೀವನ ಹಾಗೂ ಶ್ರೇಣಿ ವ್ಯವಸ್ಥೆ ಮೌಢ್ಯಗಳು ಕುರಿತು ಕನಕದಾಸರು ತಮ್ಮ ಪದಗಳಲ್ಲಿ ಸಾಕ್ಷೀಕರಿಸಿದ್ದಾರೆ. ವಿಪರ್ಯಾಸವೆಂದರೆ, ಅವರ ದಾಸರ ಭಕ್ತಿ ಸಾಹಿತ್ಯ ಆಗಿಹೋಗಿ ನಾಲ್ಕು ಶತಮಾನಗಳೇ ಕಳೆದರೂ ಸಹ ಅಂದು ಅವರು ನಿರೂಪಿಸಿದ ಸಮಾಜ ಈಗಲೂ ಹಾಗೆ ಇದೆ. ಕಾರಣ ದಾಸ ಪದಗಳು ಎಲ್ಲಾ ಕಾಲಕ್ಕೂ ಸಮಕಾಲೀನವಾಗಿಯೇ ಇದೆ ಎಂದರೆ ತಪ್ಪಾಗಲಾರದು.

ಯಾವೊಬ್ಬ ವ್ಯಕ್ತಿಯ ಬರಹ ಎಲ್ಲಾ ಕಾಲಕ್ಕೂ ನಿರ್ವಚಿಸಿಕೊಳ್ಳಬಹುದಾದ ಬರಹ ಎನಿಸಿಕೊಳ್ಳುತ್ತದೆಯೋ, ಆತ ನಮಗೆ ಎಲ್ಲಾ ಕಾಲಕ್ಕೂ ಸಮಕಾಲೀನನಾಗಿ ನಮ್ಮ ನಡುವೇ ಪದಗಳ ಮೂಲಕ ಬದುಕಿರುತ್ತಾನೆ. ಆ ನಿಟ್ಟಿನಲ್ಲಿ ಕನಕದಾಸರ ದೇಶ, ಕಾಲ, ಮತಗಳ ಕುರಿತ ಚರ್ಚೆ ಎಲ್ಲಾ ಕಾಲಕ್ಕೂ ಪ್ರಸ್ತುತವಾಗಿದೆ.

ಮೇಲಿನ ಎಲ್ಲಾ ಅಂಶಗಳನ್ನು ನೋಡಿದರೆ ಕನಕನ ಬದುಕು ಜನಸಾಮಾನ್ಯರ ಬದುಕಿಗೆ ಬಹಳ ಹತ್ತಿರವಾದದ್ದು. ಆ ಕಾರಣಕ್ಕೆ ಸಾಮಾನ್ಯರ ಸಾಂಸ್ಕೃತಿಕ ಅಭಿವ್ಯಕ್ತಿಗಳಾದ **ಡೊಳ್ಳಿನ ಪದಗಳಲ್ಲಿ, ತ್ರಿಪದಿಗಳಲ್ಲಿ, ಹಂತಿಯ ಹಾಡಿನಲಿ, ಏಕತಾರಿ ಹಾಡಿನಲ್ಲಿ, ಗೀಗೀ ಮತ್ತು ಸಖೀ ಪದಗಳಲ್ಲಿ, ಸಂಪ್ರದಾಯದ ಆಚರಣೆಗಳಲ್ಲಿ, ಗಾದೆಗಳಲ್ಲಿ** ಕನಕರನ್ನು ಜನ ತಮ್ಮವನನ್ನಾಗಿಸಿಕೊಂಡಿದ್ದಾರೆ. ಇದಕ್ಕೆ ಪ್ರಮುಖ ಕಾರಣ ಕನಕನ ಚಿಂತನೆಗಳು ಅವರುಗಳ ಅನುಭವಗಳನ್ನು ಪ್ರತಿನಿಧಿಸುವಂತಹದ್ದು. ಯಾವುದೇ ಒಂದು ಪಂಥಕ್ಕೆ ಸೀಮಿತವಾಗದೆ ಜನ ಬದುಕನ್ನು ಕೇಂದ್ರವಾಗಿರಿಸಿಕೊಂಡು ರಚಿತವಾದವು ಎಂಬುದನ್ನು ನಾವು ಗುರುತಿಸಬೇಕಿದೆ. ಕನ್ನಡದ ಜನಪದ ಲೋಕ ಕನಕರನ್ನು ಒಳಗೊಂಡಿರುವ ಕ್ರಮಗಳನ್ನು ನೋಡಿದರೆ ಅವರು ಕನಕರನ್ನು ದೇಗುಲದ ಗರ್ಭಗುಡಿಯಿಂದ ಬಿಡಿಸಿ ಜನರ ನಡುವೆ ಆಡು ಭಾಷೆಯಾಗಿ ಸ್ಥಾಪಿಸಿದ್ದಾರೆ. ಆ ಮೂಲಕ ನಿಜವಾದ ಕನಕನನ್ನು ಜಗತ್ತಿಗೆ ಪರಿಚಯಿಸಿದ್ದಾರೆ. ಕನ್ನಡದ ಅನುಭಾವಿಕ ನೆಲೆಗಳಲ್ಲಿ ಕನಕನಿಗೆ ಸಿಕ್ಕ ಈ ಪುರಸ್ಕಾರ, ಜನಾಭಿಮಾನ ಕನಕನ ಚಿಂತನೆಗಳು ಜನರ ನಡುವೆಯೇ ಬೆಳೆದವು ಅವು ಗುಡಿ ಗುಂಡಾರಕ್ಕೆ ಸೀಮಿತವಾದವುಗಳನ್ನು ಎಂಬುದನ್ನು ನಮಗೆ ತೋರಿಸಿಕೊಡುತ್ತವೆ.

ಆದ್ದರಿಂದಲೇ ಡಾ. ನಿಂಗಣ್ಣ ಸಣ್ಣಕ್ಕಿ ಅವರು “ಜನಪದರ ಕಣ್ಣಲ್ಲಿ ಶ್ರೀ ಕನಕದಾಸರು” ಎಂಬ ಲೇಖನದಲ್ಲಿ ವಿಶ್ಲೇಷಿಸಿರುವಂತೆ ಕನಕದಾಸರನ್ನು ಕೇವಲ ಒಬ್ಬ ಸಂತರಾಗಿ, ಆಧ್ಯಾತ್ಮಿಕ ಚಿಂತಕನಾಗಿ ಗುರುತಿಸುವ ನೆಲೆ ಬಹಳ ಸಂಕುಚಿತವಾದದ್ದು. ಇದಕ್ಕೆ ಬದಲಾಗಿ ಕನಕರು ಇಂದು ಒಬ್ಬ ಅನುಭಾವಿಯಾಗಿ

ನಮ್ಮ ಸಮಾಜದ ವಿವಿಧ ವರ್ಗಗಳ ದಿನ ನಿತ್ಯದ ಸಾಮುದಾಯಿಕ ಕಲಾಪ್ರಕಾರಗಳ ಭಾಗವಾಗಿ ನಡೆಸುತ್ತಾ ಬಂದಿರುವ ಜನಾಂದೋಲನದ ಭಾಗವಾಗಿ ಗುರುತಿಸುವ ಜರೂರು ಇದೆ ಎಂಬ ವಿಶ್ಲೇಷಣೆಯನ್ನು ನಾವು ಸಮರ್ಥಿಸಬಹುದಾಗಿದೆ.

ಕನಕದಾಸರು ಒಬ್ಬ ಸಂತರಾಗಿ ಕನ್ನಡ ಸಾಹಿತ್ಯ ಪರಂಪರೆಗೆ, ದಾಸ ಸಾಹಿತ್ಯಕ್ಕೆ ಎಷ್ಟು ಕೊಡುಗೆ ನೀಡಿದ್ದಾರೆ ಎಂಬ ವಿಶ್ಲೇಷಣೆಗಳ ಜೊತೆಗೆ ಕನಕದಾಸರ ಅನುಭಾವಿಕ ಸಂಬಂಧಗಳು ಕನ್ನಡದ ಜಾನಪದ ಸಾಹಿತ್ಯ ಪರಂಪರೆಯೊಂದಿಗೆ ಹೇಗೆ ಬೆಸೆದುಕೊಂಡಿವೆ ಎಂಬ ಪ್ರಶ್ನೆ ಬಹಳ ಪ್ರಮುಖವಾಗಿದೆ. ಇಂದಿಗೂ ಕನ್ನಡದ ತಳ ಸಮುದಾಯದ ಜನ ಕನಕರನ್ನು ತಮ್ಮ ಅನುಭಾವಿಕ ಬದುಕಿನ ಭಾಗವಾಗಿ ಸಾಂಸ್ಕೃತಿಕ ನಾಯಕನಾಗಿ ಹಾಡುಗಳಲ್ಲಿ, ಗಾದೆಗಳಲ್ಲಿ, ಲಾವಣಿಗಳಲ್ಲಿ ಬೆಳೆಸುತ್ತಾ ಬಂದಿರುವುದು ಕನಕ ಕೇವಲ ಆಧ್ಯಾತ್ಮಿಕ ಸಂತನಲ್ಲ ಬದಲಾಗಿ ಆತ ಜನಸಮುದಾಯಗಳೊಂದಿಗೆ ಸಾವಯವ ಸಂಬಂಧ (Organic Relations) ಹೊಂದಿದ್ದ "ಅನುಭಾವಿಕ ಚಿಂತಕ" ಎಂಬ ವಿಷಯವನ್ನು ಮನದಟ್ಟು ಮಾಡುತ್ತದೆ. ಇಷ್ಟೆಲ್ಲಾ ಇದ್ದರೂ ಕನಕರನ್ನು ಇಂದಿಗೂ ನಮ್ಮ ಬೌದ್ಧಿಕ ವರ್ಗ ಕೇವಲ ದಾಸ ಸಾಹಿತ್ಯ ಪ್ರಕಾರದೊಂದಿಗೆ ಹೆಚ್ಚು ಗುರುತಿಸುತ್ತದೆ ಎಂಬ ಪ್ರಶ್ನೆಗಳನ್ನು ಆಧರಿಸಿ ಯೋಚಿಸಿದರೆ, ನಾವು ಮೊದಲೇ ಅಧ್ಯಾಯದಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗಳು ಮತ್ತೆ ಎದುರಾಗುತ್ತವೆ ಅವುಗಳನ್ನು ಆಧರಿಸಿ ಮುಂದಿನ ಅಧ್ಯಾಯದಲ್ಲಿ ಏಕೆ ಕನಕದಾಸರನ್ನು ಕನ್ನಡದ ಅನುಭಾವಿಕ ಪರಂಪರೆಯ ಸಾಂಸ್ಕೃತಿಕ ನಾಯಕನಾಗಿ ರೂಪಿಸಿಕೊಳ್ಳುವಲ್ಲಿ ವಿಫಲರಾಗಿದ್ದೇವೆ? ಅದಕ್ಕಿರುವ ತಡೆಗಳೇನು? ಆ ಮಿತಿಯನ್ನು ಮೀರಲು ನಮಗಿರುವ ದಾರಿಗಳು ಯಾವುವು ಎಂಬ ಸಂಗತಿಗಳನ್ನು ಚರ್ಚಿಸಲಾಗುವುದು.

❒

## ಅಧ್ಯಾಯ–4

# ಅರಿತು ಭಜಿಪರ್‍ಯಾರಯ್ಯ ನಿನ್ನ

ಹಿಂದಿನ ಅಧ್ಯಾಯದಲ್ಲಿ ಅನುಭಾವ ಪರಂಪರೆಯ ಸೈದ್ಧಾಂತಿಕ ಚರ್ಚೆಯನ್ನು ನಿರ್ವಹಿಸಲಾಗಿದೆ. ಅದರ ಮುಂದುವರೆದ ಭಾಗವಾಗಿ ಸದರಿ ಅಧ್ಯಾಯದಲ್ಲಿ ಕನ್ನಡದ ಅನುಭಾವಿ ಪರಂಪರೆ ಮತ್ತು ಕನಕದಾಸರ ಚಿಂತನೆಗಳ ನಡುವಿನ ಸಂಬಂಧಗಳ ಕುರಿತು ಚರ್ಚಿಸುವ ಉದ್ದೇಶವನ್ನು ಹೊಂದಲಾಗಿದೆ.

ಹಾಗೆ ನೋಡುವುದಾದರೆ ನಮ್ಮ ನಡುವಿನ ಸೃಜನಶೀಲ ಚಿಂತಕರಾದ ಡಿ.ಆರ್. ನಾಗರಾಜ್ ಅವರು ಒಂದು ಬಹು ಮುಖ್ಯವಾದ ವಿಷಯವೊಂದನ್ನು ತಮ್ಮ ಬರಹಗಳಲ್ಲಿ ಪ್ರಸ್ತಾಪಿಸುತ್ತಾರೆ. ಅದು "ಚರಿತ್ರೆಯುದ್ಧಕ್ಕೂ ಮೇಲುಜಾತಿಗಳ ಧಾರ್ಮಿಕ ಅಧಿಕಾರವನ್ನು ಪ್ರತಿರೋಧಿಸುವ ಸಾಂಸ್ಕೃತಿಕ ಶಕ್ತಿಗಳು ಇದ್ದವು, ಇನ್ನೂ ಸ್ಪಷ್ಟವಾಗಿ ಹೇಳಬೇಕು ಎಂದರೆ ಕುಮಾರವ್ಯಾಸ ಭಾರತ ಒಂದು ಕಡೆಗಿದ್ದರೆ, ಅಷ್ಟೇ ಶ್ರೇಷ್ಠವಾದ ಮಲೆಮಾದೇಶ್ವರ ಕಾವ್ಯ, ಮಂಟೇಸ್ವಾಮಿಯ ಕಾವ್ಯ, ಕಾಡುಗೊಲ್ಲರ ಜುಂಜಪ್ಪನ ಕಾವ್ಯ ಒಂದು ಕಡೆಗಿದೆ ಅಲ್ಲಮಪ್ರಭು ನಿಸ್ಸಂದೇಹವಾಗಿ ಕೆಳಜಾತಿಯವನು. ಅಲ್ಲಮಪ್ರಭುವನ್ನು ಸೃಷ್ಟಿಸಿದ ಶೂದ್ರ ವರ್ಗಕ್ಕೆ ಸಾಂಸ್ಕೃತಿಕ ಶಕ್ತಿ ಇರಲಿಲ್ಲ ಎಂದಲ್ಲ. ಅವುಗಳ ನಿಜವಾದ ಶಕ್ತಿ ಕುಂದಿದ್ದೇ ಅವುಗಳ ಪ್ರಾಚೀನ ಸಾಂಸ್ಕೃತಿಕ ಸ್ಮೃತಿ ಮತ್ತು ಸಾಂಸ್ಕೃತಿಕ ಅಧಿಕಾರಿಗಳಿಗಿದ್ದ ನ್ಯಾಯಬದ್ಧತೆಗಳು ಹೊರಟುಹೋದಾಗ. ಹಾಗೆ ನೋಡಿದರೆ ವಸಾಹತು ಕಾಲದ ರಾಷ್ಟ್ರೀಯ ಹೋರಾಟದಲ್ಲಿ ಅಧಿಕೃತತೆ ಪ್ರಾಪ್ತವಾದದ್ದು ಒಂದೋ ಎರಡೋ ಬಗೆಯ ಭಾರತೀಯ ದರ್ಶನಗಳಿಗೆ ಮಾತ್ರ. ಉಳಿದ ಶೂದ್ರಾತಿಶೂದ್ರ ದಾರ್ಶನಿಕ ಮಾರ್ಗಗಳಿಗೆ ನ್ಯಾಯಬದ್ಧತೆ ಸಿಗಲೇ ಇಲ್ಲ. ವಸಾಹತುಶಾಹಿ ಕಾಲದಲ್ಲಿ ನಿರ್ಮಾಣವಾದ ಭಾರತೀಯ ಸಂಸ್ಕೃತಿಯ ಪರಿಕಲ್ಪನೆ ಅನ್ನೊದೇನಿದೆ ಅದು ಯಾವುದೋ ಒಂದು ಬಗೆಯ ವೇದಾಂತಿಯ ದರ್ಶನಕ್ಕೆ ಸಿಕ್ಕ ಪುರಸ್ಕಾರ ಮತ್ತು ಉಳಿದ ಬಹುಮುಖೀ ಪೂಜಾಕ್ರಮಗಳಿಗೆ, ಪ್ರತಿಮಾ ನಿರ್ಮಾಣ ಕ್ರಮಗಳಿಗೆ ಆದ ಅವಗಣನೆ ಮತ್ತು ತಿರಸ್ಕಾರ ನಿಜ ಅರ್ಥದಲ್ಲಿ ಇದು ವಿಸ್ಮೃತಿಯ ಇನ್ನೊಂದು ಮುಖ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಇದಕ್ಕೆ ಪೂರಕವಾಗಿರುವಂತೆ ರಹಮತ್ ತರೀಕೆರೆ ಅವರು 17, 18 ಮತ್ತು 19 ನೆಯ ಶತಮಾನಗಳಲ್ಲಿ ಕರ್ನಾಟಕದಲ್ಲಿ ಅನುಭಾವಿಗಳು ವಿಶಿಷ್ಟವಾದ ಮತ್ತು ವ್ಯಾಪಕವಾದ ಸಾಹಿತ್ಯಕ ಹಾಗೂ ಅನುಭಾವಿ ಚಳುವಳಿಯೊಂದನ್ನು ರೂಪಿಸಿ ಬೆಳೆಸಿದ್ದನ್ನು ಈಚೀಚೆಗೆ ಗುರುತಿಸಲಾಗುತ್ತಿದೆ. ಅದನ್ನು ಹಿಂದಿನ ವಿದ್ವಾಂಸರು–ವಿಮರ್ಶಕರು ಗಂಭೀರವಾಗಿ ಹೋಗಲಿ, ಅನೌಪಚಾರಿಕವಾಗಿಯಾದರೂ ಗಮನಿಸದೆ ಹೋದದ್ದು ಕರ್ನಾಟಕದ ಸಂಸ್ಕೃತಿಯ ದೃಷ್ಟಿಯಿಂದ ಒಂದು ದೊಡ್ಡ ನಷ್ಟವೇ ಸರಿ. ಅಲ್ಲದೆ, ಆ ಶತಮಾನಗಳು ಯಾವುದೇ ರೀತಿಯ ಅರ್ಥಪೂರ್ಣ, ಗಂಭೀರ ಮತ್ತು ಸೃಜನಾತ್ಮಕ ಚಟುವಟಿಕೆಗಳು ನಡೆಯದೆ ಹೋದ 'ಬರಡು' 'ಕತ್ತಲು' ಮತ್ತು 'ಸ್ಥಗಿತಕಾಲ' ವೆಂದೇ ತಿಳಿಯಲಾಗಿದ್ದಿತು. ಅದರೆ, ಕಳೆದ ಒಂದೆರಡು ದಶಕಗಳಲ್ಲಿ ತತ್ವಪದಗಳನ್ನು ಗಂಭೀರ ಓದಿಗೆ ಒಳಪಡಿಸುತ್ತಿರುವುದು ಮೇಲಿನ ಅಭಿಪ್ರಾಯ ಅಪಗ್ರಹಿಕೆಯದಾಗಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಈ ತಪ್ಪುಗ್ರಹಿಕೆಗೆ ಏನು ಕಾರಣವಾಗಿರಬಹುದು? ಬಹುಶಃ ಅಂದಿನ ವಿದ್ವಾಂಸರು ತಮ್ಮ ಕಾಲ/ಸಂದರ್ಭದ ಸಾಹಿತ್ಯಿಕ ಗ್ರಹಿಕೆಗಳ ಮಿತಿಯಲ್ಲಿ ನೋಡಿದ್ದರಿಂದ ಹಾಗಾಗಿರಬೇಕು ಎನ್ನಬಹುದು. ಆದರೆ, ನಮ್ಮ ಸಂದರ್ಭ ಈ ಅಲಕ್ಷಿತ ಪರಂಪರೆಯನ್ನು ಕುತೂಹಲ ಮತ್ತು ಗಂಭೀರವಾಗಿ ನೋಡಲು ಒತ್ತಾಯಿಸಲಾರಂಭಿಸಿದೆ. ಅಲ್ಲದೆ, ತತ್ವಪದಗಳ ಸಾಂಸ್ಕೃತಿಕ ಮಹತ್ವದ ಕಡೆಗೆ ನಮ್ಮ ಗಮನವನ್ನು ಆ ಅಧ್ಯಯನಗಳು ಸೆಳೆಯಲಾರಂಭಿಸಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಮುಂದುವರಿದು ವಚನ ಚಳುವಳಿಯ ನಂತರ 17, 18 ಮತ್ತು 19ನೆಯ ಶತಮಾನಗಳಲ್ಲಿ ಕೃಷ್ಣಾ, ತುಂಗಭದ್ರಾ ಮತ್ತು ಭೀಮಾನದಿಗಳ 'ಸೀಮೆ'ಗಳಲ್ಲಿ, ತತ್ವಪದಕಾರರೆಂದು ಈಗ ಗುರುತಿಸಲಾಗರುತ್ತಿರುವ ಅನುಭವಿಗಳ ಅನುಭಾವಿ ಚಳುವಳಿಯೊಂದು ವ್ಯಾಪಕವಾಗಿ ಹರಡಿದ್ದಷ್ಟೆ ಅಲ್ಲದೆ ಕ್ರಿಯಾಶೀಲವಾಗಿತ್ತು ಎಂಬ ಅಂಶವನ್ನು ದಾಖಲಿಸುತ್ತಾರೆ.

ಕನ್ನಡದ ಸಾಹಿತ್ಯ ಲೋಕ ಒಳನೋಟಗಳನ್ನು ಹೊಂದಿದ್ದಾಗಿಯೂ ಸಹ ನಮ್ಮ ಬಹುತೇಕ ಸಂಸ್ಕೃತಿ ಅಧ್ಯಯನಗಳು ಮೇಲೆ ತಿಳಿಸಿರುವ ಭೌದ್ಧಿಕ ಮೀತಿಗಳನ್ನು ಮೀರಲು ಸಾಧ್ಯವಾಗುತ್ತಿಲ್ಲ ಕನಕದಾಸರ ಸಾಹಿತ್ಯವನ್ನು ಕುರಿತ ಅಧ್ಯಯನಗಳಲ್ಲೂ ಈ ಅಂಶಗಳು ಪ್ರಭಾವವನ್ನು ಬೀರಿವೆ. ಆ ಹಿನ್ನೆಲೆಯಲ್ಲಿ ಕನಕದಾಸರ ಕುರಿತು ಪ್ರಕಟವಾದ ಸಾಹಿತ್ಯವನ್ನು ಪರಾಮರ್ಶಿಸುವುದು ಮಹತ್ವದ ಸಂಗತಿಯಾಗಿದೆ. ಈ ಪ್ರಯತ್ನದ ಒಟ್ಟು ಉದ್ದೇಶ ನವ್ಯ ಮತ್ತು ನವ್ಯೋತ್ತರ ಕಾಲದಲ್ಲಿ ಕನ್ನಡದ ಸಾಹಿತ್ಯ ಜಗತ್ತು ಜಿಜ್ಞಾಸೆ ನಡೆಸಿದ ಮಹತ್ವದ ಸೈದ್ಧಾಂತಿಕ ಹೊಳಹುಗಳು ಕನಕನ ಕುರಿತ ನಂತರದ ಬರಹಗಳನ್ನು ಪ್ರಭಾವಿಸಿವೆಯೇ? ಪ್ರಭಾವಿಸಿದ್ದರೆ ಅವುಗಳ ಸ್ವರೂಪವೇನು? ಎಂಬುದನ್ನು ಗುರುತಿಸುವುದಾಗಿದೆ.

ಈ ಹಿನ್ನೆಲೆಯಲ್ಲಿ ಕನಕದಾಸರ ಕುರಿತು ಪ್ರಕಟವಾದ ಸಾಹಿತ್ಯವನ್ನು ಅಧ್ಯಯನದ ಉದ್ದೇಶಗಳಿಗೆ ಅನುಗುಣವಾಗಿ ಪರಾಮರ್ಶಿಸಲಾಗಿದೆ. ಹಾಗೆ ನೋಡುವುದಾದರೆ ಕನ್ನಡ ಸಾಹಿತ್ಯ ಲೋಕ ಕನಕದಾಸರ ಕುರಿತು ಸಾಕಷ್ಟು ಸಾಹಿತ್ಯವನ್ನು ಸೃಜಿಸಿದೆ ಅವುಗಳನ್ನೆಲ್ಲಾ ಪಟ್ಟಿ ಮಾಡುವುದು ಕಷ್ಟದ ಕೆಲಸ. ಆ ಕಾರಣಕ್ಕೆ ಸದರಿ ಸಂಶೋಧನೆಗೆ ಪೂರಕವಾದ ಮತ್ತು ಮಹತ್ವ ಅನ್ನಿಸಿದ ಲೇಖನಗಳನ್ನು ಆಧರಿಸಿ ಒಟ್ಟು ಕನ್ನಡದ ಸಂದರ್ಭದಲ್ಲಿ ಕನಕದಾಸರನ್ನು ಗ್ರಹಿಸಿದ ಮಾದರಿಯನ್ನು ಗುರುತಿಸಲಾಗಿದೆ. ಈ ಪ್ರಯತ್ನದ ಒಟ್ಟು ಉದ್ದೇಶ ಕನಕದಾಸರ ಕುರಿತು ಕನ್ನಡ ಸಾಹಿತ್ಯ ಪರಂಪರೆ ತಳೆದಿರುವ ನಿಲುವುಗಳೇನು? ಆ ವಿಶ್ಲೆಷಣೆಗಳು ಬಳಸಿರುವ ಭೌದ್ಧಿಕ ಚೌಕಟ್ಟು ಯಾವುದು ಎಂಬುದನ್ನು ಗುರುತಿಸಿ, ಯಾವ ಅರಿವಿನ ನೆಲೆಯಲ್ಲಿ ಕನಕದಾಸರನ್ನು ವಿಶ್ಲೇಷಿಸಲಾಗಿದೆ? ಎಂಬುದನ್ನು ಅರಿಯುವುದಾಗಿದೆ. ಈ ದಾರಿ ನಮ್ಮ ಮುಂದಿನ ಹಾದಿಯನ್ನು ಸುಗಮವಾಗಿಸಲಿದೆ.

**ಭಾರತೀಯ ಭಕ್ತಿಪಂಥ ಮತ್ತು ಕನಕದಾಸರು (ಡಾ. ಹೆಚ್. ತಿಪ್ಪೇರುದ್ರಸ್ವಾಮಿ)**

ಈ ಲೇಖನದಲ್ಲಿ ಶಕ್ತಿಯನ್ನು ಪ್ರಧಾನವಾದ ಅಂಶವಾಗಿಸಿಕೊಂಡು, ಭಕ್ತಿಯ ಪ್ರಾಮುಖ್ಯತೆ, ಭಕ್ತಿ ಎಂದರೇನು? ಭಕ್ತಿಯನ್ನು ಯಾವ ಹಂತದಲ್ಲಿ ಗುರುತಿಸಲಾಗುತ್ತದೆ, ಭಕ್ತಿಮಾರ್ಗದಲ್ಲಿ ಇರುವ ವಿಭಿನ್ನ ಪಂಥಗಳು ಮತ್ತು ಆ ಪಂಥಗಳಲ್ಲಿನ ಭಕ್ತಿಯ ಸ್ವರೂಪ, ಭಕ್ತಿಯು ಒಳಗೊಂಡಿರುವಂತಹ ಅಂಶಗಳಾವುವು, ಭಕ್ತಿಯ ಸ್ವರೂಪ ಮುಂತಾದ ಅಂಶಗಳ ಬಗ್ಗೆ ಉಲ್ಲೇಖಿಸಲಾಗಿದೆ.

ಇಲ್ಲಿ ಹೇಳಿರುವಂತೆ ಭಕ್ತಿ ಎಂದರೆ, ಒಂದು ಕಡೆಯಲ್ಲಿ ಎಲ್ಲ ಮಾರ್ಗಗಳನ್ನು ಒಳಗೊಳ್ಳುವ ವ್ಯಾಪಕವಾದ ಅರ್ಥವನ್ನು ಪಡೆದಂತೆ ಇನ್ನೊಂದು ಕಡೆಯಲ್ಲಿ ಜ್ಞಾನಮಾರ್ಗಗಳಿಂದ ಬೇರೆಯಾಗಿ ಪರಮ ಪ್ರೇಮರೂಪವಾದ ಭಾವುಕತೆಯನ್ನು ಪ್ರಧಾನವಾಗಿ ಉಳ್ಳ ಸಾಕಾರ ಆರಾಧನೆ. ಈ ಮಾರ್ಗವಾಗಿ ಬೆಳೆದು ಬಂದಿರುವುದನ್ನು ಭಕ್ತಿಪಂಥ ಎಂದು ಹೇಳಲಾಗಿದೆ. ಭಾರತೀಯ ಭಕ್ತಿ ಪರಂಪರೆಗಳಲ್ಲಿನ ವಿವಿದ ರೀತಿಯ ಭಕ್ತಿ ಸೂತ್ರಗಳ ಕುರಿತಾಗಿ ಉಲ್ಲೇಖಿಸಲಾಗಿದೆ. ಹಾಗೆಯೇ ವಿವಿಧ ರೀತಿಯಭಕ್ತಿಯನ್ನು ಚಿತ್ರಿಸಲಾಗಿದೆ. ಅವುಗಳೆಂದರೆ, ನಾರದ ಭಕ್ತಿ, ಕಬೀರ್‌ದಾಸ್, ಸೂರ್‌ದಾಸ್, ಮೀರಾ, ತಲುಸಿದಾಸ್ ಮುಂತಾದವರ ನಿರ್ಗುಣ ಭಕ್ತಿ, ಇವುಗಳಂತೆ ಹರಿದಾಸರ ಭಕ್ತಿಯನ್ನು ಕುರಿತು ವಿವರಿಸಲಾಗಿದೆ.

ಹರಿದಾಸರಲ್ಲಿ ಪ್ರಮುಖರಾದವರು ಪುರಂದರದಾಸರು ಮತ್ತು ಕನಕದಾಸರು. ಇವರುಗಳು ಮತ್ತು ಅನೇಕ ದಾಸರುಗಳು ಹರಿಯ ಮೇಲಿನ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ತಮ್ಮ ಕೀರ್ತನೆಗಳ ಮೂಲಕ ಭಕ್ತಿಯನ್ನು ತೋರಿಸಿದ್ದಾರೆ. ಕನಕದಾಸರ 4 ಕೃತಿಗಳಲ್ಲಿಯೂ ಹರಿದಾಸ ಪರಂಪರೆಯ ಕೊಡುಗೆಯನ್ನು

ನೋಡಬಹುದು ಮತ್ತು ಹರಿದಾಸರು ಅಧ್ಯಾತ್ಮಿಕ ಒಲವನ್ನು ಹೊಂದಿದ್ದು, ಸಾಮಾಜಿಕ ನ್ಯೂನ್ಯತೆಯ ಕಡೆಗೂ ಗಮನಹರಿಸಿದ್ದಾರೆ ಎಂಬುದನ್ನು ಈ ಲೇಖನದಲ್ಲಿ ತಿಳಿಸಲಾಗಿದೆ.

**ಕನಕದಾಸರು ಮತ್ತು ಹರಿದಾಸ ಪರಂಪರೆ (ಡಾ. ಟಿ.ಎನ್. ನಾಗರತ್ನ)**

ಈ ಲೇಖನದಲ್ಲಿ ಕರ್ನಾಟಕದ ದಾಸದ್ವಯರೆಂದೇ ಹೆಸರಾದ ಕನಕದಾಸ ಮತ್ತು ಪುರಂದರದಾಸರು 'ಹರಿದಾಸ ಸಾಹಿತ್ಯದ ಅಶ್ವಿನಿದೇವತೆ'ಗಳೆಂದು ಗುರುತಿಸಲಾಗಿದೆ. ಈ ಹರಿಭಕ್ತರಿಗೆ ತನ್ನದೇ ಆದ ಹಿನ್ನೆಲೆ ಇದೆ. ಆ ಹಿನ್ನೆಲೆಯನ್ನು ಪ್ರಸ್ತುತಪಡಿಸಲಾಗಿದೆ. ಹರಿದಾಸರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಇಲ್ಲಿ ತಿಳಿಸಲಾಗಿದೆ.

ಇತಿಹಾಸ ಅಥವಾ ಹಿನ್ನೆಲೆಯ ಕುರಿತು ಹೇಳುವದಾದರೆ, 700 ವರ್ಷಗಳ ಹಿಂದೆ ಕರ್ನಾಟಕದಲ್ಲೆ ಹುಟ್ಟಿ ತಮ್ಮ ದೈವತ್ವದಿಂದ ಪ್ರಖ್ಯಾತರಾದ ಶ್ರೀಮನ್ಮಧ್ವಾಚಾರ್ಯರ ತಾತ್ವಿಕ ನೆಲೆಯೇ ಹರಿದಾಸರ ಹಿನ್ನೆಲೆಯಾಗಿದೆ. ಮಧ್ವಾಚಾರ್ಯರ ಅನುಯಾಯಿಗಳು ಶ್ರೀಹರಿಯ ಭಕ್ತರಾಗಿದ್ದು ಒಂದು ಪರಂಪರೆಯನ್ನು ಸೃಷ್ಟಿಸಿದರು. ಹಾಗೆಯೇ ವಚನಕಾರರು, ಆಳ್ವಾರರಂತೆಯೇ ಇವರು ಕೂಡ ಹಲವಾರು ಕೃತಿಗಳ ಮೂಲಕ ಹರಿದಾಸ ಸಾಹಿತ್ಯವನ್ನು ರಚಿಸಿ ಶ್ರೀಪಾದರಾಯರು, ವಾದಿರಾಜರು, ಪುರಂದರ, ಕನಕ ಮುಂತಾದವರನ್ನು ಶಿಷ್ಯರನ್ನಾಗಿ ಪಡೆದು ತಮ್ಮ ಪರಂಪರೆಯನ್ನು ಸಮರ್ಥವಾಗಿ ಮುನ್ನೆಡೆಸಿದರು ಎಂಬುದಾಗಿ ತಿಳಿಸಲಾಗಿದೆ.

ಈ ಲೇಖನದಲ್ಲಿ ಹರಿದಾಸರ ಹಿನ್ನೆಲೆಯ ಜೊತೆಗೆ ಅವರ ಸಾಧನೆಗಳನ್ನು ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಅದನ್ನು ನೋಡುವುದಾದರೆ, ಹರಿಭಕ್ತಿಯನ್ನು ಮನೆ ಮನೆಗೆ ಬಿತ್ತುವ ಜೊತೆಗೆ, ಜನಸಾಮಾನ್ಯರನ್ನು ಸನ್ಮಾರ್ಗದಲ್ಲಿ ನಡೆಸುವ ಯತ್ನವನ್ನು ಮಾಡಿದ್ದಾರೆ. ಕನಕದಾಸರು ಆತ್ಮೋನ್ನತಿಯ ಜೊತೆಗೆ ಸಮಾಜದ ಉನ್ನತಿಗೂ ಶ್ರಮಿಸಿದ್ದಾರೆ. ಇವರು ಅನೇಕ ಕೃತಿಗಳು, ಕೀರ್ತನೆಗಳನ್ನು ರಚಿಸುವ ಮೂಲಕ ಕವಿಗಳು ಆಗಿದ್ದಾರೆ. ದಾಸರಲ್ಲೇ ಕ್ರಾಂತಿಕಾರಕ ಮನೋಭಾವವನ್ನು ಉಳ್ಳವರು ಇವರಾಗಿದ್ದಾರೆ. ಕನಕದಾಸರು ಮೊದಲು ಮಾಧ್ವ ತತ್ವಗಳನ್ನು ಅನುಸರಿಸಿ ಭಕ್ತಿ ಸಾಧನೆ ಮಾಡಿದ್ದಾರೆ. ಇವರು ಸುಗುಣ ಭಕ್ತರು, ಇವರ ಸರ್ವಸ್ವವು ಶ್ರೀ ಹರಿಯಾಗಿದ್ದಾನೆ. ಮುಕ್ತಿಗೆ ಮಾರ್ಗ ಹರಿಯಾಗಿದ್ದಾನೆ ಎಂಬುದಾಗಿಯೂ ನಂಬಿದ್ದರು. ಅಷ್ಟೇ ಅಲ್ಲದೆ ಕನಕರು ಭಾಗವತ ಮನೋಧರ್ಮಕ್ಕೂ ಸಾಕ್ಷಿಯಾಗಿದ್ದಾರೆ. ಹಾಗೆಯೇ ಮತವನ್ನು ಮೀರಿದ ಭಕ್ತರು ಆಗಿದ್ದಾರೆ. ಕನಕದಾಸರ ಕೃತಿಗಳನ್ನು ಗಮನಿಸಿದರೆ ಅವುಗಳಲ್ಲಿ ಜ್ಞಾನ, ಭಕ್ತಿ, ವೈರಾಗ್ಯದ ಅಂಶಗಳು ಕಂಡುಬರುತ್ತವೆ ಎಂಬುದನ್ನು ವಿವರಿಸಲಾಗಿದೆ.

ಕಾಲಾನಂತರದಲ್ಲಿ ಮುಸ್ಲಿಮರಿಂದ ದಾಸ ಸಾಹಿತ್ಯ ಮೂಲೆಗುಂಪಾಯಿತು. ಆಗ ದಾಸ ಸಾಹಿತ್ಯವು ಒಂದು ತಿರುವು ಪಡೆಯಿತು. ಅದೆಂದರೆ, ಭಕ್ತಿ ಸಾಧನೆಯ ಜೊತೆಗೆ ಮತ ಪ್ರಚಾರದ ಕಾರ್ಯವನ್ನು ಮಾಡಬೇಕಾಯಿತು. ಆದ್ದರಿಂದ ದಾಸ ಪರಂಪರೆ ತತ್ವದತ್ತ ಶಾಸ್ತ್ರದತ್ತ ವಾಲಿತು. ಹಾಗೆಯೇ 2 ಘಟ್ಟಗಳಾಗಿ ದಾಸ ಸಾಹಿತ್ಯವನ್ನು ವಿಂಗಡಿಸಲಾಗಿದೆ. ಒಂದನೆಯದಾಗಿ, ಶ್ರೀ ಪಾದರಾಯ ರಿಂದ ಪುರಂದರ, ಕನಕರ ಕಾಲದವರೆಗಿನ ಕಾಲಘಟ್ಟ ಎರಡನೆಯದಾಗಿ, ವಿಜಯದಾಸರಿಂದ ಪ್ರಸನ್ನ ವೆಂಕಟದಾಸರವರೆಗಿನ ಕಾಲಘಟ್ಟ ಈ ಎರಡನೇ ಕಾಲಘಟ್ಟದಲ್ಲಿ ಕಾವ್ಯಮಯತೆ, ಪಂಚಭಾವಗಳ ವಿಸ್ತೃತಿ, ಜೀವನಾನುಭವದ ಸಾಮಾಜಿಕ ಕಳಕಳಿ ಮರೆಯಾಗಿ ಇವುಗಳಿಗಿಂತ ಹೆಚ್ಚಿನದಾಗಿ ಮತೀಯ ಸಾಹಿತ್ಯ ವಾಗಿ ದಾಸ ಪರಂಪರೆ ಬೆಳೆಯಿತು ಎಂಬ ವಾದವನ್ನು ಮಂಡಿಸಿದ್ದಾರೆ.

**ಕನಕದಾಸರು ಅಧ್ಯಾತ್ಮ ಶೋಧನೆ ಮತ್ತು ಆತ್ಮ ಶೋಧನೆ (ಎಂ.ವಿ. ಸೀತಾರಾಮಯ್ಯ)**

ಈ ಲೇಖನವು ಕನಕದಾಸರಲ್ಲಿನ ಅಧ್ಯಾತ್ಮ ಅಂಶಗಳನ್ನು ಕುರಿತು ಹೇಳುತ್ತದೆ. ಹಾಗೆಯೇ ಆ ಅಧ್ಯಾತ್ಮಿಕ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ. ಆತ್ಮಶೋಧ ಎಂದರೆ ಆತ್ಮಿ ನಿರೀಕ್ಷಣ, ಅಂತರ್ಮುಖಿಯಾಗಿ ತನ್ನಲ್ಲಿರುವ ಎಂದರೆ ತನ್ನ ತನು–ಮನಕ್ಕೆ ಸದ್ಯದ ಜನ್ಮದಲ್ಲಿರುವ ಮತ್ತು ಜನ್ಮ ಜನ್ಮಾಂತರಗಳಲ್ಲಿ ಅಂಟಿಕೊಂಡು ಬಂದಿರುವ ಐಹಿಕ ಕಲ್ಮಷಗಳನ್ನು ತೊಳೆದುಹಾಕುವುದು. ಈ ಆತ್ಮಶೋಧನೆ ಧಾರ್ಮಿಕ ನಂಬಿಕೆಗಳಿಗೆ ಅನುಗುಣವಾಗಿ ಬೇರೆಯಾಗಿರುತ್ತದೆ ಎಂಬಂತೆ ವಿವರಿಸುತ್ತದೆ.

ಕನಕದಾಸರಲ್ಲಿರುವ ಭಕ್ತಿ ಮತ್ತು ಅಧ್ಯಾತ್ಮವನ್ನು ಕುರಿತು ಹೇಳುವುದಾದರೆ, ವಿಶಿಷ್ಟಾದ್ವೈತಕ್ಕೂ ದ್ವೈತಕ್ಕೂ ಸರಿಸಮಾನವಾಗಿ ಹರಿಭಕ್ತಿ ಕಂಡುಬರುತ್ತದೆ. ಇಲ್ಲಿ ಶಕ್ತಿ ಎಂದರೆ ಪ್ರಕೃತಿ, ಯುಕ್ತಿ ಸಾಧನೆಗೆ ಭಕ್ತಿ ಮಾರ್ಗ ಏಕೈಕ ಮಾರ್ಗೋಪಾಯ ಮತ್ತು ವೈರಾಗ್ಯದ ಅಗತ್ಯವನ್ನು ಹೇಳಿದೆ. ಕನಕದಾಸರು ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವ ಪ್ರಣತೆಯನ್ನು ತೋರಿಸಿ ನಂತರ ಹರಿಭಕ್ತರಾದರು. ಆದರೂ ಶಿವನನ್ನು ಕೂಡ ಸ್ಮರಿಸುತ್ತಿದ್ದರು ಮತ್ತು ಹರಿಭಕ್ತಿ ಸಂವೇದನೆಗೆ ಶಿವನ ಸ್ಮರಣೆ ಅಗತ್ಯವೆಂದು ಹೇಳುತ್ತಾ ಹರಿಹರನ ಸಮಾನತೆಯನ್ನು ಎತ್ತಿಹಿಡಿದಿದ್ದಾರೆ ಎಂಬುದನ್ನು ವಿಶಿಷ್ಟವಾಗಿ ತೋರಿಸಿದ್ದಾರೆ.

ಕನಕದಾಸರು ವೈಷ್ಣವರಾಗಿ ಭಾಗವತ ಪರಂಪರೆಯವರಾಗಿ ಇದ್ದುಕೊಂಡು ಅವುಗಳಿಂದೆಲ್ಲಾ ಮುಕ್ತರಾಗಿ ಆಧ್ಯಾತ್ಮ ಸಾಧಕರಾಗಿದ್ದಾರೆ. ಇವರಲ್ಲಿ ಸರ್ವಮತ ಸಮನ್ವಯ ದೃಷ್ಟಿ, ಪರಮತ ಸಹಿಷ್ಣುತೆ ಕಂಡುಬರುತ್ತದೆ. ಯೋಗ ಮಾರ್ಗದಲ್ಲಿ ನಿರ್ಗುಣ ಬ್ರಹ್ಮ ಸಾಕ್ಷಾತ್ಕಾರ ಎಂಥವರಿಗಾಗುತ್ತದೆ ಎಂಬುದನ್ನು ತಿಳಿಸಿದ್ದಾರೆ. ಹಲವು ಕೀರ್ತನೆಗಳು ಕನಕರ ಆಧ್ಯಾತ್ಮದ ಪ್ರವೃತ್ತಿಯನ್ನು ಎತ್ತಿಹಿಡಿಯುತ್ತವೆ,

ಉದಾ: 'ಯೋಗ ಸಿದ್ಧಿಯನ್ನು ಪಡೆದವನೆ ಯೋಗಿ' ಮುಂತಾದವು. ಆಧ್ಯಾತ್ಮದ ಜೊತೆಯಲ್ಲಿಯೇ ಮೇಲ್ಜಾತಿಯವರ ವಿರುದ್ಧ ಧ್ವನಿ ಎತ್ತಿ, ಕುರುಬ ಜನಾಂಗದ ಕುರಿತಾಗಿ ಸೊಲ್ಲೆತ್ತಿದ್ದಾರೆ, ಉದಾ: 'ಕುಲ ಕುಲವೆಂದು ಹೊಡೆದಾಡದಿರಿ' ಎಂಬಂತಹ ಕೀರ್ತನೆಗಳು. ಒಟ್ಟಿನಲ್ಲಿ ಕನಕದಾಸರು ತಮ್ಮ ಜೀವನದ ಎಲ್ಲಾ ಘಟನೆಗಳನ್ನು ಪರಮಾತ್ಮನಿಗೆ ಅರ್ಥೈಸಿದ್ದಾರೆ. ವಚನಕಾರರಲ್ಲಿ ಇದಂತಹ 'ಲಿಂಗ ಪತಿ ಶರಣ ಸತಿ' ಎಂಬಂತಹ ಭಾವನೆಯನ್ನು ಇವರಲ್ಲಿ ಕಾಣಬಹುದು ಹಾಗೆಯೇ ಆಧ್ಯಾತ್ಮದ ತುತ್ತ ತುದಿಯನ್ನು ಇವರು ತಲುಪಿದ್ದಾರೆ ಎಂಬುದಾಗಿ ಈ ಲೇಖನವು ಪ್ರಸ್ತುತಪಡಿಸುತ್ತದೆ.

**ಕನಕದಾಸರ ಕೀರ್ನೆಗಳಲ್ಲಿ ಸಾಹಿತ್ಯ ಮೌಲ್ಯ (ಶ್ಯಾಮಸುಂದರ ಬಿದರಕುಂದಿ)**

ಈ ಲೇಖನದಲ್ಲಿ ಕನಕದಾಸರ ಕೀರ್ತನೆಗಳು ಮತ್ತು ಕೃತಿಗಳಲ್ಲಿ ಅಡಕವಾಗಿರುವ ಸಾಹಿತ್ಯ ಮೌಲ್ಯವನ್ನು ವಿವರಿಸಲಾಗಿದೆ. ಕನಕದಾಸರನ್ನು 'ದಾಸ ಕವಿ' ಎಂಬುದಾಗಿಯೆ ಹೇಳಲಾಗುತ್ತದೆ. ಇವರು ಕವಿಯು ಹೌದು, ದಾಸರು ಹೌದು. ಆದರೂ ಈ ಎರಡು ರೀತಿಯ ಸೃಜನಶೀಲ ವ್ಯಕ್ತಿತ್ವ ಪರಸ್ಪರ ವಿರುದ್ಧವಾಗಿರದೆ ಅವು ಒಂದಕ್ಕೊಂದು ಪೂರಕವಾಗಿ ವ್ಯಕ್ತವಾದವು. ಇದು 2 ಹಂತಗಳನ್ನು ಹೊಂದಿದೆ.

ಕನಕದಾಸರ ಒಟ್ಟು ಸಾಹಿತ್ಯವು ಭಕ್ತಿ ತತ್ವದ ಮೇಲೆಯೇ ನಿಂತಿದ್ದು, ಸಾರ್ಥಕ ಜೀವನದ ಕಲ್ಪನೆಗಳನ್ನು, ಧಾರ್ಮಿಕ ಆಚರಣೆಯ ಸಾಧನೆಗಳನ್ನು ತೋರಿಸುತ್ತದೆ. ಕನಕದಾಸರ ಕೀರ್ತನೆಗಳು ಸಂಸ್ಕೃತ ಕವಿತೆಯ ಅಲೌಕಿಕತೆ, ಧಾರ್ಮಿಕ ಸಾಹಿತ್ಯದ ಸಂಸ್ಕಾರಗಳಿಂದ ಪ್ರಭಾವಿತಗೊಂಡಿದೆ. ದಾಸ ಸಾಹಿತ್ಯಕ್ಕೆ ಕಾವ್ಯ ಧರ್ಮವೆ ಪ್ರಮುಖವಾಗಿರಲಿಲ್ಲ. ಅದಕ್ಕಿಂತ ಹೆಚ್ಚಿನದಾಗಿ ಜನಸಾಮಾನ್ಯರ ಜೀವನ ಮೌಲ್ಯವನ್ನು ತಿಳಿಸುವಂತದ್ದಾಗಿದೆ. ಹಾಗೆಯೇ ಕೀರ್ತನೆಗಳು ಕೇವಲ ಧಾರ್ಮಿಕ, ಆಧ್ಯಾತ್ಮಿಕ ಮಾರ್ಗದ ಏಕತಾನದ ಧೋರಣೆ ಮಾತ್ರ ಕಾಣದೆ, ಬೆಳವಣಿಗೆಯನ್ನೂ ಕಾಣಬಹುದಾಗಿದೆ. ಇದರಲ್ಲಿ ವಸ್ತು, ವ್ಯಕ್ತಿ, ಭಾಷೆಗಳ ಹಾರ್ದಿಕವಾದ ಹೊಂದಾಣಿಕೆಯೊಂದಿದೆ ಎಂಬುದಾಗಿ ಚಿತ್ರಿಸಿದ್ದಾರೆ.

ಕನಕರ ಕೀರ್ತನೆಗಳ ನಿರೂಪಣೆಗಳ ಧಾಟಿಯನ್ನು ಇಲ್ಲಿ 4 ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಮತ್ತು ಅವುಗಳಿಗೆ ಅನುಗುಣವಾಗಿಯೇ ಕೀರ್ತನೆಗಳ ಸ್ವರೂಪವನ್ನು ತಿಳಿಸಿದ್ದಾರೆ.

1. ಸ್ವಗತದ ದಾಟಿ: ಅಂತರಾತ್ಮವನ್ನು ಕುರಿತು.
2. ಆರಾಧ್ಯ ದೈವ: ಕಾಗಿನೆಲೆ ಆದಿ ಕೇಶವನನ್ನು ಕುರಿತು.

3. ಭಕ್ತರು, ದಾಸರು, ಸಾಧಕರನ್ನು ಕುರಿತು.
4. ಜನಸಾಮಾನ್ಯರನ್ನು ಕುರಿತು

ಹೀಗೆ ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ.

ಪ್ರಸ್ತುತ ಲೇಖನವು ತಿಳಿಸುವಂತೆ ಕೀರ್ತನೆಗಳಲ್ಲಿ ಮುಖ್ಯವಾಗಿ ಕಂಡು ಬರುವ ಅಂಶಗಳನ್ನು ಹೇಳುವುದಾದರೆ, ಚಂಚಲ ಮನಸ್ಸಿಗೆ ಶ್ರದ್ಧೆ, ನಂಬಿಕೆ ತಳಹದಿ ಹಾಕಿಕೊಳ್ಳುವ ಭಾಗವನ್ನು ಕಾಣುತ್ತವೆ. ವೈರಾಗ್ಯದ ಸುಗುಣಗಳನ್ನು ಕೆಡಿಸುವಂತಹ ಲೌಕಿಕ ದುರ್ಗುಣಗಳನ್ನು ನಿವಾಸಿಕೊಳ್ಳುವ ಹೊಣೆ ಸಾಧಕನ ಧರ್ಮ ಎಂಬುದು ಕಾಣುತ್ತದೆ ಮತ್ತು ಸರ್ವಾರ್ಪಣ ದೃಷ್ಟಿಯು ಕಾಣುತ್ತದೆ. ಕೀರ್ತನೆಗಳಲ್ಲಿ ಭಾವ ನಿರ್ಭಿಡತೆಯು ಮುಖ್ಯಾಂಶವಾಗಿದೆ. ಒಂದು ಅಮೂರ್ತ ಅವ್ಯಕ್ತ ಭಾವದ ನೆಲೆಯಿಂದ ಆರಂಭವಾಗಿ, ಮೂರ್ತವೂ ಸ್ಪಷ್ಟವೂ ಆದ ವಾಸ್ತವಿಕ ಅನುಭವಗಳನ್ನು ಮೈಗೂಡಿಸಿಕೊಂಡು, ಧನ್ಯತೆ ಕೃತಜ್ಞತೆಯ ಹಾರ್ದಿಕ ಭಾವದವರೆಗೆ ಬೆಳೆಯುವ ಕಾವ್ಯವಸ್ತು, ಭಾವಗೀತೆಯ ಸಾವಯವ ರಚನಾಗುಣವನ್ನು ಕೀರ್ತನೆಗಳಲ್ಲಿ ಕಾಣಬಹುದು. ಅದರಂತೆಯೆ ಭಕ್ತಿ, ಜ್ಞಾನ, ವೈರಾಗ್ಯ ಮನಃಸ್ಥಿತಿಗಾಗಿ ಬೇಡುತ್ತಾ ಬೆಳೆಯುವ ಭಾವನಾವರಣ ಮನಸ್ಸನ್ನು ತಲ್ಲಣಗೊಳಿಸುವಂತಹ ಅಂಶಗಳನ್ನು ಈ ಕೀರ್ತನೆಗಳು ಒಳಗೊಂಡಿವೆ ಎಂದಬುದಾಗಿ ಒಟ್ಟಾರೆ ಲೇಖನವು ತಿಳಿಸುತ್ತದೆ.

## ಕನ್ನಡ ಸಾಹಿತ್ಯದಲ್ಲಿ ಕನಕದಾಸರ ಸ್ಥಾನ (ಡಾ. ಡಿ.ಕೆ. ರಾಜೇಂದ್ರ)

ಈ ಲೇಖನವು ಮುಖ್ಯವಾಗಿ 3 ಭಾಗಗಳನ್ನು ಒಳಗೊಂಡಿದೆ. ಪ್ರತಿಯೊಂದು ವಿಭಾಗದಲ್ಲು ಒಂದೊಂದು ವಿಷಯಗಳನ್ನು ತೆಗೆದುಕೊಂಡು ಚರ್ಚಿಸಲಾಗಿದೆ. ಎಲ್ಲಾ ಭಾಗಗಳಲ್ಲು ಕನ್ನಡ ಸಾಹಿತ್ಯದಲ್ಲಿ ಕನಕದಾಸರ ಸ್ಥಾನಮಾನವನ್ನು ಕುರಿತಾಗಿ ವಿವರಿಸಲಾಗಿದೆ.

ಮೊದಲನೇ ಭಾಗದಲ್ಲಿ ಕನಕದಾಸರ ವೈಶಿಷ್ಟ್ಯತೆಯನ್ನು ತಿಳಿಸಲಾಗಿದೆ. ಲೇಖಕರು ತಿಳಿಸುವಂತೆ, ಕನಕದಾಸರು ಕವಿಯೂ ಹೌದು, ಕಲಿಯೂ ಹೌದು ಎಂಬುದಾಗಿ ತಿಳಿಸುತ್ತಾ, ಕನ್ನಡದಲ್ಲಿ ಕನಕದಾಸರ ಸ್ಥಾನ ಉನ್ನತವಾಗಿದೆ ಎಂಬುದಾಗಿ ಹೇಳಿದ್ದಾರೆ. ಕನಕರ ಕೀರ್ತನೆಗಳು ಭಕ್ತಿ ಭಾವದಿಂದ ಕೂಡಿದ್ದು ಹಾಗೆಯೆ ಅವರ ಕಾವ್ಯ ವೈಖರಿಗಳನ್ನು ಸರಿಯಾಗಿ ನೋಡಿದರೆ ಕವಿಯಾಗಿಯೂ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಅಧ್ಯಯನದ ದೃಷ್ಟಿಯಿಂದ ಇವುಗಳನ್ನು 2 ವಿಭಾಗಗಳನ್ನಾಗಿ ಮಾಡಿಕೊಳ್ಳಬಹುದು.

1. ಕೀರ್ತನೆಗಳ ಮೂಲಕ ಭಕ್ತಿ ಭಾವವನ್ನು ತೋರಿಸುವುದು.

2. ಇನ್ನುಳಿದ ಕೃತಿಗಳಲ್ಲಿ ಕಾವ್ಯ ಶಕ್ತಿಯನ್ನು (ಸ್ಥಾಯಿಯಾದ ವಿಚಾರಗಳು) ತೋರಿಸುವುದು. ಈ ರೀತಿಯಲ್ಲಿ ವಿಂಗಡಣೆ ಮಾಡಿಕೊಂಡು ಕನಕದಾಸರ ಕುರಿತಾಗಿ ಅಭ್ಯಸಿಸಬಹುದು ಎಂಬುದಾಗಿ ತಿಳಿಸುತ್ತಾರೆ.

ಆದರೂ ಲೇಖಕರ ಈ ವಿಂಗಡಣೆಯು ಪೂರ್ತಿಯಾಗಿ ಸರಿ ಹೊಂದುವುದಿಲ್ಲ. ಏಕೆಂದರೆ ಕೀರ್ತನೆಗಳು ಕೇವಲ ಭಕ್ತಿ ಭಾವವನ್ನು ಮಾತ್ರ ಹೊಂದಿರದೆ, ಅವುಗಳು ಕಾವ್ಯ ಶಕ್ತಿಯನ್ನೂ ಸಹ ಹೊಂದಿವೆ. ಕಾವ್ಯವಲ್ಲದೆ ಇದ್ದರೆ ಕೀರ್ತನೆಗಳು ಜನಸಾಮಾನ್ಯರಲ್ಲಿ ಇಷ್ಟು ಸಲಭವಾಗಿ ಉಳಿಯುತ್ತಿರಲಿಲ್ಲ ಎಂಬುದಾಗಿಯೂ ಹೇಳುತ್ತಾರೆ.

ಎರಡನೇ ಭಾಗದಲ್ಲಿ ವಚನಕಾರರಾಗಲಿ, ಕೀರ್ತನಾಕಾರರಾಗಲಿ ಭಕ್ತಿಗೆ ಪ್ರೇರಿತರಾದವರು. ಆದರೆ ಅಷ್ಟಕ್ಕೆ ನಿಲ್ಲದೆ ಮೊದಲು ಅವರು ಪರಿಶುದ್ಧತೆಗೆ ಒತ್ತನ್ನು ಕೊಟ್ಟವರಾಗಿದ್ದಾರೆ. ಆದ್ದರಿಂದ, ಸಮಾಜದ ನಾನಾ ವರ್ಗದ ಜನಸಾಮಾನ್ಯರಲ್ಲಿರುವ ಕೊರತೆಗಳನ್ನು ಎತ್ತಿ ತೋರಿಸಿ, ಅವುಗಳನ್ನು ದೂರ ಮಾಡಲು ಶ್ರಮಿಸಿದವರು. ಆದ್ದರಿಂದ ಕೀರ್ತನಕಾರರಲ್ಲಿ ಅಥವಾ ದಾಸರಲ್ಲಿ ಸಾಮಾಜಿಕ ಪ್ರಜ್ಞೆ ಹೆಚ್ಚಾಗಿ ಕಂಡುಬರುತ್ತದೆ. ಈ ಪ್ರಜ್ಞೆಯನ್ನು ಆದರಲ್ಲೂ ಕನಕದಾಸರ ಕೀರ್ತನೆಗಳಲ್ಲಿ ಹೆಚ್ಚು ಕಾಣಬಹುದು. ಯಾಕೆಂದರೆ, ಕನಕದಾಸರು ಕೆಳ ಸಮುದಾಯದಿಂದ ಬಂದದ್ದರಿಂದ, ಕೆಳ ವರ್ಗದ ಆಗು–ಹೋಗುಗಳನ್ನು ಅರಿತವರಾಗಿದ್ದರು. ಆದ್ದರಿಂದ ಅವರ ಕೀರ್ತನೆಗಳಲ್ಲಿ ಸಮಾಜದ ಧರ್ಮ ಯಾವುದು, ಸತ್ಯ ಎಂದರೆ ಏನು ಎಂಬುದಾಗಿ ತಿಳಿಸುತ್ತಾ, ಜಾತಿ, ಮತ, ಭೇದಗಳು ಬಂದಾಗ ಕಟುವಾಗಿಯೇ ಟೀಕಿಸಿದ್ದಾರೆ ಎಂಬುದಾಗಿ ಲೇಖಕರು ತಿಳಿಸುತ್ತಾರೆ. ಇದಕ್ಕೆ ಅನುಗುಣವಾಗಿ ಕೀರ್ತನೆಗಳು ರಚನೆಯಾಗಿವೆ. ಉದಾಹರಣೆಗೆ: ಕುಲ ಕುಲವೆನ್ನುತಿಹರು ಕುಲ ಯಾವುದು ಎಂಬಿತ್ಯಾದಿ.

ಲೇಖಕರು ದಾಸರನ್ನು ಗುರುತಿಸುವಾಗ ಅವರ ಚಿಂತನೆಗಳಲ್ಲಿನ ಸಾಮಾಜಿಕ ಕಳಕಳಿ ಮತ್ತು ಸಮಾಜದ ಸುಧಾರಣಾ ತತ್ತ್ವಗಳಿಗೆ ಆದ್ಯತೆಯನ್ನು ನೀಡಿದ್ದರು ಎಂಬುದಷ್ಟನ್ನೇ ಹೇಳದೇ, ದಾಸರು ಭಕ್ತಿ–ಭಾವದ ಚಿಂತನೆಗಳಿಗೂ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು ಎಂಬುದನ್ನು ಗುರುತಿಸುತ್ತಾರೆ. ಸಾಮಾಜಿಕ ಹೋರಾಟಗಳು, ಭಕ್ತಿ ಭಾವ ಆಧ್ಯಾತ್ಮದಂತಹ ವಿಚಾರಗಳಿಗೂ ಒಂದಕ್ಕೊಂದು ವಿರುದ್ಧವಾಗಿದ್ದರೂ ಅವೆರಡನ್ನು ದಾಸರು ಒಟ್ಟಿಗೆ ತರುವಂತಹ ಕೆಲಸವನ್ನು ಮಾಡಿದ್ದಾರೆ. 'ರಾಮಧಾನ್ಯ ಚರಿತೆ' ಯಂತಹ ಕೃತಿಗಳಲ್ಲಿ ಸಾಮಾಜಿಕ ಧೋರಣೆ, 'ಹರಿಭಕ್ತಿಸಾರ' ದಂತಹ ಕೃತಿಗಳಲ್ಲಿ ಭಕ್ತ ಭಾವ ಇವುಗಳಿಗೆ ಮಾತ್ರ ಸೀಮಿತವಾಗದೆ 'ನಳ ಚರಿತ್ರೆ', 'ಮೋಹನ ತರಂಗಿಣಿ'ಗಳಂತಹ ಕೃತಿಗಳಲ್ಲಿ ಶೃಂಗಾರ ಭಾವವನ್ನು

ಕಾಣಬಹುದು. ಈ ಭಾವವು ಕನಕದಾಸರ ಸಾಹಿತ್ಯ ಪ್ರೇಮವನ್ನು ತೋರಿಸುತ್ತದೆ. ಕನಕದಾಸರು ಕವಿಯಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸ್ಥಾನವನ್ನು ಪಡೆದಿದ್ದಾರೆ ಎಂಬುದಾಗಿ ಪ್ರಸ್ತುತ ಲೇಖನವು ತೋರಿಸುತ್ತದೆ.

**ಕನಕದಾಸರ ಸಾಹಿತ್ಯದ ಮೇಲೆ ಅವರ ಹಿಂದಿನ ಮತ್ತು ಅವರ ಸಮಕಾಲೀನ ಕವಿಗಳ ಪ್ರಭಾವ (ಎಂ.ವಿ. ಶ್ರೀನಿವಾಸಮೂರ್ತಿ)**

ಈ ಲೇಖನವು ಕನಕದಾಸರ ಕೀರ್ತನೆಗಳ ಮಹತ್ವವನ್ನು ತಿಳಿಸುತ್ತದೆ. ಇಲ್ಲಿ ಲೇಖಕರು ಕನಕದಾಸರ ಕೀರ್ತನೆಗಳಿಗೆ ಒಲವನ್ನು ತೋರಿಸಿರುವುದು ಕಂಡುಬರುತ್ತದೆ. ಇಲ್ಲಿ ಲೇಖಕರ ಪ್ರಮುಖ ಅಂಶವೆಂದರೆ, ಕನ್ನಡ ಸಾಹಿತ್ಯದಲ್ಲಿ ಸಮಕಾಲೀನ ಮತ್ತು ಪರಂಪರಾಗತ ಮೌಲ್ಯಗಳೆರಡಕ್ಕೂ ಒಟ್ಟಿಗೆ ಸ್ಪಂದಿಸಿ, ಸಾಮಾನ್ಯ ಜನತೆಯ ಹಿತಕ್ಕಾಗಿ ದುಡಿದ ಎರಡು ತಂಡಗಳು ಕಾಣುತ್ತವೆ. ಅವುಗಳೆಂದರೆ, ಶರಣರು ಮತ್ತು ದಾಸರು. ಇವರು ಆಂತರಿಕ ಅವಶ್ಯಕತೆ ಮತ್ತು ಸಾರ್ವಜನಿಕ ಒತ್ತಡಗಳಿಂದ ಮೌಲಿಕ ಕ್ರಾಂತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು ಎಂಬುದಾಗಿದೆ.

ಮುದುವರಿದು ಲೇಖನವು ಕನಕರ ಕೀರ್ತನೆಗಳ ರಚನೆಗೆ ಸ್ಫೂರ್ತಿಯಾದ ಅಂಶಗಳನ್ನು ಮುಂದಿನಂತೆ ವಿವರಿಸುತ್ತದೆ. ದಾಸ ಪರಂಪರೆಯಲ್ಲಿ ದಾಸ ಕವಿಗಳು ಎಂಬ ಹೆಗ್ಗಳಿಕೆಯನ್ನು ಪಡೆದವರು ಕನಕದಾಸರು. ಇವರ ಕೀರ್ತನೆಗಳು ಪುರಂದರ ಕೀರ್ತನೆಗಳಂತೆಯೇ ಮಹತ್ವವನ್ನು ಹೊಂದಿದ್ದು, ಇವುಗಳಲ್ಲಿ ಕಾವ್ಯ ಗುಣ ಹೆಚ್ಚಿನದಾಗಿ ಕಾಣಬಹುದು ಮತ್ತು ಪುರಾಣ, ಇತಿಹಾಸ ಕಾವ್ಯಗಳ ಆಳವಾದ ಅಭ್ಯಾಸ ಪರಿಚಯಗಳ ತಿಳುವಳಿಕೆ, ಇವೆಲ್ಲವುದರ ಜೊತೆಗೆ ಸಾಮಾಜಿಕ ನಿಲುವು ಕಂಡುಬರುತ್ತದೆ. ಈ ಒಂದು ದೃಷ್ಟಿಕೋನವೇ ಕನಕದಾಸರ ವಿಶಿಷ್ಟತೆಯಾಗಿದೆ. ಉದಾ: ಕುಲದ ಮೀಮಾಂಸೆ ಮಾಡಿರುವುದು.

ಕುಲದ ಕುರಿತಾಗಿ ಇರುವ ಅಂಶವನ್ನು ಲೇಖಕರು ಕ್ಷಾತ್ರ ಯುಗದ ಶಕುಂತಲೆಗೂ, ಶರಣರ ಬಸವಣ್ಣ, ಅಕ್ಕಮಹಾದೇವಿಗೂ, ದೇವರ ದಾಸಿಮಯ್ಯನಿಗೂ, ಪಂಪನಿಗೂ ಹೋಲಿಸಿದ್ದಾರೆ. ಇಡೀ ಮಾನವ ಕುಲಕ್ಕೆ ಯಾವ ಕುಲ, ಎಲ್ಲಾ ಭಕ್ತರಾಗಿರುವಾಗ ಈ ದೇಹಕ್ಕೆ ಯಾವ ಕುಲ ಎಂಬಂತಹ ಪ್ರಶ್ನೆಗಳನ್ನು ಕೇಳಿಕೊಳ್ಳಲಾಗಿದೆ. ಹಾಗೆಯೇ ಜ್ಞಾನ ವಿಚಾರಕ್ಕೆ ಸಂಬಂದಿಸಿದಂತೆ, ತಾತ್ವಿಕ ಜಿಜ್ಞಾಸೆಯನ್ನು ಮಂಡಿಸಿದ್ದಾರೆ. ಇದು ಸೌಂದರ್ಯ ಜಿಜ್ಞಾಸೆಯಾಗಿಯೂ ಮೂಡಿ ಬಂದಿದೆ. ಇಂತಹ ಜಿಜ್ಞಾಸೆಗೆ ಭಗವದ್ಗೀತೆ ಪ್ರೇರಣೆಯನ್ನು ನೀಡಿದೆ. ಹಾಗೆಯೇ ಕಲಿ ಸುಯೋಧನನ ಓಲಗದಿ ಕೆಡಹಿದ ಪಾದ, ಕುಮಾರವ್ಯಾಸನ ಉದ್ಯೋಗ ಪರ್ವ, ರಾಮಾಯಣದ ದಾಕ್ಷಿಣಾತ್ಯಾ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಮುಂತಾದವುಗಳ ಜ್ಞಾನ ಕನಕದಾಸರಲ್ಲಿ ಇತ್ತೆಂಬುದಾಗಿ ತಿಳಿಸುತ್ತಾರೆ. ನಾಟಕೀಯ ವ್ಯಂಗ್ಯ, ಎಚ್ಚರಿಕೆಯ ಧ್ವನಿ, ವೈರಾಗ್ಯವನ್ನು ಬೋಧಿಸಿ ಸರಳ ಜೀವನದ ಕಡೆಗೆ

ಮನಸ್ಸನ್ನು ತಿರುಗಿಸುಂವತಹ ಗುಣ, ರಾಜಕೀಯ ವಿಡಂಬನೆ ಮುಂತಾದ ವಿಚಾರಗಳು ಕೀರ್ತನೆಗಳಲ್ಲಿ ಕಾಣಸಿಗುತ್ತವೆ ಎಂಬುದಾಗಿ ವಿವರಿಸಲಾಗಿದೆ.

ಒಟ್ಟಾರೆಯಾಗಿ ಷಟ್ಪದಿಗಳಲ್ಲಿ ಕುಮಾರವ್ಯಾಸನ ಪ್ರಭಾವ, ಕೀರ್ತನೆಗಳಲ್ಲಿ ಪುರಂದರದಾಸರ ಛಾಯೆ, ಕನಕದಾಸರ ಮುಂಡಿಗೆಗಳು ಎಂಬ ಕೆಲವು ರಚನೆಗಳಲ್ಲಿ ಬೆಡಗಿನ ವಚನಗಳ ಅನುಕರಣೆ ಇದೆ. ಕನಕದಾಸರು ತಮ್ಮ ವಿಶಿಷ್ಟವಾದ ಕವಿ ಪ್ರತಿಭೆಯಿಂದ, ಮನಸ್ಸಿನ ಉದಾರತೆಯಿಂದ, ವಸ್ತು ಮತ್ತು ಛಂದೋ ವೈವಿಧ್ಯಗಳಿಂದ, ಸಮಕಾಲೀನ ಜೀವನ ಪ್ರಜ್ಞೆಯಿಂದ, ಪಂಥಬದ್ಧವಲ್ಲದ ಉದಾತ್ತ ವ್ಯಕ್ತಿತ್ವದಿಂದ ದಾಸರ ಪರಂಪರೆಯಲ್ಲಿ ಮಾತ್ರವಲ್ಲದೆ, ಕನ್ನಡ ಕವಿಗಳ ಪಂಕ್ತಿಯಲ್ಲಿಯೂ ವಿಶಿಷ್ಟವಾದ ಸ್ಥಾನವನ್ನು ಸಂಪಾದಿಸಿಕೊಂಡಿದ್ದಾರೆ ಎಂಬುದನ್ನು ಲೇಖಕರು ಈ ಲೇಖನದಲ್ಲಿ ಪ್ರಸ್ತುತಪಡಿಸಿದ್ದಾರೆ.

**ಕನಕ ಸಾಹಿತ್ಯದಲ್ಲಿ ಇಹ–ಪರ ಕಲ್ಪನೆ (ಡಾ. ಸಿದ್ಧಯ್ಯ ಪುರಾಣಿಕ)**

ಈ ಲೇಖನವು ದಾಸ ಸಾಹಿತ್ಯದಲ್ಲಿ ಕನಕದಾಸರ ಮಹತ್ವವನ್ನು ತಿಳಿಸುತ್ತಾ, ಕನಕದಾಸರ ಸಾಹಿತ್ಯದಲ್ಲಿ ಇಹ ಪರದ ಕಲ್ಪನೆಗಳೇನು ಎಂಬುದನ್ನು ಚಿತ್ರಿಸುವ ಕೆಲಸವನ್ನು ಮಾಡುತ್ತದೆ. ಆ ಚಿತ್ರಣವನ್ನು ಹೇಳುವುದಾದರೆ, ಕನಕದಾಸರಲ್ಲಿ ಮತ್ತು ಅವರ ಕಾವ್ಯ, ಕೀರ್ತನೆಗಳಲ್ಲಿ ಬೇರೆ ಬೇರೆ ವೈಶಿಷ್ಟ್ಯಗಳನ್ನು ಕಾಣಬಹುದು. ಕನಕದಾಸರು ಕವಿಯಾಗಿಯೂ, ಹಾಡುಗಬ್ಬಿಗರಾಗಿಯೂ ಇರುವುದನ್ನು ಕಾಣಬಹುದು. ಇವರ ಕೀರ್ತನೆಗಳು ವಿಚಾರ ವೈವಿಧ್ಯವನ್ನೊಳಗೊಂಡಿವೆ. ಇವುಗಳಲ್ಲಿ ಜ್ಞಾನ, ಭಕ್ತಿಗಳೆರಡಕ್ಕೂ ಪ್ರಾಶಸ್ತ್ಯವನ್ನು ನೀಡಲಾಗಿದೆ.

ಕನಕರು ಶೈವ, ರಾಮಾನುಜ, ಮಾಧ್ವ ದರ್ಶನಗಳ ಸಾರವನ್ನು ಹೀರಿ ಬೆಳೆದವರಗಿದ್ದಾರೆ. ಇವರ ಕೃತಿಗಳಲ್ಲಿ ಇಹ–ಪರಗಳ ಕಲ್ಪನೆಯನ್ನು ನೋಡಬಹುದಾಗಿದೆ. ಶಿವಶರಣರಲ್ಲಿ, ಹರಿಹರನಲ್ಲಿ, ಯೋಗೀಶ್ವರ ಅರವಿಂದರಲ್ಲಿ ಮತ್ತು ಪಾಶ್ಚಾತ್ಯವಾದ ಚಿಂತನೆಗಳಲ್ಲೂ ಕನಕದಾಸರ ಕೆಲವು ಕಲ್ಪನೆಗಳನ್ನು ಗ್ರಹಿಸಬಹುದು. ಉದಾ: ಜಗನ್ಮಿಥ್ಯವಾದ ಜಗಜೀವನ ನಶ್ವರವೆಂಬ ವಾದ, ಜಗತ್ತು ಕಣ್ಣೀರಿನ ಕಣಿವೆ ಎಂಬವಾದ, ಜಗತ್ತು ಪಾಪಗಳ ತವರು ಎಂಬ ವಾದವನ್ನು ಮಂಡಿಸುತ್ತಾರೆ. ಇದರಂತೆಯೇ ಮಾಧ್ವ ಸಿದ್ಧಾಂತದ ಪ್ರಕಾರ ಜಗತ್ತು ಸತ್ಯವೆಂಬುದಾಗಿ ವೇದ್ಯವಾಗುತ್ತದೆ. ಆದರೆ ಸಂಸಾರ ನೀರ ಮೇಲಿನ ಗುಳ್ಳೆ, ಗಾಳಿಗೊಡ್ಡಿದ ಸೊಡರು, ಸುಚಾಪ, ವಿದ್ಯುಲ್ಲತೆ ಎಂಬುದು ಕಾಣುವುದಿಲ್ಲ.

ದಾಸರು ಸಂಸಾರ ಕುರಿತ ಡಾಂಭಿಕ ಸಾರ, ಬದುಕಿನ ಕೆಲವು ಕೃತ್ಯಗಳನ್ನು ಟೀಕಿಸಿದರೂ ಕೂಡ ಜೀವನದ ಗುರಿಯನ್ನು ಅರಿಯಬೇಕು. ಅರಿತು ನಂತರದಲ್ಲಿ ನಮ್ಮ ಪಯಣ ಯಾವ ಕಡೆಗೆ ಎಂಬುದನ್ನು ತಿಳಿಯಬೇಕೆಂದು ಸಾರುತ್ತಾರೆ.

ಕನಕದಾಸರು ಕರ್ನಾಟಕದಲ್ಲಿ ವರ್ಧಿಸಿದ ಭಕ್ತಿಯನ್ನೆ ಸಾರುತ್ತಾ, ಉಪನಿಷತ್ತಿನ ಉಪಾಸನತೆ, ನಾರದರ ಅನನ್ಯತೆ, ಶಂಕರರ ಅನುಸಂಧಾನ, ರಾಮಾಜುನರ ಪ್ರಸನ್ನತೆ, ಆನಂದ ತೀರ್ಥರ ಸಂಪ್ರತಿಷ್ಠಿತ ಸ್ನೇಹ, ಶರಣರ ಸಾಮರಸ್ಯ, ಶರಣಾಗತಿ ಇತ್ಯಾದಿಗಳಲ್ಲಿ ಬಂದಿರುವ ಭಕ್ತಿಯು ಅಪಾರ. ಇದನ್ನು ಅಲ್ಲಗಳೆಯದೆ ಅವುಗಳಿಗೆ ಪಂಚಮ ಪುರುಷಾರ್ಥವನ್ನು ಸೇರಿಸಿ, ಇಹ ಜೀವನವನ್ನು ಅರ್ಥಪೂರ್ಣವನ್ನಾಗಿ ಮಾಡಿದ್ದಾರೆ.

ಇಲ್ಲಿ ಲೇಖಕರು ಒಂದು ಮುಖ್ಯವಾದ ಅಂಶವನ್ನು ತಿಳಿಸುತ್ತಾರೆ. ಇಹವನ್ನು ಕಲುಷಿತಗೊಳಿಸಿರುವ ಒಂದು ದುಷ್ಟ ಕಲ್ಪನೆ ಮೇಲು ಕೀಳಿನ ಕಲ್ಪನೆ ಎಂಬುದಾಗಿ ಕನಕದಾಸರು ಭಾವಿಸಿದ್ದರು ಎಂಬುದಾಗಿ ತಿಳಿಸುತ್ತಾರೆ. ದಾಸರು ಎಲ್ಲಡೆಯಲ್ಲೂ ದೇವರನ್ನು ಕಣು ಎಂದು ಪ್ರತಿಪಾದಿಸಿದರೂ ಕೂಡ ಲೋಕದ ಕೆಲವು ಕೆಟ್ಟ ಕೃತ್ಯಗಳು ಕಣ್ಣಿಗೆ ಬೀಳದೇ ಇರಲಿಲ್ಲ. ಹಾಗಾಗಿ ದಾಸರು ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು. ದುಷ್ಟ ಘಟನೆಗಳನ್ನು ವಿರೋಧಿಸಿದರು ಎಂಬುದಾಗಿ ಈ ಲೇಖನದ ಬರಹಗಾರರು ತಿಳಿಸುತ್ತಾರೆ.

**ಕನಕ ಸಾಹಿತ್ಯದಲ್ಲಿ ಭಕ್ತಿಸ್ವರೂಪ (ಪ್ರೊ. ವಸಂತ ಕುಷ್ಟಗಿ)**

ಈ ಲೇಖನವು ಕನಕ ಸಾಹಿತ್ಯದಲ್ಲಿನ ಭಕ್ತಿಯ ಸ್ವರೂಪವನ್ನು ಹೇಳುತ್ತದೆ. ಮೊದಲು ಸಾಹಿತ್ಯವೆಂದರೆ ಯಾವುದು ಎಂಬುದನ್ನು ವಿವರಿಸಿ ನಂತರ ಆ ಸಾಹಿತ್ಯದಲ್ಲಿ ಭಕ್ತಿಯನ್ನು ವಿವರಿಸಲಾಗಿದೆ. ಸಾಹಿತ್ಯವೆಂದರೆ, ಬದುಕಿನಲ್ಲಿ ಶ್ರದ್ಧೆಯನ್ನು ಹುಟ್ಟಿಸುವುದು. ತನ್ನರಿವನ್ನು ಮನುಷ್ಯನಲ್ಲಿ ಮೂಡಿಸಿ ಬದುಕನ್ನು ಮಾಡಲಪೇಕ್ಷಿಸುವಂತೆ ಮಾಡುವುದು. ಎಲ್ಲವೂ ಪರಮಾತ್ಮಮಯವಾದರೂ, ಪರಮಾತ್ಮನ ಪ್ರೇರಣೆಯಿಂದಲೇ ಎಲ್ಲ ನಡೆದರೂ, ಪುರುಷಾರ್ಥಕ್ಕೆ ಮಾಹಿತಿಯನ್ನು ನೀಡಿ ಬದುಕನ್ನು ಅರಳಿಸುವುದೇ ಆಗಿದೆ.

ಭಕ್ತಿಯ ಸ್ವರೂಪವನ್ನು ನೋಡುವದಾದರೆ, ಭಕ್ತಿಗೆ ಪ್ರೀತಿ ಭೀತಿಗಳು, ಆಶ್ಚರ್ಯ ಆದರಗಳು ಮೂಲ ನೆಲೆಗಳಾಗಿವೆ. ಏಕೆಂದರೆ, ಸೃಷ್ಟಿಯಲ್ಲಿ ರಮ್ಯವಾದ ಸೊಂಪು, ಅದ್ಭುತ ರಮ್ಯವಾದ ಚೆಲುವುಗಳು ಹಾಸುಹೊಕ್ಕಾಗಿವೆ. ಇವುಗಳ ಸಮ್ಮಿಲಿತ ಸ್ವರೂಪವೇ ಭಕ್ತಿ, ಎಂದು ತಿಳಿಸುತ್ತಾ ಭಕ್ತಿಯ ಮಹತ್ವನ್ನು ವಿವರಿಸುತ್ತಾರೆ. ಭಯ, ಅನುಕಂಪ, ವಿಶ್ವಾಸಗಳಿಂದ ಭಕ್ತಿ ಪರಮಾತ್ಮ ಸ್ವರೂಪವನ್ನು ತೋರಿಸುತ್ತದೆ. ಅಂತರಂಗ ಪರೀಶೀಲನೆಯಿಂದ ಪರಿಮಿಸುತ್ತದೆ. ಇಂತಹ ಪರಮಾತ್ಮನ ದರ್ಶನಕ್ಕಾಗಿ ಸಂತ ಸಾಹಿತ್ಯವು ಹಂಬಲಿಸಿದೆ. ಅಂತರಂಗ ದರ್ಶನದಲ್ಲಿ ತೃಪ್ತಿಯನ್ನು ಪಡೆದು ಆನಂದವನ್ನು ನೀಡುವಲ್ಲಿ ಸಾಫಲ್ಯವಾಗಿದೆ.

ಭಕ್ತಿಯ ನೆಲೆಯ ಬಗ್ಗೆ ತಿಳಿಸುತ್ತಾ, ಮೊದಲು ಭಕ್ತಿಯ ನೆಲೆ ದಾರ್ಶನಿಕ

ಅರಣ್ಯಕದಲ್ಲಿ ಕಂಡುಬಂದಿದ್ದು ಕಾಲಕ್ರಮೇಣ ಭಗವದ್ಗೀತೆಯಲ್ಲಿ, ಶಾಸ್ತ್ರಗಳಲ್ಲಿ ಕಂಡುಬಂದಿದೆ. ಭಕ್ತಿಯ ಸ್ವರೂಪವು ಭರತ ಖಂಡದಲ್ಲಿ ಅನೇಕ ಸಾಧು ಸಂತರುಗಳಿಂದ ಎಲ್ಲರ ಮನಮುಟ್ಟಿದೆ. ಹಾಗೆಯೆ ವಿಶೇಷವಾಗಿ ಭಕ್ತಿಯಲ್ಲಿ ಶರಣರು ಕಂಡುಬರುತ್ತಾರೆ. ಶರಣರ ಸಾಲಿನಲ್ಲಿಯೇ ಆ ಭಕ್ತಿಯನ್ನು ಸರಳಗೊಳಿಸಿ ಕೀರ್ತನೆಯಲ್ಲಿ ತಂದು ಜನಸಾಮಾನ್ಯರಿಗೆ ತಲುಪಿಸಿದ ಕೀರ್ತಿ ಹರಿದಾಸರಲ್ಲಿ ಸಲ್ಲುತ್ತದೆ ಎಂಬುದಾಗಿ ತಿಳಿಸುತ್ತಾರೆ.

ದಾಸರ ಭಕ್ತಿಯ ಬಗ್ಗೆ ತಿಳಿಸುತ್ತಾ ಅದರಲ್ಲೂ ಕನಕದಾಸರನ್ನೂ ಮುಖ್ಯ ವಾಗಿರಿಸಿಕೊಂಡು ಲೇಖನ ಮುಂದುವರೆದಿದೆ. ಕನಕದಾಸರು ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಂಡವರು ಅವರಲ್ಲಿ ವಿಶಿಷ್ಟವಾಗಿ ಅನೇಕ ಪ್ರಕಾರದ ಭಕ್ತಿ ಮೈದೋರಿದೆ ಎಂಬುದಾಗಿ ತಿಳಿಸುತ್ತಾರೆ. ಅವುಗಳೆಂದರೆ, ಆರ್ತ ಭಕ್ತಿ, ದಾಸ ಭಕ್ತಿ, ಅರ್ಪಣಾ ಭಕ್ತಿಗಳಾಗಿವೆ. ಕನಕದಾಸರು ಕೀರ್ತನೆಗಳ ಸಾಹಿತ್ಯವನ್ನು ರಚಿಸುವುದರ ಜೊತೆಗೆ ಕಾವ್ಯಗಳನ್ನು ರಚಿಸಿದ್ದಾರೆ. ಆದರೆ ಇಲ್ಲಿ ಲೇಖಕರು ಒಂದು ಅಂಶವನ್ನು ಉಲ್ಲೇಖಿಸುತ್ತಾರೆ: ಕನಕದಾಸರ ಭಕ್ತಿ ಮತ್ತು ಸಾಹಿತ್ಯ ರಚನೆಯಲ್ಲಿ ಭಾಗವತ ಮನೋಧರ್ಮವೇ ಕಾಣುತ್ತದೆ ಎನ್ನುವಂತದ್ದು. ಅಂದರೆ ಇಲ್ಲಿ ಹರಿ–ಹರನನ್ನು ಬೇರೆ ಎಂದು ಭಾವಿಸದೆ ಭಕ್ತಿಯಲ್ಲಿ ತೊಡಗುವುದು ಎಂದರ್ಥವಾಗಿದೆ. ಈ ರೀತಿಯ ಸಾಧನೆಗಳ ಮೂಲಕ ತನ್ನ ಅಂತರಂಗ ಪರಿಶೋಧನೆಯನ್ನು ಮಾಡಿಕೊಂಡು ಜನಸಾಮಾನ್ಯರಿಗೆ ಮಾರ್ಗವನ್ನು ತೋರಿಸಿ ಕೊಟ್ಟಿದ್ದಾರೆಂದು ಈ ಲೇಖನ ತಿಳಿಸುತ್ತದೆ.

ದಾಸರ ಸಾಹಿತ್ಯವು ಶುದ್ಧ ಭಕ್ತಿ, ಒಳ್ಳೆಯ ನಡತೆ, ಬದುಕಿನ ಜಾಗೃತಿ, ದಿಟ್ಟತನ, ಸೃಷ್ಟಿಯ ನಿಗೂಢತೆಯ ವಿವೇಚನೆ, ದಿವ್ಯಜ್ಞಾನ, ಸತ್ಯದ ತಿರುಳು, ಇವುಗಳ ಜೊತೆ ಪರಮ ಯೋಗಿ ಯಾರು ಎಂಬುದನ್ನು ತಿಳಿಸಿಕೊಟ್ಟಂತಿದೆ. ಕನಕರ ಈ ಎಲ್ಲಾ ಚಿಂತನೆಗೆ ಕೃಷ್ಣನ ಭಗವದ್ಗೀತೆಯ ಒಳಸ್ಪಂದನ ಪ್ರೇರಣೆಯಾಗಿದೆ. ಒಟ್ಟಿನಲ್ಲಿ ಲೇಖಕರು ತಮ್ಮ ವಾದದಲ್ಲಿ ಮುಖ್ಯವಾಗಿ ಕನಕದಾಸರಲ್ಲಿನ ಭಕ್ತಿಯನ್ನು ಮತ್ತು ಅವರು ರಚಿಸಿರುವ ಸಾಹಿತ್ಯದಲ್ಲಿನ ಒಳ ಅರಿವನ್ನು ವಿವರಿಸಿದ್ದಾರೆ.

**ಕನಕದಾಸರ ಕೃತಿಗಳಲ್ಲಿ ಜಾನಪದ ಅಂಶಗಳು (ಡಾ. ಜೀ. ಶಂ. ಪರಮಶಿವಯ್ಯ)**

ಈ ಲೇಖನವು ಕನಕದಾಸರ ಕೀರ್ತನೆಗಳಲ್ಲಿ ವ್ಯಕ್ತಗೊಂಡ ಜನಸಾಮಾನ್ಯರ ಜೀವನ ಕ್ರಮ, ಅವರ ಸರಳ ಜೀವನ, ಜನಸಾಮಾನ್ಯರ ಅನುಭವಗಳನ್ನೊಳಗೊಂಡ ವಿಚಾರಗಳನ್ನು ವಿಶ್ಲೇಷಿಸುತ್ತದೆ. ಆ ಅಂಶಗಳನ್ನು ಈ ಕೆಳಗಿನಂತೆ ಗುರುತಿಸ ಬಹುದಾಗಿದೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಜನಸಾಮಾನ್ಯರ ಆಶೋತ್ತರಗಳಿಗೆ

ಸ್ಪಂದಿಸಿರುವುದು ವಚನಕಾರರನ್ನು ಬಿಟ್ಟರೆ ದಾಸ ಸಾಹಿತ್ಯದ ಹರಿದಾಸರು ಎಂಬುದನ್ನು ತೋರಿಸುತ್ತಾ, ದಾಸ ಸಾಹಿತ್ಯ ಹೇಗೆ ಜನರ ಆಶೋತ್ತರಗಳಿಗೆ ಸ್ಪಂದಿಸಿದೆ ಎಂಬುದನ್ನು ತಿಳಿಸಲಾಗಿದೆ. ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಜನರಲ್ಲಿ ಬಿತ್ತುತ್ತ, ಸಮಾಜದ ಅಂಕುಡೊಂಕುಗಳನ್ನು ವಿಡಂಬಿಸುತ್ತಾ, ತಮ್ಮನ್ನೂ ಆತ್ಮ ವಿಮರ್ಶೆಗೆ ಗುರುಪಡಿಸಿಕೊಳ್ಳುತ್ತ ತಮ್ಮ ಸಾಹಿತ್ಯವನ್ನು ಸರಳ ರೂಪಗೊಳಿಸಿ ಜನಸಾಮಾನ್ಯರ ಬಾಗಿಲಿಗೆ ಒಯ್ದರು. ಇವರು ಬದುಕಿನ ನಿಗೂಢ ಸತ್ಯಗಳನ್ನು ಭೇದಿಸಿ ಜನಸಾಮಾನ್ಯರಿಗೆ ಆತ್ಮೋನ್ನತಿಯ ಮಾರ್ಗವನ್ನು ತೋರಿಸಿದರು. ಜನಪದ ಸಂಸ್ಕೃತಿ ಈ ದಾಸ ಸಾಹಿತ್ಯಕ್ಕೆ ಬೆನ್ನೆಲುಬಾಗಿ ನಿಂತಿರುವುದರಿಂದಲೇ ಸೊಗಸು, ಸೊಗಡು ಹೆಚ್ಚಾಗಿದೆ. ಒಂದು ರೀತಿಯಲ್ಲಿ ಅರ್ಥಪೂರ್ಣವಾಗಿದೆ. ಅದರ ಸತ್ವನ್ನೂ, ವೈವಿಧ್ಯತೆಯನ್ನು ಹೆಚ್ಚು ಮಾಡಿದೆ ಎಂಬುದಾಗಿ ತಿಳಿಸಲಾಗಿದೆ.

ಕನಕದಾಸರ ಕೀರ್ತನೆಗಳಲ್ಲಿ ಜನಸಾಮಾನ್ಯರ ಬದುಕಿನ ಚಿತ್ರಣ ಇಷ್ಟು ಸರಳವಾಗಿ ಮೂಡಿಬರಲು ಅವರು ತಮ್ಮ ಬದುಕನ್ನು ಸಾಮಾನ್ಯ ಜನಗಳ ನಡುವೆಯೇ ಕಟ್ಟಿಕೊಂಡಿದ್ದರಿಂದ ಅವರಿಗೆ ಸಾಮಾನ್ಯರ ಸ್ಥಿತಿಗತಿಗಳ ಸ್ಪಷ್ಟ ಅರಿವಿತ್ತು. ಜೊತೆಗ ಜನಸಮುದಾಯ ಬಳಸುವ ಜನಪದ ಸಾಹಿತ್ಯದ ತಿಳಿವು ಕನಕರ ಪ್ರಜ್ಞೆಯನ್ನು ಪ್ರಭಾವಿಸಿತ್ತು. ಕನಕರು ಪ್ರಸ್ತಾಪಿಸಿ ಚಿಂತನೆಗಳ ಸಾರ ಜನಪದೀಯ ಕಲಾಪ್ರಕಾರಗಳಾದ ಕೋಲಾಟದ ಪದಗಳು, ಡೊಳ್ಳಿನ ಪದಗಳು, ತತ್ವಪದಗಳು, ಮಂಟೆಸ್ವಾಮಿ ಕಾವ್ಯದ ಗುಣ ಸ್ತುತಿ, ಸೋಬಾನದ ಪದಗಳು ಹಾಗೆಯೇ ಗೊಂಬೆ ಆಟಗಳಲ್ಲಿಯೂ ಪ್ರಭಾವವನ್ನು ಬೀರಿದ್ದು ಗುರುತಿಸಬಹುದಾಗಿದೆ.

ಕನಕದಾಸರು ಅನೇಕ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿಯೂ ಜಾನಪದಿಯ ಸೊಗಸನ್ನು ಕಾಣಬಹುದು ಅವುಗಳಲ್ಲಿ ಅನೇಕ ಜನಪದ ಕಥೆಗಳನ್ನು ಬಳಸಿಕೊಂಡು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ. ವ್ಯವಸಾಯ ಪದ್ಧತಿ, ಜನೋಪಕಾರದ ದೃಷ್ಟಿ, ಅತಿಥಿ ಸತ್ಕಾರ, ತಾಂಬೂಲದ ಮೋಜುಗಳು, ಸುಖ ಜೀವನದ ಭೋಗ ಭಾಗ್ಯಗಳ ಮನೋಹರವಾದ ಚಿತ್ರಣವನ್ನು ಕೂಡ ನೀಡಿದ್ದಾರೆ. ಇವುಗಳು ಮೋಹನ ತರಂಗಿಣಿ ಮುಂತಾದವುಗಳಲ್ಲಿ ಕಾಣಸಿಗುತ್ತವೆ ಎಂಬುದಾಗಿ ಚಿತ್ರಿಸಿದ್ದಾರೆ. ಕನಕದಾಸರ ಕೀರ್ತನೆಗಳಲ್ಲಿನ ಜಾನಪದ ಅಂಶಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿಕೊಳ್ಳಬಹುದು.

1. ಜನಪದ ಗೀತೆಗಳ ಪ್ರಭಾವ
2. ಜನಪದ ಸಂಗೀತದ ಪ್ರಭಾವ
3. ಜನಪದ ಕಲೆಗಳ ಪ್ರಭಾವ
4. ಜನಪದ ಸಂಪ್ರದಾಯಗಳ ಪ್ರಭಾವ

5. ಜನಪದ ಗಾದೆ ಒಗಟುಗಳ ಪ್ರಭಾವ

ಒಟ್ಟಿನಲ್ಲಿ ಕನಕದಾಸರ ಕೀರ್ತನೆಗಳಲ್ಲಿ, ಕಾವ್ಯದಲ್ಲಿ ಜನಪದದ ಪ್ರಭಾವವನ್ನು ಹೆಚ್ಚಿನದಾಗಿ ಕಾಣಬಹುದು. ಕಾರಣ ದಸರು ಜನಪದದ ನಡುವೆ ಜನಪದ ಸಂಪ್ರದಾಯಗಳಲ್ಲಿ ನೇರವಾಗಿ ಬೆರೆತವರು. ಆದುದರಿಂದಲೇ ದಾಸ ಕೃತಿಗಳಲ್ಲಿ ಜನಪದ ಹೇರಳವಾಗಿ ಕಂಡುಬಂದಿದೆ ಎಂಬುದನ್ನು ಈ ಲೇಖನ ತಿಳಿಯಪಡಿಸುತ್ತದೆ.

**ಜನಪದರ ಕಣ್ಣಲ್ಲಿ ಕನಕದಾಸರು (ಡಾ. ನಿಂಗಣ್ಣ ಸಣ್ಣಕ್ಕಿ)**

ಈ ಲೇಖನದ ಮೊದಲ ಭಾಗ ಕನಕದಾಸರ ಜೀವನ ಚಿತ್ರಣವನ್ನು ಕಟ್ಟಿಕೊಡುತ್ತದೆ. ಕನಕದಾಸರ ಹುಟ್ಟು, ಅವರ ತಂದೆ–ತಾಯಿ, ಅವರ ಕುಟುಂಬದ ಕುರಿತಾಗಿ ವಿವರಿಸಲಾಗಿದೆ. ಎರಡನೇ ಭಾಗದಲ್ಲಿ ಕನಕದಾಸರ ಕುರಿತಾಗಿ ಜನಸಾಮಾನ್ಯರ ಅಭಿಪ್ರಾಯಗಳು ಹೇಗಿವೆ ಮತ್ತು ಅವರ ಪ್ರಸ್ತುತತೆಯನ್ನು ಜನರು ಯಾವ ರೀತಿಯಲ್ಲಿ ತಮ್ಮ ದಿನನಿತ್ಯ ಜೀವನದಲ್ಲಿ ಹೇಗೆ ಬಳಕೆ ಮಾಡುತ್ತಿದ್ದಾರೆ ಎಂಬುದನ್ನು ವಿವರಿಸಲಾಗಿದೆ.

ಕನಕದಾಸರ ಹುಟ್ಟು, ಬಾಲ್ಯ, ಅವರ ಕುಟುಂಬ, ನಾಯಕನಾಗಿ ಕನಕದಾಸರು ಮಾಡಿದ ಸಾಧನೆಗಳು ಮತ್ತು ಅವರ ಸನ್ಯಾಸ ಅಥವಾ ಆಧ್ಯಾತ್ಮ ಜೀವನದ ಎಲ್ಲಾ ಅಂಶಗಳನ್ನು ಜನರು ತಮ್ಮ ಜನಪದದ ಮೂಲಕ ರೂಢಿಯಲ್ಲಿ ತಂದುಕೊಂಡಿದ್ದಾರೆ. ಅಂದರೆ, ಡೊಳ್ಳು ಪದಗಳಲ್ಲಿ, ತ್ರಿಪದಿಗಳಲ್ಲಿ, ಹಂತಿಯ ಹಾಡಿನಲ್ಲಿ, ಏಕತಾರಿ ಹಾಡಿನಲ್ಲಿ, ಗೀಗೀ ಪದಗಳಲ್ಲಿ, ಗರತಿಪದಗಳಲ್ಲಿ, ಸಖಿ ಪದಗಳಲ್ಲಿ, ಸಂಪ್ರದಾಯದ ಆಚರಣೆಗಳಲ್ಲಿ, ಮತ್ತು ಗಾದೆಗಳಲ್ಲಿ ಪರೋಕ್ಷವಾಗಿ ಕನಕದಾಸರನ್ನು ಕಾಣಬಹುದು ಎಂಬುದಾಗಿ ವಿವರಿಸಲಾಗಿದೆ.

ಇಡೀ ಲೇಖನವು ಜನಪದಗಳಲ್ಲಿ ಬಳಕೆಯಾಗುತ್ತಿರುವ ಎಲ್ಲಾ ವಿಧಗಳಲ್ಲಿನ ಹಾಡುಗಳನ್ನು ಅಥವಾ ಪದಗಳನ್ನು ನೀಡುವ ಮೂಲಕ ಜನಪದವನ್ನು ಕನಕದಾಸರು ಹೇಗೆ ಬಳಸಿದ್ದಾರೆ ಎಂಬುದನ್ನು ವಿಶ್ಲೇಷಿಸಿದೆ.

ಮೇಲೆ ಚರ್ಚಿಸಲಾದ ಎಲ್ಲಾ ಲೇಖನಗಳಲ್ಲಿನ ಸಾರವನ್ನು ಸೂಕ್ಷ್ಮವಾಗಿ ಗಮನಿಸಿದರೆ ಕನಕದಾಸರ ಚಿಂತನೆಗಳನ್ನು ಭಕ್ತಿಚಳುವಳಿ, ದಾಸ ಸಾಹಿತ್ಯ ಮತ್ತು ಹರಿದಾಸ ಪರಂಪರೆಯ ಭಾಗವಾಗಿ ಹೆಚ್ಚು ವಿಶ್ಲೇಷಿಸಿರುವುದು ತಿಳಿದುಬರುತ್ತದೆ, ಆ ನೆಲೆಗೆ ಪರ್ಯಾಯವಾಗಿ ಡಾ. ನಿಂಗಣ್ಣ ಸಣ್ಣಕ್ಕಿ ಅವರ **ಜನಪದರ ಕಣ್ಣಲ್ಲಿ ಕನಕದಾಸರು**, ಮತ್ತು ಡಾ. ಜೀ.ಶಂ. ಪರಮಶಿವಯ್ಯ ರವರ **ಕನಕದಾಸರ ಕೃತಿಗಳಲ್ಲಿ ಜಾನಪದ ಅಂಶಗಳು** ಎಂಬ ಲೇಖನಗಳು ಕನಕದಾಸರ ಚಿಂತನೆಗಳನ್ನು

ಜನಪದೀಯ ಹಿನ್ನೆಲೆಯಲ್ಲಿ ಗ್ರಹಿಸುವ ಪ್ರಯತ್ನ ಮಾಡಿರುವಂತೆ ಕಾಣುತ್ತದೆ. ಆದರೆ ಯಾರೂ ಸಹ ಅನುಭಾವಿಕ ನೆಲೆಯಲ್ಲಿ ಕನಕರ ಚಿಂತನೆಯನ್ನು ವಿಶ್ಲೇಷಣೆಗೆ ಒಳಪಡಿಸಿರುವುದನ್ನು ಗುರುತಿಸಲು ಸಾಧ್ಯವಿಲ್ಲ. ಇದಕ್ಕೆ ಮುಖ್ಯ ಕಾರಣ ಕನಕದಾಸರ ಕುರಿತು ಹೆಚ್ಚಿನ ಬರಹಗಳು ಬಂದಿರುವುದು ದಾಸ ಪರಂಪರೆ, ಭಕ್ತಿಚಳುವಳಿಯ ಭಾಗವಾಗಿ. ಈ ಹಿನ್ನೆಲೆಯಲ್ಲಿ ಸದರಿ ಶೋಧನೆ ಕನಕದಾಸರ ಚಿಂತನೆಗಳಲ್ಲಿ ಇರಬಹುದಾದ ಅನುಭಾವಿಕ ನೆಲೆಗಳನ್ನು ಗುರುತಿಸಲು ಯತ್ನಿಸುತ್ತದೆ. ಅದಕ್ಕೂ ಮೊದಲು ಅನುಭಾವ ಎಂದರೇನು? ಕನ್ನಡದ ಸಾಹಿತ್ಯಿಕ ಚರ್ಚೆ ಅನುಭಾವ ಪರಂಪರೆಯನ್ನು ಹೇಗೆ ಪ್ರತಿನಿಧಿಸಿದೆ ಎಂಬುದನ್ನು ತಿಳಿಯುವುದು ಮಹತ್ವದ ಸಂಗತಿಯಾಗಿದೆ. ಹಾಗೆ ನೋಡಿದರೆ ಇಂದು ಕನ್ನಡದ ಬಹುತೇಕ ಚರ್ಚೆಗಳು ಮುಖ್ಯವಾಹಿನಿ ಸಾಹಿತ್ಯದ ಚರ್ಚೆಯಿಂದ ಬಹಳಷ್ಟು ಕಾಲ ಹೊರಗುಳಿದ ಅನುಭಾವ ಸಾಹಿತ್ಯ ಪರಂಪರೆಯನ್ನು ವಿಮರ್ಶಾತ್ಮಕವಾಗಿ ಗುರುತಿಸುವ ಪ್ರಯತ್ನವನ್ನು ನಡುಸುತ್ತಿರುವುದು ಕಂಡುಬರುತ್ತಿದೆ.

ಈ ಎಲ್ಲಾ ಒತ್ತಡ ಮತ್ತು ಒತ್ತಾಸೆಯ ಫಲವಾಗಿ ಇಂದು ಅನುಭಾವಿ ಪರಂಪರೆ ಮತ್ತು ತತ್ವಪದಕಾರರ ಕುರಿತು ಸಂಶೋಧನೆಗಳು ಹೆಚ್ಚುತ್ತಿವೆ ಎಂಬುದು ಒಂದು ಅಂಶವಾದರೆ, ಮೊದಲನೆಯ ಅಧ್ಯಾಯದಲ್ಲಿ ತಿಳಿಸಿರುವಂತೆ ವಸಾಹತೋತ್ತರಕಾಲದ ಚಿಂತನೆ **"ಸಾಹಿತ್ಯದ ಪಠ್ಯಗಳನ್ನು ಕೇವಲ ಸಾಹಿತ್ಯಕವಾಗಿ ನೋಡದೆ ಅವುಗಳಲ್ಲಿ ಆಳವಾಗಿ ಹಾಸುಹೊಕ್ಕಾಗಿರುವ ಸಂಸ್ಕೃತಿಯ ಮಹತ್ವವನ್ನು ಹೊರತರಬೇಕು"** ಎಂಬ ವಾದಗಳನ್ನು ಮುಂಚೂಣಿಗೆ ತಂದದ್ದು ಎಂಬುದು ಮತ್ತೊಂದು ಅಂಶ. ಈ ಎರಡು ಮುಖ್ಯ ಅಂಶಗಳು ನಮಗೆ ಕನ್ನಡದ ಸಂದರ್ಭದಲ್ಲಿ ಅನುಭಾವಿ ಪರಂಪರೆಯ ಮಹತ್ವವನ್ನು ಅರಿಯಲು ದಾರಿ ದೀಪಗಳಾಗಿವೆ. ಏಕೆಂದರೆ, ಇಡೀ ನಾಡಿನ ಸಾಹಿತ್ಯವನ್ನು ಒಂದು ಕಾಲದಲ್ಲಿ ತಮ್ಮ ಅನುಭಾವಿ ಚಿಂತನೆಗಳ ಮೂಲಕ ಎಚ್ಚರಿಸಿದ ದಾಸರು ಮತ್ತು ಸಂತರನ್ನು ಕೇವಲ ಆಧ್ಯಾತ್ಮಿಕ ಚೌಕಟ್ಟಿನಲ್ಲಿ ವಿವರಿಸುವ ಸಂಕುಚಿತ ಸಂಶೋಧನೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಸಮಷ್ಟಿ ದೃಷ್ಟಿಯಿಂದ ಅನುಭಾವ ಪರಂಪರೆಯ ಸತ್ವಗಳನ್ನು ಗುರುತಿಸುವುದು ಕಾಲದ ಅಗತ್ಯವಾಗಿದೆ. ಆದ್ದರಿಂದಲೇ ಈ ಹಿಂದೆ ಅನುಭಾವ ಪರಂಪರೆಯ ಮತ್ತು ತತ್ವಪದಗಳ ಕುರಿತು ಕನ್ನಡದಲ್ಲಿ ನಡೆದಿವೆ ಎನ್ನಲಾದ ಚರ್ಚೆಗಳಲ್ಲಿನ ಮಿತಿಗಳನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ರಹಮತ್ ತರೀಕೆರೆಯವರು ಮಾಡಿರುವ ವಿಮರ್ಶೆ ಈ ದಾರಿಯಲ್ಲಿ ನಮಗೆ ಹಲವು ಹೊಳಹುಗಳನ್ನು ನೀಡುತ್ತದೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿರುವ 'ತತ್ವಪದಗಳು'

ಸಂಕಲನ ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು ಪ್ರಕಟಿಸಿರುವ 'ಹಲವು ತೋಟದ ಹೂಗಳು' ಸಂಕಲನಗಳು, ದೀರ್ಘಾವಧಿಯಲ್ಲಿ ಬಂದಿರುವ ಅನುಭಾವಿ-ತತ್ವಪದಗಳನ್ನು ಅವೆಲ್ಲ ಒಂದೇ ಬಗೆಯವು ಎನ್ನುವಂತೆ ಆಯ್ದುಕೊಂಡಿವೆ. 'ತತ್ವಪದಗಳು' ಸಂಕಲನವು ವಚನಕಾರರ ವಚನಗಳ ಜತೆಗೇ ಮೂವತ್ತಕ್ಕೂ ಹೆಚ್ಚಿನ ದಾಸರ ಕೀರ್ತನೆ/ರಚನೆಗಳು ಸೇರಿಸಿಕೊಂಡಿದೆ. 'ಹಲವು ತೋಟದ ಹೂಗಳು' ಇದೇ ಮಾದರಿಯನ್ನು ಅನುಸರಿಸಿದರೂ ದಾಸರಲ್ಲಿ ಕನಕ, ಪುರಂದರರ ರಚನೆಗಳನ್ನು ಮಾತ್ರ ಆರಿಸಿಕೊಂಡಿದೆ. 'ಮುತ್ತಿನಹಾರ' ಮಾಲಿಕೆಯಲ್ಲಿ ಪ್ರಕಟವಾಗಿರುವ 'ತತ್ವಪದಕಾರರು' ಸಂಕಲನ ಕೂಡ ಇದೇ ಮಾದರಿಯನ್ನು ಅನುಸರಿಸಿದೆ. ಹೀಗೆ ದೀರ್ಘ ಕಾಲದಲ್ಲಿ ಬಂದ ರಚನೆಗಳನ್ನು ಒಂದೇ ಬುಟ್ಟಿಯಲ್ಲಿ ಇಡುವುದು ಸರಿಯಲ್ಲ. ಪದ/ತತ್ವಪದಗಳ ಸ್ವರೂಪ, ವಿಶಿಷ್ಟತೆಗಳನ್ನು ಸಾಧ್ಯವಾದಷ್ಟು ಖಚಿತಗೊಳಿಸಿಕೊಂಡು, ಒಂದು ನಿರ್ದಿಷ್ಟಕಾಲದಲ್ಲಿ, ಆ ಕಾಲದ ಒತ್ತಡದಲ್ಲಿ ರಚನೆಯಾಗಿರುವ ಪದಗಳನ್ನು ತತ್ವಪದಗಳ ವ್ಯಾಪ್ತಿಯೊಳಗೆ ತಂದುಕೊಂಡು ನೋಡುವುದು ಉಚಿತ.

ತತ್ವಪದಕಾರರು ಅಧಿಕ ಸಂಖ್ಯೆಯಲ್ಲಿ, ಎಲ್ಲ ವರ್ಗ-ಜಾತಿಗಳಿಂದ 'ಆ ಸೀಮೆ'ಯಲ್ಲಿ, ಆ ಅವಧಿಯಲ್ಲಿ ಕಾಣಿಸಿಕೊಂಡಿರುವುದಕ್ಕೆ ಅಂದಿನ ರಾಜಕೀಯ-ಸಾಂಸ್ಕೃತಿಕ ಸಂದರ್ಭವೂ ಕಾರಣವಾಗಿದೆ. ಈ ಅನುಭಾವಿ ಪರಂಪರೆ ಒಂದು ಚಳುವಳಿಯ ರೂಪವನ್ನು ಪಡೆದುಕೊಂಡು ಆ ಪ್ರದೇಶಗಳಲ್ಲಿ ಹೆಚ್ಚು ಕ್ರಿಯಾಶೀಲ ವಾಗಿತ್ತೆಂದು ತೋರುತ್ತದೆ. ಆ ದಿನಗಳಲ್ಲಿ ವಸಾಹತುಶಾಹಿಯು ನಿಧಾನವಾಗಿ, ಬದುಕಿನ ಸಮಾಜದ ಹಲವು ಹತ್ತು ರಂಗಗಳ ಮೇಲೆ ತನ್ನ ಹಿಡಿತ, ಪ್ರಭಾವ, ಛಾಪನ್ನು ಒತ್ತಲಾರಂಭಿಸಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಈ ಚಳುವಳಿ ರೂಪುಗೊಂಡಂತಿದೆ (ಈ ಕುರಿತು ಇನ್ನೂ ಹೆಚ್ಚಿನ ವಿವರ, ಆಳವಾದ ಅಧ್ಯಯನದ ಅವಶ್ಯಕತೆಯಿದೆ). ವಸಾಹತುಶಾಹಿಯು ಹೊಸ ಆಡಳಿತ ವಿಧಾನ ಮತ್ತು ಹೊಸ ವ್ಯವಸ್ಥೆಗಳ ಮೂಲಕ ನಿಧಾನವಾಗಿ ಹಂತಹಂತವಾಗಿ ತನ್ನ ಛಾಪನ್ನು ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ರಂಗಗಳ ಮೇಲೆ ಒತ್ತಲಾರಂಭಿಸಿತು. ಆಗಲೇ, ಅದನ್ನು ಪ್ರಶ್ನಿಸುವುದರ ಮೂಲಕ, ಪ್ರತಿಭಟಿಸುವುದರ ಮೂಲಕ ಜನರು ಪ್ರತಿಕ್ರಿಯಿಸಲಾರಂಬಿಸಿದ್ದನ್ನು ಚರಿತ್ರೆ ನಮಗೆ ತಿಳಿಸಿದೆ. ಆ ಪ್ರತಿಕ್ರಿಯೆ ಕೆಲವು ಸಂದರ್ಭದಲ್ಲಿ ನೇರ ಹೋರಾಟದ ಸ್ವರೂಪವನ್ನು ಪಡೆದುಕೊಂಡಿದೆ. ವಸಾಹತುಶಾಹಿ ಸವಾಲಿಗೆ ಅನುಗುಣವಾಗಿ ಪರಂಪರೆ-ಸಂಸ್ಕೃತಿಯನ್ನು ಹೊಸ ಸಂದರ್ಭದ ಅವಶ್ಯಕತೆಗೆ ತಕ್ಕಂತೆ ಪರಿಷ್ಕಾರ, ವಿನ್ಯಾಸಗೊಳಿಸಿಕೊಳ್ಳುವ ಪ್ರಕ್ರಿಯೆಯ ಅಂಗವಾಗಿ, ಸುಧಾರಣೆಗೆ ತೊಡಗಿಕೊಳ್ಳುವ ಮೂಲಕ ಪ್ರತಿರೋಧದ ದಾಖಲೆ ಆರಂಭವಾಗುತ್ತದೆ. ಈ ಪ್ರಕ್ರಿಯೆ ಮೊದಲು ಧಾರ್ಮಿಕ-ಸಾಂಸ್ಕೃತಿಕ ವಲದಗಳಲ್ಲಿ ಕಾಣಿಸಿಕೊಳ್ಳುತ್ತದೆ. ವಿವಿಧ ವಸಾಹತುಶಾಹಿ ಸನ್ನಿವೇಶಗಳಿಗೆ ಅನುಗುಣವಾಗಿ

ಈ ಪ್ರಕ್ರಿಯೆ ವಿಭಿನ್ನರೀತಿ ಮತ್ತು ರೂಪಗಳಲ್ಲಿ ವ್ಯಕ್ತವಾಗುತ್ತದೆಂಬುದು ವಿದ್ವಾಂಸರ ಅಭಿಪ್ರಾಯ (ಆ್ಯಪ್‌ಕ್ರಾಫ್ಟ್ ಮತ್ತು ಇತರರು). ತತ್ವಪದಕಾರರಾಗಲಿ, ಅವರ ನಂತರದ ಸ್ವಾತಂತ್ರ್ಯ ಹೋರಾಟಗಾರರಾಗಲಿ ನಮ್ಮ ದೇಶದ ಸಾಂಸ್ಕೃತಿಕ ವೈವಿಧ್ಯವನ್ನು ಅಂದರೆ, ಇಲ್ಲಿನ ಬಹುರೂಪತೆಯನ್ನು ಎತ್ತಿಹಿಡಿದದ್ದೂ ಕೂಡ ವಸಾಹತುಶಾಹಿಯ ಕೇಂದ್ರೀಕರಣದ ಪ್ರಕ್ರಿಯೆಗೆ ಕೊಟ್ಟ ದಿಟ್ಟ ಉತ್ತರವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ತತ್ವಪದಗಳನ್ನು ಅಭ್ಯಾಸ ಮಾಡುವ ಪ್ರಯತ್ನಗಳು ಈಗೀಗ ನಡೆಯಲಾರಂಭಿಸಿವೆ.

"ಸಾಹಿತ್ಯ ಚರಿತ್ರೆಗಳು–ಆಯ್ದು ಪ್ರಕಟಿಸಿದ ಲಾವಣಿ–ತ್ರಿಪದಿಗಳನ್ನು ಹೊರತುಪಡಿಸಿ ಕರ್ನಾಟಕದ ಅಪಾರ ಮೌಖಿಕ ಪರಂಪರೆಗೆ ಹೋಗಲೇ ಇಲ್ಲ. ಅವಕ್ಕೆ ಶಿಶುನಾಳ, ಮಡಿವಾಳಪ್ಪ, ಜಲಾಲಸಾಬ, ಹಸನಸಾಬ, ಗುರುಖಾದರಿ ಇವರ ಪದಗಳು ದಕ್ಕಲಿಲ್ಲ" ಎಂಬುದು ಸರಿ (ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, 2008, ಪುಟ 11). ಹೊಸಗನ್ನಡದ ಮೂರು ಮುಖ್ಯ ಕೇಂದ್ರಗಳಲ್ಲಿ ಉತ್ತರ ಕರ್ನಾಟಕ ಒಂದಾಗಿದ್ದು ಆ ಪ್ರದೇಶಗಳಲ್ಲಿ ಸಕ್ರಿಯರಾಗಿದ್ದ ದಾಸರೆಲ್ಲರನ್ನೂ ಗಮನಿಸದೆ ಅವರಲ್ಲಿ ಕೆಲವರನ್ನು ತಮ್ಮ ವಿವರಣೆಯ ಭಾಗವಾಗಿ ನೋಡುತ್ತಾರೆ. ಅದು ಅವರ ಸಾಹಿತ್ಯಿಕ ಶಕ್ತಿಗಾಗಿ. ಸಾಂಸ್ಥಿಕ ಧರ್ಮ ಮತ್ತು ಯಜಮಾನ ಸಂಸ್ಕೃತಿಯನ್ನು, ಸಾಮಾಜಿಕ ವಿಧಿ–ನಿಷೇಧಗಳನ್ನು ಅಲಕ್ಷಿಸಿದ ಅನುಭಾವಿಗಳನ್ನು ಸಾಂಸ್ಕೃತಿಕವಾಗಿ ಮೇಲ್‌ಸ್ತರದಲ್ಲಿ ಇದ್ದವೆಂದು ಭಾವಿಸಿದ ವರ್ಗಗಳು ಗಮನಿಸಲಿಲ್ಲವೆಂದು ಕಾಣುತ್ತದೆ.

ರಂ.ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'ಯು 19ನೆಯ ಶತಮಾನದ ಕೊನೆಯವರೆಗಿನ ಸಾಹಿತ್ಯದ ಬಗ್ಗೆ ವಿವರಗಳನ್ನು ಕೊಡುತ್ತದೆ. ಅದು ಒಡೆಯರ ಕಾಲದ ಸಾಹಿತ್ಯದ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡುತ್ತದಾದರೂ ತಾವು ಹುಟ್ಟಿ ಬೆಳೆದ ಪ್ರದೇಶದಲ್ಲಿ ಸಾಕಷ್ಟು ಪ್ರಭಾವಿಯಾಗಿದ್ದ, ಜನಜನಿತವಾಗಿದ್ದ ಅನುಭಾವಿಗಳ ಕುರಿತು ಏನನ್ನೂ ಹೇಳುವುದಿಲ್ಲ. ಭಾಷಾಶುದ್ಧಿ ಇಲ್ಲವೆಂದೋ, ಪದಗಳ ಗ್ರಾಮ್ಯ ರೂಪಗಳನ್ನು ಸಂಕೋಚರಹಿತರಾಗಿ ಬಳಸಿದ್ದರಿಂದಲೋ, ಪ್ರತಿಷ್ಠರು ಅಶ್ಲೀಲವೆಂದು ಭಾವಿಸುವ ಪದಗಳನ್ನು ಎಗ್ಗಿಲ್ಲದೇ ಬಳಸಿದ್ದರಿಂದಲೋ, ಆಧ್ಯಾತ್ಮ–ತತ್ವದ ಪ್ರತಿಪಾದನೆ ಪ್ರಧಾನವಾಗಿದೆಯೆಂದೋ ಆ ಕಾಲದವರು ತತ್ವಪದಗಳನ್ನು ಗುರುತಿಸಲು ಹಿಂದೇಟು ಹಾಕಿರಬಹುದು. "18, 19ನೆಯ ಶತಮಾನಗಳಲ್ಲಿ ಉಜ್ವಲವಾದ ಸಾಹಿತ್ಯ ನಿರ್ಮಾಣದ ಅಭಾವ" ಕಂಡುಬರುತ್ತದೆ ಎಂದು ಮುಗಳಿಯವರು ಹೇಳುವುದು ಮೇಲಿನ ಅಭಿಪ್ರಾಯಕ್ಕೆ ಪುಷ್ಟಿ ಕೊಡುವಂತಿದೆ. ಸಾಹಿತ್ಯವನ್ನು ಸಾಹಿತ್ಯಕ ಮಾನದಂಡಗಳಿಂದ ಅಂದರೆ ಶುದ್ಧ ಸಾಹಿತ್ಯದ ದೃಷ್ಟಿಯಿಂದ ನೋಡಬೇಕೆಂಬ ತಿಳುವಳಿಕೆಯೂ ಕೂಡ ವಸಾಹತುಶಾಹಿಯ ಕೊಡುಗೆಯೇ.

ಮುಗಳಿಯವರು ಅದೇ ಪ್ರದೇಶ ಮತ್ತು ಅವಧಿಯಲ್ಲಿ ಬದುಕಿದ್ದ ಜಗನ್ನಾಥದಾಸ, ವಿಜಯದಾಸ ಮತ್ತು ಪ್ರಸನ್ನ ವೆಂಕಟದಾಸರ ಬಗ್ಗೆ ಬರೆಯುತ್ತಾರಾದರೂ ತತ್ವಪದಕಾರರನ್ನು ಯಾಕೆ ಪರಿಗಣಿಸಲಿಲ್ಲ? ಮುಗಳಿಯವರಿಗೆ ತತ್ವಪದಕಾರರಲ್ಲಿ ಕೆಲವರಾದರೂ ಪರಿಚಯವಿದ್ದಿರಬಹುದು. ಅವರ ರಚನೆಗಳು ಶುದ್ಧಕಾವ್ಯ ಪರಂಪರೆಗೆ ಸೇರುವುದಿಲ್ಲವೆಂಬ ಕಾರಣಕ್ಕೆ ಬಿಟ್ಟಿರಬಹುದೇ?

'ತನ್ನತನ'ದ ಹುಡುಕಾಟ ಮಾಡುವ ಪ್ರಶ್ನೆ ಕನ್ನಡದಲ್ಲಿ ಮೊದಲ ಬಾರಿಗೆ ಬಂದಿಲ್ಲ. ಇದು ಕನ್ನಡ ಭಾಷೆಯ ತನ್ನತನ ಪಡೆದುಕೊಳ್ಳುವ ಯತ್ನದ ಭಾಗವಾಗಿ, 'ಕವಿರಾಜಮಾರ್ಗ'ದಿಂದಲೇ ಶುರುವಾಗುತ್ತದೆ. ಮಾರ್ಗಕಾರನು ಸಂಸ್ಕೃತದ 'ಪಡಿನೆಳಲಿನ'ಲಿಯೆ ಕಾವ್ಯತತ್ವಗಳ ಚರ್ಚೆ ಮಾಡುತ್ತಾನೆ. ಕಡೆಗೊಮ್ಮೆ ಯಾವುದು ಸಂಸ್ಕೃತಕ್ಕೆ 'ದೋಷ' ಎಂದು ಕಾಣುತ್ತದೆಯೊ ಅದುವೆ ಕನ್ನಡದ ವಿಶಿಷ್ಟತೆ ಎಂದು ಬಿಡುತ್ತಾನೆ. ತಾನು ಆದರ್ಶವೆಂದು ಭಾವಿಸಿದ ಮಾದರಿಯಂತೆ ಆಗಲು ಯತ್ನಿಸುವುದು. ಆದರೆ, ಅದರಂತಾಗಲು ಆಗುವುದಿಲ್ಲ ಎಂಬ ವಾಸ್ತವವು ಗೊತ್ತಾಗುವುದು, ನೀವು ಹೇಳುವ ದೋಷವೇ ನಮ್ಮ ಗುಣವೆಂದು ತಿರುಗಿ ಬೀಳುವುದು, ಇದನ್ನು ಕನ್ನಡವು ಉದ್ದಕ್ಕೂ ಅನುಭವಿಸುತ್ತ ಬಂದಿದೆ. ಕನ್ನಡ ಸಾಹಿತ್ಯ ಮೀಮಾಂಸೆಯು ತಿರುಗಿಬೀಳುವ ಈ ಗಳಿಗೆಗಳೇ ತನ್ನ ನಿಜ ಸ್ವರೂಪ ಕಂಡುಕೊಳ್ಳುವ ಜ್ಞಾನೋದಯದ ಕ್ಷಣಗಳು. ರತ್ನಾಕರವರ್ಣಿ 'ಸಕಲ ಲಕ್ಷಣವೂ ವಸ್ತುಕಕೆ, ವರ್ಣಕಕಿಷ್ಟು ವಿಕಳವಾದರೂ ದೋಷವಿಲ್ಲ' ಎನ್ನುವಾಗಲೂ ದೋಷವೇ ನಮ್ಮ ಗುಣವೆಂಬ ನಿಲುವನ್ನು ಪ್ರಕಟಿಸುತ್ತಾನೆ. ಆಫ್ರಿಕಾದ ಕಪ್ಪು ಸಾಹಿತ್ಯ ಮೀಮಾಂಸಕರು ಕೂಡ ಯುರೋಪಿನ ಸಾಹಿತ್ಯ ತತ್ವಗಳ ಎದುರು ಇಂತಹ ಹಠಮಾರಿತನದ ಮೂಲಕ ತಮ್ಮ ಸಾಹಿತ್ಯ ಮೀಮಾಂಸೆ ಕಟ್ಟಿಕೊಂಡಿದ್ದಾರೆ. ಹೀಗೆ ಹಠಹಿಡಿದು ಪಡೆದುಕೊಳ್ಳುವ ಸ್ವ–ತತ್ವವು ಕೇವಲ ಸಾಹಿತ್ಯಕವಾಗಿ ಇರುವುದಿಲ್ಲ. ಅದು ಭಾಷೆ, ನಾಡು, ಸಮುದಾಯಗಳ ಹಿತಾಸಕ್ತಿಯ ಭಾಗವಾಗಿ ಏಕೀಕರಣ ಗೊಂಡುಬಿಡುತ್ತದೆ. 'ಕವಿರಾಜಮಾರ್ಗ'ದ ಮಹತ್ವ ಇರುವುದೇ ಇಲ್ಲಿ. ಶಂಕರಭಟ್ಟರ 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' (2000) ಇಂತಹ ಹಠಮಾರಿತನದ ಹುಡುಕಾಟದಲ್ಲಿ ಇತ್ತೀಚಿನದು. ಇದರ ಶೀರ್ಷಿಕೆಯೆ ಒಂದು ಘೋಷವಾಕ್ಯ. ಇದರಲ್ಲಿ ಕನ್ನಡವು ಮತ್ತೊಂದರ 'ಪಡಿನೆಳಲು' ಆಗಿರುವ ಕಷ್ಟವನ್ನು ವಿಶ್ಲೇಷಿಸಲಾಗಿದೆ. ಕನ್ನಡವು 'ತನ್ನತನ' ಪಡೆದುಕೊಳ್ಳಲು ಬೇಕಾದ ಸಂಕಲ್ಪವೂ ಇಲ್ಲಿದೆ.

ಈ ಮೇಲಿನ ಕೃತಿಗಳ ಕುರಿತಾದ ಚರ್ಚೆ ನಮಗೆ ಎರಡು ವಿಷಯಗಳನ್ನು ಮನದಟ್ಟು ಮಾಡುತ್ತದೆ. ಒಂದು ಕನ್ನಡದ ಸಂದರ್ಭದಲ್ಲಿ ಅನುಭಾವ ಚಿಂತನೆ

ಎಂಬುದು ಒಂದು ಸ್ವತಂತ್ರ ಚಿಂತನಾಧಾರೆಯಾಗಿ ಸಾಮಾನ್ಯನಿಗೆ ತಲುಪಿಲ್ಲ ಇದಕ್ಕೆ ಕಾರಣ ವಸಾಹತುಶಾಹಿ ಒತ್ತಡಗಳು ಮತ್ತು ಎಲ್ಲಾ ಸಾಹಿತ್ಯ ಪ್ರಕಾರಗಳನ್ನು ಭಾರತೀಯ ಆಧ್ಯಾತ್ಮಿಕ ಚೌಕಟ್ಟಿನಲ್ಲಿ ವಿವರಿಸಿರುವದು ಎಂಬುದು ಒಂದಾದರೆ,

ಮತ್ತೊಂದು ಡಿ.ಆರ್. ನಾಗರಾಜ್ ಗುರುತಿಸುವಂತೆ ಈ ವಿಸ್ಮೃತಿ ಎಂಬುದು ನಮ್ಮ ಅಧಿಕಾರ ಕೇಂದ್ರಗಳು, ಜ್ಞಾನ ಪ್ರಸಾರ ಕೇಂದ್ರಗಳು, ಶಿಕ್ಷಣ ಪ್ರಸಾರದ ಕೇಂದ್ರಗಳು ಎಂಬುದಾಗಿ ಯಾವುವನ್ನು ಕರೆಯುತ್ತೇವೆಯೋ ಅಲ್ಲಿಗೆ ಬಂದಿದೆಯೇ ಹೊರತು ಜನ ಜೀವನದ ಸಾಮನ್ಯ ಹಂತದೊಳಗೆ ಬಂದಿಲ್ಲ. ಇವತ್ತಿಗೂ ನಮ್ಮಲ್ಲಿ ಕೆಳಜಾತಿಗಳು, ಶೂದ್ರರೂ, ಸಂತರೂ ಅನುಭಾವಿಗಳ ಪರಂಪರೆಗಳು, ಆಚರಣೆಗಳು ಬಹುಜನ ಸಮಾಜದ ಜೀವನ ಮಟ್ಟದಲ್ಲಿ ಜೀವಂತವಾಗಿ ಉಳಿದಿವೆ ಎಂಬುದುದಾಗಿದೆ.

ಈ ಎರಡು ಅಂಶಗಳು ನಮಗೆ ಒಂದು ಮಹತ್ವದ ಸಂಗತಿಯನ್ನು ಮತ್ತು ಅನುಭಾವಿ ಪರಂಪರೆಯ ಸಂಶೋಧನೆಯಲ್ಲಿ ಸಾಗಲು ಬೇಕಾದ ಮುಖ್ಯವಾದ ದಾರಿಯನ್ನು ತೋರಿಸುತ್ತವೆ. ಅದರಲ್ಲಿ ಮುಖ್ಯವಾದದ್ದು ಇಂದು ಒಂದು ಸಂಸ್ಕೃತಿ ಮತ್ತು ಸಂಪ್ರದಾಯವನ್ನು ನೋಡುವ ಕ್ರಮವನ್ನು ವಸಾಹತುಶಾಹಿ, ಮತ್ತು ಒಂದು ವರ್ಗ ಪ್ರಭಾವಿಸಿದ್ದರೂ, ಆ ಪ್ರಭಾವ ಜ್ಞಾನ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದೆಯೇ ಹೊರತು ಜನಸಾಮಾನ್ಯರ ಜೀವನದ ಮೇಲೆ ಪರಿಣಾಮ ಬೀರಿಲ್ಲ. ಇಂದಿಗೂ ನಮ್ಮ ನಡುವಿನ ಜನ ಸಮುದಾಯಗಳು ಅನುಭಾವಿಕ ಪರಂಪರೆಯ ಭಾಗವಾಗಿಯೇ ಬದುಕನ್ನು ನಿರ್ವಹಿಸುತ್ತಿವೆ. ಅವರ ಬದುಕನ್ನು ನಿರ್ವಹಿಸುತ್ತಿರುವುದು ಅನುಭವವೇ ಹೊರತು, ಯಾವುದೇ ನಿಯಂತ್ರಿತ ಜ್ಞಾನ ಚೌಕಟ್ಟುಗಳಲ್ಲ. ಆದ್ದರಿಂದ ನಮಗಿರುವ ಮುಖ್ಯ ಸವಾಲು ಜನರಿಗೆ ಅನುಭಾವಿಕ ಬದುಕಿನ ಕುರಿತು ಪ್ರಜ್ಞೆ ಮೂಡಿಸುವುದಲ್ಲ, ಬದಲಾಗಿ ಒಂದು ಕಾಲದ ಇಡೀ ಅನುಭಾವ ಸಾಹಿತ್ಯ ಮತ್ತು ಜ್ಞಾನವನ್ನು ಸಂಕುಚಿತ ಮತ್ತು ರಾಜಕೀಯ ಪ್ರೇರಿತ ಚೌಕಟ್ಟುಗಳಲ್ಲಿ ನಿಯಂತ್ರಿಸುತ್ತಿರುವ ಜ್ಞಾನ ಕೇಂದ್ರಗಳ ಮಾದರಿಗಳನ್ನು ಪ್ರಶ್ನಿಸುವುದು ಮತ್ತು ಅವುಗಳಿಗೆ ಪರ್ಯಾಯವಾಗಿ ಅನುಭಾವಿ ಚಿಂತನಾಧಾರೆಯನ್ನು ಅವು ಇರುವಂತೆಯೇ ಗ್ರಹಿಸಿ ವಿವರಿಸುವುದು ನಮ್ಮ ಮುಂದಿರುವ ಮುಖ್ಯ ಸವಾಲಾಗಿದೆ.

ಈ ಸವಾಲನ್ನು ನಿರ್ವಹಿಸಲು ಪ್ರಸ್ತುತ ಸಂಶೋಧನೆ ಕನಕದಾಸರ ಅನುಭಾವಿಕ ನೆಲೆಗಳನ್ನು ಗುರುತಿಸುವ ಒಂದು ಪ್ರಯತ್ನದ ಅತಿ ಸಣ್ಣ ಭಾಗವಾಗಿದೆ. ಈ ಹಂತದಲ್ಲಿ ಕನಕರನ್ನು ಕೇವಲ ಒಬ್ಬ ಆಧ್ಯಾತ್ಮ/ಭಕ್ತಿ ಚಿಂತಕನಾಗಿ ಗುರುತಿಸಿರುವ ಚಿಂತನಾ ಮಾದರಿಯನ್ನು ಪ್ರಶ್ನಿಸುವ ಮೂಲಕ ಅವರಲ್ಲಿನ ಸಮಷ್ಟಿಯ ಒಟ್ಟು ಬೆಳವಣಿಗೆಯನ್ನು ಕುರಿತ ನೈಜ ಚಿಂತನೆಯ ಧಾರೆಯೊಂದನ್ನು ಅನುಭಾವಿಕ ಚೌಕಟ್ಟಿನಲ್ಲಿ ನೋಡುವ ಕ್ರಮವನ್ನು ಆಧರಿಸಿದೆ. ಈ ದಾರಿಯಲ್ಲಿ ಸಾಗಲು ಮೊದಲು

ಇದುವರೆಗೂ ಕನಕರನ್ನು ಗ್ರಹಿಸಿರುವ ರೀತಿ ಮತ್ತು ಅವುಗಳಲ್ಲಿನ ಮಿತಿಗಳ ಪರಿಚಯ ಅತ್ಯಂತ ಮಹತ್ವದ್ದಾಗಲಿದೆ, ಈ ಅಧ್ಯಯದ ಮುಂದಿನ ಭಾಗ ಭಾರತೀಯ ಸಂದರ್ಭದಲ್ಲಿ ಸಂತರು ಮತ್ತು ದಾಸರನ್ನು ಗುರುತಿಸಿರುವ ವಾದರಿಗಳಲ್ಲಿನ ಮಿತಿಗಳನ್ನು ಗುರುಸಿಸುವ ಮೂಲಕ ಅಂತಿಮವಾಗಿ ಕನಕದಾಸರನ್ನು ಅವರ ಚಿಂತನೆಗಳನ್ನು ಗ್ರಹಿಸಿರುವ ಪ್ರಭಾವಿ ಚೌಕಟ್ಟಿನ ಕುರಿತು ವಿಮರ್ಶೆಯನ್ನು ಬೆಳೆಸುವ ದಾರಿಯನ್ನು ತನ್ನದಾಗಿಸಿಕೊಳ್ಳಹೊಟರಿದೆ.

ಈ ದಾರಿಯಲ್ಲಿ, **ಡಾ. ವಸು ಎಂ.ವಿ.** ಅವರ **ಕನಕದಾಸರು: ಅಂತರ್ಗತ ಧಾರೆಗಳು** ಎಂಬ ಲೇಖನದ ಕೆಲವು ವಾದಗಳು ಕನಕದಾಸರ ಕುರಿತಾಗಿನ ಸಮಕಾಲೀನ ಅಧ್ಯಯನಗಳ ಮಿತಿಗಳನ್ನು ಗುರುತಿಸುವ ಪ್ರಯತ್ನ ಮಾಡುತ್ತದೆ ಅದನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಕನಕದಾಸರನ್ನು ಸಮಕಾಲೀನ ಸಾಮಾಜಿಕ ರಾಜಕೀಯ ಹಿನ್ನೆಲೆಯಲ್ಲಿ ಒಂದು ಸಮುದಾಯದ ಸಾಂಸ್ಕೃತಿಕ ನಾಯಕನಾಗಿ ನೋಡಲಾಗುತ್ತಿದೆ. ಕುರುಬ ಸಮುದಾಯ ಕನಕದಾಸರನ್ನು ತಮ್ಮ 'ಕಲ್ಚರಲ್ ಐಕಾನ್' ಆಗಿ ನೋಡುವಾಗ ಕರ್ನಾಟಕದ ಹಿಂದುಳಿದ ವರ್ಗಗಳ ಚಳವಳಿ, ಸಮುದಾಯಗಳ ಐಡೆಂಟಿಟಿಯ ಪ್ರಶ್ನೆ, ಅದಕ್ಕಾಗಿ ಹುಡುಕಾಡುವ ಚಾರಿತ್ರಿಕ ವ್ಯಕ್ತಿಗಳು....ಹೀಗೊಂದು ತಾರ್ಕಿಕ ಒಳಸುಳಿಯನ್ನು ಗುರುತಿಸಬಹುದಾಗಿದೆ. ಹಾಗೆಯೇ ಕನಕದಾಸರನ್ನು ನೆನೆಯುವುದು ಭಕ್ತಿಪಂಥ, ವೈಷ್ಣವ ಭಕ್ತಿ, ದಾಸಕೂಟ, ಮಧ್ಯಯುಗದ ಜಾತಿ ವ್ಯವಸ್ಥೆಯ ಅವಮಾನ, ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ. ಇಂತಹ ವ್ಯಕ್ತಿತ್ವವೊಂದು ಹದಿನಾರನೆಯ ಶತಮಾನದಲ್ಲಿ ರೂಪಿತವಾಗುವಾಗ ಅದು ಇದ್ದಕ್ಕಿದ್ದಂತೆ ಘಟಿಸಿದ ಸಂಗತಿಯಾಗದೇ, ಹುಡುಕುತ್ತಾ ಹೋದರೆ, ಅದರ ಬೆನ್ನಲ್ಲಿ ಸುದೀರ್ಘ ಪರಂಪರೆಯೇ ಇದೆ ಎನ್ನುವುದು ವಿಷಯಕ್ಕೆ ವಿಸ್ತರಣೆಯನ್ನು ನೀಡುತ್ತದೆ.

ಭಕ್ತಿ ಪಂಥದ ಹುಟ್ಟಿನಲ್ಲೇ ಜಾತಿ ಭೇದದ ವಿರೋಧ ಅಡಗಿದೆ. ಹಾಗಾಗಿ ಭಕ್ತಿ ಸಾಹಿತ್ಯದುದ್ದಕ್ಕೂ ಜಾತಿ ವ್ಯವಸ್ಥೆಯನ್ನು ನಿರಾಕರಿಸುತ್ತ ಬಂದಿದ್ದಾರೆ. ಆದ್ದರಿಂದಲೇ ಭಕ್ತಿ ಸಾಹಿತ್ಯವನ್ನು ಕುರಿತು ಬರೆಯುವಾಗ ಆಧುನಿಕ ಸಂದರ್ಭದಲ್ಲಿ ಸಾಮಾಜಿಕ ಧಾರ್ಮಿಕ ಸುಧಾರಣಾ ಚಳವಳಿ ಎಂದು ಕರೆಯುವ ವಾಡಿಕೆ ಬೆಳೆದುಬಂದಿದೆ. ಕನಕದಾಸರು ಸ್ವತಃ ಕುಲನಿಂದೆಗೆ ಒಳಗಾದುದರಿಂದ, ಅವರ ಸಾಹಿತ್ಯ ಕೇವಲ ವಿಷ್ಣುಭಕ್ತಿಗೆ ಮೀಸಲಾಗದೆ ಜಾತಿ ವ್ಯವಸ್ಥೆಯನ್ನು ವಿರೋಧಿಸುವ ನಿರಂತರ ಪ್ರಯತ್ನ ಕಾಣಬರುತ್ತದೆ. ಅವರ ಕೀರ್ತನೆಗಳಲ್ಲಿ ಅಲ್ಲಲ್ಲಿ ಕಾಣಬಂದರೆ ಅದನ್ನೇ ಕೇಂದ್ರವಸ್ತುವಾಗಿ ಇರಿಸಿಕೊಂಡು ಬಂದ ಕಾವ್ಯ ರಾಮಧಾನ್ಯ ಚರಿತೆ. ಕುಲದ ಕ್ಷುಲ್ಲಕತೆಯನ್ನು ಹೇಳುವ ಮಾತುಗಳು ಪಂಪನಿಂದಲೂ ಕಾಣಬರುತ್ತದೆ. ವಚನ ಚಳವಳಿಯಲ್ಲಿ ಜಾತಿ ನಿರಾಕರಣೆ ವಿಸ್ತಾರವಾಗಿ ಕಾಣಬರುತ್ತದೆ. ಆದರೆ

ಅದನ್ನೇ ವಸ್ತುವಾಗಿರಿಸಿಕೊಂಡು ರಾಗಿ ಮತ್ತು ಅಕ್ಕಿಯ ಪೈಪೋಟಿಯನ್ನು ರೂಪಕಗೊಳಿಸಿ ಸಂಕೇತ ಭಾಷೆಯಲ್ಲಿ ಸಮಾಜವನ್ನು ಟೀಕೆಗೆ ಒಳಪಡಿಸುವ ರೀತಿ ಅಪರೂಪವಾದುದು. ಆದ್ದರಿಂದಲೇ ಕನಕದಾಸರಲ್ಲಿ ಭಕ್ತಿಧಾರೆ, ಕಾವ್ಯಧಾರೆ, ಸಂಗೀತಧಾರೆ ಇವೆಲ್ಲವೂ ಅಂತರ್ಗತವಾಗಿದ್ದರೂ ಅಂತಹ ಕಡೆ ಸ್ವಂತಿಕೆಯನ್ನು ಗುರುತಿಸಲೇಬೇಕಾಗುತ್ತದೆ.

ಭಾರತೀಯ ಪರಂಪರೆಯಲ್ಲಿ ಹರಿದುಬಂದ ಶ್ರಾವಕ, ಸಂತ, ಭಕ್ತಿ, ಜ್ಞಾನ, ವೈಚಾರಿಕ ಇವೆಲ್ಲವೂ ಹದಿನಾರನೆ ಶತಮಾನದವರೆಗೆ ಗುರುತಿಸುವಂತೆ ಆ ನಂತರವೂ ಅದು ವಿಭಿನ್ನ ಸ್ವರೂಪದಲ್ಲಿ ಮುಂದುವರೆದುದನ್ನು ಹುಡುಕುತ್ತ ಹೋಗಬೇಕಾಗುತ್ತದೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಎತ್ತಿಕೊಂಡ ಈ ಪ್ರಶ್ನೆಗಳು ಅದರ ನಿರಂತರತೆಗೆ ಸಾಕ್ಷಿಯಾಗಿದೆ.

ಈ ವಾದದ ಒಟ್ಟು ಸಾರ ಕನಕದಾಸರ ಕುರಿತ ಆಧುನಿಕ ನಿರೂಪಣೆ ಅವರನ್ನು ಒಬ್ಬ ಸಾಂಸ್ಕೃತಿಕ ನಾಯಕನಾಗಿ ನೋಡುವ ಒತ್ತಡಕ್ಕೆ ಸಿಲುಕಿದ್ದರೂ, ಒಟ್ಟು ಕನಕ ಚಿಂತನೆ ಎಂಬುದು ಜಾತಿ ತಾರತಮ್ಯಗಳನ್ನು ವಿರೋಧಿಸುವ ಅಂತರ್ಗತ ಚೈತನ್ಯವನ್ನು ಒಳಗೊಂಡಿದೆ ಎಂಬುದಾಗಿ ವಿವರಿಸುತ್ತದೆ. ಮೇಲಾಗಿ ನಾವು ಯಾವುದನ್ನು ಭಕ್ತಿ ಪಂಥ ಎಂದು ಗುರುತಿಸುತ್ತೇವೆಯೋ ಅದು ಹುಟ್ಟಿನಿಂದಲೇ ಜಾತಿ ತಾರತಮ್ಯಗಳನ್ನು ವಿರೋಧಿಸುವ ಒಂದು ಕ್ರಮವನ್ನು ತನ್ನದಾಗಿಸಿಕೊಂಡಿದೆ ಎನ್ನುವ ಲೇಖಕಿ ಕನಕದಾಸರು ಇದಕ್ಕೆ ಹೊರತಾಗಿರಲಿಲ್ಲ ಎಂಬ ವಾದವನ್ನು ಅವರ ಕೆಲವು ಕೀರ್ತನೆಗಳನ್ನು ಉದಾಹರಿಸುವ ಮೂಲಕ ಮುಂದಿಡುತ್ತಾರೆ.

ಈ ವಾದಕ್ಕೆ ಪೂರಕವೆಂಬಂತೆ ನಮ್ಮ ನಡುವಿನ ಸೃಜನಶೀಲ ಚಿಂತಕರಾದ **ಡಾ. ಬಸವರಾಜ ಕಲ್ಗುಡಿಯವರು** ಕನಕದಾಸರ ಕುರಿತ ಒಂದು ಪುಸ್ತಕಕ್ಕೆ ಬರೆದಿರುವ **"ಕನಕನೆಂಬ ವರ್ತಮಾನದ ತುರ್ತು"** ಎಂಬ ಹೆಸರಿನ ಪ್ರಸ್ತಾವನೆಯಲ್ಲಿ ಕೆಲವು ಮಹತ್ವದ ವಿಷಯಗಳನ್ನು ವಿಶ್ಲೇಷಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

**ಡಾ. ಬಸವರಾಜ ಕಲ್ಗುಡಿಯವರು ಚರ್ಚಿಸಿದಂತೆ,** 15–16ನೆಯ ಶತಮಾನದ ದಾಸ ಚಳುವಳಿಯನ್ನು ನಾವು ವಚನ ಚಳುವಳಿಯೊಂದಿಗೆ ಸಂವಾದಿಯಾಗಿ ಗುರುತಿಸುವ ವಾಡಿಕೆ ಇದೆ. ಆದರೆ ವಚನ ಚಳುವಳಿಗೆ ಇದ್ದ ಖಚಿತ ಸಾಮಾಜಿಕ ದರ್ಶನವು, ದಾಸ ಚಳುವಳಿಯ ಪ್ರಮುಖವಾದ ಆಶಯವಾಗಿತ್ತು ಎಂದು ಹೇಳಲಾಗುವುದಿಲ್ಲ. ಬ್ರಾಹ್ಮಣ್ಯದ ಶ್ರೇಷ್ಠತೆ, ಕುಟುಂಬದ ಪಾರಂಪರಿಕ ರಚನೆಯ ಬಗ್ಗೆ ತೋರುವ ಒಲವು, ಇವುಗಳನ್ನು ಗಮನಿಸಿದರೆ ಸಾಂಪ್ರದಾಯಿಕ ಸಾಮಾಜಿಕ ಸಂರಚನೆಯನ್ನು ಅವು ಪ್ರಶ್ನಿಸಲಿಲ್ಲ ಎನ್ನುವುದು ಸ್ಪಷ್ಟ. 'ಉತ್ತಮ ಪ್ರಭುತ್ವ ಲೊಳಲೊಟ್ಟೆ'

ಎನ್ನುವಂಥ ಮಾತುಗಳಲ್ಲಿ ಪ್ರಭುತ್ವ ಕುರಿತು ಟೀಕೆ ಕಂಡರೂ ಕೀರ್ತನ ಪರಂಪರೆಯನ್ನು ಶುದ್ಧಾಂಗವಾಗಿ ಭಕ್ತಿರಚನೆಗಳು ಎನ್ನಬೇಕಾಗುತ್ತದೆ. ನರಮಾನವನಿಗಿಂತ ಹಿರಿದಾದ, ಅಪ್ರಮೇಯವಾದ ದೈವದ ನಿರಂತರ ಸ್ತುತಿ ಹಾಗೂ ಅವನ ಸಾನಿಧ್ಯದ ಬಯಕೆಯನ್ನು ತೀವ್ರವಾಗಿ ಹೇಳುವ ರೀತಿಯಿಂದ ಇವುಗಳನ್ನು 'ಶುದ್ಧ ಭಕ್ತಿರಚನೆಗಳು' ಎಂದು ಕರೆಯಬೇಕು. ಪುರಂದರರ ಕೀರ್ತನೆಗಳಲ್ಲಿ ದಾಸನಿಗೆ ಇರಬೇಕಾದ ನೈತಿಕತೆ, ಕುಲದ ನಿರಾಕರಣೆ ಮುಂತಾದ ಅಂಶಗಳು ಭಕ್ತನ ಮುಖ್ಯ ಗುಣವೆಂದು ತಿಳಿಯಲಾಗಿದೆ. ಆದರೂ 'ಮಧ್ವಮತ' ಅನುಯಾಯಿ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

'ರಾಮಧಾನ್ಯ ಚರಿತೆ'ಯಲ್ಲಿ ಪ್ರಭುತ್ವದಲ್ಲಿ ಇರಬೇಕಾದ ಆದರ್ಶಗುಣವನ್ನು ಭಕ್ತಿಯ ಒಂದು ಮುಖ್ಯ ತತ್ವ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಬೇಕಾದ ಬಗೆಯನ್ನು ಇಲ್ಲಿ ಕನಕದಾಸರು ಚಿತ್ರಿಸುತ್ತಿದ್ದಾರೆ. ಅದು 'ಅಹಂ ನಿರಸನ' ತತ್ವ. 'ರಾಮಧಾನ್ಯ ಚರಿತೆ'ಯ ಬಗ್ಗೆ ಬರೆದ ಬಹುಪಾಲು ವಿಮರ್ಶಕರು ಅದರ ವಸ್ತುವಿನ ವ್ಯಾಖ್ಯಾನವನ್ನು ಸರಳ ಸಾಮಾಜಿಕ ಸಂಘರ್ಷದ ನೆಲೆಯಲ್ಲಿಯೇ ವಿವರಿಸಿದ್ದಾರೆ. ಬ್ರಾಹ್ಮಣ–ಶೂದ್ರ, ಮೇಲೆ–ಕೀಳು ಜಾತಿಯಲ್ಲಿ ಶೂದ್ರ ಅಥವಾ ಕೆಳಜಾತಿಯ ವ್ಯಕ್ತಿತ್ವವೇ ಶ್ರೇಷ್ಠವೆಂಬ ನಿಲುವನ್ನು ಸಾರುತ್ತವೆ ಎಂಬ ವ್ಯಾಖ್ಯಾನವು ಮುಖ್ಯವಾಗಿ ಪ್ರತಿಪಾದಿತವಾಗಿದೆ. ಆದರೆ ಈ ಕಾವ್ಯವು ಸಾಮಾಜಿಕ ಉದ್ದೇಶದಿಂದ ಬರೆದದ್ದಲ್ಲ. ಕಾವ್ಯದ ವಸ್ತುವಿನ ಮೂಲ ಆಶಯ ಎಲ್ಲ ವ್ಯಕ್ತಿತ್ವಗಳಲ್ಲಿರುವ 'ಅಹಂ' ಅನ್ನು ನಿರಸನಗೊಳ್ಳುವ ಬಗೆಯನ್ನು ತೋರಿಸುವುದೇ ಆಗಿದೆ. ದೈವತ್ವದೆಡೆಗೆ ಸಾಗುವ ದಾರಿಯಲ್ಲಿ ಮೊದಲ ಹೆಜ್ಜೆ ಎಂದರೆ ಅಹಂ ನಿರಸನ. ಭಕ್ತನ 'ಅಹಂ' ಅನ್ನು ಹೋಗಲಾಡಿಸಿದಂತೆ, ರಾಮನು ಇಲ್ಲಿ ರಾಗಿಯ 'ಅಹಂ' ಅನ್ನೂ ಹೋಗಲಾಡಿಸುವ ಕೆಲಸ ಮಾಡುತ್ತಾನೆ. 'ರಾಮಧಾನ್ಯ ಚರಿತೆ'ಯಲ್ಲಿ ಭತ್ತ ತಾನು ಬ್ರಾಹ್ಮಣ ಎಂದೇನೂ ಹೇಳುತ್ತಿಲ್ಲ. ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲಕ್ಕೆ ಹೋಗುವವನನ್ನು ಅನುಸರಿಸುವ ಮೌಲ್ಯಕ್ಕೆ ಭತ್ತ ಪ್ರತೀಕವಾಗುತ್ತಿದೆ. ಅದು ಎಷ್ಟು ಟೊಳ್ಳು ಎನ್ನುವುದನ್ನು ಕನಕದಾಸರು 'ರಾಮಧಾನ್ಯ ಚರಿತೆ'ಯಲ್ಲಿ ವಿವರಿಸಿದ್ದಾರೆ. ರಾಗಿಗೂ ಒಂದು 'ಅಹಂ' ಇದೆ. ಅದನ್ನು ಕಾವ್ಯದಲ್ಲಿ ರಾಮ ನಿವಾರಿಸುತ್ತಾನೆ. 'ರಾಮ' ಎನ್ನುವ ಪ್ರಭುತ್ವವು ಮಾಡಬಹುದಾದ 'ರಾಮಧರ್ಮ'ವನ್ನು ಕಾವ್ಯವು ವಿವರಿಸುತ್ತದೆ.

ಬಸವರಾಜ ಕಲ್ಗುಡಿ ಅವರ ಒಟ್ಟು ವಾದ, ಭಕ್ತ ಅಥವಾ ದಾಸನಾಗಿಯೂ ಸಾಮಾಜಿಕವಾಗಿ ಮೇಲು ಕೀಳಿನ ದೃಷ್ಟಿಕೋನದ ಚಿಂತನೆಯನ್ನು ಅನುಭವಿಸಿದ ಕನಕರು ಕೆಳಜಾತಿ ಸಮುದಾಯಗಳ ಬದುಕಿನ ನೋಟವನ್ನು ಕಂಡವರಾಗಿದ್ದರು. ಈ ನಿಲುವು ಅವರ ಕೀರ್ತನೆಗಳಲ್ಲಿ ಅವು ಅಂತ್ಯಂತ ಸ್ಪಷ್ಟವಾಗಿ ಗುರುತಿಸಬಹುದಾಗಿದೆ ಎನ್ನುವ ಲೇಖಕರು ಮೇಲು–ಕೀಳು ಅಹಂಗಳ

ನಿವಾರಣೆಯಾಗದೆ ಸಮಾಜವು ಸಮತೋಲನ ಸ್ಥಿತಿಗೆ ಹೋಗುವುದು ಸಾಧ್ಯವಿಲ್ಲವೆಂಬ್ರ ಕನಕರಿಗೆ ಖಚಿತವಾದ ನಂಬಿಕೆಯಾಗಿ ಉಳಿದಿತ್ತು ಎಂಬುದಾಗಿ ವಿಶ್ಲೇಷಿಸುತ್ತಾರೆ ಮತ್ತು ಇಂತಹದ್ದೆ ಒಂದು ಚಿಂತನಾಧಾರೆ ಮಂಟೆಸ್ವಾಮಿ, ನಿರ್ವಾಣಸ್ವಾಮಿಗೂ ಅವರುಗಳ ಪರಂಪರೆಗೂ ಇತ್ತು ಎಂಬುದನ್ನು ಗುರುತಿಸುವ ಲೇಖಕರು ಈ ಅಂಶವನ್ನು ಅತಿ ಮುಖ್ಯ ಸಂಗತಿ ಎಂದು ಗುರುತಿಸುತ್ತಾರೆ.

ಮೇಲಿನ ಎರಡು ವಿಶ್ಲೇಷಣೆಗಳು ನಮಗೆ ಕನಕದಾಸರಲ್ಲಿ ಇದ್ದ ಮತ್ತು ಇಂದಿನ ಆಧುನಿಕ ಸಮಾಜ ಲಾಭ ಹೊಂದಬಹುದಾದ ಚಿಂತನೆಯನ್ನು ಗುರುತಿಸುವ ಪ್ರಯತ್ನ ಮಾಡುವ ಮೂಲಕ ಕನಕರನ್ನು ಒಳಗೊಳ್ಳುವ ದಾರಿಯನ್ನು ವಿವರಿಸುವಂತೆ ಕಾಣುತ್ತವೆ. ಆದರೆ ಈ ಮಾದರಿಯ ವಿಶ್ಲೇಷಣೆಗಳಲ್ಲಿರುವ ಲೋಪವನ್ನು ಮತ್ತು ಸಂಕುಚಿತತೆಯನ್ನು **ಪ್ರೊ. ರಾಜಾರಾಮ ಹೆಗಡೆಯವರು "ಸಾಂಸ್ಕೃತಿಕ ಇತಿಹಾಸದ ಸ್ವೀಕೃತ ಮಾದರಿಗಳು"** ಎಂಬ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಇವರ ಪ್ರಕಾರ ಕನಕರನ್ನು ವಿವರಿಸುವ ಆಧುನಿಕ ಪ್ರಗತಿಪರ ನೋಟ ಮತ್ತು ವಿಶ್ಲೇಷಣೆಗಳು ವಾಸ್ತವದಲ್ಲಿ ಕನಕರನ್ನು ಒಳಗೊಳ್ಳಲು ಸೋಲುವಂತಹ ಮೂಲಭೂತ ಮಿತಿಯನ್ನು ಹೊಂದಿದೆ ಎನ್ನುವ ಮೂಲಕ ಒಂದು ಮಹತ್ವದ ಪ್ರಶ್ನೆಯನ್ನು ಎತ್ತಿದ್ದಾರೆ. ಅದನ್ನು ವಿವರವಾಗಿ ಈ ಮುಂದಿನಂತೆ ನೋಡಬಹುದಾಗಿದೆ.

ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಉದ್ದೇಶಗಳ ಕಥನಕ್ಕೆ ಒದಗಿಬರುವ ತೀರಾ ಮುಖ್ಯವಾದ ನಾಲ್ಕು ಮಾದರಿಗಳು ಈ ಮುಂದಿನಂತಿವೆ: 1) ಹಿಂದೂ–ಮುಸ್ಲಿಂ ವೈರತ್ವ ಹಾಗೂ ಸಂಘರ್ಷ. 2) ಹಿಂದೂ–ಮುಸ್ಲಿಂ ಸಂಕರ/ಸಮನ್ವಯ. 3) ಭಕ್ತಿ ಚಳುವಳಿ. 4) ಆರ್ಯ–ದ್ರಾವಿಡ ಸಂಕರಗಳು. ಈ ಮಾದರಿಗಳು ವಸಾಹತುಯುಗದಲ್ಲಿ ಭಾರತೀಯ ಸಮಾಜ ಮತ್ತು ಸಂಸ್ಕೃತಿಯ ಕುರಿತು ಪಾಶ್ಚಾತ್ಯರು ಪ್ರತಿಪಾದಿಸಿದ ಸತ್ಯಗಳನ್ನು ಆಧರಿಸಿವೆ. ಈ ನಾಲ್ಕು ಮಾದರಿಗಳಲ್ಲಿ ಮೊದಲೆರಡು ಭಾರತದಲ್ಲಿ ಹಿಂದೂಯಿಸಂ ಎಂಬ ರಿಲಿಜನ್ನಿದೆ ಹಾಗೂ ಅದಕ್ಕೆ ಇಸ್ಲಾಂ ಜೊತೆಗೆ ವೈರತ್ವವಿದೆ ಎಂಬ ಸತ್ಯವನ್ನು ಆಧರಿಸಿದೆ. ಅವು ಈ ರಿಲಿಜನ್ನುಗಳ ಸಂಬಂಧಗಳ ಕುರಿತು ಎರಡು ತದ್ವಿರುದ್ಧ ನಿರೂಪಣೆಗಳ ಸಾಧ್ಯತೆಯನ್ನು ಸೃಷ್ಟಿಸುತ್ತವೆ. ಮೂರನೆಯದು ಹಿಂದೂಯಿಸಂನ ಪುರೋಹಿತಶಾಹಿಯಾದ ಬ್ರಾಹ್ಮಣರು ಜಾತಿವ್ಯವಸ್ಥೆ ಎಂಬೊಂದು ಶೋಷಣಾತ್ಮಕ ವ್ಯವಸ್ಥೆಯನ್ನು ರಚಿಸಿದ್ದಾರೆ ಎಂಬ ಸತ್ಯದ ಮೇಲೆ ನಿಂತಿದ್ದು, ಬ್ರಾಹ್ಮಣ ಪುರೋಹಿತಶಾಹಿಯ ವಿರುದ್ಧದ ಹೋರಾಟಕ್ಕೆ ಆಕಾರವನ್ನು ನೀಡುತ್ತದೆಯಾದರೆ, ನಾಲ್ಕನೆಯದು ಆರ್ಯ ಜನಾಂಗವು ಭಾರತಕ್ಕೆ ಹೊರಗಿನಿಂದ ಬಂದು ದೇಸೀ ಜನಾಂಗಗಳನ್ನು ಗಮನಿಸಿದೆ ಎಂಬ ಸತ್ಯವನ್ನಾಧರಿಸಿದ್ದು. ದೇಶಿ ಸಂಸ್ಕೃತಿಯನ್ನು ಹಾಗೂ ಬಾಹ್ಯ ಸಂಸ್ಕೃತಿಯನ್ನು ಪ್ರತ್ಯೇಕವಾಗಿ ಭಾವಿಸಿಕೊಂಡು ಅವರೆಡರ ನಡುವಿನ ಮುಖಾಮುಖಿಯನ್ನು/ ಸಂಕರವನ್ನು ವಿವರಣೆಯ ಚೌಕಟ್ಟನ್ನಾಗಿ ಬಳಸಿಕೊಳ್ಳುತ್ತದೆ.

ಭಕ್ತಿ ಚಳುವಳಿಯ ಮಾದರಿಯ ಸಮಸ್ಯೆಯು ಮತ್ತೊಂದು ರೀತಿಯದು. ಇದು ಭಾರತೀಯ ಸಮಾಜವೆಂದರೆ ಮೂಲತಃ ಜಾತಿ ಎಂಬ ಶೋಷಣಾತ್ಮಕ ವ್ಯವಸ್ಥೆಯಾಗಿದೆ ಎಂಬ ತಿಳುವಳಿಕೆಯಿಂದ ರೂಪುಗೊಂಡಿದೆ. ಆದರೆ ಈ ವ್ಯವಸ್ಥೆಯಲ್ಲಿ ಭಕ್ತಿ ಚಳುವಳಿಯ ಪಾತ್ರವೇನು ಎಂಬ ಕುರಿತು ಪರಸ್ಪರ ವಿರುದ್ಧ ವಿವರಣೆಗಳಿವೆ. ಈ ವಿರುದ್ಧ ನಿರೂಪಣೆಗಳ ಪ್ರಕಾರ 12ನೆಯ ಶತಮಾನದವರೆಗೆ ಪುರೋಹಿತಶಾಹಿ ವ್ಯವಸ್ಥೆಯನ್ನು ಗಟ್ಟಿ ಮಾಡುತ್ತಿದ್ದ ಭಕ್ತಿ ಚಳುವಳಿಯು ನಂತರ ಪುರೋಹಿತಶಾಹಿಯ ವಿರುದ್ಧದ ಪ್ರತಿಭಟನೆಯಾಗಿ ಮಾರ್ಪಟ್ಟಿತು. ಇದೊಂದು ವಿಚಿತ್ರವಾದ ಬದಲಾವಣೆಯಾಗಿ ಕಾಣಿಸುತ್ತದೆ. ಆದರೆ ವಾಸ್ತವ ಸಂಗತಿಯೆಂದರೆ, ಈ ಚಳುವಳಿಯನ್ನು ಫ್ಯೂಡಲಿಸಂ ಮಾದರಿಯ ಮೂಲಕ ಅರ್ಥೈಸಿದಾಗ ಒಂದು ಥರ ಕಾಣಿಸುತ್ತದೆ. ಪ್ರೊಟೆಸ್ಟಾಂಟಿಸಂ ಮಾದರಿಯ ಮೂಲಕ ಅರ್ಥೈಸಿದರೆ ಅದಕ್ಕೆ ತದ್ವಿರುದ್ಧವಾಗಿ ಕಾಣಿಸುತ್ತದೆ. ಈ ಎರಡು ಮಾದರಿಗಳನ್ನು ಉಪಯೋಗಿಸುವವರು ಎರಡು ಬೇರೆ ಬೇರೆ ಕಾಲಖಂಡಗಳನ್ನು ಕುರಿತು ಹೇಳುತ್ತಿರುವುದರಿಂದ 12ನೆಯ ಶತಮಾನದಲ್ಲಿ ಒಂದು ಯುಗಪಲ್ಲಟವೇ ಆದಂತೆ ತೋರುತ್ತದೆ. ಹಾಗೂ ಆಯಾ ಮಾದರಿಗಳು ಐತಿಹಾಸಿಕ ಘಟನೆಗಳನ್ನು ಅರ್ಥಪೂರ್ಣವನ್ನಾಗಿ ಮಾಡುತ್ತವೆ ಎಂಬುದೂ ಸುಳ್ಳಲ್ಲ. ಆದರೆ ಒಂದೇ ಸಂಗತಿಯು ಕೇವಲ ಮಾದರಿಗಳ ಬದಲಾವಣೆಯಿಂದಾಗಿ ತದ್ವಿರುದ್ಧವಾಗಿ ಕಣಿಸುತ್ತದೆಯೆಂದರೆ, ಅವೆರಡೂ ಮಾದರಿಗಳೂ ಅಸಮರ್ಪಕವಾಗಿವೆ ಎಂಬುದಲ್ಲದೇ ಬೇರೇನೂ ಸೂಚಿಸಲಾರವು.

ಅದೇ ಭಕ್ತಿ ಚಳುವಳಿಯ ಕುರಿತು ತೀರಾ ವಿರುದ್ಧವಾದ ಧೋರಣೆಗಳೂ ಇವೆ. ಅಂದರೆ ಭಕ್ತಿ ಚಳುವಳಿಯು ರಿಲಿಜನ್ನಿನ, ಆ ಮೂಲಕ ಸಮಾಜದ ನಿಜವಾದ ಪರಿವರ್ತನೆಗಾಗಿ ನಡೆಯಿತು. ಇದು ಭಾರತೀಯ ಸಂದರ್ಭದಲ್ಲಿ ಜಾತಿ, ಮತ, ಲಿಂಗ ತಾರತಮ್ಯಗಳನ್ನಾಧರಿಸಿದ ಹಿಂದೂ ರಿಲಿಜನ್ನಿಗೆ ಕಾಣಿಸಿಕೊಂಡ ಪ್ರತಿರೋಧ ಹಾಗೂ ಸಮಾನತೆಗಾಗಿನ ಹೋರಾಟ ಎಂಬುದಾಗಿ ಈ ಧೋರಣೆಯನ್ನು ಒಪ್ಪುವವರು ಪ್ರತಿಪಾದಿಸುತ್ತಾರೆ. ಇಲ್ಲಿ ಪ್ರೊಟೆಸ್ಟಾಂಟ್ ಪ್ರತಿಪಾದನೆಗಳನ್ನು ಇದ್ದಕ್ಕಿದ್ದ ಹಾಗೇ ಒಪ್ಪಿಕೊಂಡು, ಅದರ ವಿವರಗಳನ್ನೆಲ್ಲ ಭಕ್ತಿ ಚಳುವಳಿಯ ಸಂದರ್ಭದಲ್ಲಿ ಭಾವಿಸಿಕೊಳ್ಳಲಾಗುತ್ತದೆ. 12ನೆಯ ಶತಮಾನದ ನಂತರ ಭಾರತದಾದ್ಯಂತ ಅಲ್ಲಲ್ಲಿ ಕಾಣಿಸಿಕೊಂಡ ಶ್ರೀವೈಷ್ಣವ, ವೀರಶೈವ, ವಾರ್ಕರಿ, ಚೈತನ್ಯ ಪಂಥ, ಕಬೀರ, ನಾನಕ, ಮೀರಾಬಾಯಿ ಮುಂತಾದ ಪಂಥಗಳನ್ನು ಈ ಸ್ವರೂಪದ ಚಳುವಳಿಗಳನ್ನಾಗಿ ಗುರುತಿಸಲಾಗಿದೆ. ಇವುಗಳ ಮುಖ್ಯಲಕ್ಷಣಗಳು ಹೀಗಿವೆ: 1. ಏಕದೇವೋಪಾಸನೆ. 2. ನಿರಾಕಾರ ಪರಮಾತ್ಮನ ಕಲ್ಪನೆ. 3. ಜಾತಿ ಭೇದವನ್ನು ನಿರಾಕರಿಸಿ ಕೆಳಜಾತಿಯವರಿಗೂ ಅನೇಕ ಕೆಳಜಾತಿಯ ಭಕ್ತರು ಈ

ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದುದನ್ನು ತೋರಿಸಲಾಗುತ್ತದೆ. 4. ಇವರು ಲಿಂಗಭೇದವನ್ನು ನಿರಾಕರಿಸಿದ್ದರಿಂದ ಅನೇಕ ಮಹಿಳಾ ಸಂತರೂ ಈ ಚಳುವಳಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಯಿತು. 5. ಕೆಳಜಾತಿಯ ಸಂತರಿಗೆ ಬ್ರಾಹ್ಮಣ ಅರ್ಚಕರು ಹಾಗೂ ಪಂಡಿತರು ಜಾತಿಯ ಕಾರಣಕ್ಕಾಗಿ ಅವಕಾಶವನ್ನು ನಿರಾಕರಿಸುತ್ತಾರೆ. ಹಾಗೂ ದೇವರೇ ತನ್ನ ಪವಾಡಗಳನ್ನು ತೋರಿಸುವ ಮೂಲಕ ಅವರ ಮಹಾತ್ಮೆಯನ್ನು ಎತ್ತಿಹಿಡಿಯುತ್ತಾನೆ. ಇಂಥ ವಿವಿಧ ರೂಪದ ಕಥೆಗಳನ್ನು ಜಾತಿ ದಮನ ಹಾಗೂ ಅದಕ್ಕೆ ಯಶಸ್ವೀ ಬಂಡಾಯ ಎಂಬುದಾಗಿ ಓದಲಾಗುತ್ತದೆ. 6. ಬ್ರಾಹ್ಮಣ ಪರೋಹಿತಶಾಹಿಯು ಶೂದ್ರರಿಗೆ ಅರ್ಥವಾಗದ ಭಾಷೆಯಲ್ಲಿ ರಿಲಿಜನ್ನಿನ ತತ್ವಗಳನ್ನು ಅಡಗಿಸಿಟ್ಟಿತ್ತು. ಭಕ್ತಿಯುಗದ ಸಂತರು ಪ್ರಾದೇಶಿಕ ಭಾಷೆಯಲ್ಲಿ ಕೃತಿಗಳನ್ನು ರಚಿಸಿ ಜನಸಾಮಾನ್ಯರಿಗೆ ತಿಳಿಯುವ ಹಾಗೆ ಬೋಧನೆ ಮಾಡಿದರು. ಈ ಬೋಧನೆಗಳು ಮೂಲತಃ ಸಾಂಸ್ಥಿಕ ವಿರೋಧವನ್ನು ಹಾಗೂ ಸಮಾನತೆಯ ತತ್ವಗಳನ್ನು ಪ್ರತಿಪಾದಿಸುತ್ತವೆ ಎಂಬುದಾಗಿ ನಂಬಲಾಗುತ್ತದೆ. 7. ಈ ಸಂತರು ವಿಭಿನ್ನ ಮತಪಂಥಗಳ ಸಂಘರ್ಷಗಳನ್ನು ತೊಡೆಯಲು ಸಾಮರಸ್ಯದ ಭೋದನೆಗಳನ್ನು ಮಾಡುತ್ತಾರೆ.... ಕಬೀರ, ನಾನಕ, ಸೂಫಿಗಳು ಮುಂತಾದವರ ಮಹತ್ವವನ್ನು ಈ ನಿಟ್ಟಿನಲ್ಲಿ ಕೂಡ ನಿರೂಪಸಿಸಲಾಗಿದೆ.

ಮೇಲಿನ ವಿವರಣೆಯಿಂದ ಅರ್ಥವಾಗಬಲ್ಲ ಅಂಶವೆಂದರೆ ಭಾರತೀಯ ಸಂದರ್ಭದಲ್ಲಿ ಯುರೋಪಿಯನ್ ಚೌಕಟ್ಟುಗಳು ಪರಿಚಿತವಾದ ಮೇಲೆ ನಮ್ಮ ಭಕ್ತಿ ಮತ್ತು ಸಂತ ಚಳುವಳಿಯನ್ನು ನೋಡುವ ಮತ್ತು ವಿವರಿಸುವ ರೀತಿಯಲ್ಲಿಯೇ ಮೂಲಭೂತ ಬದಲಾವಣೆಗಳು ಆಗಿವೆ. ಯಾವುದನ್ನು ನಾನು ಇಂದು ಪ್ರಗತಿಪರ ನಿಲುವು ಎಂದು ಕರೆಯುತ್ತೇವೆಯೋ ಅವು ಸಮಸ್ಯೆಯನ್ನು ನಿವಾರಿಸುವುದಕ್ಕಿಂತ ಸಮಸ್ಯೆಯನ್ನು ಹೆಚ್ಚಾಗಿಸುತ್ತಿವೆ. ಇದಕ್ಕೆ ಕಾರಣ ಈ ನಿಲುವುಗಳು ಯುರೋಪಿಯನ್ ಚಿಂತನಾಧಾರೆಯಿಂದ ಪ್ರಭಾವಿತವಾಗಿದೆ ಮತ್ತು ನಮ್ಮ ಸಾಮಾಜಿಕ ಸಂಗತಿ ಮತ್ತು ಅನುಭಗಳಿಂದ ಹೊರತಾಗಿವೆ ಎಂದು ವಿಶ್ಲೇಷಿಸುವ ಲೇಖಕರು ಇದನ್ನು ಕನಕನ ವಿಷಯದಲ್ಲಿ ಇನ್ನೂ ಸ್ಪಷ್ಟವಾಗಿ ಗುರುತಿಸಬಹುದು ಎನ್ನುವ ಮೂಲಕ ಮುಂದಿನಂತೆ ತಮ್ಮ ವಾದವನ್ನು ಹೆಣೆಯುತ್ತಾರೆ.

ವರ್ತಮಾನದ ಪ್ರಗತಿಪರರ ವಿವಾದಗಳು ಸಂಪ್ರದಾಯಸ್ಥರ ಇತಿಹಾಸವನ್ನು ಸಮಸ್ಯೀಕರಿಸಿ ವಿವಾದದ ಕಣವನ್ನಾಗಿ ಪರಿವರ್ತಿಸುತ್ತಿರುವುದು ಕನಕದಾಸರ ಸಂದರ್ಭದಲ್ಲಿ ಹೆಚ್ಚು ಸ್ಪಷ್ಟವಾಗಿದೆ. ಅಷ್ಟೇ ಅಲ್ಲ, ಕನಕದಾಸರಿಗೆ ಐತಿಹಾಸಿಕವಾಗಿ ಆದ ಅನ್ಯಾಯವನ್ನು ಸರಿಪಡಿಸುವ ಕಾರ್ಯಕ್ರಮವನ್ನು ಪೋಷಿಸಿಕೊಂಡೇ ಈ ವರ್ತಮಾನದ ವಿವಾದವನ್ನು ಎತ್ತಲಾಗಿದೆ. ಕನಕದಾಸರ ಕುರಿತು ಈ ಮೇಲೆ ಹೇಳಿದ ಮಾಹಿತಿಗಳು ಚ ವರ್ತಮಾನದ ರಾಜಕೀಯಕ್ಕೆ ನೆಲೆಯಾಗಬೇಕಾದರೆ,

ಈ ಮಾಹಿತಿಗಳು ಕೆಲವು ಸತ್ಯಗಳನ್ನು (Truths) ಒಳಗೊಂಡಿರಬೇಕು ಹಾಗೂ ಅದನ್ನು ಎರಡು ಹಂತಗಳಲ್ಲಿ ಸಾಧಿಸಬೇಕಾಗುತ್ತದೆ.

ಈ ಹಿನ್ನೆಲೆಯಿಂದಲೇ ಕನಕದಾಸರನ್ನು ಕುರಿತು ಬರೆಯುವಾಗ ಪ್ರಗತಿಪರ ಆಲೋಚನಾ ಕ್ರಮವು ಕೆಲವು ಪೂರ್ವತೀರ್ಮಾನಗಳನ್ನು ಆಧರಿಸಿ ರೂಪುಗೊಳ್ಳುತ್ತದೆ. ಹರಿದಾಸ ಸಂಪ್ರದಾಯವು ಬ್ರಾಹ್ಮಣ ಪುರೋಹಿತಶಾಹಿಯಿಂದ ರೂಪುಗೊಂಡಿದ್ದು, ಅವರೊಳಗೆ ಕನಕದಾಸರ ಜೀವನವು ಒಂದು ಶೂದ್ರರ ಹಕ್ಕಿಗಾಗಿನ ಹೋರಾಟವಾಗಿದೆ. ಬ್ರಾಹ್ಮಣರಿಗೆ ಅವರ ಕುರಿತು ಅಸಹನೆ, ಅಸೂಯೆಗಳಿದ್ದವು. ಹಾಗಾಗಿ ಅವರಿಗೆ ಬ್ರಾಹ್ಮಣ ಪಟ್ಟವನ್ನು ಕೊನೆಗೂ ನೀಡಲಿಲ್ಲ. ಅವರು ಕನಕನು ಜಾಣನೆಂದು ಹೊಗಳುವಾಗಲೂ ಕೂಡ 'ಅವನನ್ನು ಮತ್ತು ಅವನ ಜತನೆಯ ಮೇಲೆ ತಮ್ಮ ತಾತ್ವಿಕತೆಗೆ ಬಗ್ಗಿಸಿಕೊಳ್ಳಲು ಹೂಡಿದ ಹೂಟದ ಪ್ರಾರಂಭಿಕ ಹೆಜ್ಜೆಗಳಾಗಿ' ಇದನ್ನು ನೋಡಬೇಕು. ಅಂದರೆ ಬ್ರಾಹ್ಮಣರು ಅವನನ್ನು ನಿಸ್ಪೃಹವಾಗಿ ಹೋಗಳುವುದು ಸಾಧ್ಯವೇ ಇಲ್ಲ. ಹಾಗಾಗಿ ಕನಕರಿಗೆ ದಾಸಪಟ್ಟವನ್ನು ನೀಡುವುದರಲ್ಲೂ ಒಂದು ಸಂಚು ಅಡಗಿದೆ. ಒಟ್ಟಾರೆಯಾಗಿ ಕನಕದಾಸರ ಜಾತಿಯ ಕಾರಣದಿಂದಾಗಿ ಇಡೀ ಹರಿದಾಸ ಪರಂಪರೆಯಲ್ಲಿ ಅವರನ್ನು ಹೊರಗಿಡುವ, ಮೆಟ್ಟುವ ಪ್ರಯತ್ನಗಳು ನಡೆದವು ಹಾಗೂ ಬ್ರಾಹ್ಮಣ ಕರ್ಮಠರು ಅವರನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಅಭಿಪ್ರಾಯವು ದಟ್ಟವಾಗಿ ಇದೆ. ಬ್ರಾಹ್ಮಣ ಪುರೋಹಿತಶಾಹಿಗೆ ಶೂದ್ರರ ಕುರಿತು ಒಂದು ನಿರ್ದಿಷ್ಟವಾದ ಧೋರಣೆಯಿದೆ ಎಂಬ ಭದ್ರವಾದ ನಂಬಿಕೆಯೇ ಇಲ್ಲಿನ ಸಿದ್ಧಾಂತವಾಗಿದೆ.

ಇಂದು ನಾವು ನಿರ್ದಿಷ್ಟವಾಗಿ ಭಾವಿಸಿಕೊಳ್ಳುತ್ತಿರುವ ಕನಕರ ಶೂದ್ರತನದ ಆಯಾಮವು ರೂಪುಗೊಂಡಿದ್ದೇ ನಮ್ಮ ಆಧುನಿಕ ಜಾತಿವ್ಯವಸ್ಥೆಯ ಚೌಕಟ್ಟಿನಿಂದ ನಾವು ದಾಸ ಸಾಹಿತ್ಯವನ್ನು ನೋಡತೊಡಗಿದಾಗ. ಈಗ ನಾವು ಅವರ ಶೂದ್ರತನಕ್ಕೆ ಯಾವ ಯಾವ ಅರ್ಥಗಳನ್ನು, ಲಕ್ಷಣಗಳನ್ನು ನೀಡುತ್ತೇವೆಯೊ ಅವೆಲ್ಲವೂ ಜಾತಿ ವ್ಯವಸ್ಥೆಯ ಕುರಿತ ಆಧುನಿಕ ಸಿದ್ಧಾಂತದ ನಿಜಗಳಾಗಿವೆ ಹಾಗೂ ಈ ನಿಜಗಳನ್ನು ಆರೋಪಿಸುವ ಕೆಲಸವನ್ನು ಕೂಡಾ ಕನಕರ ನೆನಪನ್ನು ಉಳಿಸಿಕೊಂಡು ಬಂದ ಸಂಪ್ರದಾಯದವರೇ ಖುದ್ದಾಗಿ ಮಾಡಿದರು. ಅಂದರೆ ಕನಕದಾಸರನ್ನು ಅರ್ಥಮಾಡಿಸುವ ಪ್ರಕ್ರಿಯೆಯಲ್ಲಿ ಒಂದು ಹೊಸ ಗ್ರಹಿಕೆಯ ಚೌಕಟ್ಟು ಪ್ರಸ್ತುತತೆ ಪಡೆಯುವುದರಿಂದ ದಾಸರಲ್ಲೇ ಅಥವಾ ವಿಶಾಲಾರ್ಥದಲ್ಲಿ ಕೃಷ್ಣ ಭಕ್ತರಲ್ಲೇ ಪರಸ್ಪರ ವಿರುದ್ಧ ಹಿತಾಸಕ್ತಿಯ ಎರಡು ಗುಂಪುಗಳು ಸೃಷ್ಟಿಯಾಗುವುದು ಕಂಡುಬರುತ್ತದೆ. ಅವುಗಳಲ್ಲಿ ಒಂದು ಬ್ರಾಹ್ಮಣ ಪುರೋಹಿತಶಾಹಿಯಾಗಿ ಮಾರ್ಪಟ್ಟು ಮತ್ತೊಂದು ಶೂದ್ರವಾಗಿ ಮಾರ್ಪಟ್ಟು, ಮೊದಲನೆಯ ಗುಂಪು ಎರಡನೆಯ ಗುಂಪಿಗೆ ರಿಲಿಜನ್ನಿನ ಸ್ಥಾನಮಾನಗಳನ್ನು ನಿರಾಕರಿಸುವ ಚಿತ್ರಣವು ನುಸುಳುತ್ತದೆ.

ಈ ಮೇಲಿನ ಉದಾಹರಣೆಯು ಒಂದು ಧೋರಣೆಯಲ್ಲಾದ ಪಲ್ಲಟವನ್ನು ಸೂಚಿಸುತ್ತದೆ ಅಷ್ಟೇ. ಜಾತಿವ್ಯವಸ್ಥೆಯ ಕಥನವನ್ನು ಕನಕದಾಸರಿಗೆ ಜೋಡಿಸಲಿಕ್ಕೆ ಇಷ್ಟೇ ಸಾಕಾಗುವುದಿಲ್ಲ. ಮುಕ್ತಾಪಲರ ವಾದದ ಪ್ರಕಾರ ದಾಸ ಸಾಹಿತ್ಯವು ಜಾತ್ಯಾತೀತ ಗುಣಗಳನ್ನು ಒಳಗೊಂಡಿದೆ ಎಂಬುದಕ್ಕೆ ಕನಕದಾಸರೇ ದೃಷ್ಟಾಂತ. ಆದರೆ ಕನಕದಾಸರಿಗೆ ಈ ವ್ಯವಸ್ಥೆಯ ಕಹಿ ಅನುಭವವಾಗಿದೆ ಎನ್ನುವುದು ಇದರಿಂದ ಸಾಬೀತಾಗುವುದಿಲ್ಲ. ಕನಕರು ಈ ವ್ಯವಸ್ಥೆಯ ದೌರ್ಜನ್ಯಕ್ಕೆ ಒಳಗಾಗಿದ್ದರೆನ್ನುವ ಸಂಗತಿ ಹಾಗೂ ಅವರ ಭಕ್ತಿಯೆಂಬುದು ಈ ವ್ಯವಸ್ಥೆಯನ್ನು ಪ್ರತಿಭಟಿಸುವ ಒಂದು ಮಾಧ್ಯಮವೆನ್ನುವ ಸಂಗತಿಯನ್ನು ದೃಷ್ಟಾಂತ ಮಾಡಿಸಲು ಬೇರೆ ರೀತಿಯ ಮಾಹಿತಿಗಳು ಬೇಕಾಗುತ್ತವೆ. ಆದರೆ ಅವರ ಒಟ್ಟೂ ಕೃತಿಗಳನ್ನು ಪರಿಶೀಲಿಸಿದರೆ ಜಾತಿ ಭೇದವನ್ನು ಟೀಕಿಸುವ ಕೀರ್ತನೆಗಳು ಬೆರಳೆಣಿಕೆಯಷ್ಟಿವೆ.

ನಮ್ಮ ಇಂದಿನ ಜಾತಿ ವ್ಯವಸ್ಥೆಯ ಪರಿಭಾಷೆಗಳನ್ನು ಹಾಗೂ ವಾದಗಳನ್ನು ಅವು ವ್ಯಕ್ತಪಡಿಸುವುದಿಲ್ಲ ಎಂಬುದು. ಅವುಗಳನ್ನು ಸರಿಯಾಗಿ ಓದಿದರೆ ಗೊತ್ತಾಗುವ ವಿಷಯ. ಇಂದಿನ ಜಾತಿವ್ಯವಸ್ಥೆಯ ಪರಿಭಾಷೆಗಳನ್ನು ಕನಕದಾಸರಂಥವರ ಕೀರ್ತನೆಗಳಲ್ಲಿ ಹುಡುಕುವಾಗ ನಾವು ಕೇವಲ ಕೆಲವು ಶಬ್ದಗಳನ್ನು ಆಧರಿಸುತ್ತೇವೆ. ಕುಲ, ಜಾತಿ, ಬ್ರಾಹ್ಮಣ, ಯಜ್ಞ, ಮಂತ್ರ, ವೇದಪುರಾಣಗಳು, ಡಾಂಭಿಕ ಪೂಜೆ, ಇತ್ಯಾದಿಗಳ ಟೀಕೆ ನಡೆದಿದೆ ಎಂದಾಕ್ಷಣ ಜಾತಿ ವ್ಯವಸ್ಥೆಯ ಟೀಕೆಯ ಪರಿಭಾಷೆಗಳು ಅಲ್ಲಿ ಪ್ರಸ್ತುತವಾಗುತ್ತವೆ ಎಂಬುದಾಗಿ ಭಾವಿಸುವುದು ದುಡುಕುತನವಾಗುತ್ತದೆ. ಇವು ಆಚರಣೆಗಳ ಟೀಕೆಗಳಾಗಿವೆ. ಇಂದಿನ ಬುದ್ಧಿಜೀವಿಗಳು, ಪತ್ರಕರ್ತರು, ರಾಜಕಾರಣಿಗಳು, ನ್ಯಾಯಾಧೀಶರುಗಳು ಹಾಗೂ ಶಿಕ್ಷಕರು ಭ್ರಷ್ಟರಾಗಿದ್ದಾರೆ ಎಂಬುದಾಗಿ ಪತ್ರಿಕೆಗಳಲ್ಲಿ ಬರುತ್ತಿರುವ ಟೀಕೆಗಳ ಹಾಗೇ ಇವೂ ಕೂಡ. ಈ ಯಾವ ಕಸುಬುಗಳ ವಿರುದ್ಧವೂ ಹೋರಾಡಬೇಕೆನ್ನುವ ಅಥವಾ ಅವು ಇರಕೂಡದೆನ್ನು ಇಂಗಿತ ಅಂಥ ಟೀಕೆಗಳಲ್ಲಿ ಎಂಬುದನ್ನು ತಿಳಿದುಕೊಳ್ಳಲು ನಾವು ವಿಶೇಷ ವಾದಗಳನ್ನೇನೂ ಕಟ್ಟಬೇಕಾಗಿಲ್ಲ.

ಆದರೆ ಇಂಥ ಆಚರಣೆಗಳ ಟೀಕೆಗಳಿಲ್ಲದ ಕಡೆಯೂ, ಕೇವಲ ಈ ಮೇಲೆ ಸೂಚಿಸಿದ ಶಬ್ದಗಳು ಕಾಣಿಸಿಕೊಂಡಾಕ್ಷಣವೇ ಜಾತಿ ವ್ಯವಸ್ಥೆಯ ಟೀಕೆಯನ್ನು ಕಾಣುವ ಪ್ರವೃತ್ತಿಯೂ ಕುತೂಹಲಕಾರಿಯಾಗಿದೆ. ಅವರ 'ರಾಮಧಾನ್ಯ ಚರಿತೆ'ಯನ್ನು ಸಾಧಾರಣವಾಗಿ ಜಾತಿ ಸಂಘರ್ಷವೆಂಬುದಾಗಿಯೂ, ಬ್ರಾಹ್ಮಣ–ಶೂದ್ರ ಸಂಘರ್ಷವೆಂಬುದಾಗಿಯೂ ನಿರೂಪಿಸಲಾಗುತ್ತದೆ (ಅಕ್ಷಯ ಶೆಟ್ಟಿ; 2010: ಪುಟ 1–102). ಈ ಕಾವ್ಯದಲ್ಲಿ ಭತ್ತಕ್ಕೂ ರಾಗಿಯನ್ನು ತನಗಿಂತಲೂ ಕೀಳೆಂಬುದನ್ನು ಸಮರ್ಥಿಸಲು ತಾನು ಬ್ರಾಹ್ಮಣರ ವಿಧಿಗಳಲ್ಲಿ, ಶ್ರೀಮಂತರ ಮನೆಗಳಲ್ಲಿ ಸ್ಥಾನಪಡೆದುಕೊಂಡ ವಿಷಯವನ್ನು ತಿಳಿಸಿ ರಾಗಿಯು ಬಡವರ ಧಾನ್ಯವೆಂಬುದಾಗಿ ಹಂಗಿಸುತ್ತದೆ. ಹಾಗೂ ಈ ಸಂದರ್ಭದಲ್ಲಿ ರಾಗಿಯನ್ನು ಹಳಿಯುವಾಗ ಕುಲಹೀನ,

ಶೂದ್ರಾನ್ನ, ಎಂಬ ಪದಗಳೂ ಬರುತ್ತವೆ. ಅದಕ್ಕೆ ಪ್ರತಿಯಾಗಿ ಭತ್ತವು ಹೇಗೆ ಪಿಂಡರೂಪದಲ್ಲಿ ಎಳ್ಳುನೀರು ಬಿಡಿಸಿಕೊಳ್ಳುತ್ತದೆ ಎಂಬುದನ್ನು ರಾಗಿಯು ನೆನಪಿಸುತ್ತದೆ ಹಾಗೂ ತಾನು ಬಡವರ ಪರವೆಂಬುದನ್ನೇ ತನ್ನ ಹೆಗ್ಗಳಿಕೆಯನ್ನಾಗಿ ಮಾಡಿಕೊಳ್ಳುತ್ತದೆ.

ರಾಮನು ಇದರ ತೀರ್ಮಾನವನ್ನು ಮಾಡಲು ಒಂದು ಸಭೆ ಕರೆಯುತ್ತಾನೆ. ಇವರಿಬ್ಬರನ್ನು ಪರೀಕ್ಷಿಸಿದ ದೇವ–ಮುನಿಗಳೆಲ್ಲರೂ ರಾಗಿಯೇ ಹೆಚ್ಚು ಎಂಬುದಾಗಿ ತೀರ್ಮಾನಿಸುತ್ತಾರೆ. ರಾಮ ಹೇಳುವಂತೆ ರಾಗಿ ಏಕೆ ಹೆಚ್ಚೆಂದರೆ, ಬರದ ಕಾಲದಲ್ಲಿ ಅದು ಬಡವರಿಗೆ ಆಹಾರವಾಗುತ್ತದೆ. ಭತ್ತವು ದೀನ–ದರಿದ್ರರಿಗೆ ನಿರ್ದಯವಾಗಿರುವುದರಿಂದ ಅದಕ್ಕೆ ರಾಗಿಯ ಯೋಗ್ಯತೆಯಿಲ್ಲ. ಈ ಜಗಳವು ವರ್ಣತಾರತಮ್ಯದ ಕುರಿತಾಗಲೀ, ಜಾತಿ ತಾರತಮ್ಯದ ಕುರಿತಾಗಲೀ ಇದೆಯೆಂದು ತೀರ್ಮಾನಿಸಲಿಕ್ಕೆ ಬ್ರಾಹ್ಮಣ, ಶೂದ್ರ, ಉಪನಯನ, ಮಂತ್ರಾಕ್ಷತೆ, ಗಂಧಾಕ್ಷತೆ ಇತ್ಯಾದಿ ಕೆಲವು ಶಬ್ದಗಳೇ ಆಧಾರ. ಆದರೆ ಇವೆಲ್ಲ ರಾಗಿ ಭತ್ತಗಳ ಜಗಳದಲ್ಲಿ ತೆಗೆದುಕೊಳ್ಳಲಾದ ಉದಾಹರಣೆಗಳಲ್ಲಿ ಕಾಣಿಸಿಕೊಳ್ಳುವ ಶಬ್ದಗಳು. ಧಾನ್ಯಗಳಿಗೆ ಈ ರೀತಿ ಪೈಪೋಟಿ ಬಿದ್ದ ಜಾನಪದ ಕಥೆಗಳು ನಮಗೆ ಸಿಗುತ್ತವೆ. ಈರುಳ್ಳಿಗೂ ಬೆಳ್ಳುಳ್ಳಿಗೂ ನಡೆದ ಇಂಥದ್ದೇ ಜಗಳವನ್ನು ಕುರಿತ ಜಾನಪದ ಕಥೆಯಿದೆಯೆಂಬುದೂ ತಿಳಿದುಬಂದಿದೆ. (ಅಕ್ಷಯ ಶೆಟ್ಟಿ; "ಸಾಂಸ್ಕೃತಿಕ ಇತಿಹಾಸದ ಸ್ವೀಕೃತ ಮಾದರಿಗಳು." 2010: ಪುಟ 59) ರಾಗಿಯು ಶೂದ್ರರ ಆಹಾರ ಅಂದಾಕ್ಷಣ ಜಾತಿ ಸಂಘರ್ಷದ ಸಮೀಕರಣವನ್ನು ಮಾಡುವುದಕ್ಕೆ ಈ ಕಾವ್ಯವು ಅಂಥ ಸೂಚನೆಗಳನ್ನೇನೂ ಕೊಡುವುದಿಲ್ಲ. ಅಂಥದ್ದೇನಾದರೂ ಇಂಗಿತವು ಈ ಕೃತಿಯಲ್ಲಿದ್ದಿದ್ದರೆ, ಯಾವ ಉಲ್ಲೇಖವನ್ನು ನಾವು ಭತ್ತದ ಪಕ್ಷದಲ್ಲಿ ನೋಡುತ್ತೇವೆಯೋ ಅವರೇ (ಗೌತಮ, ಕಪಿಲ ಮುನಿ ಇತ್ಯಾದಿಗಳು ಹಾಗೂ ದೇವತೆಗಳು) ಉದ್ದಕ್ಕೂ ರಾಗಿಯನ್ನು ಶ್ರೇಷ್ಠ ಧಾನ್ಯವೆಂದು ತೀರ್ಮಾನಿಸುವಂತೆ ಕಲ್ಪಿಸಲಾಗುತ್ತಿರಲಿಲ್ಲ. ಇದು ನಿಜವಾಗಿಯೂ ಜಾತಿಭೇದದ ಸಂಘರ್ಷವಾಗಿದ್ದರೆ ಶೂದ್ರರು ಶ್ರೇಷ್ಠರೆಂಬುದಾಗಿ ಇವರೆಲ್ಲ ಏಕೆ ಒಪ್ಪಿಕೊಳ್ಳುತ್ತಿದ್ದರು.

ಹೀಗೆ ಕನಕರ ಕುರಿತ ಹೊಸ ಧೋರಣೆಗೆ ನಿಜಗಳನ್ನು ರೂಪಿಸುವ ಕೆಲವು ಮಾಹಿತಿಯನ್ನು ನಿರೂಪಿಸುವ ಕೆಲಸವೂ ಕೂಡಾ ಆಗಿದೆ. ಕೆಲವು ಶಬ್ದಗಳನ್ನು ಜಾತಿ ವ್ಯವಸ್ಥೆಯ ಪರಿಭಾಷೆಗಳೆಂಬುದಾಗಿ ಭಾವಿಸಿಕೊಂಡರಾಯಿತು. ನಂತರ ಜಾತಿ ವ್ಯವಸ್ಥೆಯ ಇಡೀ ಚೌಕಟ್ಟನ್ನೇ ಆ ಶಬ್ದಗಳಿಂದ ಹೊರಡಿಸಿದರಾಯಿತು. ಆ ಶಬ್ದಗಳು ಏನನ್ನು ಹೇಳಲು ಸೋಲುತ್ತವೆಯೋ ಅವನ್ನು ಚೌಕಟ್ಟು ಹೇಳುತ್ತದೆ.

ಈ ಹಂತದಲ್ಲಿ ಇಂಥ ನಿರೂಪಣೆಗಳನ್ನು ಅಲ್ಲಗಳೆಯಬಹುದಾದ ಕೆಲವು ಕೀರ್ತನೆಗಳೂ, ಹೇಳಿಕೆಗಳೂ ಸಿಗತೊಡಗುತ್ತವೆ. ಅವನು ಈ ಚೌಕಟ್ಟಿನಿಂದ ಅರ್ಥೈಸಲು ಸೋಲುತ್ತೇವೆ. ಕನಕದಾಸರ ಈ ಮುಂದಿನ ಸಾಲುಗಳನ್ನು ನೋಡಿ: 'ದೇವಬ್ರಾಹ್ಮಣ ಗುರುಹಿರಿಯರನು ಜರಿದು ಕೇವಲಾಧಮರೆಲ್ಲ ಸಿರಿಮದದಿ ಸೊಕ್ಕಿದರು'; 'ಜಾತಿನೀತಿಗಳೆಲ್ಲ ಒಂದಾಗಿ ಪಾತಕದಿ ಮನವೆರಗಿ ಮೋಹಿಸುತ.... ಭೂತಳವು ನಡ ನಡುಗುತಿಹುದು', 'ಭೂಸುರಸ್ವವ ಹ್ರಾಸ ಮಾಡಿದ ಫಲ ಏಸೇಸು ಜನುಮಕು ಬಿಟ್ಟೀತೆ? 'ದುರ್ಜನರ ಸಂಗ ಎಂದಿಗೂ ಒಲ್ಲೆನು....ಕುಲಹೀನರ ಜೊತೆ ಸ್ನೇಹ ಬೆಳೆಪನ ಸಂಗ'; 'ಪುರ ಅಗ್ರಹಾರ ಕೆಡಿಸಿದವಗೆ ರಾಜರೋಗವೆಂದು ಅರಿವು ಸಕಲ ಜನರು' ಯಾವ ಕೃತ್ಯಗಳು ಕೃತ್ಯಗಳು ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತವೆಯೆಂಬುದಾಗಿ ಭಾವಿಸಿಕೊಳ್ಳಲಾಗಿದೆಯೋ ಅವನ್ನೇ ಕನಕರು ಅಧರ್ಮ ಹಾಗೂ ಕಲಿಯುಗ ಲಕ್ಷಣ ಎಂಬುದಾಗಿ ಪರಿಗಣಿಸುತ್ತಾರೆ.

ಒಟ್ಟಾರೆ ಈ ಮೇಲಿನ ವಿವರಣೆಯಿಂದ ನಮಗೆ ಅರ್ಥವಾಗಬಹುದಾದ ಸಂಗತಿ ಎಂದರೆ ಕನಕದಾಸರ ಕುರಿತು ರಚನೆಯಾಗಿರುವ ಪ್ರಗತಿಪರ ಆಲೋಚನಾ ಕ್ರಮವು ಕೆಲವು ಪೂರ್ವ ತೀರ್ಮಾನಗಳನ್ನು ಆಧರಿಸಿ ರೂಪುಗೊಂಡಿದೆ ಮತ್ತು ಇಂದು ನಾವು ನಿರ್ದಿಷ್ಟವಾಗಿ ಭಾವಿಸಿಕೊಳ್ಳುತ್ತಿರುವ ಕನಕರ ಶೂದ್ರದರ್ಶನ ಆಯಾಮವು ರೂಪುಗೊಂಡಿದ್ದೇ ನಮ್ಮ ಆಧುನಿಕ ಜಾತಿವ್ಯವಸ್ಥೆಯ ಚೌಕಟ್ಟಿನಿಂದ; ನಾವು ದಾಸ ಸಾಹಿತ್ಯವನ್ನು ನೋಡತೊಡಗಿದಾಗ ಎಂಬುದಾಗಿ ಲೇಖಕರು ಅಭಿಪ್ರಾಯಪಡುತ್ತಾರೆ. ಇದರ ಅರ್ಥ ನಮ್ಮ ನಡುವಿನ ಆಧುನಿಕ ಸಮಾಜ ವಿಜ್ಞಾನದ ಚೌಕಟ್ಟು ಮೂಲತಃ ಯುರೋಪಿಯನ್ ಸಾಂಸ್ಕೃತಿಕ ಅನುಭವದ ಹಿನ್ನೆಲೆಯಲ್ಲಿ ರೂಪುಗೊಂಡಿದೆ. ಇದು ನಮ್ಮ ಸಮಾಜದ ಸಂಗತಿಗಳನ್ನು ವಿವರಿಸಲು ಸಾಧ್ಯವಿಲ್ಲ, ಒಂದು ವೇಳೆ ಪ್ರಯತ್ನಿಸಿದರೂ ಅದು ಸಮಸ್ಯೆಗಳನ್ನು ಪರಿಹರಿಸುವುದಿರಲಿ ಅರ್ಥಮಾಡಿಸುವಲ್ಲಿಯೂ ಮಿತಿಗಳನ್ನು ಸೃಷ್ಟಿಸುತ್ತದೆ. ಈ ಹಿನ್ನಲೆಯಲ್ಲಿ ಕನಕರ ಕುರಿತಾದ ಆಧುನಿಕ ನಿರೂಪಣೆಯು ನಮಗೆ ಕನಕರನ್ನು ಅವರ ಚಿಂತನೆಗಳಲ್ಲಿನ ಮೂಲ ಸತ್ವವನ್ನು ಅರ್ಥಮಾಡಿಸಿಕೊಡುವಲ್ಲಿ ವಿಫಲವಾಗಿದೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಇದಕ್ಕೆ ಉದಾಹರಣೆಯಾಗಿ ಆಧುನಿಕ ಪ್ರಗತಿಪರ ನೋಟ ಯಾವೆಲ್ಲ ಬರಹಗಳನ್ನು ಆಧರಿಸಿ ಕನಕದಾಸರ ಜೀವನವು ಒಂದು ಶೂದ್ರರ ಹಕ್ಕಿಗಾಗಿನ ಹೋರಾಟವಾಗಿದೆ ಎಂದು ನಿರೂಪಿಸಲು ಪ್ರಯತ್ನಿಸುತ್ತದೆಯೋ ಅದಕ್ಕೆ ವಿರುದ್ಧವಾದ ರಚನೆಗಳು ಕನಕರಿಂದ ಬಂದಿವೆ ಎಂಬ ಮುಖ್ಯವಾದ ಪ್ರಶ್ನೆಯನ್ನು ಕನಕದಾಸರ ಕಿರ್ತನೆಗಳನ್ನು ಉದಾಹರಿಸುವುದರ ಮೂಲಕ ತೋರಿಸುತ್ತಾರೆ ಮತ್ತು ಇದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬ ಮುಖ್ಯ ಪ್ರಶ್ನೆಯನ್ನು ನಮಗೇ ಬಿಡುತ್ತಾರೆ.

ಒಟ್ಟಾರೆ ಮೇಲಿನ ಎರಡು ವಿಭಿನ್ನ ನೋಟಗಳು ನಮಗೆ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತವೆ. ಅದು "ನಾವು ಇಂದು ಆಧುನಿಕ ಕಾಲದಲ್ಲಿ ನಿಂತು ಕನಕರನ್ನು ಅವರ ಚಿಂತನೆಗಳನ್ನು ಗ್ರಹಿಸುವಲ್ಲಿ ಕೆಲವು ತೊಡಗುಗಳಿವೆ" ಎಂಬುದಾಗಿದೆ. ಈ ಪ್ರಶ್ನೆಗಳನ್ನು ಇನ್ನೂ ಸರಳವಾಗಿ ನೋಡುವುದಾದರೆ ವಸಾಹತುಶಾಹಿ ವ್ಯವಸ್ಥೆ ಸೃಷ್ಟಿಸಿರುವ ಒಂದು ಚೌಕಟ್ಟು ನಮ್ಮ ಸಮಾಜದ ಮಹತ್ವಪೂರ್ಣ ಚಿಂತಕರ ಆಲೋಚನೆಗಳನ್ನು ಅವು ಇರುವಂತೆ ಗ್ರಹಿಸಲು ತಮಗೆ ನೆರವಾಗುವುದಕ್ಕಿಂತ ಹೆಚ್ಚು ತಡೆಯಾಗಿವೆ ಎಂಬುದಾಗಿ ವಿವರಿಸಿಕೊಳ್ಳಬಹುದು ಈ ತಡೆ ಕನಕದಾಸರ ಕುರಿತಾದ ಚಿಂತನೆಗಳನ್ನು ಪ್ರಭಾವಿಸಿದೆ.

ನಮ್ಮ ಕಾಲದ ಚಿಂತನೆಯ ಮತ್ತೊಂದು ಮಿತಿ ಎಂದರೆ ಬಹುಪಾಲು ಎಲ್ಲಾ ಕೀರ್ತನಕಾರರನ್ನು ಅವರ ಚಿಂತನೆಗಳನ್ನು ಇಂದಿನ ಮೆಟಿರಿಯಲ್ (ಭೌತಿಕ) ಬದುಕಿಗೆ ಹೇಗೆ ನೆರವಾಗುತ್ತವೆ ಎಂಬ ಸಂಕುಚಿತ ನೆಲೆಯಲ್ಲಿ ನೋಡುತ್ತಿದ್ದೇವೆ. ಈ ನೆಲೆ ಅವರುಗಳು ಮಾತನಾಡಿದ ಅಥವಾ ಗ್ರಹಿಸಿದ ಬದುಕಿಗೆ ವಿರುದ್ಧವಾದುದು ಎನ್ನಿಸುತ್ತದೆ. ಏಕೆಂದರೆ ಕನಕರಂತಹ ಚಿಂತಕರು ವ್ಯಕ್ತಿಯ ಆತ್ಮ ಸಾಕ್ಷಾತ್ಕಾರವೇ ಅವನ ಮೂಲಭೂತ ಕರ್ತವ್ಯ ಎಂಬುದನ್ನು ನಮ್ಮ ಚಿಂತನೆಗಳಲ್ಲಿ ವಿವರಿಸಿರುವಂತೆ ತೋರುತ್ತದೆ. ಇದನ್ನು ಸರಳವಾಗಿ ನೋಡುವುದಾದರೆ ವ್ಯಕ್ತಿ ತನ್ನನ್ನು ತಾನು ಅರ್ಥಮಾಡಿಕೊಳ್ಳುವುದೆ ನಿಜವಾದ ಸಾಕ್ಷಾತ್ಕಾರ. ಆ ದಾರಿಯಲ್ಲಿ ಭಕ್ತಿ ಒಂದು ದಾರಿ ಎಂಬುದಾಗಿ ಕನಕರು ಪ್ರತಿಪಾದಿಸಿದಂತೆ ಕಂಡುಬರುತ್ತದೆ. ಆದರೆ ಈ ತತ್ವವನ್ನು ಒಳಗೊಳ್ಳದ ನಾವು ಅವರನ್ನು ಆಧುನಿಕ ಸಮಾಜವನ್ನು ಕುರಿತ ವಿಮರ್ಶಕರಂತೆ ಗ್ರಹಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂಬುದು ಮೇಲಿನ ಚಿಂತಕರ ವಿಮರ್ಶೆಗಳಿಂದ ನಿರೂಪಿತವಾಗುತ್ತದೆ. ಹೀಗಾಗಿ ಇಂದಿನ ಮುಖ್ಯ ಪ್ರಶ್ನೆ ಒಬ್ಬ ವ್ಯಕ್ತಿ ತನ್ನ ಅನುಭವದಿಂದ ಹೇಗೆ ತನ್ನ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಅದಕ್ಕಿರುವ ದಾರಿಗಳು ಯಾವುವು ಎಂಬುದಾಗಬೇಕಿದೆ. ಈ ನೆಲೆಯಲ್ಲಿ ಈ ಶೋಧನೆಯ ಮುಂದಿನ ಅಧ್ಯಾಯದಲ್ಲಿ ಕನಕದಾಸರ ಅನುಭಾವಿಕ ನೆಲೆಗಳು ಯಾವುವು? ಕನ್ನಡದ ಅನುಭಾವಿಕ ನೆಲೆಯಲ್ಲಿ ಕನಕರನ್ನು ಗುರುತಿಸಲು ಸಾಧ್ಯವೆ? ಸಾಧ್ಯ ಅನ್ನುವುದಾದರೆ ಈ ದಾರಿಯಲ್ಲಿ ಅವುಗಳಲ್ಲಿನ ಮಿತಿಗಳು ಏನು? ಎಂಬ ಪ್ರಶ್ನೆಗಳನ್ನು ಅವರದೆ ಕೀರ್ತನೆಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನವನ್ನು ಮಾಡಲಾಗುತ್ತದೆ.

❐

## ಅಧ್ಯಾಯ–5

# ಎಲ್ಲಿಂದ ಬಂದೆ ಮುಂದೆತ್ತ ಪಯಣ

"ಕನ್ನಡ ಅನುಭಾವ ಪರಂಪರೆ ಮತ್ತು ಕನಕದಾಸರು ರೂಪಿಸಿದ ಅನುಭಾವದ ಸಂಬಂಧಗಳು" ಎಂಬ ಸಂಶೋಧನಾ ಕಾರ್ಯ ಕನ್ನಡದ ಅನುಭಾವ ಪರಂಪರೆಯಲ್ಲಿ ಕನಕದಾಸರ ಅನುಭಾವಿ ಚಿಂತನೆಗಳ ಮಹತ್ವವನ್ನು ಗುರುತಿಸುವ ಉದ್ದೇಶವನ್ನು ಹೊಂದಿತ್ತು. ಕನ್ನಡದ ವಿಚಾರ ಜಗತ್ತನ್ನು ಇತ್ತೀಚೆಗೆ ಹೊಸದಾದ ಚಿಂತನೆಗೆ ಹಚ್ಚಿರುವ ಈ ನೆಲದ ಅನುಭಾವಿಕ ಪರಂಪರೆಯ ಹಿನ್ನೆಲೆಯಲ್ಲಿ ಕನಕದಾಸರ ಚಿಂತನೆಗಳನ್ನು ಗುರುತಿಸಲು ಸಾಧ್ಯವೆ? ಎಂಬ ಪ್ರಮುಖವಾದ ಪ್ರಶ್ನೆ ಸದರಿ ಸಂಶೋಧನೆಯಲ್ಲಿ ಇಟ್ಟುಕೊಳ್ಳಲಾಗಿತ್ತು. ಜೊತೆಗೆ ಕುವೆಂಪು ಅವರ ಗುರುತಿಸುವಂತೆ ಕನ್ನಡದ ಬಹುತೇಕ ಸಾಹಿತ್ಯ ಸಂಶೋಧನೆಗಳು ಪಾಶ್ಚಿಮಾತ್ಯ/ ಸಂಸ್ಕೃತದ ಪಡಿನೆಳಲಿನಂತಿವೆ ಅಥವಾ ಅವುಗಳ ದಾರಿಯಲ್ಲಿಯೇ ನಡೆದಿವೆ. ಸದರಿ ಸಂಶೋಧನೆಯಲ್ಲಿ ಆ ದಾರಿಗಳಲ್ಲಿನ ಮಿತಿಗಳನ್ನು ವಿವರಿಸಿಕೊಳ್ಳಲು ಸಾಧ್ಯವೆ? ಅವುಗಳಿಂದ ಭಿನ್ನವಾಗಿ ನಾವು ಕನಕರನ್ನು ಗುರುತಿಸಲು ಸಾಧ್ಯವೆ? ಎಂಬ ಪ್ರಮುಖ ಪ್ರಶ್ನೆಗಳನ್ನು ಕೇಳಿಕೊಳ್ಳಲಾಗಿತ್ತು.

ಈ ಎಲ್ಲಾ ಪ್ರಶ್ನೆಗಳನ್ನು ಒಳಗೊಂಡು ನಡೆಸಿದ ಶೋಧನೆಯನ್ನು ಹಿಂದಿನ ಅಧ್ಯಯನಗಳಲ್ಲಿ ಚರ್ಚಿಸಲಾಗಿದೆ. ಆರಂಭದಲ್ಲಿ "ಅನುಭಾವ" ಎಂಬ ವಿದ್ಯಮಾನದ ಕುರಿತು ಸೈದ್ಧಾಂತಿಕ ನಿರೂಪಣೆಯನ್ನು ಗುರುತಿಸುವ ಭಾಗವಾಗಿ ಭಾರತದಲ್ಲಿನ ಬೇರೆ ಬೇರೆ ಅನುಭಾವ ಪರಂಪರೆಯಲ್ಲಿ ಬುದ್ಧ, ಬಸವ, ಜೈನ, ಮೀರಾಪಂಥ, ನಾಥಪಂಥ, ಕಬೀರಪಂಥ, ಚೈತನ್ಯ ಪಂಥ, ಮುಂತಾದ ಹಲವು ಪಂಥಗಳೊಂದಿಗೆ ದಾಸ ಪಂಥವೂ ಒಂದು. ಈ ಪಂಥ ನಮ್ಮ ಸಂಸ್ಕೃತಿಯಲ್ಲಿ ಅತ್ಯಂತ ಅಮೂಲ್ಯವಾದ ಸ್ಥಾನವನ್ನು ಹೊಂದಿದೆ. ದಾಸರು ತಮ್ಮ ಕೀರ್ತನೆಗಳನ್ನು ಅನುಭಾವಾತ್ಮಕ ನೆಲೆಯಲ್ಲಿ ರಚಿಸಿದ್ದು ಮಾನವ ಬದುಕಿನ ಸರಳ ಸತ್ಯವನ್ನು ಸಾರುವ ಇವು ಇಂದಿನವರೆಗೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡು ಬಂದಿವೆ. ದಾಸರು ಎಂದಾಕ್ಷಣ ನಮ್ಮ ಸ್ಮೃತಿಪಟಲಕ್ಕೆ ಬರುವುದು ಪುರಂದರ ದಾಸರು ಮತ್ತು ಕನಕದಾಸರು. ಇವರನ್ನು ಕುರಿತು ದಾಸರೆಂದರೆ ದಾಸರಯ್ಯ ಎಂಬ

ಮಾತು ಕೂಡ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಅದರಲ್ಲಿಯು ಕನಕದಾಸರ ಕೀತನೆಗಳು ಅವುಗಳಲ್ಲಿನ ಅರ್ಥ ಜನಮನಗಳಲ್ಲಿ ಹಚ್ಚ ಹಸಿರಾಗಿರುವುದನ್ನು ಇಂದಿಗೂ ಕಾಣಬಹುದು. ಮಾನವ ಬದುಕನ್ನು ಸರಳಾತಿಸರಳವಾಗಿ ತಮ್ಮ ಅನುಭವದ ನೆಲೆಯಲ್ಲಿ ಕಿರ್ತನೆಯನ್ನು ರಚಿಸುವ ಮೂಲಕ ಕಟ್ಟಿಕೊಟ್ಟ ದಾಸರ ಮಾತುಗಳ ಹಿಂದಿನ ಅರ್ಥಗಳನ್ನು ಅವು ಇರುವಂತೆ ಗ್ರಹಿಸುವುದು ಇಂದಿನ ಅಗತ್ಯವಾಗಿದೆ. ಹಾಗೆ ಗುರುತಿಸುದಾದರೆ ಸಾಮಾಜಿಕ ಆಯಾಮವಾಗಿ ಕೀರ್ತನೆಗಳ ಪ್ರಸ್ತುತತೆಯನ್ನು ಹಲವಾರು ಚಿಂತಕರು ಹಲವು ರೀತಿಯಲ್ಲಿ ಅಧ್ಯಯನಗಳನ್ನು ಮಾಡಿದ್ದಾರೆ ಎಂಬ ಅಂಶವನ್ನು ವಿವರವಾಗಿ ಚರ್ಚಿಸುವ ದೃಷ್ಟಿಯಿಂದ ಅನುಭಾವ ಎಂದರೇನು? ಈ ಅನುಭಾವಿಕ ನೆಲೆಯನ್ನು ಇದುವರೆಗಿನ ಬೌದ್ಧಿಕ ಹೇಗೆ ಗುರುತಿಸಿದೆ ಎಂಬುದನ್ನು ವಿವರವಾಗಿ ಚರ್ಚಿಸಿ ಮುಂದಿನ ಹಂತದಲ್ಲಿ ಕನಕದಾಸರ ಚಿಂತನೆಗಳಲ್ಲಿರುವ ಅನುಭಾವಿಕ ನೆಲೆಗಳನ್ನು ಗುರುತಿಸಲು ಒಂದು ವೇದಿಕೆ ಸೃಷ್ಟಿಸಿಕೊಳ್ಳಲಾಗಿದೆ.

ಮುಂದುವರಿದು ಕನ್ನಡದ ಅನುಭಾವಿ ಪರಂಪರೆ ಮತ್ತು ಕನಕದಾಸರ ಚಿಂತನೆಗ್ಗಳ ನಡುವಿನ ಸಂಬಂಧಗಳ ಕುರಿತು ಚರ್ಚಿಸಲಾಗಿದೆ. ವಸಾಹತೋತ್ತರ ಕಾಲದ ಚಿಂತನೆ "ಸಾಹಿತ್ಯದ ಪಠ್ಯಗಳನ್ನು ಕೇವಲ ಸಾಹಿತ್ಯಕವಾಗಿ ನೋಡದೆ ಅವುಗಳಲ್ಲಿ ಆಳವಾಗಿ ಹಾಸು ಹೊಕ್ಕಾಗಿರುವ ಸಂಸ್ಕೃತಿಯ ಮಹತ್ವವನ್ನು ಹೊರತರಬೇಕು" ಎಂಬ ವಾದಗಳನ್ನು ಮುಂಚೂಣಿಗೆ ತಂದದ್ದು ಮಹತ್ವದ ಅಂಶ ಎಂಬುದು ಕನ್ನಡದ ಸಂದರ್ಭದಲ್ಲಿ ಅನುಭಾವಿ ಪರಂಪರೆಯ ಮಹತ್ವವನ್ನು ಅರಿಯಲು ದಾರಿ ದೀಪವಾಗಿದೆ ಎಂಬುದನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ. ನಾಡಿನ ಸಾಹಿತ್ಯವನ್ನು ಒಂದು ಕಾಲದಲ್ಲಿ ತಮ್ಮ ಅನುಭಾವಿ ಚಿಂತನೆಗಳ ಮೂಲಕ ಎಚ್ಚರಿಸಿದ ದಾಸರು ಮತ್ತು ಸಂತರನ್ನು ಕೇವಲ ಆಧ್ಯಾತ್ಮಿಕ ಚೌಕಟ್ಟಿನಲ್ಲಿ ವಿವರಿಸುವ ಸಂಕುಚಿತ ಸಂಶೋಧನೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಸಮಷ್ಟಿ ದೃಷ್ಟಿಯಿಂದ ಅನುಭಾವ ಪರಂಪರೆಯ ಸತ್ವಗಳನ್ನು ಗುರುತಿಸುವುದು ಕಾಲ ಅಗತ್ಯವಾಗಿದೆ. ಆದ್ದರಿಂದಲೇ ಈ ಹಿಂದೆ ಅನುಭಾವ ಪರಂಪರೆಯ ಮತ್ತು ತತ್ವಪದಗಳ ಕುರಿತು ಕನ್ನಡದಲ್ಲಿ ನಡೆದಿವೆ ಎನ್ನಲಾದ ಚರ್ಚೆಗಳಲ್ಲಿನ ಮಿತಿಗಳನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯವಾಗಿದೆ ಎಂಬ ರಹಮತ್ ತರೀಕೆರೆಯವರ ಮಹತ್ವದ ವಿಮರ್ಶೆಯನ್ನು ದಾರಿಯಾಗಿಸಿಕೊಂಡು ಕನಕರ ಕುರಿತಂತೆ ಚಿಂತಿಸಲಾಗಿದೆ.

ಕನಕದಾಸರ ಕುರಿತ ಒಟ್ಟು ವಿಮರ್ಶೆ "ನಾವು ಇಂದು ಆಧುನಿಕ ಕಾಲದಲ್ಲಿ ನಿಂತು ಕನಕರನ್ನು, ಅವರ ಚಿಂತನೆಗಳನ್ನು ಗ್ರಹಿಸುವಲ್ಲಿ ಕೆಲವು ತೊಡಕುಗಳಿವೆ" ಎಂಬುದನ್ನು ತಿಳಿಸುತ್ತದೆ. ಈ ಪ್ರಶ್ನೆಗಳನ್ನು ಇನ್ನೂ ಸರಳವಾಗಿ ನೋಡುವುದಾದರೆ

ವಸಾಹತುಶಾಹಿ ವ್ಯವಸ್ಥೆ ಸೃಷ್ಟಿಸಿರುವ ಒಂದು ಚೌಕಟ್ಟು ನಮ್ಮ ಸಮಾಜದ ಮಹತ್ವಪೂರ್ಣ ಚಿಂತಕರ ಆಲೋಚನೆಗಳನ್ನು ಅವು ಇರುವಂತೆ ಗ್ರಹಿಸಲು ತಮಗೆ ನೆರವಾಗುವುದಕ್ಕಿಂತ ಹೆಚ್ಚು ತಡೆಯಾಗಿವೆ ಎಂಬುದಾಗಿ ವಿವರಿಸಿಕೊಳ್ಳಬಹುದಾಗಿದೆ. ಈ ತಡೆ ಕನಕದಾಸರ ಕುರಿತಾದ ಸಮಕಾಲೀನ ಚಿಂತನೆಗಳನ್ನು ಪ್ರಭಾವಿಸಿದೆ ಎಂಬ ವಿಶ್ಲೇಷಣೆಯನ್ನು ಸಾಧಿಸಲಾಗಿದೆ.

ಜೊತೆಗೆ ನಮ್ಮ ಕಾಲದ ಚಿಂತನೆಯ ಮತ್ತೊಂದು ಮಿತಿ ಎಂದರೆ ಬಹುಪಾಲು ಎಲ್ಲಾ ಕೀರ್ತನಕಾರರನ್ನು ಅವರ ಚಿಂತನೆಗಳು ಇಂದಿನ ಮೆಟಿರಿಯಲ್ (ಭೌತಿಕ) ಬದುಕಿಗೆ ಹೇಗೆ ನೆರವಾಗುತ್ತವೆ ಎಂಬ ಸಂಕುಚಿತ ನೆಲೆಯಲ್ಲಿ ನೋಡುತ್ತಿದ್ದೇವೆ. ಈ ನೆಲೆ/ಕ್ರಮ ಅವರುಗಳು ಮಾತನಾಡಿದ ಅಥವಾ ಗ್ರಹಿಸಿದ ಬದುಕಿಗೆ ವಿರುದ್ಧವಾದದ್ದು ಎನ್ನಿಸುತ್ತದೆ. ಏಕೆಂದರೆ ಕನಕರಂತಹ ಚಿಂತಕರು ವ್ಯಕ್ತಿಯ ಆತ್ಮ ಸಾಕ್ಷಾತ್ಕಾರವೇ ಅವನ ಮೂಲಭೂತ ಕರ್ತವ್ಯ ಎಂಬುದನ್ನು ನಮ್ಮ ಚಿಂತನೆಗಳಲ್ಲಿ ವಿವರಿಸಿರುವಂತೆ ತೋರುತ್ತದೆ. ಕನಕದಾಸರ ಈ ಕೀರ್ತನೆ ಅವರ ಆಲೋಚನೆಗಳನ್ನು ನಮಗೆ ಸ್ಪಷ್ಟಪಡಿಸುತ್ತದೆ.

ಆವ ಕರ್ಮವೊ ಇದು ಆವ ಧರ್ಮವೊ
ಆವ ಕರ್ಮವೆಂದರಿಯೆ, ಹಾರುವರಿವರು ಬಲ್ಲರೆ
ಸತ್ತವನು ಎತ್ತ ಪೋದ
ಸತ್ತು ತನ್ನ ಜನ್ಮಕೆ ಪೋದ
ಸತ್ತವನು ಉಣ್ಣುವನೆಂದು
ನಿತ್ಯ ಪಿಂಡವಿಕ್ಕುತ್ತೀರಿ
ಎಳ್ಳು ದರ್ಭೆ ಕೈಲಿ ಪಿಡಿದು
ಪಿತರ ತೃಪ್ತಿ ಪಡಿಸುತ್ತೀರಿ
ಎಳ್ಳು ಮೀನು ನುಂಗಿ ಹೋಯಿತು
ದರ್ಭೆ ನೀರೊಳು ಹರಿದು ಹೋಯಿತು
ಎಡಕೆ ಒಂದು ಬಲಕೆ ಒಂದು
ಎಡಕೆ ತೋರಿಸಿ ಬಲಕೆ ತೋರಿಸಿ
ಕಡು ಧಾವಂತಪಡಿಸಿ
ಕಟಿಯ ಹಸ್ತದೊಳಗೆ ಪಿಡಿಸುತ್ತೀರಿ
ಮಂತ್ರಾಕ್ಷತೆಯ ಕೈಗೆ ಕೊಟ್ಟು
ಮೋಕ್ಷವನ್ನು ಹಾರೈಸುವಿರಿ
ಮಂತ್ರವೆಲ್ಲೋ ಅಕ್ಷತೆಯೆಲ್ಲೊ
ಮೋಕ್ಷವೆಲ್ಲೊ ಮರ್ತ್ಯವೆಲ್ಲೊ

ಹೇಳುವವನು ಅವಿವೇಕಿ
ಕೇಳುವವನು ಅಜ್ಞಾನಿ
ಹೇಳುವ ಕೇಳುವ ಇಬ್ಬರ ಸೊಲ್ಲ
ಆದಿಕೇಶವಮೂರ್ತಿ ಬಲ್ಲ

ಮೇಲಿನ ಕೀರ್ತನೆ ಹೇಗೆ ಮನುಷ್ಯ ಜೀವಿ ತನ್ನೊಳಗಿರುವ ಅರಿವನ್ನು ಗುರುತಿಸಿಕೊಳ್ಳದೆ ವ್ಯರ್ಥ ಆಚರಣೆಗಳಿಂದ ಮಾತ್ರ ಮುಕ್ತಿ ಸಾಧ್ಯ ಎಂದು ನಂಬಿದ್ದಾನೆ ಮತ್ತು ಅದು ಎಷ್ಟು ಪೊಳ್ಳು ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ಧ್ವನಿಸುತ್ತದೆ.

ಕನಕರ ಈ ಮಾತುಗಳನ್ನು ಸರಳವಾಗಿ ನೋಡುವುದಾದರೆ ವ್ಯಕ್ತಿ ತನ್ನನ್ನು ತಾನು ಅರ್ಥಮಾಡಿಕೊಳ್ಳುವುದೆ ನಿಜವಾದ ಸಾಕ್ಷಾತ್ಕಾರ. ಆ ದಾರಿಯಲ್ಲಿ ಭಕ್ತಿ ಒಂದು ದಾರಿ ಎಂಬುದಾಗಿ ಕನಕರು ಪ್ರತಿಪಾದಿಸಿದಂತೆ ಕಂಡುಬರುತ್ತದೆ. ಆದರೆ ಈ ತತ್ವವನ್ನು ಒಳಗೊಳ್ಳದ ನಾವು ಅವರನ್ನು ಆಧುನಿಕ ಸಮಾಜವನ್ನು ಕುರಿತ ವಿಮರ್ಶಕರಂತೆ ಗ್ರಹಿಸುವ ಪ್ರಯತ್ನ ಮಾಡುತ್ತಿದ್ದೇವೆ! ಎಂಬುದು ಹಲವಾರು ವಿಮರ್ಶೆಗಳಿಂದ ನಿರೂಪಿತವಾಗುತ್ತದೆ. ಹೀಗಾಗಿ ಇಂದಿನ ಮುಖ್ಯ ಪ್ರಶ್ನೆ ಒಬ್ಬ ವ್ಯಕ್ತಿ ತನ್ನ ಅನುಭವದಿಂದ ಹೇಗೆ ತನ್ನ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬಹುದು ಅದಕ್ಕಿರುವ ದಾರಿಗಳು ಯಾವುವು ಎಂಬುದಾಗಬೇಕಿದೆ. ಈ ವಾದವನ್ನು ಕನಕನ 'ನರಜನ್ಮವೆಂಬ ಪಾತಕದ ಪಂಜರದೊಳಗೆ, ಸ್ಥಿರವೆಂಬೊ ಅಹಂಕೃತಿ ಜೀವನದ ನಿರ್ಮಿಸಿ' ಎಂಬ ಮಾತುಗಳಲ್ಲೆ ನಾವು ಗುರುತಿಸಬಹುದಾಗಿದೆ. ಈ ಹಿನ್ನಲೆಯಲ್ಲಿ ಮನುಷ್ಯನ ಭೌತಿಕ ಬದುಕಿನ ಎಲ್ಲಾ ಸಂಬಂಧಗಳೊಟ್ಟಿಗೆ ಇರುತ್ತಲೇ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬಹುದಾದ ಅನುಭಾವಿಕ ನೆಲೆಗಳನ್ನು ಹುಡುಕಲು ಕನಕದಾಸರ ಚಿಂತನೆಗಳನ್ನು ಮುಂದಿನ ಹಂತದಲ್ಲಿ ಅಧ್ಯಯನ ಮಾಡಲಾಗಿದೆ.

ಮುಂದಿನ ಹಂತದಲ್ಲಿ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಕಾವ್ಯಮೀಮಾಂಸೆ ಏನಿದ್ದರೂ ಅದೆಲ್ಲ ಸಂಸ್ಕೃತದ ಪಡಿನೆಳಲಂತಿದೆ. ಮುಂದೆ ಬರುವ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ ಪಾಶ್ಚಾತ್ಯರ ಪಡಿನೆಳಲಾದರೆ ಅದಕ್ಕಿಂತಲೂ ಅಪಾಯಕರವಾಗುತ್ತದೆ. ಏಕೆಂದರೆ ತನ್ನತನವನ್ನೇ ಕಳೆದುಕೊಳ್ಳುವ ಸಂಭವ ವಿರುವುದರಿಂದ, ನಮ್ಮ ಮುಂದಿನ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ತ್ವಶಾಸ್ತ್ರ, ಯೋಗವಿಜ್ಞಾನ, ಸೌಂದರ್ಯ ಮೀಮಾಂಸೆ ಮತ್ತು ಮನಃಶಾಸ್ತ್ರ ಇವುಗಳಿಂದಲೂ ಬೆಳಕು ಪಡೆದು ಧೀರವಾಗಿ ಸ್ವತಂತ್ರವಾಗಿ ಪೂರ್ಣದೃಷ್ಟಿಯ ಕಡೆಗೆ ಮುನ್ನಡೆಯಬೇಕಾಗುತ್ತದೆ ಎಂಬ ಯುಗದ ಕವಿ ಕುವೆಂಪು ಅವರ ಸುಮಾರು ಐವತ್ತು ವರ್ಷಗಳ ಹಿಂದಿನ ಮಾತನ್ನು ಆಧರಿಸಿ ಕನಕದಾಸರ ಚಿಂತನೆಗಳಲ್ಲಿನ

ಅನುಭಾವಿಕ ನೆಲೆಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಅನುಭಾವಿಕ ನೆಲೆಗಳನ್ನು ಗುರುತಿಸುವುದು ಶೈಕ್ಷಣಿಕ ಅಧ್ಯಯನಗಳಿಗಿಂತ ವಿಭಿನ್ನವಾದ ಸಾಂಸ್ಕೃತಿಕ ಹೊಣೆಗಾರಿಕೆ ಎಂಬ ಅರಿವು ಕಟ್ಟಿಕೊಳ್ಳಬೇಕು ಎಂಬ ರಹಮತ್ ತರೀಕೆರೆ ಅವರ ಮಹತ್ವದ ಮಾತನ್ನು ನಾವು ಮತ್ತೆ ಮತ್ತೆ ನೆನಪಿಸಿಕೊಂಡು ಕನಕದಾಸರ ಅನುಭಾವಿಕ ಅನುಸಂಧಾನವನ್ನು ಗುರುತಿಸಲಾಗಿದೆ.

ಹರಿದಾಸರಲ್ಲಿ ಪ್ರಮುಖರಾದವರು ಕನಕದಾಸರು. ಈ ದಾಸ ಪದದ ಅರ್ಥವನ್ನು ಇವರು ಯಾವ ರೀತಿಯಲ್ಲಿ ಬಳಸುತ್ತಿದ್ದರು ಎಂಬುದನ್ನು ನೋಡುವುದಾದರೆ, 'ದಾಸರೆಂದರೆ ಸ್ವ ಕೇಂದ್ರಿತ ದೃಷ್ಟಿಕೋನವನ್ನು ತೊರೆದವನು. 'ಸ್ವ'ದ ಜಾಗೆಯಲ್ಲಿ ಹರಿಯೋ–ಹರನೋ ಅಥವಾ ಇನ್ನಾವುದೊ ವಿಶ್ವಮನಸ್ಸಿನ ದೇವರನ್ನು ಇಟ್ಟುಕೊಂಡವನು. ವಿಶ್ವ ಚಿತ್ತವು ಸತ್ಯ ಎಂದು ನಂಬಿದವರು. ಸತ್ಯ ಎಂದರೆ ಸ್ವತಂತ್ರ ಎಂದು ಆದ್ದರಿಂದ ತನ್ನದ್ದಾದ ವೈಯಕ್ತಿಕ ಚಿತ್ತ ವೃತ್ತಿಯನ್ನು ವಿಶ್ವ ಚಿತ್ತಕ್ಕೆ ಅಧೀನವನ್ನಾಗಿಸಿ, ತಾನು ಅಸ್ವತಂತ್ರ ಆದ್ದರಿಂದ 'ದಾಸ' ಎನಿಸಿಕೊಂಡವನು ಆ ಕಾರಣಕ್ಕೆ ಕನಕರಿಗೆ **'ತಾನಾರು ದೇಹವಾರು ದಿವ್ಯ–ಜ್ಞಾನದಲ್ಲಿ ತಿಳಿದಾತ ಪರಮಯೋಗಿ'** ಎಂಬ ಕೀರ್ತನೆಯ ಸಾಲುಗಳ ಮೂಲಕ ತಾನು ಬೇರೆ, ದೇಹ ಪ್ರಜ್ಞೆ ಬೇರೆ ಎಂದು ಹೇಳಲು ಸಾಧ್ಯವಾಗಿತ್ತು.

ಈ ಹಿಂದೆ ಪ್ರಸ್ತಾಪಿಸಿರುವಂತೆ ಲೋಕದಲ್ಲಿ ಯಾವುದು ಶಾಶ್ವತವಲ್ಲ, ನಂಬಿಕೆಗೆ ಯೋಗ್ಯವಲ್ಲ. ನೆಚ್ಚುವುದಾದರೆ ಆದಿಕೇಶವನನ್ನು ಅವನ ಅನುಭವದಲ್ಲಿ ಈ ಎಲ್ಲ ಅನುಭವಗಳು ಅಡಗಿವೆ ಇತ್ಯಾದಿ ಭಾಗಗಳೆಲ್ಲ ಕನಕದಾಸರ ಅಮೋಘ ಕೃತಿ–ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ ಎಂಬ ಹಾಡಾಗಿ ಪರಿಣಮಿಸಿದೆ. "ಬಯಲು ಆಲಯದೊಳಗೊ ಆಲಯ ಬಯಲಿನೊಳಗೊ, ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ". ಕನಕದಾಸರ ಈ ನಿಲುವು ಶೂನ್ಯವಾದಕ್ಕೆ ಹತ್ತಿರವಾಗಬಹುದು. ಕನಕನ ಕುರಿತು ಸೃಷ್ಟಿಯಾಗಿರುವ ಜನಸಾಮಾನ್ಯರ ಗ್ರಹಿಕೆಗೆ ನಿಲುಕುವಂತೆ ಮಾಡಿದ. ಇದಕ್ಕಾಗಿ ಆತ ಜನರ ಆಡು ಮಾತು, ಸರಳ ಲಯಗಳನ್ನು ಬಳಸಿಕೊಂಡ. ಕನಕ ಕೆಳ ಜಾತಿಯ ನಾಗಿರುವುದು ಈ ಜಾನಪದದಲ್ಲಿ ಅವನ ಕಾವ್ಯದ ಈ ಜನಪರ ಆಯಾಮಕ್ಕೆ ಪೂರಕವಾಗಿರುವ ಸಂಗತಿಯಾಗಿದೆ. ಆಡುಮಾತು, ಸರಳ ಲಯಗಳ ಕೀರ್ತನೆಗಳನ್ನು ಕನಕ ರಚಿಸಿದ್ದಾನೆ ನಿಜ, ಈ ಕೀರ್ತನೆಗಳಲ್ಲಿ ಅವನು ಆಧ್ಯಾತ್ಮವನ್ನು ಎಲ್ಲರಿಗೂ ಎಟುಕುವ ಭಕ್ತಿಯಾಗಿ ಪರಿವರ್ತಿಸಿರುವುದು ಹೌದು ಎಂಬ ಈ ಮೇಲಿನ ವಿಶ್ಲೇಷಣೆ ಕನಕದಾಸರ ಅನುಭಾವಿಕ ನಿಲುವಿಗೆ ಪೂರಕವಾದ ಪರಿಕಲ್ಪನೆಯಾಗಿದೆ.

ಆ ಕಾರಣಕ್ಕೆ ಭಕ್ತಿ ಎಂಬುದು ಕೇವಲ ಡಾಂಭಿಕ ಆಚರಣೆಯಿಂದ

ಸಾಧಿಸಿಕೊಳ್ಳಬೇಕಾದ ಸಾಧನವಲ್ಲ, ಅದು ಆತ್ಮಸಾಕ್ಷಾತ್ಕಾರದ ದಾರಿ ಎಂಬುದನ್ನು ಕನಕರು ಆ ಕಾಲದ ಭಕ್ತಿ ಪ್ರದರ್ಶನದ ಡಾಂಭಿಕತೆಯನ್ನು ಈ ಕೀರ್ತನೆಯ ಮೂಲಕ ಪ್ರಶ್ನಿಸಿದ್ದಾರೆ.

ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೆ ಜನ್ಮ
ಸಾರ್ಥಕವಿಲ್ಲದವರೆಲ್ಲ ಭಾಗವತರೆ
ಮೂಗ್ಹಿಡಿದು ನೀರೊಳಗೆ ಮುಳುಗಿ ಜಪಮಾಡಿ
ಭಾಗವತ ಶಾಸ್ತ್ರಾದಿಗಳನೆಲ್ಲ ಓದಿ
ಬಾಗಿ ಪರಸತಿಯರನು ಬಯಸಿ ಕಣ್ಣಿಡುವಂಥ
ನೀತಿ ತಪ್ಪಿದವರೆಲ್ಲ ದೇವ ಬ್ರಾಹ್ಮಣರೆ?
ಪಟ್ಟೆನಾಮವ ಬಳಿದು ಪಾತ್ರೆ ಕೈಯಲ್ಲಿ ಪಿಡಿದು
ಗುಟ್ಟಿನಲಿ ಜಪಿಸುವ ಗುರುತರಿಯದೆ
ಕೆಟ್ಟಕೂಗನು ಕೂಗಿ ಹೊಟೆಯನು ಹೊರೆವಂಥ
ಪೊಟ್ಟೆಗುಡುಮಗಳೆಲ್ಲ ಪರಮ ವೈಷ್ಣವರೆ?
ಲಿಂಗಾಂಗದೊಳಗಿರುವ ಚಿನುಮಯನ ತಿಳಿಯದೆ
ಅಂಗಲಿಂಗದ ನೆಲೆಯ ಗುರುತರಿಯದೆ
ಜಂಗಮ ಸ್ಥಾವರದ ಹೊಲಬನರಿಯದ ಇಂಥ
ಭಂಗಿಮುಕ್ಕಗಳೆಲ್ಲ ಲಿಂಗವಂತರು ಆಹುದೆ?
ಅಲ್ಲಾ ಖುದಾ ಎಂಬ ಅರ್ಥವನ್ನು ಅರಿಯದೆ
ಮುಲ್ಲಾಶಾಸ್ತ್ರದ ನೆಲೆಯ ಗುರುತರಿಯದೆ
ಕಳ್ಳಕೂಗನೆ ಕೂಗಿ ಬೊಗಳಿ ಬಾಯ್ದೆರೆವಂಥ
ಕಳ್ಳರಿಗೆ ತಾ ವೀರಸ್ವರ್ಗ ದೊರಕುವುದೆ?
ವೇಷಭಾಷೆಯ ಕಲಿತು ಗೋಸಾಯಿಯ ಉಡೆದೊಟ್ಟು
ಆಸೆಯನು ತೊರೆಯದೆಯೆ ತಪವ ಮಾಡಿ
ವಾಸನೆಯ ಗುರುತಿನಾ ಹೊಲಬನರಿಯದ ಇಂಥ
ವೇಷಧಾರಿಗಳು ಸನ್ಯಾಸಿಗಳು ಅಹುದೆ?
ಆರು ಚಕ್ರದ ನೆಲೆಯ ಅಷ್ಟಾಂಗ ಯೋಗದೊಳು
ಮೂರು ಮೂರ್ತಿಯ ಮೂರು ಕಡೆ ನಿಲಿಸಿ
ಕಾರುಣ್ಯನಿಧಿ ಕಾಗಿನೆಲೆಯಾದಿ ಕೇಶವನ
ಸಾರಿ ಭಜಿಸಿದವರಿಗೆ ಯಮನ ಬಾಧೆಯುಂಟೆ

ಕನಕರು ಪ್ರತಿಪಾದಿಸಿದ ಅಧ್ಯಾತ್ಮ, ಮತ, ಧರ್ಮಗಳ ಪರಿಧಿಯನ್ನು ಮೀರಿದ್ದು, ಸ್ವತಂತ್ರವಾದದ್ದು. ಸಾಮಾನ್ಯ ಜನರ ಆಶಯಗಳಿಗೆ ಪೂರಕವಾದದ್ದು. ಆದ್ದರಿಂದಲೇ

ಅವರಿಗೆ ಸಂಸಾರದಲ್ಲಿ ಇದ್ದುಕೊಂಡೆ ಸಂಸಾರವನ್ನು ದಾಟಬಹುದು ಎಂಬ ಮಹತ್ವದ ಆಲೋಚನೆಯನ್ನು ಆಧ್ಯಾತ್ಮದ ಆಸರೆಯಿಂದ ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂಬ ಅಂಶಗಳನ್ನು ಅವರ, ಡೊಂಕುಬಾಲದ ನಾಯಕರೆ, ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ,–ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ, "ಬಯಲು ಆಲಯದೊಳಗೊ ಆಲಯ ಬಯಲಿನೊಳಗೊ, ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ" ಎಂಬ ಕೀರ್ತನೆಗಳಲ್ಲಿ ನಾವು ಗುರುತಿಸಬಹುದಾಗಿದೆ ಎಂಬ ಅಂಶವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಒಟ್ಟಾರೆ,

(1) "ನೆಚ್ಚದಿರು ಸಂಸಾರ ನೆಲೆಯಲ್ಲವೀ ಕಾಯ
ಅಚ್ಯುತನ ನಾಮವನು ನೆನೆದು ಸುಖಿಯಾಗೊ"

(2) "ದಾಸದಾಸರ ಮನೆಯ ದಾಸಿಯರ ಮಗ ನಾನು
ಸಾಸಿರ ನಾಮದೊಡೆಯ ರಂಗಯ್ಯನ ಮನೆಯದಾಸ"

(3) "ಅಡುಗೆಯನ್ನು ಮಾಡಬೇಕಣ್ಣ ನಾನೀಗ ಜ್ಞಾನ
ದಡುಗೆಯನು ಮಾಡಬೇಕಣ್ಣ"

(4) "ದಾನ ಧರ್ಮದ ಮಾಡಿ ಸುಖಿಯಾಗು ಮನವೆ
ಹೀನ ವೃತ್ತಿಯಲ್ಲಿ ನೀ ಕೆಡಬೇಡ ಮನವೆ"

(5) ದ್ರೋಹಿಗಳ ವಿವರವನ್ನು ನಾ ಪೇಳ್ವೆನಯ್ಯ
ಕೂಡಿದೆಡೆಯಲಿ ಕಪಟವೆಸಗುವನೆ ದ್ರೋಹಿ
ಮಾಡಿದುಪಕಾರವನು ಮರೆವವನೆ ದ್ರೋಹಿ
ಚಾಡಿ ಕೊಂಡೆಗಳನಾಡಿ ನಡೆವವನೆ ದ್ರೋಹಿ
ರೂಢಿಯೊಳು ಬಾಳುವರ ಸಹಿಸದನೆ ದ್ರೋಹಿ

(6) "ವೇದಶಾಸ್ತ್ರ ಶಬ್ದ ತರ್ಕ ಮೀಮಾಂಸೆಗಳ
ಓದಿದವನಲ್ಲ ನಿನ್ನಯ ಭಕುತಿಗಧಿಕವಾದ ಇನ್ನೊಂದೇನನುಸುರುವೆನು ನಾ"

ಎಂಬ ಕನಕದಾಸರ ರಚನೆಗಳು ನಮಗೆ ಒಂದು ಕಾಲದ ಚಿಂತನೆ ಕನಕರನ್ನು ಭಕ್ತಿಪಂಥದಲ್ಲಿ ಗುರುತಿಸಿದರೂ ಅವರ ಎಲ್ಲಾ ಅಲೋಚನೆಗಳು ಲೌಕಿಕವಾಗಿ ಮನುಷ್ಯ ನಿರ್ಮಿಸಿಕೊಂಡಿರುವ ಬೇಲಿಗಳನ್ನು ಮೀರುವ ಉದ್ದೇಶವನ್ನು ಹೊದಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಅವರ ಕೀರ್ತನೆಯ ಆಧಾರವಾಗಿರುವ ಕೆಲವು ಸಂಗತಿಗಳನ್ನು ವಿಶ್ಲೇಷಿಸಿಕೊಳ್ಳುವ ಮೂಲಕ ಈ ನಿಲುವನ್ನು ನಾವು

ಇನ್ನು ಗಟ್ಟಿಗೊಳಿಸಿಕೊಳ್ಳಬಹುದಾಗಿದೆ ಮತ್ತು ಈ ನಿಲುವು ಕನ್ನಡದ ಅನುಭಾವ ಪರಂಪರೆಯ ಮಹತ್ವದ ಚಿಂತನೆಗಳಾದ ಮಲೆಮಾಲೇಶ್ವರ ಕಾವ್ಯ, ಮಂಟೆಸ್ವಾಮಿಯ ಕಾವ್ಯ, ಕಾಡುಗೊಲ್ಲರ ಜುಂಜಪ್ಪನ ಕಾವ್ಯ, ಅಲ್ಲಮಪ್ರಭು ಅವರ ಆಲೋಚನೆಗಳೊಂದಿಗೆ ಹೋಲತ್ತುವೆ ಎಂಬುದನ್ನು ಗುರುತಿಸಬಹುದಾಗಿದೆ.

ಮುಂದುವರಿದು ಡಾ. ನಿಂಗಣ್ಣ ಸಣ್ಣಕ್ಕಿ ಅವರು "ಜನಪದರ ಕಣ್ಣಲ್ಲಿ ಶ್ರೀ ಕನಕದಾಸರು" ಎಂಬ ಲೇಖನದಲ್ಲಿ ವಿಶ್ಲೇಷಿಸಿರುವಂತೆ ಕನಕದಾಸರನ್ನು ಕೇವಲ ಒಬ್ಬ ಸಂತರಾಗಿ, ಆಧ್ಯಾತ್ಮಿಕ ಚಿಂತಕನಾಗಿ ಗುರುತಿಸುವ ನೆಲೆ ಬಹಳ ಸಂಕುಚಿತವಾದದ್ದು, ಇದಕ್ಕೆ ಬದಲಾಗಿ, ಕನಕರು ಇಂದು ಒಬ್ಬ ಅನುಭಾವಿಯಾಗಿ ನಮ್ಮ ಸಮಾಜದ ವಿವಿಧ ವರ್ಗಗಳು ತಮ್ಮ ಸಮುದಾಯದ ಕಲಾಪ್ರಕರಗಳ ಭಾಗವಾಗಿ ನಡೆಸುತ್ತಾ ಬಂದಿರುವ ಜನಾಂದೋಲನದ ಭಾಗವಾಗಿ ಗುರುತಿಸುವ ಜರೂರು ಇದೆ. ಸಾಮಾನ್ಯರ ಸಾಂಸ್ಕೃತಿಕ ಅಭಿವ್ಯಕ್ತಿಗಳಾದ ಡೊಳ್ಳಿನ ಪದಗಳಲ್ಲಿ, ತ್ರಿಪದಿಗಳಲ್ಲಿ, ಹಂತಿಯ ಹಾಡಿನಲ್ಲಿ, ಏಕತಾರಿ ಹಾಡಿನಲ್ಲಿ, ಗೀಗೀ ಮತ್ತು ಸಖೀ ಪದಗಳಲ್ಲಿ, ಸಂಪ್ರದಾಯದ ಆಚರಣೆಗಳಲ್ಲಿ, ಗಾದೆಗಳಲ್ಲಿ ಕನಕರನ್ನು ಜನ ತಮ್ಮವನಾಗಿಸಿಕೊಂಡಿರುವ ಕ್ರಮವನ್ನು ಉದಾಹರಿಸಿ ಸಮರ್ಥಿಸಲಾಗಿದೆ.

ಮುಖ್ಯವಾಗಿ ಕನಕದಾಸರು ಒಬ್ಬ ಸಂತರಾಗಿ ಕನ್ನಡ ಸಾಹಿತ್ಯ ಪರಂಪರೆಗೆ, ದಾಸ ಸಾಹಿತ್ಯಕ್ಕೆ ಎಷ್ಟು ಕೊಡುಗೆ ನೀಡಿದ್ದಾರೆ ಎಂಬ ವಿಶ್ಲೇಷಣೆಗಳ ಜೊತೆಗೆ ಕನಕದಾಸರ ಅನುಭಾವಿಕ ಸಂಬಂಧಗಳು ಕನ್ನಡದ ಜಾನಪದ ಸಾಹತ್ಯಿ ಪರಂಪರೆಯೊಂದಿಗೆ ಹೇಗೆ ಬೆಸೆದುಕೊಂಡಿವೆ ಎಂಬ ಪ್ರಶ್ನೆ ಬಹಳ ಪ್ರಮುಖವಾಗಿದೆ. ಇಂದಿಗೂ ಕನ್ನಡದ ತಳ ಸಮುದಾಯದ ಜನ ಕನಕರನ್ನು ತಮ್ಮ ಅನುಭಾವಿಕ ಚಿಂತಕ ಎಂಬ ವಿಷಯವನ್ನು ಮನದಟ್ಟು ಮಾಡುತ್ತದೆ. ಇಷ್ಟೆಲ್ಲಾ ಇದ್ದರೂ ಕನಕರನ್ನು ಇಂದಿಗೂ ನಮ್ಮ ಬೌದ್ಧಿಕ ವರ್ಗ ಕೇವಲ ದಾಸ ಸಾಹಿತ್ಯ ಪ್ರಕಾರದೊಂದಿಗೆ ಹೆಚ್ಚು ಏಕೆ ಗುರುತಿಸುತ್ತದೆ? ಎಂಬ ಪ್ರಶ್ನೆಗಳನ್ನು ಆಧರಿಸಿ ಯೋಚಿಸಿದರೆ ನಾವು ಮೊದಲನೇ ಅಧ್ಯಾಯದಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗಳು ಮತ್ತೆ ಎದುರಾಗುತ್ತವೆ ಅವುಗಳನ್ನು ಆಧರಿಸಿ ಮುಂದಿನ ದಿನಗಳಲ್ಲಿ ಏಕೆ ಕನಕದಾಸರನ್ನು ಕನ್ನಡದ ಅನುಭಾವಿಕ ಪರಂಪರೆಯ ಸಾಂಸ್ಕೃತಿಕ ನಾಯಕನಾಗಿ ರೂಪಿಸಿಕೊಳ್ಳುವಲ್ಲಿ ವಿಫಲವಾಗಿದ್ದೇವೆ? ಅದಕ್ಕಿರುವ ತಡೆಗಳೇನು? ಆ ಮಿತಿಯನ್ನು ಮೀರಲು ನಮಗಿರುವ ದಾರಿಗಳು ಯಾವುವು ಎಂಬ ಸಂಗತಿಗಳನ್ನು ಚರ್ಚಿಸಬೇಕಿದೆ.

ಸದರಿ ಸಂಶೋಧನೆ ಗುರುತಿಸುವಂತೆ ವಾಸ್ತವದಲ್ಲಿ ಇರುವ ಸಮಸ್ಯ ವಿದ್ವಾಂಸರು, ಚಿಂತಕರು, ಸಾಮಾಜಿಕ ನಾಯಕರು ಗ್ರಹಿಸಿರುವುದಕ್ಕಿಂತ ಭಿನ್ನವಾಗಿದೆ. ಅದೇನೆಂದರೆ, ಪ್ರಸ್ತುತ ಸಂಶೋಧನೆಯಲ್ಲಿ ಕಂಡುಕೊಂಡಿರುವಂತೆ ಕನಕದಾಸರ

ಚಿಂತನೆಗಳ ಸಾರ ನಮಗೆ ಎರಡು ರೀತಿಯಲ್ಲಿ ದಕ್ಕಿದೆ. ಒಂದು ಆಧ್ಯಾತ್ಮಿಕ ಚೌಕಟ್ಟುಗಳ ಹಿನ್ನಲೆಯಲ್ಲಿ, ದಾಸ ಸಾಹಿತ್ಯದ ಭಾಗವಾಗಿ ಮತ್ತೊಂದು ಆಧುನಿಕ ಚಿಂತನೆಗಳನ್ನು, ಜೀವನಕ್ರಮಗಳನ್ನು ವಿಮರ್ಶಿಸುವ ರೀತಿಯಲ್ಲಿ. ಈ ಎರಡು ನೆಲೆಗಳು ತಮ್ಮದೇ ಆದ ರಾಜಕಾರಣ ಹೊಂದಿವೆ. ಮೊದಲನೆಯದು ಒಂದು ನಿರ್ದಿಷ್ಟ ಸಂಪ್ರದಾಯವನ್ನು ಸಮರ್ಥಿಸುವ ಒತ್ತಡಕ್ಕೆ ಸಿಲುಕಿದ್ದರೆ, ಎರಡನೆಯದು ಆಧುನಿಕ ಪರಿಕಲ್ಪನೆಗಳಾದ ಪ್ರಜಾಪ್ರಭುತ್ವ, ಉದಾರವಾದಿ ನೀತಿಗಳು ನಮ್ಮಲ್ಲೂ ಇದ್ದವು ಎಂಬ ಸಮರ್ಥನೆಯ ಭಾಗವಾಗಿ ಮಂಡಿಸಲ್ಪಟ್ಟಿವೆ! ಈ ಎರಡು ಒತ್ತಡಗಳಿಂದ ನಾವು ಕನಕದಾಸರಲ್ಲಿನ ಅನುಭಾವಿಯನ್ನು ಗುರುತಿಸಲು ವಿಫಲವಾಗಿದ್ದೇವೆ ಈ ದೇಶದ ಬಹುಸಂಖ್ಯೆಯ ತಳ ಸಮುದಾಯದ ಸಾಂಸ್ಕೃತಿಕ ನಾಯಕನನ್ನು ಪಾಶ್ಚಾತ್ಯರು/ಸಂಸ್ಕೃತದ ವಕ್ತಾರರು ಕಟ್ಟಿಕೊಟ್ಟ ಸೈದ್ಧಾಂತಿಕ ಚೌಕಟ್ಟಿನಲ್ಲಿ ಗ್ರಹಿಸಿರುವುದರಿಂದ ಡೊಳ್ಳಿನ ಪದಗಳಲ್ಲಿ, ತ್ರಿಪದಿಗಳಲ್ಲಿ, ಹಂತಿಯ ಹಾಡಿನಲ್ಲಿ, ಏಕತಾರಿ ಹಾಡಿನಲ್ಲಿ, ಗೀಗೀ ಮತ್ತು ಸುಖೀ ಪದಗಳಲ್ಲಿ, ಸಂಪ್ರದಾಯದ ಆಚರಣೆಗಳಲ್ಲಿ, ಗಾದೆಗಳಲ್ಲಿ ಇಂದಿಗೂ ಹರಿಯುತ್ತಿರುವ ಕನಕರನ್ನು ಅವರ ಚಿಂತನೆಗಳನ್ನು ಗುರುತಿಸುವಲ್ಲಿ ಸೋತಿದ್ದೇನೆ.

ಈ ವಿದ್ಯಮಾನಕ್ಕೆ ಮುಖ್ಯಕಾರಣ ಬೌದ್ಧಿಕ ವಲಯದಲ್ಲಿನ ಒಂದು ವರ್ಗದ ಚಿಂತನಾ/ಪರಿಭಾವನಾ ಯಜಮಾನಿಕೆ. ಇದರ ಪರಿಣಾಮ ಕನಕದಾಸರು ಮತ್ತು ಅವರು ಜನ ಸಮುದಾಯಗಳ ಕುರಿತು ನಿರೂಪಿಸಿದ ನೈಜ ಜ್ಞಾನವನ್ನು ಗುರುತಿಸುವ ಮತ್ತು ಅದನ್ನು ಇಂದಿನ ಆಧುನಿಕ ಕಾಲದ ಮನುಷ್ಯನ ಸಾಮಾಜಿಕ ಸಮಸ್ಯೆ ಮತ್ತು ಸಂಘರ್ಷಗಳ ನಿವಾರಣೆಗೆ ಬಳಸಿಕೊಳ್ಳುವ ಅವಕಾಶವೇ ಇಲ್ಲವಾಗಿದೆ ಇದಕ್ಕೆ ಪ್ರಮುಖ ಕಾರಣ ನಮ್ಮ ಸಮಾಜದ ನೆಲೆಯಲ್ಲಿ ಜ್ಞಾನವನ್ನು ನಿರ್ವಹಿಸುವ ಬೌದ್ಧಿಕ ನುಡಿಗಟ್ಟಿನ ಅಲಭ್ಯತೆ (Absence) ಕಾರಣವಾಗಿದೆ ಎನ್ನಬಹುದು.

ಈ ಚರ್ಚೆ ಕನಕರ ಕೀರ್ತನೆಗಳನ್ನು, ಶರಣರ ವಚನಗಳನ್ನು, ಶಿಶುನಾಳರ ತತ್ವಪದವನ್ನು ಅಥವಾ ಮಂಟೇಶ್ವಾಮಿ, ಜುಂಜಪ್ಪರ ಕಾವ್ಯವನ್ನು, ಜಾನಪದ ಸಾಹಿತ್ಯಿವನ್ನು ಯಾವ ಆಧುನಿಕ ಚೌಕಟ್ಟಿನಲ್ಲಿಯೂ ವಿವರಿಸಿಕೊಳ್ಳದೆ, ಅವುಗಳ ಮೂಲಕವೆ ನಮ್ಮ ಸಮಾಜವನ್ನು ಇಲ್ಲಿನ ಜೀವನ ವಿಧಾನವನ್ನು ವಿವರಿಸುವ ಪರಿಕಲ್ಪನೆಗಳನ್ನು ರಚಿಸಿಕೊಳ್ಳುವ ಬಹಳ ಪ್ರಮುಖವಾದ ಸವಾಲಿಗೆ ನಮ್ಮನ್ನು ತಂದು ನಿಲ್ಲಿಸಿವೆ! ಈ ಸವಾಲನ್ನು ಸ್ವೀಕರಿಸುವುದು ಅಷ್ಟು ಸುಲಭ ಸಾಧ್ಯವಲ್ಲ! ಆದರೆ ನಮಗೆ ಅನ್ಯ ಮಾರ್ಗಗಳಿಲ್ಲ! ಈ ನೆಲೆಯಲ್ಲಿ ನಾವು ಮೊದಲು ಮಾಡಬಹುದಾದ ಕೆಲಸ ಈಗಾಗಲೇ ಸಂಸ್ಕೃತ ಮತ್ತು ಪಶ್ಚಿಮದ ಚೌಕಟ್ಟುಗಳಲ್ಲಿ ಸಿಕ್ಕಿಕೊಂಡಿರುವ ನಮ್ಮ ಪೂರ್ವಜರ ಚಿಂತನೆಗಳನ್ನು ಮುಕ್ತಗೊಳಿಸಿ ಅವರನ್ನು ಸ್ವತಂತ್ರ್ಯ ಅನುಭಾವಿ ಚಿಂತಕರನ್ನಾಗಿ ಗುರುತಿಸುವುದು ನನಗೆ ಅನ್ನಿಸುವಂತೆ ಸದರಿ

ಶೋಧ. ಕನಕದಾಸರ ಕುರಿತಂತೆ ಈ ಒಂದು ದೊಡ್ಡ ಸವಾಲಿನ ಸಂಶೋಧನೆಯ ಸಣ್ಣ ಭಾಗವಾಗಿದೆ ಎನ್ನಿಸುತ್ತಿದೆ. ಕನಕರ ಚಿಂತನೆಯಲ್ಲಿನ ಅನುಭಾವಿಕ ನೆಲೆಗಳನ್ನು ಗುರುತಿಸುವ ಉದ್ದೇಶದ ಹಿಂದಿನ ಜಾಗೃತಿ ಇದೆ ಎಂಬುದನ್ನು ಒಪ್ಪಿಕೊಂಡು ನಾವು "ಎಲ್ಲಿಂದ ಬಂದೆ ಮುಂದೆತ್ತ ಪಯಣ" ಎಂಬ ಕನಕ ನುಡಿಯನ್ನು ಒಂದು ತಾತ್ವಿಕ ಅರಿವಾಗಿ ರೂಪಸಿಕೊಂಡು ಮುಂದೆ ನಡೆಯಬೇಕಿದೆ.

❐

# ಪರಾಮರ್ಶನ ಗ್ರಂಥಗಳು


1. ಮುತ್ತು ಬಂದಿದೆ ಕೇರಿಗೆ, 2004, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ.
2. ಕನಕದಾಸರ ಕೀರ್ತನೆ, 2011, ಕನಕದಾಸ ಸಂಶೋಧನಾ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯ.
3. ಕನಕ ಚಿಂತನ, 2010, ಕನಕದಾಸ ಸಂಶೋಧನಾ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯ.
4. ಕನಕದಾಸ, 2010, ಸಾಗರ್ ಪ್ರಕಾಶನ.
5. ಭಕ್ತ ಕನಕದಾಸ ಜೀವನ ಚರಿತ್ರೆ ಹಾಗೂ ದಾಸರ ಪದಗಳು, ಮಾರುತಿ ಬುಕ್ ಸೆಂಟರ್.
6. ಇಲ್ಲಿ ಯಾರೂ ಮುಖ್ಯವಲ್ಲ, 2005, ಡಾ. ಹಿ. ಚಿ. ಬೋರಲಿಂಗಯ್ಯ.
7. ಅವ್ಯಕ್ತ ಚರಿತ್ರೆ, 2009, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಆ ಪೂರ್ವ ಈ ಪಶ್ಚಿಮ, 2003, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ಕನಕದಾಸರ ಕೀರ್ತನೆಗಳ ಶಬ್ದ – ಪ್ರಯೋಗ ಕೋಶ, 2010, ಡಾ. ಶ್ರೀನಿವಾಸ ಹಾವನೂರ, ವಿ. ಕೃಷ್ಣ.
10. ಕನ್ನಡ ಸಾಹಿತ್ಯ ಸಂಶೋಧನೆ: ಮಾರ್ಗ ಮತ್ತು ಇತಿಹಾಸ, 2006, ರೂಪರಶ್ಮಿ ಪ್ರಕಾಶನ, ಧಾರವಾಡ.
11. ಕುರುಬರ ಗುರು ಒಡೆಯರು, 2007, ವಿಕಾಸ ಪ್ರಕಾಶನ.
12. ಸಂಶೋಧನೆ ಏನು? ಏಕೆ? ಹೇಗೆ? ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

13. ಕನಕ ರೂಪಕ, 2010, ಕಾವ್ಯ ಶ್ರೀ ಪ್ರಕಾಶನ.
14. ವಸಾಹತ್ತೋತ್ತರ ಚಿಂತನೆ, 2002, ಕರ್ನಾಟಕ ಸಾಹಿತ್ಯ ಅಕಾಡೆಮಿ.
15. ಕರ್ನಾಟಕದ ಸೂಫಿಗಳು, 2001, ರಹಮತ್ ತರೀಕೆರೆ.
16. ಕನಕ ಚಿಂತನ – ನಳ ಚರಿತ್ರೆ: ಕೆಲವು ನೋಟುಗಳು, ಡಾ. ಎಂ. ಪ್ರಭಾಕರ ಜೋಶಿ, ಪು. 1.
17. ಕನಕ ಚಿಂತನ– ಕನಕದಾಸರ 'ನಳ–ಚರಿತೆ', ಶ್ರೀಮತಿ ಜ್ಯೋತಿ ಚೇಳ್ಯಾರು ಪು. 6.
18. ಕನಕ ಚಿಂತನ–ನಳ ಚರಿತ್ರೆಯೊಳಗಣ ಬಹುಚರಿತೆಯ ಎಳೆಗಳು, ಡಾ. ಜಯಪ್ರಕಾಶ್ ಶೆಟ್ಟಿ ಎಚ್, ಪು. 41.
19. ಕನಕ ಚಿಂತನ–ನಳ ಚರಿತ್ರೆ: ಸಮಕಾಲೀನ ಸಂವಾದ, ಡಾ. ನಾಗವೇಣಿ ಮಂಚಿ, ಪು. 104.
20. ಕನಕ ಚಿಂತನ– ಕನಕದಾಸರ ನಳ ಚರಿತ್ರೆಯಲ್ಲಿ ಮಾನವ್ಯದ ಮಹೋನ್ನತಿ, ಡಾ. ಶಾಂತಾ ಇಮ್ರಾಪೂರ, ಪು. 124.
21. ತತ್ವಪದಗಳು: ಪ್ರಾತಿನಿಧಿಕ/ಸಂಕಲನ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2000, ಶಾಂತರಸ ಮತ್ತು ಇತರರು.
22. ಹಲವು ತೋಟದ ಹೂಗಳು. ಸಂ: ಪ್ರೊ॥ ಕಾಳೇಗೌಡ ನಾಗವಾರ ಮತ್ತು ಜಿ.ವಿ. ಅನಂತಮೂರ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 2000.
23. ಹೈದರಾಬಾದ ಕರ್ನಾಟಕದ ತತ್ವಪದಗಳು: ಸಂ. ಡಾ॥ ಬಸವರಾಜ ಸಬರದ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿದ 2000.
24. ರಾಮಪುರ ಒಕ್ಕಪ್ಪಯ್ಯನ ಸ್ವರವಚನ – ತ್ರಿವಿಧಿ:, ಡಾ॥ ವಿ.ಜಿ. ಪೂಜಾರ, ವೀರಶೈವ ಅಧ್ಯಯನ ಸಂಸ್ಥೆ, ಗದಗ, 1996.
25. ಸ್ವರವಚನವಾಹಿನಿ: ಸಂಪುಟ–1, ಎಸ್. ಉಮಾಪತಿ, 1994.
26. ಸ್ವರವಚನವಾಹಿನಿ: ಸಂಪುಟ–2, ಎಸ್. ಶಿವಣ್ಣ, 2004.
27. ಕರ್ನಾಟಕ ಚರಿತ್ರೆ, ಚರಿತೆ ಮಾಲೆ 4–6, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.

28. ಯೋಗಪ್ರವೇಶ, ಡಾ. ಜಿ. ರಾಮಕೃಷ್ಣ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

29. ಪರಮಾರ್ಥ ಪದಕೋಶ, ಅ.ರಾ.ಸೇ. ಕಾಮಧೇನು ಪ್ರಕಾಶನ, ಶೇಷಾದ್ರಿಪುರಂ, ಬೆಂಗಳೂರು, 1999.

30. ಚಾರಿತ್ರಿಕ ವ್ಯಾಖ್ಯಾನಗಳು ಮತ್ತು ಭಾರತೀಯ ಸಮಾಜದ ಧರ್ಮನಿರಪೇಕ್ಷೀಕರಣ, ರೋಮಿಲಾ ಥಾಪುರ್ – ಅನುವಾದ: ಎಂ. ಆರ್. ರಕ್ಷಿತ್ ವಿಸ್ತಾರ್, ಬೆಂಗಳೂರು, 1999.

31. ಶಂ. ಬಾ ಜೋಶಿಯವರ ಆಯ್ದ ಲೇಖನಗಳು, ಮಲ್ಲೇಪುರಂ ಜಿ. ವೆಂಕಟೇಶ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2002.

32. ಹೊಸಗನ್ನಡ ಸಾಹಿತ್ಯದ ಉದಯಕಾಲ, ರಾ. ಯ. ಧಾರವಾಡಕರ.

33. ಕನ್ನಡ ತತ್ವಪದಕಾರರು, ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.

34. ಮಾರ್ಗ–3 ಡಾ. ಎಂ. ಕಲಬುರ್ಗಿ, ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು, 1998.

35. ಕರ್ನಾಟಕ ಜಾನಪದ, ಜಾನಪದ ಮತ್ತು ಆಧುನಿಕ ಸಾಹಿತ್ಯ, ಕಿ.ರಂ. ನಾಗರಾಜ.

36. Patyhway to God in Kannada Literature: R. D. Ranade, Bharatiya Vidya Bhavan, Bombay - 1960.

37. ತೇರನ್ನೆಳೆಯೋಣ, 2005, ಶ್ರೀ ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರು ಪೀಠ, ಮೈಸೂರು.

38. ಪಾವನ, ಶ್ರೀ ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರು ಪೀಠ, ಮೈಸೂರು.

39. ಇಪ್ಪತ್ತನೆಯ ಶತಮಾನದ ಭಾರತೀಯ ಅನುಭಾವಿಗಳು ಮತ್ತು ಬಸವಣ್ಣ, 2003, ಡಾ. ಸಾ. ಶಿ. ಮರುಳಯ್ಯ, ಶ್ರೀ ಬಸವೇಶ್ವರಪೀಠದ ಬೆಳ್ಳಿಹಬ್ಬದ ಪ್ರಕಟಣೆ.

40. ಆಶಯ–ಆಕೃತಿ, 1995, ಅಭಿನವ.

41. ಹರಿದಾಸ ಹೃದಯ, 1967, ಶಾರದಾ ಮಂದಿರ.

42. ಕನಕ ಚಿಂತನ 2007–2008, ಕನಕನನ್ನು ಅಂತರಂಗದ ಕಿಂಡಿಯಿಂದ ನೋಡಬೇಕು, ಚಿದಂಬರ ಬೈಕಂಪಾಡಿ, ಪು. 4.

43. ಕನಕ ಚಿಂತನ 2007–2008, ಕನಕದಾಸರ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಗಳು, ಬಿ. ಎಂ. ರೋಹಿಣಿ, ಪು. 22.

44. ಕನಕ ಚಿಂತನ 2007–2008, ಕನಕ–ಸೂಫೀ ಸಂಬಂಧದ ಸಂದಿಗ್ಧ, ಡಾ. ನಿತ್ಯಾನಂದ ಬಿ. ಶೆಟ್ಟಿ, ಪು. 55.

45. ಕನಕ ಚಿಂತನ 2007–2008, ದಾಸ ದಾಸರ ಮನೆಯ ದಾಸಿಯರ ಮಗ, ಲಕ್ಷ್ಮೀಶ ತೋಳ್ಪಾಡಿ, ಪು. 97.

46. ಕನಕ ಚಿಂತನ 2007–2008, ಕನಕ ಕಾವ್ಯ ಮತ್ತು 'ಪ್ರಸ್ತುತತೆಯ' ಸಮಸ್ಯೆಗಳು, ಜಿ. ರಾಜಶೇಖರ, ಪು. 104.

47. ಕನಕ ಚಿಂತನ 2007–2008, ಕನಕದಾಸರ ತಾತ್ವಿಕ ಪ್ರಾಮುಖ್ಯತೆ, ಅರವಿಂದ ಚೊಕ್ಕಾಡಿ, ಪು. 113.

48. ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ, ಡಾ. ಬಿ. ಶಿವರಾಮ ಶೆಟ್ಟಿ, 2013, ಕನಕನೆಂಬ ವರ್ತಮಾನದ ತುರ್ತು (ಪ್ರಸ್ತಾವನೆ), ಪ್ರೊ. ಬಸವರಾಜ ಕಲ್ಗುಡಿ, ಪು. 10.

49. ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ, ಡಾ. ಬಿ. ಶಿವರಾಮ ಶೆಟ್ಟಿ, 2013, ಕನಕದಾಸರು: ಅಂತರ್ಗತ ಧಾರೆಗಳು, ಡಾ. ವಸು ಎಂ. ವಿ., ಪು. 50.

50. ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ, ಡಾ. ಬಿ. ಶಿವರಾಮ ಶೆಟ್ಟಿ, 2013, ದಾಸ ಸಾಹಿತ್ಯ ಮತ್ತು ಕನಕ ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ಕೆಲವು ಸಂಸ್ಥೀಕರಣ ಪ್ರಕ್ರಿಯೆಗಳು, ಡಾ. ಶಶಿಕಾಂತ. ಕೆ., ಪು. 85.

51. ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ, ಡಾ. ಬಿ. ಶಿವರಾಮ ಶೆಟ್ಟಿ, 2013, ಉಡುಪಿಯ ಕನಕ: ಕನಕನ ಉಡುಪಿ, ಡಾ. ರಾಜಾರಾಮ ತೋಳ್ಪಾಡಿ, ಪು. 101.

52. ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ, ಡಾ. ಬಿ. ಶಿವರಾಮ ಶೆಟ್ಟಿ, 2013, ಉದಾರವಾಗಿ ಪ್ರಜಾಪ್ರಭುತ್ವದಲ್ಲಿ ಪ್ರಾತಿನಿಧ್ಯ ಹಾಗೂ ಕನಕಗೋಪುರ ವಿವಾದ, ಪ್ರೊ. ಜಿ. ಎಸ್. ಸದಾನಂದ, ಪು. 188.

53. ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ, ಡಾ. ಬಿ. ಶಿವರಾಮ ಶೆಟ್ಟಿ, 2013, ಸಮುದಾಯ ನಾಯಕನಾಗಿ ಕನಕ: ಒಂದು ಪ್ರತಿಕ್ರಿಯೆ, ಪ್ರೊ. ಕೆ. ಜಿ. ನಾಗರಾಜಪ್ಪ, ಪು. 203.

54. ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ, ಡಾ. ಬಿ. ಶಿವರಾಮ ಶೆಟ್ಟಿ, 2013, ಸಂವಾದ ಮಾತು: ಕನಕ ಸಾಹಿತ್ಯದ ಸುತ್ತಮುತ್ತ ಮನಸ್ಸು ಹರಿದ ಬಗೆ, ಪ್ರೊ. ಎ.ವಿ. ನಾವಡ, ಪು. 257.

55. ತತ್ವಪದಕಾರರು ಮತ್ತು ವಸಾಹತುಶಾಹಿ ವ್ಯವಸ್ಥೆ, ಡಿ. ರಘುನಾಥರಾವ್, ನವಕರ್ನಾಟಕ ಪ್ರಕಾಶನ, 2008.

56. ಸಾಂಸ್ಕೃತಿಕ ಅಧ್ಯಯನ, ರಹಮತ್ ತರೀಕೆರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2008.

57. ಸಾಹಿತ್ಯ ಕಥನ, ಡಿ. ಆರ್. ನಾಗರಾಜ್, ಅಕ್ಷರ ಪ್ರಕಾಶನ, 1996.

58. ಸಂಸ್ಕೃತಿ ಕಥನ, ಡಿ. ಆರ್. ನಾಗರಾಜ್, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2002.

59. ಕನಕದಾಸರ ಜನಪ್ರಿಯ ಕೀರ್ತನೆಗಳು, ಹೊ. ರಾ ಸತ್ಯನಾರಾಯಣರಾವ್, ಅಂಕಿತ ಪುಸ್ತಕ, 2003.

60. ಡಾ॥ ಕಲ್ಗುಡಿ ಬಸವರಾಜ್, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, 1998, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

61. ಡಾ॥ ಅಬ್ದುಲ್ ಹಮೀದ್, ಸೂಫಿ ಪಥ ಮತ್ತು ಶರಣ ಪಥಗಳ ತೌಲನಿಕ ಅಧ್ಯಯನ, 1998, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.


❒

* * *



ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಜೀವನದರ್ಶನ ಮತ್ತು ಅವರ ಕಾವ್ಯ-ಕೀರ್ತನೆಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಈ ಬಗೆಯ ಕಾರ್ಯಾಧ್ಯಯನಗಳಿಗೆ ಯುವ ಸಮುದಾಯವನ್ನು ತೊಡಗಿಸಿಕೊಳ್ಳುವುದು ಇದರ ಆಶಯವಾಗಿದೆ. ಈ ನೆಲೆಯಲ್ಲಿ ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟ್ರಮಟ್ಟದಲ್ಲಿ ವಿಚಾರ ಸಂಕಿರಣ-ಸಂವಾದಗೋಷ್ಠಿಗಳ ಏರ್ಪಾಟು, ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ವಾದರ್ಶಗಳ ಪ್ರದರ್ಶನ-ಪ್ರಸಾರ ಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು, ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವಜನ-ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ-ರಸಗ್ರಹಣ ಶಿಬಿರಗಳ ಸಂಘಟನೆ, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ.

ಕನಕದಾಸರು ಮತ್ತು ಕನ್ನಡದ ಅನುಭಾವ ಪರಂಪರೆಯ ಅಂತರ್ ಸಂಬಂಧಗಳ ಬಗ್ಗೆ ಹಾಗೂ ಕನಕದಾಸರು ಸೃಜಿಸಿದ ಸಾಹಿತ್ಯದ ಒಳಗೆ ಅಡಕವಾಗಿರುವ ಈ ನೆಲದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ರಚನೆಗಳನ್ನು ಗುರುತಿಸುವ ಹೊಸ ಪ್ರಯತ್ನವೇ ಈ ಕೃತಿಯ ಆಶಯ. 'ಕನ್ನಡದ ಅನುಭಾವಿಕ ನೆಲೆ ಮತ್ತು ಕನಕದಾಸರು' ಕೃತಿಯು ಸಂಶೋಧನಾರ್ಥಿಗಳಿಗೆ ಉತ್ತಮ ಆಕರ ಕೃತಿ ಎಂದು ಭಾವಿಸಲಾಗಿದೆ.

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
೨ನೆಯ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ. ರಸ್ತೆ ಬೆಂಗಳೂರು-೦೨
ದೂರವಾಣಿ: ೦೮೦-೨೨೧೧೩೧೪೭ E-Mail - kanakaresearchcentre@gmail.com
www.saintpoetkanaka.in